ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಉಷ್ಣಪ್ಪ ಬಿಸಿಲು...
ರಾಜ್ಯದಲ್ಲಿ ದಾಖಲಾದ (ರಾಯಚೂರು, ಕಲಬುರಗಿ) ಗರಿಷ್ಠ ಉಷ್ಣಾಂಶ



40° ಯಾದಗಿರಿ, ಬೀದರ್, ವಿಜಯಪುರ, ತುಮಕೂರಲ್ಲಿ ದಾಖಲಾದ ತಾಪಮಾನ

25ರವರೆಗೆ ಕೆಲ ಜಿಲ್ಲೆಗಳಲ್ಲಿ ಬೀಸಲಿದೆ ಬಿಸಿಗಾಳಿ (ತಾಪಮಾನ ಸೆಲ್ಸಿಯಸ್‌ನಲ್ಲಿ– ಮಂಗಳವಾರದ ವಿವರ)

ಆಳ-ಅಗಲ ವೃದ್ಧಜೀವಗಳಿಗೆ ಕಾನೂನಿನ ಅಭಯ

'ತಾಂತ್ರಿಕ ಸಮಾಲೋಚನೆ ಶೀಘ್ರ' 11

ನಾಗ್ಪುರ: ಪರಿಸ್ಥಿತಿ ನಿಯಂತ್ರಣಕ್ಕೆ ಕರ್ಫ್ಯೂ ಜಾರಿ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,301	22,834	₹92,590 (ಬೆಂಗಳೂರು)	₹1.06 ಲಕ್ಷ (ಬೆಂಗಳೂರು)	86.56

ಕುಮಾರಸ್ವಾಮಿ ಜಮೀನು ಸೇರಿದಂತೆ 5 ಸರ್ವೆ ನಂಬರ್‌ಗಳಲ್ಲಿ 11 ಎಕರೆ 23 ಗುಂಟೆ ಒತ್ತುವರಿ
ಕಂದಾಯ ಇಲಾಖೆ ಅಧಿಕಾರಿಗಳಿಂದ ಕಾರ್ಯಾಚರಣೆ • ಬಿಗಿ ಪೊಲೀಸ್ ಬಂದೋಬಸ್ತ್

ಎಚ್‌ಡಿಕೆ ಭೂ ಒತ್ತುವರಿ ತೆರವು ಶುರು

ತೆರವು ಕಾರ್ಯಾಚರಣೆಗಾಗಿ ಬಂದಿದ್ದ ಜೆಸಿಬಿಗಳು

ಪ್ರಜಾವಾಣಿ ವಾರ್ತೆ

ರಾಮನಗರ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಅವರ ಕುಟುಂಬದವರು ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ಒತ್ತುವರಿ ಮಾಡಿರುವ ಜಮೀನಿನ ತೆರವು ಕಾರ್ಯಾಚರಣೆ ಮಂಗಳವಾರ ಆರಂಭವಾಗಿದೆ.

ಕಂದಾಯ ಇಲಾಖೆ ಅಧಿಕಾರಿಗಳು ಪೊಲೀಸ್ ಬಂದೋಬಸ್ತ್‌ನಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಿದರು.

ಸರ್ವೆ ನಂಬರ್ 7, 8, 9, 16/2 ಹಾಗೂ 79ರಲ್ಲಿ ಆಗಿರುವ ಒಟ್ಟು 11 ಎಕರೆ 23 ಗುಂಟೆ ಒತ್ತುವರಿ ಜಾಗವನ್ನು ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳ ತಂಡವು ಗುರುತಿಸಿತು. ಇದರಲ್ಲಿ ಕುಮಾರಸ್ವಾಮಿ ಅವರು ಒತ್ತುವರಿ ಮಾಡಿಕೊಂಡಿರುವ 5 ಎಕರೆ 25 ಗುಂಟೆ ಜಾಗವೂ ಸೇರಿದೆ. ಒತ್ತುವರಿಯಾಗಿರುವ ಅರ್ಧದಷ್ಟು ಜಾಗದಲ್ಲಿ ಗುಂಡಿ ತೋಡಿ ಕಲ್ಲುಗಳನ್ನು ನೆಟ್ಟು, ಬಣ್ಣದಿಂದ ಗೆರೆ ಹಾಕಲಾಯಿತು. ಉಳಿದ ಜಾಗದಲ್ಲಿ ಬುಧವಾರ ಕಾರ್ಯಾಚರಣೆ ಮುಂದುವರಿಯಲಿದೆ.

> **ಕೋರ್ಟ್ ಆದೇಶ ಪಾಲಿಸುತ್ತಿದ್ದೇವೆ. ಇದು ಕೋರ್ಟ್‌ಗೆ ಸಂಬಂಧಿಸಿದ ವಿಷಯ. ಕಾರ್ಯಾಚರಣೆಗೆ ಸಂಬಂಧಿಸಿದ ವಿಷಯ ಬಹಿರಂಗಪಡಿಸಲು ಸಾಧ್ಯವಿಲ್ಲ**
> **ಯಶವಂತ್ ವಿ. ಗುರುಕರ್,** ಜಿಲ್ಲಾಧಿಕಾರಿ

ತೆರವು ಕಾರ್ಯಾಚರಣೆ ಸಲುವಾಗಿ ಬೆಳಗ್ಗೆ 10ರ ಸುಮಾರಿಗೆ ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳ ತಂಡವು ಕುಮಾರಸ್ವಾಮಿ ಅವರ ತೋಟದ ಬಳಿ 4 ಜೆಸಿಬಿ ಮತ್ತು ಎರಡು ಟ್ರ್ಯಾಕ್ಟರ್‌ಗಳೊಂದಿಗೆ ಬಂದಿತು. ಮುನ್ನೆಚ್ಚರಿಕೆ ಕ್ರಮವಾಗಿ 25ಕ್ಕೂ ಹೆಚ್ಚು ಪೊಲೀಸರು ಸ್ಥಳದಲ್ಲಿ ಬೀಡು ಬಿಟ್ಟಿದ್ದರು.

ಕಾರ್ಯಾಚರಣೆಗೆ ಮುಂಚೆ ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ಅವರು ಅಧಿಕಾರಿಗಳೊಂದಿಗೆ ಬೆಳಗ್ಗೆ ಸಭೆ ನಡೆಸಿದರು. ನಂತರ 11.45ರ ಸುಮಾರಿಗೆ ಉಪ ವಿಭಾಗಾಧಿಕಾರಿ ಬಿನೋಯ್ ಪಿ.ಕೆ, ತಹಶೀಲ್ದಾರ್ ತೇಜಸ್ವಿನಿ, ಭೂ ದಾಖಲೆಗಳ ಉಪ ನಿರ್ದೇಶಕ ಹನುಮೇಗೌಡ ಬಿ.ಆರ್ ಹಾಗೂ ಎಎಸ್‌ಪಿಗಳಾದ ಟಿ.ವಿ.ಸುರೇಶ್ ಮತ್ತು ರಾಮಚಂದ್ರಯ್ಯ ಅವರೊಂದಿಗೆ ಸ್ಥಳಕ್ಕೆ ಭೇಟಿ ನೀಡಿದರು. ತೆರವು ಆಗಬೇಕಿರುವ ಜಾಗದ ದಾಖಲೆ ಹಾಗೂ ನಕ್ಷೆಯನ್ನು ಪರಿಶೀಲಿಸಿದರು.

ನಂತರ, ಅಧಿಕಾರಿಗಳೊಂದಿಗೆ ತೋಟದೊಳಕ್ಕೆ ಹೋಗಿ, ಜಾಗ ವೀಕ್ಷಿಸಿ ಅಧಿಕಾರಿಗಳಿಗೆ ಸೂಚನೆ ನೀಡಿ ತೆರಳಿದರು. ಅಧಿಕಾರಿಗಳು, ಒತ್ತುವರಿ ಜಾಗದ ಗಡಿ ಗುರುತಿಸಿ ಅಲ್ಲಿ ಗುಂಡಿ ತೋಡಿಸಿದರು. ನಂತರ ಟ್ರ್ಯಾಕ್ಟರ್‌ನಲ್ಲಿ ಕಲ್ಲಿನ ಕಂಬಗಳನ್ನು ತರಿಸಿ ಒತ್ತುವರಿ ಜಾಗದುದ್ದಕ್ಕೂ ನೆಟ್ಟರು.

10ನೇ ಪುಟ ನೋಡಿ

'ರಾಜ್ಯ ಸರ್ಕಾರದ ಷಡ್ಯಂತ್ರ'

ಬೆಂಗಳೂರು: '40 ವರ್ಷಗಳ ಹಿಂದೆ ಕೇತಗಾನಹಳ್ಳಿಯಲ್ಲಿ ಖರೀದಿಸಿದ್ದ ಜಮೀನು ವಿಷಯದಲ್ಲಿ ನೂರು ಬಾರಿ ತನಿಖೆಯಾಗಿದೆ. ಒತ್ತುವರಿ ತೆರವು ಎಂಬ ರಾಜ್ಯ ಸರ್ಕಾರದ ಷಡ್ಯಂತ್ರದ ವಿರುದ್ಧ ಕಾನೂನು ಹೋರಾಟ ಮುಂದುವರಿಸುವೆ' ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, 'ರೈತನಾಗಿ ಬದುಕಲು ಖರೀದಿಸಿದ್ದ ಜಮೀನಿನ ವಿಷಯದಲ್ಲಿ ಯಾವುದೇ ಅಕ್ರಮ ಎಸಗಿಲ್ಲ. ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಸಾಮಾನ್ಯ ರೈತರ ಜಮೀನು ಒತ್ತುವರಿ ತೆರವು ಮಾಡುವುದಿದ್ದರೂ ಹದಿನೈದು ದಿನಗಳ ಮೊದಲು ನೋಟಿಸ್ ನೀಡಬೇಕು. ಅದರೆ, ನನಗೆ ಯಾವುದೇ ಮಾಹಿತಿ ಅಥವಾ ನೋಟಿಸ್ ನೀಡಿಲ್ಲ' ಎಂದರು.

'ಕಾಂಗ್ರೆಸ್ ನೇತೃತ್ವದ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ. ನನ್ನನ್ನು ಟಾರ್ಗೆಟ್ ಮಾಡಲಾಗಿದೆ. ಎಲ್ಲ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವೆ. ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಈ ರೀತಿ ಪ್ರಕರಣಕ್ಕೆ ಎಸ್‌ಐಟಿ ರಚನೆ ಮಾಡಿದ್ದಾರೆ. ಇಂತಹ ನಡವಳಿಕೆಗೆ ಒಂದಲ್ಲ ಒಂದು ದಿನ ಬೇರೆ ರೀತಿಯ ಉತ್ತರ ಬರುತ್ತದೆ' ಎಂದರು.

ಎಚ್‌ಡಿಕೆಗೆ ಗಾಬರಿ ಏಕೆ?

ನವದೆಹಲಿ: 'ಎಚ್.ಡಿ. ಕುಮಾರಸ್ವಾಮಿ ಒತ್ತುವರಿ ಮಾಡದಿದ್ದರೆ ಗಾಬರಿಯಾಗುತ್ತಿರುವುದು ಏಕೆ. ಎಲ್ಲದಕ್ಕೂ ಅಳತೆ, ದಾಖಲೆ ಇರುತ್ತದೆ ಅಲ್ಲವೇ? ಇದಕ್ಕೂ ಸಿದ್ದರಾಮಯ್ಯ ಹಾಗೂ ನನಗೂ ಏನು ಸಂಬಂಧ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ನಾನು ಹಾಗೂ ಸಿದ್ದರಾಮಯ್ಯ ಎಂದಿಗೂ ದ್ವೇಷದ ರಾಜಕಾರಣ ಮಾಡಿಲ್ಲ. ಅದರ ಅವಶ್ಯಕತೆಯೂ ಇಲ್ಲ. ನ್ಯಾಯಾಲಯ ಹೇಳಿದಂತೆ ಕಾನೂನು ಪ್ರಕಾರ ಕೆಲಸ ಮಾಡಲಾಗಿದೆ. ಕೇತಗಾನಹಳ್ಳಿ ಸುದ್ದಿಗೆ ನಾವು ಹೋಗಿಲ್ಲ. ನಮಗೆ ಈ ವಿಚಾರ ಗೊತ್ತೂ ಇಲ್ಲ. ಯಾರೋ ಇದರ ಬಗ್ಗೆ ಪಿಐಎಲ್ ಹಾಕಿದ್ದಾರೆ. ಭೂಒತ್ತುವರಿ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡಿಲ್ಲ ಎಂದು ನ್ಯಾಯಾಲಯವು ಅಧಿಕಾರಿಗಳಿಗೆ ಛೀಮಾರಿ ಹಾಕಿದೆ. ನ್ಯಾಯಾಲಯ ಗಡುವು ವಿಧಿಸಿದ ಕಾರಣಕ್ಕೆ ಅಧಿಕಾರಿಗಳು ಹೋಗಿ ಅಳತೆ ಮಾಡಿದ್ದಾರೆ' ಎಂದರು.

10ನೇ ಪುಟ ನೋಡಿ

ಎಚ್‌ಡಿಕೆ ಜಾಗದಲ್ಲಿ ಕಾಂಪೌಂಡ್, ಶೆಡ್

ಸರ್ವೆ ನಂಬರ್ 8 ಮತ್ತು 9ರ ಜಮೀನಿನಲ್ಲಿ ತೋಟದ ಮನೆ ಹೊಂದಿರುವ ಎಚ್.ಡಿ.ಕುಮಾರಸ್ವಾಮಿ ಅವರು 5 ಎಕರೆ 25 ಗುಂಟೆ ಒತ್ತುವರಿ ಮಾಡಿಕೊಂಡಿದ್ದಾರೆ. ಈ ಜಾಗದಲ್ಲಿ ಅವರು ಕಾಂಪೌಂಡ್ ಹಾಗೂ ಶೆಡ್ ನಿರ್ಮಿಸಿದ್ದಾರೆ. ಉಳಿದ ಜಾಗದಲ್ಲಿ ಅಡಿಕೆ ಮತ್ತು ತೆಂಗು ಬೆಳೆಯಲಾಗಿದೆ. ಸರ್ವೆ ನಂಬರ್ 7ರ 7/8ನೇ ಬ್ಲಾಕ್‌ನಲ್ಲಿ 7 ಗುಂಟೆ ಜಾಗ ಒತ್ತುವರಿ ಮಾಡಿರುವ ಸಯ್ಯದ್ ನೂರ್ ಅಹಮದ್ ಎಂಬುವವರು ಶೆಡ್ ನಿರ್ಮಿಸಿದ್ದಾರೆ.
ಸ್ವಯಂ ತೆರವಿಗೂ ಅವಕಾಶ: 'ಒತ್ತುವರಿ ಜಾಗದಲ್ಲಿರುವ ಕಾಂಪೌಂಡ್ ಮತ್ತು ಶೆಡ್ ಅನ್ನು ಸ್ವಯಂ ಆಗಿ ತೆರವು ಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಒಂದು ವೇಳೆ ಮಾಡಿಕೊಳ್ಳದಿದ್ದರೆ, ಮಾರನೇ ದಿನ ನಾವೇ ತೆರವುಗೊಳಿಸಿ ಜಾಗವನ್ನು ಬಂದೋಬಸ್ತ್ ಮಾಡುತ್ತೇವೆ' ಎಂದು ಮೂಲಗಳು ಹೇಳಿವೆ.

ಪ್ರತಿಭಟನೆ

ತಾಲ್ಲೂಕು ಪುನರ್ವಸತಿ ಕಾರ್ಯಕರ್ತರು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರಿಗೆ ಕನಿಷ್ಠ ವೇತನಕ್ಕೆ ಆಗ್ರಹಿಸಿ ನವ ಕರ್ನಾಟಕ ವಿಕಲಚೇತನರ ಗೌರವಧನ ಕಾರ್ಯಕರ್ತರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

ಸಿಬಿಐ ತನಿಖೆಗೆ ವಹಿಸಬಾರದೇಕೆ: ನ್ಯಾಯಪೀಠದ ಪ್ರಶ್ನೆ

ಕೆಪಿಎಸ್‌ಸಿ ಅಕ್ರಮ: ಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಹಗರಣಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, 'ಆಯೋಗದ ಭಾನಗಡಿಗಳನ್ನು ಸಿಬಿಐ ತನಿಖೆಗೆ ಯಾಕೆ ನೀಡಬಾರದು' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದೆ.

ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ ನೇಮಕದಲ್ಲಿ ಅಕ್ರಮ ಸಾಬೀತಾಗಿರುವ ಕಾರಣ ಅವರನ್ನು ಕೆಲಸದಿಂದ ವಜಾಗೊಳಿಸುವಂತೆ ಕೆಪಿಎಸ್‌ಸಿ ಮಾಡಿರುವ ಶಿಫಾರಸಿಗೆ ತಡೆ ನೀಡಲು ನಿರಾಕರಿಸಿರುವ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶವನ್ನು ಪ್ರಶ್ನಿಸಿ ಎಂಜಿನಿಯರ್‌ಗಳಾದ ವಿಶ್ವಾಸ್ ಮತ್ತಿತರರು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ. ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಹಾಗೂ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು, 'ನಿಮಗೆ ಬೇಕೆಂದವರನ್ನು ತಂದು ಕೂರಿಸುವ ವೈಖರಿಯನ್ನು ನೋಡಿ ಬಗ್ಗೆ ಜನರು ದಿಗ್ಭ್ರಮೆಗೊಂಡಿದ್ದಾರೆ. ಹೀಗಾದರೆ ಮಾರ್ಕೆಟ್‌ನಲ್ಲಿ ಇರುವವರನ್ನೇ ತಂದು ಅಧಿಕಾರದಲ್ಲಿ ಕೂರಿಸಿಬಿಡಿ' ಎಂದು ಪೀಠವು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, 'ಇದಕ್ಕೊಂದು ಚರಮಗೀತೆ ಹಾಡಿಯೇ ತೀರುತ್ತೇವೆ' ಎಂದರು.

> **ಏನು ಮಾಡಿದ್ರೂ ನಡೆಯುತ್ತೆ ಎಂಬ ಸೊಕ್ಕನ್ನು ಕೆಪಿಎಸ್‌ಸಿ ಬಿಡಬೇಕು. ಇಲ್ಲದಿದ್ದರೆ ಹೈಕೋರ್ಟ್ ನಿಮ್ಮನ್ನು ಹಾಗೆಯೇ ಬಿಡೋದಿಲ್ಲ. ಅಲೆಗ್ಸಾಂಡರ್‌ನೇ ಕಾಲಗರ್ಭ ಸೇರಿ ಹೋಗಿರುವಾಗ ನೀವ್ಯಾವ ಲೆಕ್ಕ?**
> **ಕೃಷ್ಣ ಎಸ್.ದೀಕ್ಷಿತ್,** ಹೈಕೋರ್ಟ್ ನ್ಯಾಯಮೂರ್ತಿ

'ಇದರ ಹಗರಣಗಳನ್ನು ಸಿಬಿಐ ಅಥವಾ ಎನ್‌ಐಎಗೆ ಯಾಕೆ ವಹಿಸಬಾರದು' ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರನ್ನು ಪ್ರಶ್ನಿಸಿದ ನ್ಯಾಯಪೀಠ, 'ಈ ಕುರಿತು ಮುಂದಿನ ವಿಚಾರಣೆಯಲ್ಲಿ ವಿವರಿಸಿ' ಎಂದು ನಿರ್ದೇಶಿಸಿತು.

ಕಲುಷಿತ ಆಹಾರ: ಮತ್ತೊಬ್ಬ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ): ಕಲುಷಿತ ಆಹಾರ ಸೇವನೆಯಿಂದ ಅಸ್ವಸ್ಥಗೊಂಡು ಚಿಕಿತ್ಸೆ ಪಡೆಯುತ್ತಿದ್ದ 40 ಮಕ್ಕಳ ಪೈಕಿ, ತಾಲ್ಲೂಕಿನ ಟಿ.ಕಾಗೇಪುರ ಗೋಕುಲ ವಿದ್ಯಾಸಂಸ್ಥೆಯ ಮತ್ತೊಬ್ಬ ವಿದ್ಯಾರ್ಥಿ, ಮೇಘಾಲಯದ ನಮೀಬ್ ಮಾಂತೆ (12) ಸೋಮವಾರ ತಡರಾತ್ರಿ ಮೈಸೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಸಾವಿನ ಸಂಖ್ಯೆ 2ಕ್ಕೆ ಏರಿದೆ.

ಉದ್ಯಮಿ ಪುಷ್ಪೇಂದ್ರಕುಮಾರ್ ಶುಕ್ರವಾರ ಕಳಿಸಿದ್ದ ಆಹಾರ ಸೇವಿಸಿ ಅಸ್ವಸ್ಥಗೊಂಡಿದ್ದ ಮಾಂತೆಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಯಿಂದ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಉದ್ಯಮಿ ಸೇರಿ ಆತನ 40 ಸಂಬಂಧಿಕರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಮೇಘಾಲಯದ ಅಧಿಕಾರಿಗಳು ಭೇಟಿ: ಮೇಘಾಲಯ ಆಡಳಿತ ಇಲಾಖೆಯ ಆಯುಕ್ತ ಸಿರಿಲ್, ಕಾರ್ಯದರ್ಶಿ ಕ್ರಯಿಲ್ ವಿ ಡಿಂಗ್ ದೋ ಅವರು ಮಿಮ್ಸ್ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ, ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಿ, ವೈದ್ಯರಿಂದ ಮಾಹಿತಿ ಪಡೆದರು. ಘಟನೆಯ ಬಗ್ಗೆ ಜಿಲ್ಲಾಧಿಕಾರಿ ಕುಮಾರ ಮಾಹಿತಿ ನೀಡಿದರು.

'ಮಕ್ಕಳ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ನಾಲ್ವರು ಐಸಿಯುನಲ್ಲಿದ್ದಾರೆ. 16 ವಿದ್ಯಾರ್ಥಿಗಳು ಸಾಮಾನ್ಯ ವಾರ್ಡಿನಲ್ಲಿದ್ದಾರೆ. ಮೇಘಾಲಯ ಮುಖ್ಯಮಂತ್ರಿ ಸೂಚನೆ ಮೇರೆಗೆ ಭೇಟಿ ನೀಡಿದ್ದು, ಮೃತದೇಹಗಳನ್ನು ಅಲ್ಲಿಗೆ ರವಾನಿಸುವ ಬಗ್ಗೆ ಚಿಂತನೆ ನಡೆದಿದೆ. ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

ಪೊಲೀಸರು ತನಿಖೆ ತೀವ್ರಗೊಳಿಸಿದ್ದು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿಗಳ ತಂಡವು, ಘಟನೆಗೆ ಕಾರಣ ಎನ್ನಲಾದ ಮಳವಳ್ಳಿಯ ಲಕ್ಷ್ಮೀನರಸಿಂಹಸ್ವಾಮಿ ಹೋಟೆಲ್‌ನಿಂದ ಆಹಾರದ ಮಾದರಿಗಳನ್ನು ಮಂಗಳವಾರ ಸಂಗ್ರಹಿಸಿತು.

ದಕ್ಷಿಣ ಪಿನಾಕಿನಿ: ಸಭೆಗೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ



ನವದೆಹಲಿ: ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆಗೆ ಸಂಬಂಧಿಸಿದ ವಿವಾದಗಳನ್ನು ಬಗೆಹರಿಸಲು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರು ಮಂಗಳವಾರ ಕರೆದಿದ್ದ ಸಂಧಾನ ಸಭೆಯನ್ನು ತಮಿಳುನಾಡು ಬಹಿಷ್ಕರಿಸಿತು. ಇದರಿಂದಾಗಿ, ಮಾತುಕತೆಯ ಮೂಲಕ ವಿವಾದ ಬಗೆಹರಿಸಲು ಕರ್ನಾಟಕ ಉತ್ಸುಕತೆ ತೋರಿತ್ತು.

ಕರ್ನಾಟಕ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್, ತಮಿಳುನಾಡು ಹಾಗೂ ಪುದುಚೆರಿಯ ಜಲಸಂಪನ್ಮೂಲ ಸಚಿವರಿಗೆ ಆಹ್ವಾನ ನೀಡಲಾಗಿತ್ತು.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆನ್ನಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿ ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು. ಜಲವಿವಾದ ನ್ಯಾಯಮಂಡಳಿ ಸ್ಥಾಪಿಸುವಂತೆ ಒತ್ತಾಯಿಸಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರಕ್ಕೆ 2019ರ ನವೆಂಬರ್ ತಿಂಗಳಲ್ಲಿ ಮನವಿ ಮಾಡಿತ್ತು.

ಜಲಶಕ್ತಿ ಸಚಿವಾಲಯವು 2020ರಲ್ಲಿ ಸಂಧಾನ ಸಭೆ ನಡೆಸಿತ್ತು. ಆದರೆ, ರಾಜ್ಯ ಸರ್ಕಾರಗಳು ಒಮ್ಮತಕ್ಕೆ ಬಂದಿರಲಿಲ್ಲ. ಹೊಸದಾಗಿ ಸಂಧಾನ ನಡೆಸುವಂತೆ ಕರ್ನಾಟಕ ಸರ್ಕಾರವು ಕೇಂದ್ರಕ್ಕೆ 2024ರ ಜೂನ್‌ನಲ್ಲಿ ಒತ್ತಾಯಿಸಿತ್ತು.

ಈ ನಡುವೆ, ಸುಪ್ರೀಂ ಕೋರ್ಟ್ ನಿರ್ದೇಶನದ ಪ್ರಕಾರ, ಕೇಂದ್ರ ಜಲ ಆಯೋಗದ ಅಧ್ಯಕ್ಷರ ನೇತೃತ್ವದಲ್ಲಿ ಜಲಶಕ್ತಿ ಸಚಿವಾಲಯವು ಹೊಸ ಸಂಧಾನ ಸಮಿತಿ ರಚಿಸಿತ್ತು.

ನೀರು ಹರಿಸಲು ಸೂಚಿಸಿದ್ದ ಸಮಿತಿ

'ಮಳೆಗಾಲದಲ್ಲಿ ಕೋಲಾರದ ಯರಗೋಳ್ ಅಣೆಕಟ್ಟೆಯಿಂದ ಕರ್ನಾಟಕವು ಹಿಂದಿನ ದಿನದ ಸರಾಸರಿ ಹರಿವಿನ ಶೇ 15ರಷ್ಟು ನೀರು ಹರಿಸಬೇಕು' ಎಂದು ಸಂಧಾನ ಸಮಿತಿಯು ಶಿಫಾರಸು ಮಾಡಿತ್ತು.

ಈ ಶಿಫಾರಸಿನಲ್ಲಿ ಅಲ್ಪ ಪರಿಷ್ಕರಣೆ ಮಾಡುವಂತೆ ಕರ್ನಾಟಕ ಸರ್ಕಾರವು ಕೋರಿತ್ತು. 'ಯರಗೋಳ್ ಅಣೆಕಟ್ಟೆಯಿಂದ ಶೇ 7.5ರಷ್ಟು ನೀರು ಮತ್ತು ಮಾಸ್ತಿ ನದಿ ಉಪ ಜಲಾನಯನ ಪ್ರದೇಶದಿಂದ ಶೇ 7.5ರಷ್ಟು ನೀರು ಹರಿಸಲಾಗುವುದು' ಎಂದು ರಾಜ್ಯ ತಿಳಿಸಿತ್ತು. ಆದರೆ, ಈ ಶಿಫಾರಸನ್ನು ತಮಿಳುನಾಡ ಸರ್ಕಾರ ಒಪ್ಪಿಲ್ಲ. ಜಲವಿವಾದ ನ್ಯಾಯಮಂಡಳಿ ಸ್ಥಾಪನೆ ಆಗಲೇಬೇಕು ಎಂದು ತಮಿಳುನಾಡು ಪಟ್ಟು ಹಿಡಿದಿದೆ.

ಇಸ್ರೇಲ್ ದಾಳಿ: 400ಕ್ಕೂ ಹೆಚ್ಚು ಸಾವು

ಟೆಲ್ ಅವಿವ್ (ಎಪಿ): ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ಕದನ ವಿರಾಮ ಘೋಷಣೆಯಾದ ನಂತರ ಇದೇ ಮೊದಲ ಬಾರಿಗೆ ಭಾರಿ ಪ್ರಮಾಣದ ದಾಳಿ ನಡೆಸಿದೆ.

ದಾಳಿಗೂ ಮುನ್ನ ಇಸ್ರೇಲ್ ತನ್ನ ಜೊತೆ ಸಮಾಲೋಚಿಸಿದೆ ಎಂದು ಅಮೆರಿಕ ಹೇಳಿದೆ. ಇಸ್ರೇಲ್‌ನ ಕ್ರಮಕ್ಕೆ ಬೆಂಬಲ ಇದೆ ಎಂದು ಅಮೆರಿಕ ಸ್ಪಷ್ಟಪಡಿಸಿದೆ. ದಾಳಿಯಲ್ಲಿ 400ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ.

ಕದನ ವಿರಾಮವನ್ನು ಗೌರವಿಸಬೇಕು ಎಂದು ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

ಇನ್ನೊಂದು ಸುದ್ದಿ 10

ನ್ಯಾಯಕ್ಕಾಗಿ ಧರ್ಮಸ್ಥಳ ಚಲೋ 4

ಸಾಲ ಮನ್ನಾ ಮಾತಿನ ಚಟಾಪಟಿ 5

ಅನ್ನಭಾಗ್ಯ: ಅಕ್ಕಿ ಪೂರೈಕೆ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಅನ್ನಭಾಗ್ಯದ ಅಕ್ಕಿ ಪೂರೈಕೆಯಲ್ಲಿ ಭಾರಿ ವ್ಯತ್ಯಯವಾಗಿದೆ. ಹಲವು ನ್ಯಾಯ ಬೆಲೆ ಅಂಗಡಿಯವರು, 'ಅಕ್ಕಿ ಬಂದಿಲ್ಲ. ಬಂದ ನಂತರ ಹೇಳುತ್ತೇವೆ. ಆಮೇಲೆ ತೆಗೆದುಕೊಂಡು ಹೋಗಿ' ಎಂದು ಹೇಳಿ ಕಳುಹಿಸುತ್ತಿದ್ದಾರೆ. ಕೆಲವೆಡೆ 'ಅಕ್ಕಿ ದಾಸ್ತಾನು ಇಲ್ಲ' ಎಂದು ಫಲಕ ಹಾಕಲಾಗಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಧಾರವಾಡ, ಬೆಳಗಾವಿ ಜಿಲ್ಲೆಯ ಹಲವೆಡೆ ಇದೇ ಸ್ಥಿತಿ ಇದೆ. ಸಾಮಾನ್ಯವಾಗಿ ಪ್ರತಿ ತಿಂಗಳ 15–17ರ ನಡುವೆ ಅಕ್ಕಿ ನೀಡಲಾಗುತ್ತಿತ್ತು. ಆದರೆ ಹಲವೆಡೆ ಇನ್ನೂ ಅಕ್ಕಿ ನೀಡಿಲ್ಲ ಎಂಬ ಮಾಹಿತಿ ಇದೆ.

ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಪ್ರತಿ ಫಲಾನುಭವಿಗೆ 10 ಕೆ.ಜಿ ಅಕ್ಕಿ ಕೊಡುವುದಾಗಿ ಘೋಷಿಸಿತ್ತು. ಅಗತ್ಯಕ್ಕೆ ತಕ್ಕಷ್ಟು ಅಕ್ಕಿ ಇಲ್ಲದ ಕಾರಣಕ್ಕೆ 5 ಕೆ.ಜಿ. ಅಕ್ಕಿ ಮತ್ತು ₹170 ನೀಡುತ್ತಿತ್ತು. ಇದೇ ಫೆಬ್ರುವರಿಯಲ್ಲಿ ಅಕ್ಕಿ ಲಭ್ಯವಾದ ಕಾರಣ, ಎಲ್ಲರಿಗೂ 10 ಕೆ.ಜಿ. ನೀಡುವುದಾಗಿ ಘೋಷಿಸಿತ್ತು.

4ನೇ ಪುಟ ನೋಡಿ

'ಒಂದೆರಡು ದಿನದಲ್ಲಿ ಬಗೆಹರಿಸುತ್ತೇವೆ'

ಅನ್ನಭಾಗ್ಯ ಯೋಜನೆಯ ಅಕ್ಕಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಫೆಬ್ರುವರಿಯ ಪಡಿತರದಲ್ಲಿ ಈ ಮೊದಲೇ 5 ಕೆ.ಜಿ.ಯಷ್ಟು ಅಕ್ಕಿ ನೀಡಲಾಗಿತ್ತು. ಇನ್ನುಳಿದ 5 ಕೆ.ಜಿ ಮತ್ತು ಮಾರ್ಚ್ ತಿಂಗಳ 10 ಕೆ.ಜಿ ಸೇರಿ ಒಟ್ಟು 15 ಕೆ.ಜಿ ನೀಡಲಾಗುತ್ತಿದೆ. ಈ ಮೊದಲು ಪ್ರತಿ ತಿಂಗಳು 2.17 ಲಕ್ಷ ಟನ್‌ಗಳಷ್ಟು ಅಕ್ಕಿ ಬೇಕಾಗಿತ್ತು. ಆದರೆ ಈ ತಿಂಗಳಲ್ಲಿ 6.51 ಲಕ್ಷ ಟನ್‌ಗಳಷ್ಟು ಅಕ್ಕಿ ಬೇಕಾಗಿದೆ. ಪೂರೈಕೆ ಮಾಡಬೇಕಾದ ಅಕ್ಕಿ ಪ್ರಮಾಣ ಮೂರು ಪಟ್ಟಿನಷ್ಟಾಗಿದೆ. ಈಗ ಅಕ್ಕಿ ಲಭ್ಯವಿದೆ, ಅದಕ್ಕೆ ಬೇಕಿರುವ ಹಣವನ್ನೂ ಪಾವತಿ ಮಾಡಲಾಗಿದೆ. ಆದರೆ ಅದನ್ನು ಸಾಗಿಸಲು ಬೇಕಾಗಿರುವಷ್ಟು ವಾಹನಗಳು ಲಭ್ಯವಿಲ್ಲ. ಹೀಗಾಗಿ ಕೆಲವೆಡೆ ಪೂರೈಕೆ ವಿಳಂಬವಾಗಿದೆ. ಸಮಸ್ಯೆಯನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಲಾಗಿದ್ದು, ಒಂದೆರಡು ದಿನಗಳಲ್ಲಿ ಎಲ್ಲೆಡೆ ಅಕ್ಕಿ ದೊರೆಯಲಿದೆ.
ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಕೆಲಸದ ಅವಧಿ ಕಡಿತಗೊಳಿಸಿದ ಬೆನ್ನಲ್ಲೆ ಎದುರಾದ ಸಮಸ್ಯೆ

ಸಕಾಲಕ್ಕೆ ಬಾರದ '108' ಆಂಬುಲೆನ್ಸ್

• ಗಣಪತಿ ಹೆಗಡೆ

ಕಾರವಾರ: ತುರ್ತು ಆರೋಗ್ಯ ಸೇವೆಗೆ ನೆರವಾಗಬೇಕಿದ್ದ 'ಆರೋಗ್ಯ ಕವಚ–108' ಆಂಬುಲೆನ್ಸ್ ಸಿಬ್ಬಂದಿಯ ಕೆಲಸದ ಅವಧಿ ಕಡಿತಗೊಳಿಸಿದ ಬೆನ್ನಲ್ಲೇ ರಾಜ್ಯದ ಬಹುತೇಕ ಕಡೆ ಸಕಾಲಕ್ಕೆ ಸೌಲಭ್ಯ ಲಭ್ಯವಾಗುತ್ತಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂರು ತಿಂಗಳಿನಿಂದ ಆಂಬುಲೆನ್ಸ್ ಸೇವೆಯಲ್ಲಿ ವ್ಯಾಪಕ ವ್ಯತ್ಯಯ ಉಂಟಾಗಿದ್ದು, ಅಪಘಾತದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲು ಖಾಸಗಿ ವಾಹನಗಳ ಮೊರೆ ಹೋಗಬೇಕಾದ ಸ್ಥಿತಿ ಇದೆ.

ರಾಜ್ಯದಲ್ಲಿ 798 ಆರೋಗ್ಯ ಕವಚ–108 ಆಂಬುಲೆನ್ಸ್‌ಗಳಿದ್ದು, 3,500 ಸಿಬ್ಬಂದಿ ಇದ್ದಾರೆ. ಈ ಮೊದಲು ದಿನಕ್ಕೆ 12 ತಾಸಿನಂತೆ ಎರಡು ಪಾಳಿಯಲ್ಲಿ ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಸಿಬ್ಬಂದಿ ದಿನಕ್ಕೆ 8 ತಾಸು ಕೆಲಸ ನಿರ್ವಹಿಸಿದರೆ ಸಾಕು ಎಂಬ ಕಾರ್ಮಿಕ ಇಲಾಖೆ ನಿರ್ದೇಶನ ನೀಡಿದೆ. ಹೀಗಾಗಿ, ದಿನಕ್ಕೆ ಮೂರು ಪಾಳಿಯಲ್ಲಿ ಕೆಲಸ ಮಾಡಿಸಲು ಆಂಬುಲೆನ್ಸ್ ಸೇವೆ ನಿರ್ವಹಿಸುತ್ತಿರುವ ಜಿವಿಕೆ ಕಂಪನಿ ನಿರ್ಧರಿಸಿದೆ.

'ಮೂರು ಪಾಳಿಯಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಸಿಬ್ಬಂದಿ ಇಲ್ಲ. ಸೇವೆಯಲ್ಲಿ ವ್ಯತ್ಯಯ ಉಂಟಾಗದಂತೆ ನಿರ್ವಹಿಸಲು ತಾಲ್ಲೂಕು ಕೇಂದ್ರ ಮತ್ತು ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿರುವ ಆಂಬುಲೆನ್ಸ್‌ಗಳ ನಡುವೆ ಹೊಂದಾಣಿಕೆ ಮಾಡಿ ನಡೆಸಲಾಗುತ್ತಿದೆ' ಎಂದು ಕಂಪನಿಯ ಉತ್ತರ ಕನ್ನಡ ಜಿಲ್ಲಾ ವ್ಯವಸ್ಥಾಪಕ ಪ್ರಜ್ವಲ್ ತಿಳಿಸಿದರು.

> **ಉತ್ತರ ಕನ್ನಡಕ್ಕೆ ಹೆಚ್ಚುವರಿ 22 ಆಂಬುಲೆನ್ಸ್‌ಗಳಿಗೆ ಬೇಡಿಕೆ ಸಲ್ಲಿಸಲಾಗಿದ್ದು, ಅದಕ್ಕೆ ತಕ್ಕಂತೆ ಸಿಬ್ಬಂದಿ ನೇಮಕಕ್ಕೂ ಪತ್ರ ಬರೆಯಲಾಗಿದೆ. ಆಂಬುಲೆನ್ಸ್ ಸೇವೆಯ ವ್ಯತ್ಯಯದ ದೂರುಗಳ ಬಗ್ಗೆಯೂ ತಿಳಿಸಲಾಗಿದೆ**
> **ಡಾ.ನೀರಜ್ ಬಿ.ವಿ.,** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉತ್ತರ ಕನ್ನಡ

'ಗುಡ್ಡಗಾಡು ಪ್ರದೇಶ ಹೆಚ್ಚಿರುವ ಜಿಲ್ಲೆಗಳಲ್ಲಿ ಪ್ರತಿ 50ರಿಂದ 60 ಕಿ.ಮೀಗೆ ಒಂದು ಆಂಬುಲೆನ್ಸ್ ಇವೆ. ಮೂರು ತಿಂಗಳಿನಿಂದ ಆಂಬುಲೆನ್ಸ್ ಸೇವೆಯಲ್ಲಿ ವ್ಯತ್ಯಯವಾದ ಬಗ್ಗೆ ಹಲವು ದೂರು ಬಂದಿವೆ' ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಕಾರವಾರ ಬಸ್ ನಿಲ್ದಾಣದ ಬಳಿ ವಾರದ ಹಿಂದೆ ಅಪಘಾತ ಸಂಭವಿಸಿ ವ್ಯಕ್ತಿಯೊಬ್ಬರು ಗಾಯಗೊಂಡಿದ್ದರು. ಕೆಲವೇ ಮೀಟರ್ ದೂರದಲ್ಲಿ ಆರೋಗ್ಯ ಕವಚ–108 ಆಂಬುಲೆನ್ಸ್ ನಿಂತಿತ್ತು. 108ಕ್ಕೆ ಕರೆ ಮಾಡಿದಾಗ, ಆ ಆಂಬುಲೆನ್ಸ್ ಸಿಬ್ಬಂದಿಯ ಕೆಲಸದ ಅವಧಿ ಮುಗಿದಿದೆ. 45 ಕಿ.ಮೀ ದೂರದ ಕದ್ರಾದಿಂದ ಆಂಬುಲೆನ್ಸ್ ಬರಲಿದೆ ಎಂಬ ಉತ್ತರ ಸಿಕ್ಕಿತು. ಇಂಥ ಹಲವು ಘಟನೆಗಳು ನಡೆದಿವೆ' ಎಂದು ಜನಶಕ್ತಿ ವೇದಿಕೆಯ ಅಧ್ಯಕ್ಷ ಮಾಧವ ನಾಯಕ ಹೇಳಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

‘ತುಮಕೂರು ಕೈಗಾರಿಕಾ ಪ್ರದೇಶ ಮುಂದಿನ ವರ್ಷ ಪೂರ್ಣ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು–ಚೆನ್ನೈ ಕೈಗಾರಿಕಾ ಕಾರಿಡಾರ್‌ನ ಭಾಗವಾದ ತುಮಕೂರು ಕೈಗಾರಿಕಾ ಟೌನ್‌ಶಿಪ್‌ನ ಕಾಮಗಾರಿ 2026–27ರಲ್ಲಿ ಪೂರ್ಣಗೊಳ್ಳಲಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ರಾಜ್ಯ ಸಚಿವ ಜಿತಿನ್ ಪ್ರಸಾದ ತಿಳಿಸಿದರು.

ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ಅವರು, ‘₹1,701 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಈ ಯೋಜನೆಗೆ 2020ರಲ್ಲಿ ಅನುಮೋದನೆ ನೀಡಲಾಗಿತ್ತು. ವಿಶೇಷ ಉದ್ದೇಶದ ಘಟಕಕ್ಕೆ (ಎಸ್‌ಪಿವಿ) ರಾಜ್ಯ ಸರ್ಕಾರ 1668 ಎಕರೆ ಜಾಗ ಹಸ್ತಾಂತರ ಮಾಡಿದೆ. ಕೇಂದ್ರ ಸರ್ಕಾರವು ₹586 ಕೋಟಿ ಬಿಡುಗಡೆ ಮಾಡಿದೆ. ಇದರ ಕಾಮಗಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು 2023ರಲ್ಲಿ ಶಂಕುಸ್ಥಾಪನೆ ನೆರವೇರಿಸಿದ್ದರು. ರಸ್ತೆ, ಸಣ್ಣ ಸೇತುವೆ, ನೀರು ಸಂಸ್ಕರಣಾ ಘಟಕ ಸೇರಿದಂತೆ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ. ಆಹಾರ ಉತ್ಪನ್ನ ಜವಳಿ ಮತ್ತು ಉಡುಪುಗಳು, ಎಲೆಕ್ಟ್ರಾನಿಕ್ಸ್, ಆಟೋ ಘಟಕಗಳು, ಔಷಧೀಯ ವಸ್ತುಗಳು, ರಾಸಾಯನಿಕ ಕೈಗಾರಿಕೆಗಳು ಸ್ಥಾಪನೆಯಾಗಲಿವೆ’ ಎಂದರು.

GRT ಜ್ಯುವೆಲರ್ಸ್‌ನಿಂದ ‘ಸ್ವರ್ಣ ಯುಗಾದಿ’

ಬೆಂಗಳೂರು: ಆಭರಣ ಉದ್ಯಮದ ಖ್ಯಾತ GRT ಜ್ಯುವೆಲರ್ಸ್ ಯುಗಾದಿ ಹಬ್ಬದ ವಿಶೇಷವಾಗಿ ‘ಸ್ವರ್ಣ ಯುಗಾದಿ’ ಅಭಿಯಾನವನ್ನು ಪರಿಚಯಿಸಿದೆ. ಸಮೃದ್ಧಿ, ಹೊಸತನ ಹಾಗೂ ಭರವಸೆಯಿಂದ ಕೂಡಿರುವ ಹೊಸ ವರ್ಷದ ಉದಯಕ್ಕೆ ಈ ಅಭಿಯಾನ ನಾಂದಿ ಹಾಡಲಿದೆ.

ಆರು ದಶಕಗಳ ಪರಂಪರೆ ಮುಂದುವರಿಸಿಕೊಂಡು ಹೋಗುತ್ತಲಿರುವ ಜಿಆರ್‌ಟಿ ಜ್ಯುವೆಲರ್ಸ್ ಸ್ವರ್ಣ ಯುಗಾದಿ ಅಂಗವಾಗಿ ವಿಶಿಷ್ಟ ಕೊಡುಗೆಗಳನ್ನು ಪ್ರಕಟಿಸಿದೆ. ಗ್ರಾಹಕರು ಖರೀದಿಸುವ ಚಿನ್ನಾಭರಣದ ಮೇಲಿನ ಪ್ರತಿ ಗ್ರಾಂ.ಗೆ 50 ರೂಪಾಯಿ ಕಡಿತ, ಹಳೆಯ ಚಿನ್ನಾಭರಣ ವಿನಿಯಮದ ಪ್ರತಿ ಗ್ರಾಂಗೆ 75 ರೂಪಾಯಿ ಅಧಿಕ ಮೊತ್ತ, ವಜ್ರ ಮತ್ತು ಅನ್‌ಕಟ್ ಡೈಮಂಡ್ ಮೌಲ್ಯದ ಮೇಲೆ 10% ರಿಯಾಯಿತಿ (ಸಾಲಿಟೇರ್‌ಗಳನ್ನು ಹೊರತುಪಡಿಸಿ), ಬೆಳ್ಳಿ ವಸ್ತುಗಳ ತಯಾರಿಕೆ ಶುಲ್ಕದ ಮೇಲೆ 25% ಹಾಗೂ ಬೆಳ್ಳಿ ಆಭರಣಗಳ (ಗರಿಷ್ಠ ಮಾರಾಟ ದರ) ಮೇಲೆ 10% ರಿಯಾಯಿತಿ ನೀಡಲಿದೆ.

ಜಿಆರ್‌ಟಿ ಜುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಅವರು ಅಭಿಯಾನ ಉದ್ಘಾಟನೆ ಸಂದರ್ಭದಲ್ಲಿ ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳುತ್ತಾ, ‘ಯುಗಾದಿ ಹಬ್ಬ ಭರವಸೆ, ಸಮೃದ್ಧಿ ಮತ್ತು ಅದ್ಭುತ ಸಾಂಪ್ರದಾಯಿಕ ಕೌಟುಂಬಿಕ ಆಚರಣೆಯಾಗಿದೆ. ನಾವು ಹೆಮ್ಮೆ ಹಾಗೂ ಸಂತೋಷದಿಂದ ಈ ಆಚರಣೆಗಳ ಭಾಗವಾಗಲು ಬಯಸುತ್ತೇವೆ. ನಮ್ಮೆಲ್ಲ ಗ್ರಾಹಕರಿಗೆ ಮುಂಬರುವ ವರ್ಷ ಸಂತೋಷ ಮತ್ತು ಸಮೃದ್ಧಿ ತರಲಿ’ ಎಂದು ಹರಸಿದರು.

ಜಿಆರ್‌ಟಿಯ ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಅವರು ಇದಕ್ಕೆ ಪೂರಕವಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ‘ಯುಗಾದಿ ಹಬ್ಬದ ಉತ್ಸಾಹವನ್ನು ಸ್ವಾಗತಿಸುತ್ತಾ ವಿಶೇಷ ಕೊಡುಗೆಗಳೊಂದಿಗೆ ನಮ್ಮ ಇತ್ತೀಚಿನ ಸಂಗ್ರಹವನ್ನು ಪ್ರಸ್ತುತಪಡಿಸಲು ನಾವು ಉತ್ಸುಕರಾಗಿದ್ದೇವೆ. ಈ ಎಲ್ಲ ಕೊಡುಗೆಗಳು ಸಮೃದ್ಧಿ ಮತ್ತು ಸಂತೋಷವನ್ನು ಗ್ರಾಹಕರೊಂದಿಗೆ ಹಂಚಿಕೊಳ್ಳುವ ಒಂದು ಮಾರ್ಗವಾಗಿದೆ’ ಎಂದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಬಿಬಿಎಂಪಿ ಪೂರ್ವಭಾವಿ ಸಭೆ: ಶಕ್ತ್ಯುತ್ಸವ ಆಚರಣೆಗೆ ಸರ್ವ ಸಿದ್ಧತೆ

‘ಬೆಂಗಳೂರು ಕರಗ’ ಏ.12ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಕರಗ’ ಏಪ್ರಿಲ್ 12ರಂದು ನಡೆಯಲಿದ್ದು, ಇದಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಆರಂಭಿಸಬೇಕು ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರನ್ ಸೂಚಿಸಿದರು.

ಕರಗ ಮಹೋತ್ಸವಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ, ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಾಗೂ ಕರಗ ಸಮಿತಿಯ ಪದಾಧಿಕಾರಿಗಳ ಜೊತೆ ಮಂಗಳವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕರಗದ ಕೇಂದ್ರ ಸ್ಥಳವಾದ ಧರ್ಮರಾಯಸ್ವಾಮಿ ದೇವಸ್ಥಾನದ ರಸ್ತೆಯ ಸಮೀಪ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ ಮಾತನಾಡಿ, ಕರಗ ಶಕ್ತ್ಯುತ್ಸವ ಹೊರಡುವ ಮಾರ್ಗದ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳನ್ನು ದುರಸ್ತಿ ಮಾಡಬೇಕು. ಉತ್ಸವ ಸಾಗುವ ರಸ್ತೆಗಳಲ್ಲಿನ ಬೀದಿ ದೀಪಗಳು ಸರಿಯಾಗಿವೆಯೇ ಎಂದು ಪರಿಶೀಲಿಸಿ, ಎಲ್ಲಾ ಕಡೆ ವಿದ್ಯುತ್ ದೀಪಗಳನ್ನು ಅಳವಡಿಸಬೇಕು. ವಿದ್ಯುತ್ ಸಂಪರ್ಕ ಕಡಿತಗೊಳ್ಳದಂತೆ ಬೆಸ್ಕಾಂ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದರು.

2024ರಲ್ಲಿ ನಡೆದಿದ್ದ ‘ಬೆಂಗಳೂರು ಕರಗ’ (ಸಂಗ್ರಹ ಚಿತ್ರ)

ಕರಗ ಮಹೋತ್ಸವವು ಏಪ್ರಿಲ್ 4ರಿಂದ 14ರವರೆಗೆ ನಡೆಯಲಿದ್ದು, ಘನತ್ಯಾಜ್ಯ ವಿಭಾಗದಿಂದ ಹೆಚ್ಚುವರಿಯಾಗಿ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ನಿಯೋಜಿಸಿ ಸ್ವಚ್ಛತೆ ಕಾರ್ಯ ನಿರ್ವಹಿಸಬೇಕು. ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯಗಳ ವ್ಯವಸ್ಥೆ ಇರಬೇಕು. ಜಲಮಂಡಳಿ ವತಿಯಿಂದ ಒಳಚರಂಡಿಗಳನ್ನು ಸ್ವಚ್ಛಗೊಳಿಸಿ, ಎಲ್ಲೂ ಕೊಳಚೆ ನೀರು ಹೊರಹರಿಯದಂತೆ ಕ್ರಮ ವಹಿಸಲು ಸೂಚಿಸಿದರು.

ಸಂಚಾರ ಪೊಲೀಸ್ ವಿಭಾಗವು ಧರ್ಮರಾಯ ಸ್ವಾಮಿ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಟ್ಟಣೆಯಾಗದಂತೆ ಮಾರ್ಗ ಬದಲಾವಣೆ ಹಾಗೂ ವಾಹನಗಳ ನಿಲುಗಡೆಗೆ ಸ್ಥಳ ನಿಗದಿಪಡಿಸಬೇಕು.

ಕರಗ ಮಹೋತ್ಸವ ನಡೆಯುವ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಬ್ಯಾರಿಕೇಡ್ ವ್ಯವಸ್ಥೆ ಹಾಗೂ ಅಗ್ನಿಅವಘಡಗಳು ಸಂಭವಿಸದಂತೆ ಅಗ್ನಿ ಶಾಮಕ ವ್ಯವಸ್ಥೆ ಕೈಗೊಳ್ಳಬೇಕು.

ಕರಗ ವೀಕ್ಷಿಸಲು ಬರುವವರಿಗೆ ಆರೋಗ್ಯದಲ್ಲಿ ಏರುಪೇರಾದಲ್ಲಿ ಅವರಿಗೆ ಕೂಡಲೆ ಚಿಕಿತ್ಸೆ ನೀಡುವ ಸಲುವಾಗಿ ಪಾಲಿಕೆ ಆರೋಗ್ಯ ವಿಭಾಗದಿಂದ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯ ನಿಯೋಜನೆ ಮಾಡಬೇಕು. ಜೊತೆಗೆ ತುರ್ತು ಚಿಕಿತ್ಸೆಗಾಗಿ ಆಂಬುಲೆನ್ಸ್ ವ್ಯವಸ್ಥೆಯೂ ಇರಬೇಕು ಎಂದು ಸಭೆಯಲ್ಲಿ ಸೂಚಿಸಲಾಯಿತು.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್, ವಲಯ ಆಯುಕ್ತರಾದ ಅರ್ಚನಾ, ದಿಗ್ವಿಜಯ್ ಬೋಡ್ಕೆ, ಉಪ ಆಯುಕ್ತ ಮಂಜುನಾಥ ಸ್ವಾಮಿ, ಬಿಬಿಎಂಪಿ, ಮುಜರಾಯಿ ಇಲಾಖೆಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ದೇವಸ್ಥಾನ ವ್ಯವಸ್ಥಾಪನಾ ಸಮಿತಿಯವರು ಸಭೆಯಲ್ಲಿ ಉಪಸ್ಥಿತರಿದ್ದರು.

ಕರಗ ಮಹೋತ್ಸವದ ವಿವರ

ಕರಗ ಮಹೋತ್ಸವದ ವಿವರ
ಏಪ್ರಿಲ್ 4: ರಾತ್ರಿ 10 ಹಾಗೂ ರಾತ್ರಿ 3ಕ್ಕೆ ರಥೋತ್ಸವ–ಧ್ವಜಾರೋಹಣ
ಏಪ್ರಿಲ್ 5 ರಿಂದ 8: ಪ್ರತಿದಿನ ರಾತ್ರಿ 7.30ಕ್ಕೆ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ
ಏಪ್ರಿಲ್ 9: ರಾತ್ರಿ 3ಕ್ಕೆ ಆರತಿ ದೀಪೋತ್ಸವ
ಏಪ್ರಿಲ್ 10: ರಾತ್ರಿ 3ಕ್ಕೆ ಸಂಪಂಗಿಕೆರೆ ಅಂಗಳದ ಶಕ್ತಿ ಪೀಠದಲ್ಲಿ ‘ಹಸಿ ಕರಗ’
ಏಪ್ರಿಲ್ 12: ರಾತ್ರಿ 12.30ಕ್ಕೆ ‘ಕರಗ ಶಕ್ತ್ಯೋತ್ಸವ ಮತ್ತು ಶ್ರೀ ಧರ್ಮರಾಯ ಸ್ವಾಮಿ ರಥೋತ್ಸವ’
ಏಪ್ರಿಲ್ 13: ರಾತ್ರಿ 2 ಹಾಗೂ 4ಕ್ಕೆ ಪುರಾಣ ಪ್ರವಚನ ಹಾಗೂ ದೇವಸ್ಥಾನದಲ್ಲಿ ಗಾವು ಶಾಂತಿ
ಏಪ್ರಿಲ್ 14: ಸಂಜೆ 4 ಹಾಗೂ ರಾತ್ರಿ 12ಕ್ಕೆ ವಸಂತೋತ್ಸವ ಧ್ವಜಾರೋಹಣ

ಕಾರ್ಮಿಕರಿಗೆ ಕಿಟ್ ವಿತರಣೆಯಲ್ಲಿ ಅಕ್ರಮ: ಕಡಾಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಾರ್ಮಿಕ ಇಲಾಖೆ 12.39 ಲಕ್ಷ ಕಟ್ಟಡ ಕಾರ್ಮಿಕರಿಗೆ ನ್ಯೂಟ್ರಿಷಿಯನ್ ಕಿಟ್‌ಗಳನ್ನು ವಿತರಿಸಿದೆ. ಇದರಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಈರಣ್ಣ ಕಡಾಡಿ ಆರೋಪಿಸಿದರು.

ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಚರ್ಚೆಯಲ್ಲಿ ಪಾಲ್ಗೊಂಡ ಅವರು, ‘ಪ್ರತಿ ಕಿಟ್‌ಗೆ ಮಾರುಕಟ್ಟೆಯಲ್ಲಿ ಸರಾಸರಿ ₹1000 ಬೆಲೆ ಇದೆ. ಆದರೆ, ಇಲಾಖೆಯು ₹2,600ಕ್ಕೆ ಖರೀದಿಸಿದೆ. ಇದರಲ್ಲಿ ₹75 ಕೋಟಿ ಹಗರಣ ನಡೆಸಲಾಗಿದೆ’ ಎಂದರು.

‘ರಾಜ್ಯದ 18 ವೈದ್ಯಕೀಯ ಕಾಲೇಜುಗಳಿಗೆ 114 ಮಾಡ್ಯುಲರ್ ಆಪರೇಷನ್ ಥಿಯೇಟರ್‌ಗಳ ಖರೀದಿ ಮತ್ತು ಆಧುನೀಕರಣದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಅಕ್ರಮ ನಡೆಸಿದೆ. ಇದರಲ್ಲಿ ₹117 ಕೋಟಿ ಹಗರಣ ಆಗಿದೆ’ ಎಂದು ಅವರು ಆರೋಪಿಸಿದರು.

‘ಕೇಂದ್ರ ಸರ್ಕಾರದ ಇಂದ್ರಧನುಷ್ ಮತ್ತು ಮಾತೃವಂದನ ಯೋಜನೆಗಳನ್ನು ಬಳಸಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ರಾಜ್ಯದಲ್ಲಿ 19 ತಿಂಗಳಲ್ಲಿ 736 ಬಾಣಂತಿಯರು ಹಾಗೂ 1100 ನವಜಾತ ಶಿಶುಗಳ ಸಾವಿಗೆ ರಾಜ್ಯ ಸರ್ಕಾರದ ಧೋರಣೆ ಕಾರಣ’ ಎಂದರು.

‘ಬೆಳಗಾವಿಯಲ್ಲಿ 100 ಹಾಸಿಗೆಗಳ ಇಎಸ್‌ಐ ಆಸ್ಪತ್ರೆ ಸ್ಥಾಪಿಸಲು ರಾಜ್ಯ ಸರ್ಕಾರ ಜಮೀನು ಒದಗಿಸಿಲ್ಲ ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

Bharatiya Vidya Bhavan BBMP Public School (CBSE), Srirampuram, Bangalore-560021.
REQUIRES
• Principal & Vice-Principal: Qualification: M.A/M.Sc, M.Ed/B.Ed & IT Literate with 5 to 7 years Experience
• High School Teachers: English, Mathematics, Social Science & Kannada. Qualification: M.A/M.Sc. B.Ed., with 1 year experience.
• Middle & Primary Teachers: English, Hindi, Mathematics, Social Science & Kannada. Qualification: B.A/B.Sc. B.Ed., with 1 year experience.
• Pre-Primary Teachers: Qualification: PUC, NTT/ Degree with 1 year experience.
Clerk cum DTP Operator Any Degree with Kannada English Typing and Computer Knowledge. With 1 year experience.
Interested Candidates are requested to send CV to bhavanbbmp@gmail.com
Last Date: 31.03.2025.
WALK IN INTERVIEW on 2nd and 3rd April 2025 at School Campus between 11.00 AM to 03.00 PM.
Mobile No. 9480412455/9686548903.

Gopalan Foundation is Hiring trained and experienced Lecturers & Teachers
GOPALAN FOUNDATION — INSPIRED BY LIFE

GOPALAN INTERNATIONAL SCHOOL, WHITEFIELD
Pre Primary to Higher Secondary School in ICSE and IGCSE. All subjects including languages, Art, Physical Education, Yoga, Dance, Indian Music, Primary School Cordinator, Curriculum Head, Football & Swimming Coach.
GOPALAN P.U COLLEGE, WHITEFIELD
Economics, Hindi, CSE, Mathematics & Biology.
GOPALAN P.U COLLEGE, YELAHANKA (NORTH CAMPUS)
Physics, Chemistry, Maths, Biology, English, Economics, Accountancy, Business Studies, Computer Science, P.Ed., Kannada, Hindi, Sanskrit, Admin, DEO, Lab Attender.
GOPALAN COLLEGE OF COMMERCE, WHITEFIELD
Assistant Professor for English.
GOPALAN COLLEGE OF ENGINEERING AND MANAGEMENT, WHITEFIELD
Assistant Professor & Associate Professor for CSE, & Placement Officer.
hr@gopalanfoundation.com
GOPALAN NATIONAL SCHOOL
NORTH CAMPUS (YELAHANKA) & SOUTH CAMPUS (KUMBALGODU)
English, Mathematics, Hindi, Science, Social Science, Special Educator, Librarian, Accountant with SAP knowledge.
GOPALAN TWINKLERS SCHOOL, KANAKAPURA ROAD
English & Computer Science for High School.
hr@gopalancolleges.com

ASHOK INTERNATIONAL PUBLIC SCHOOL - CBSE KG Halli, Jalahalli West, Bangalore -560015 | **ASHOK PUBLIC SCHOOL - STATE** Guniagrahara, Bangalore -560089
WANTED TEACHERS FOR CBSE AND STATE BOARD SCHOOL FOR AY-2025-26
PRE PRIMARY: Graduate with NTT / MTT
PRT: Graduate with D.Ed. / B. Ed.
TGT: Graduate/Post Graduate with B.Ed - English, Kannada, Hindi, Maths, Science & Social
OTHER VACANCY: PET – B.P.Ed. / Music / Computer
: Desirables : Min. 2yrs Experience with effective Communication skill in English & Computer Skills.
Walk in Interview Date: 20/03/25 to 23/03/2025 Time: Thur.-Sat. 3 pm to 5 pm and Sun. 9 am to 1 pm.
Interested candidates can apply by E-mail to: hr.agi@ashok.ac.in www.ashok.ac.in
CONTACT 9880933918 9986009895 9611152247

SRI KK EDUCATION CENTRE (Affiliated to CBSE, Aff. No. 830256) Kadabagere, Magadi Road, Bangalore
REQUIREMRNT 2025-2026
TEACHERS: •NTT Trained •Social •Computer •Maths •Hindi •English
OTHERS: •Librarian •Social Media Manager •Physical Educator •Music & Dance
Qualification: NTT, MTT, B.Ed/M.Ed with minimum 3 years of experience in CBSE/ICSE Board .
Email: srikkec@gmail.com Ph: 9886535292

SRI HANUMAN GROUP OF EDUCATIONAL INSTITUTIONS ®
Affiliated To CBSE, New Delhi (Affiliation No-830249)
Bandappa Garden, Muthyalanagar, Gokul Extn, Bengaluru-560054. Ph No.080-23374802
E-mail: nps.principal@gmail.com website:www.npsblr.in
INVITES APPLICATION FOR TEACHING & NON TEACHING POSTS
We are seeking qualified and experienced teaching & non-teaching staff with excellent communication skills & proficiency in computer for the following posts.
KINDERGARTEN- NTT
PRT- English, Kannada, Hindi, Science, Mathematics & Social Studies.
TGT- English, Kannada, Hindi, Science, Mathematics, Social Studies, Computer Science & Physical Education
PGT (PART TIME)- Physics, Chemistry, Biology, Computer Science, Economics & Statistics
NON-TEACHING POSTS- Office Assistant
Eligible candidates may send their updated resume within 01.04.2025 to hrnps54@gmail.com or can submit their hard copy resume to the above address.

EAST WEST INSTITUTIONS BENGALURU & MYSURU
EAST WEST 1968
THE GREAT EASTERN INTERNATIONAL PUBLIC SCHOOL
Affiliated to CBSE New Delhi (Affiliation No. 830539)
:# 18, Lingadhiranahalli, D Group Employees Layout, Vishwaneedam Post, Off Magadi Main Road, Herohalli, Bengaluru-560091. Web: www.tgeips.in
Phone: 080 - 23245266, 73386 48664
TEACHERS REQUIRED
PGTs | TGTs | NURSERY TEACHERS
Post Graduates / Graduates with B.Ed, Nursery and Montessory Trained
Physical Education, Music & Dance Teacher
With Excellent communication skills & Teaching experience in CBSE SCHOOLS
Eligible candidates may apply with your updated resume within 7 days.
Mail us: tgeips2014@gmail.com
Attractive Package with all other benefits
SVM--24521

HOLY Angel's High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Music Teacher & P.E.Teacher. STATE & ICSE Qualification: B.A./B.Sc., B.Ed, M.A./M.Sc., M.Ed, N.T.T. CP.Ed. Only English Medium Candidates need to apply

NIRMAN INTERNATIONAL PUBLIC SCHOOL (CBSE),Near AutomatedRTO,7th Block, Vishweshwaraiah Layout, Bangalore-91 Requires Qualified,Experienced TEACHERS for All Subjects,from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

ANGELS HIGH School M.C Layout, Vijayanagar, B'lore. Required Experienced Primary Teachers for all Subjects, PE and Science for High`School. 8431812577, 7204225487.

REQUIRED FEMALE Nursery/Primary Co-ordinator with 5 years Experience and also N.T.T./B.A., M.A./B.Ed/B.Sc., M.Sc./B.Ed. for English, Maths, Science, Hindi & Social Science. Contact Max Muller Public School, Mahalakshmi Layout, B'lore-96. Ph:23376049/50. E.mail- maxmullerpublicschool.mlayout@gmail.com

WANTED FRESHER/ Experience Teachers/ Academic Co-ordinators ENGLISH/ MATHS/ SOCIAL/ PHYSICS/ CHEMISTRY/ BIOLOGY/ HINDI/ COMPUTER TEACHERS/ PHYSICAL EDUCATION Salary Rs. 20000 to 35000/- PM ESI, PF WALK-IN INTERVIEW ALL WORKING DAYS Between 10.30 AM TO 4.00 PM MATHA'S INTERNATIONAL SCHOOL ICSE AFFILIATION CODE KA470 (Google Map location MATHA'S ENGLISH HIGH SCHOOL) #55/2 B, 11th K.M.Hosur Main Road, Garuve Bhavipalya, Bommanahalli post, Bangalore- 560068 M: 9449814917,8277258609

Accounts & Finance

WANTED EXPERIENCED Accountant (M/ F) Graduate with Tally and GST complete knowledge, living approx 6 km near Kumarapark , Salary 40,000 p.m. Interview at Chamundeshwari Finance #16, 7th cross, Kumarapark West, Bluru, on 22nd March, 2pm to 7pm. Contact: 9945106789

WANTED DIRECT APPOINTMENT LADIES For Accounts (Married), B.com with Tally Knowledge& Around Harohalli: 9980921763/ 9632201671

WANTED MALE OFFICE ASSISTANT with knowledge of Accounts and Typing around Basavanagudi contact. 6361745261

Office Boys/ Peon

WANTED OFFICE Boys (Field Work), Office Assistant for advt. agency near Hanumanthanagar- 31698969, 6361942572

GOPALAN
we want you!
are you creative enough?
we're looking for professionals
• Sr. Architect
• Sr. Interior Designer
• Digital Marketer
• Creative Graphic Designer
• Content Writer
contact: hrteam@gopalanenterprises.com

Engg/ Production Technical

ELECTRICIAN HIRING
ELECTRICIAN (Full-Time)
Location: Bangalore, Hyderabad, Chennai, Kolkata, Ahmedabad, Mumbai, Pune, Gurgaon,
Qualification: The electrician must possess either a diploma or relevant experience in the electrical field.
Required of a Bike: The Electrician should have a bike with valid driving license to travel to client booking sites as required.
(Lucrative Salary and Incentives)
Apply Now - Email id recruitment4@agarwalpackers.com
9289784102 7086060321

Wanted

WANTED SALES Girls For Opticals Showroom in Around Rajajinagar and Srirampura, Contact: 9845359345/ 9880778440

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Kanakapura Road

NO BARGAIN Fixed Price Sale of Flats in South Bengaluru. Sarakki Homes 9663676464

Sites

Nagarabhavi

SALE, 30X40, 20X30, 30X50, 40X60, 5050X80. ITI, SMV, Upkar, NGEF Layout Houses Rent/ Lease. 9035334418

"SALE 40X60 Commercial Site @ Mallathahalli Layout, Good location Genuine Buyers only Call: 7760388034"

EDUCATIONAL

Private Tuitions

10ICSE LIVE ONLINE course --Starts 24th March.Small batch(12) for focussed learning. Test based scholarships.Also for JEE/KCET/NEET/CBSE call 9620000535 or visit www.jaagrut.com

PERSONAL

Change of Name

CHANGE OF NAME
I, EASWARA IYER PADMANABHA, S/o Padmanabha Iyer, aged about 87 years, R/o C-8, ADITYA NEST Apt, 13th Cross, 4th Main, Malleswaram, Blr-560003, do hereby declare that I have changed my name from EASWARA IYER/ ESWARA IYER / ESWARA IYER P / ESHWAR IYAR / ESHWAR IYER / P.EASWARAN / P. EASWARA IYER / P ESWARA IYER / P EASWARA IYER / PADAMANABHAIYER ESWARAIYER / EASWARA IYER PADMANABHAN IYER to EASWARA IYER PADMANABHA, vide affidavit # IN-KA78340557846965X dated 13.3.25 sworn to before Notary, Chandrakala #12598, Bangalore.

I, CHANDRAM MAGADUM S/o Lakkappa have changed my name to CHANDRAM L MAGADUM Vide affidavit dated: 18/3/2025 Before Notary Shreeshail B.Gobbani Bangalore.

Lost

LOST
I, **Sreekanth Elkuri,** Residing at AE03, Plam Vistas Villas, Bandapura Village, Bangalore-49. Have lost my **Original Sale deed of Document No.: KRI-1-06550-2018-19**. Finders pls contact: **9986131368** or inform nearby police station.

PUBLIC NOTICE

PUBLIC NOTICE
THIS IS TO NOTIFY the General Public that our client proposes to purchase the below mentioned Schedule property from **M/s. SRI. VINAYAKA PROJECTS,** A registered Partnership Firm, having its office at: Chandrodaya Theatre, Vidhyapeeta Circle, Katriguppe Main Road, Ashok Nagar, Bangalore-560 050, represented by its Managing Partner: Sri. Mohan Kumar S.L, who have represented that they purchased the Schedule Property from their vendor viz., Sri.Suresh K.Bhayana in terms of a Sale Deed dated 29/01/2025, registered as Document No.YAN-1-13501/2024-25 in Book-I in the Office of Sub-Registrar, Gandhi Nagar (Yelahanka), Bangalore, Persons objecting for the proposed purchase or having any right in the Schedule property may lodge their objections and/or claims with the undersigned along with supporting documentary evidence within Seven days from the date of this publication and objections and/or claims received thereafter will not be binding on our clients and our clients will proceed to purchase the Schedule property as if there are no claims/objections.
: SCHEDULE PROPERTY :
All that Converted Site bearing No.447 and bearing E-Khatha No. 150200201100400816, 776/214/447 old No. 770/214/447, carved out of Sy.No.77/1 of Bandi Kodigehalli Village, Jala Hobli, Yelahanka Taluk, Bangalore, duly converted for Residential Purposes vide official Memorandum/ Conversion Order No.ALN/SR/(NA)58:95-96, dated 23/01/1996, issued by Special Deputy Commissioner, Bangalore District, Bangalore and Site measuring East to West: (105 Ft 3 Inches + 99 Ft 8 Inches/2), North to South: (73 Ft 6 Inches +73 Ft 4 Inches/2) in all measuring 7522 Square Feet, and bounded on the:-
East by : Site Bearing No.448;
West by : Site Bearing No.446;
North by : Road;
South by : Private Property.
YASEEN BABU, K.M. LEGAL ADVOCATES,
No.1C, 'WILOCRISA', # 14, Rest House Crescent Road, BANGALORE-560001.
Ph : +91 9845855933
email: kmlegaladvocates@gmail.com
Place: Bangalore Date: 19/03/2025

DH Classifieds More value, more impact | DECCAN HERALD | ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 |
+91 9731810277 | +91 9886213331 | 080- 45557163/164
* Conditions apply

EDUCATION To Place your Classified Ads Contact: 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರ ಪ್ರತಿಭಟನೆ • ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಸ್ಮಾರ್ಟ್ ಮೀಟರ್ ದರ ಏರಿಕೆ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮಾರ್ಟ್ ಮೀಟರ್ ದರ ₹950 ರಿಂದ ₹5 ಸಾವಿರಕ್ಕೆ ಏರಿಕೆ ಮಾಡಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

‘ಹಿಂದಿನ ದರದಂತೆಯೇ ಸ್ಮಾರ್ಟ್ ಮೀಟರ್‌ಗಳನ್ನು ಮಾರಾಟ ಮಾಡಲು ಮೂರು ತಿಂಗಳ ಕಾಲಾವಕಾಶ ನೀಡಬೇಕು. ಬೆಸ್ಕಾಂ ವ್ಯಾಪ್ತಿಯ ಕಚೇರಿಗಳಲ್ಲಿ ನೆಟ್‌ವರ್ಕ್ ಸಮಸ್ಯೆಯನ್ನು ಸರಿಪಡಿಸಬೇಕು. ವಿದ್ಯುತ್ ಪರಿವೀಕ್ಷಣಾಲಯದ ಸೇವೆಗಳಲ್ಲಿ ಶುಲ್ಕ ಹೆಚ್ಚಿಸಿರುವುದು ಖಂಡನೀಯ’ ಎಂದು ಪ್ರತಿಭಟನಕಾರರು ತಿಳಿಸಿದರು.

‘ಎರಡನೇ ದರ್ಜೆಯ ಗುತ್ತಿಗೆ ಪರವಾನಗಿ ಪಡೆದಿರುವ ವಿದ್ಯುತ್ ಗುತ್ತಿಗೆದಾರರಿಗೆ ಪ್ರಥಮ ದರ್ಜೆಯ ಗುತ್ತಿಗೆ ಪರವಾನಗಿ ಪಡೆಯಲು ನಿಗದಿಪಡಿಸಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆಯಿಂದ ವಿನಾಯಿತಿ ನೀಡಬೇಕು. ಅನುಭವದ ಆಧಾರದ ಮೇಲೆ ಪ್ರಥಮ ದರ್ಜೆಯ ವಿದ್ಯುತ್ ಗುತ್ತಿಗೆ ಪರವಾನಗಿ ನೀಡಬೇಕು. 2 ಮೆಗಾವಾಟ್ ಹಾಗೂ ಅದಕ್ಕಿಂತ ಹೆಚ್ಚಿನ ಮೆಗಾವಾಟ್ ವಿದ್ಯುತ್ ಸಂಪರ್ಕ ಪಡೆಯುವ ಸಂದರ್ಭದಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಬೇಕು’ ಎಂದು ಆಗ್ರಹಿಸಿದರು.

‘ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ರಮವಾಗಿ ಕೃಷಿ ಪಂಪ್‌ಸೆಟ್‌ಗೆ ಸಂಪರ್ಕ ಕಲ್ಪಿಸಿರುವ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಬೇಕು. ಆರ್ಥಿಕವಾಗಿ ಹಿಂದುಳಿದ ವಿದ್ಯುತ್ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು ಎಂದು ಸಂಘದ ಅಧ್ಯಕ್ಷ ವೈ.ಎಚ್. ಆನಂದ್ ಒತ್ತಾಯಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು ಪ್ರಜಾವಾಣಿ ಚಿತ್ರ

‘ಕ.ರಾ.ವಿ.ಪ ಸ್ಥಗಿತಗೊಂಡ ಕಾರ್ಯಚಟುವಟಿಕೆಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿಗೆ (ಕರಾವಿಪ) ಕಳೆದ ಎರಡು ವರ್ಷಗಳಿಂದ ಆಡಳಿತ ಮಂಡಳಿ ಇಲ್ಲದೇ, ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿವೆ’ ಎಂದು ಕರಾವಿಪದ ನಿಕಟಪೂರ್ವ ಅಧ್ಯಕ್ಷ ಗಿರೀಶ್ ಕಡ್ಲೇವಾಡ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘2022ರಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶಕ್ಕೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಶಿಕ್ಷಕರು, ಮಕ್ಕಳು, ಪಾಲಕರು ಪರಿಷತ್ತಿನ ಸದಸ್ಯತ್ವ ಪಡೆದುಕೊಂಡಿದ್ದರು. ₹39.97 ಲಕ್ಷ ಸದಸ್ಯತ್ವ ಶುಲ್ಕ ಸಂಗ್ರಹವಾಗಿತ್ತು. ಈ ಶುಲ್ಕವನ್ನು ಕೇಂದ್ರ ಕಚೇರಿಯಲ್ಲಿ ಇಡದೇ ನೇರವಾಗಿ ಬ್ಯಾಂಕ್‌ಗೆ ಜಮೆ ಮಾಡಲಾಗಿತ್ತು. ಆದರೆ ಈ ಸದಸ್ಯತ್ವ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂದು ಕೆಲವರು ಆರೋಪಿಸಿ ಚುನಾವಣೆಯನ್ನು ಮುಂದೂಡಿದ್ದಾರೆ’ ಎಂದು ಹೇಳಿದರು.

‘ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ, ಇದರಿಂದ ಪರಿಷತ್‌ನ ಅಭಿವೃದ್ಧಿಗೆ ತೊಡಕಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಯಾವುದೇ ಅನುದಾನವೂ ಲಭ್ಯವಾಗಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು. ಪರಿಷತ್‌ಗೆ ಅನುದಾನ ನೀಡಿ, ಜನರಲ್ಲಿ ವೈಜ್ಞಾನಿಕ ಮನೋಭಾವ ರೂಪಿಸಲು ನೆರವಾಗಬೇಕು’ ಎಂದು ಮನವಿ ಮಾಡಿದರು.

ಒಣಗಿದ ಮರದ ಮಾಹಿತಿಗೆ ಮನವಿ

ಬೆಂಗಳೂರು: ನಗರದಲ್ಲಿ ಒಣಗಿರುವ ಮರಗಳು ಹಾಗೂ ರೆಂಬೆ ಕೊಂಬೆಗಳ ಮಾಹಿತಿ ನೀಡುವಂತೆ ಬಿಬಿಎಂಪಿ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಲ್.ಜಿ ಸ್ವಾಮಿ ಮನವಿ ಮಾಡಿದ್ದಾರೆ. ಸಾರ್ವಜನಿಕರು ತಮ್ಮ ಪ್ರದೇಶಗಳಲ್ಲಿ ಒಣಗಿರುವ/ಅಪಾಯ ಸ್ಥಿತಿಯ ಮರಗಳು ಹಾಗೂ ರೆಂಬೆ-ಕೊಂಬೆಗಳು ಕಂಡುಬಂದಲ್ಲಿ ಪಾಲಿಕೆಯ ಸಹಾಯವಾಣಿ 1533ಗೆ ಮಾಹಿತಿ ನೀಡಬಹುದು. ಮಾಹಿತಿಗೆ 94806 83047.

ದರ್ಶನ್ ಜಾಮೀನು ಪ್ರಶ್ನಿಸಿದ್ದ ಅರ್ಜಿ: ಏ.2ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಮತ್ತು ಇತರೆ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿರುವ ಆದೇಶಗಳನ್ನು ಪ್ರಶ್ನಿಸಿ ಬೆಂಗಳೂರು ನಗರ ಪೊಲೀಸರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಏ.2ರಂದು ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ದರ್ಶನ್, ಪವಿತ್ರಾಗೌಡ, ಲಕ್ಷ್ಮಣ್, ಪ್ರದೂಶ್, ನಾಗರಾಜು, ಅನುಕುಮಾರ್ ಹಾಗೂ ಜಗದೀಶ್ ಅವರಿಗೆ ಹೈಕೋರ್ಟ್ ನಿಯಮಿತ ಜಾಮೀನು ಮಂಜೂರು ಮಾಡಿತ್ತು. ಉಳಿದ ಹತ್ತು ಮಂದಿ ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು. ಈ ನಿಯಮಿತ ಜಾಮೀನು ಆದೇಶಗಳನ್ನು ಪ್ರಶ್ನಿಸಿ ಹಿರಿಯ ವಕೀಲ ಅನಿಲ್ ನಿಶಾನಿ ಅವರು ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ಮಂಗಳವಾರ ನಡೆಯಬೇಕಿತ್ತು. ಆದರೆ, ವಿಚಾರಣೆಯ ಪಟ್ಟಿಯಲ್ಲಿ ಇರಲಿಲ್ಲ. ಪ್ರಕರಣದ ವಿಚಾರಣೆ ನಡೆಸುವಂತೆ ನಿಶಾನಿ ಮನವಿ ಮಾಡಿದರು. ಏ.2ರಂದು ವಿಚಾರಣೆ ನಡೆಸುವುದಾಗಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠ ತಿಳಿಸಿತು.

2024ರ ಡಿ.13ರಂದು ಹೈಕೋರ್ಟ್ ಏಕಸದಸ್ಯ ಪೀಠ ದರ್ಶನ್, ಪವಿತ್ರಾಗೌಡ ಸೇರಿದಂತೆ ಏಳು ಆರೋಪಿಗಳಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

ಜೂನ್ 8ರಂದು ಚಿತ್ರದುರ್ಗದ ರೇಣುಕಸ್ವಾಮಿ ಅವರನ್ನು ಅಪಹರಿಸಿ ಕೊಲೆ ಮಾಡಿದ ಆರೋಪದಡಿ ದರ್ಶನ್, ಪವಿತ್ರಾ ಗೌಡ ಸೇರಿದಂತೆ 17 ಮಂದಿಯನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದರು.

ಪ್ರಮಾಣಪತ್ರ ಸಲ್ಲಿಸಲು ಲೋಕಾಯುಕ್ತಕ್ಕೆ ನಿರ್ದೇಶನ

ನವದೆಹಲಿ: ಬೆಂಗಳೂರಿನಲ್ಲಿ ಬಗರ್ ಹುಕುಂ ಜಮೀನು ಅಕ್ರಮ ಮಂಜೂರಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮಾಣಪತ್ರ ಸಲ್ಲಿಸುವಂತೆ ಕರ್ನಾಟಕ ಲೋಕಾಯುಕ್ತಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಈ ಪ್ರಕರಣ ಸಂಬಂಧ ಭ್ರಷ್ಟಾಚಾರ ನಿಗ್ರಹ ದಳದಿಂದ ತನಿಖೆ ನಡೆಸಲು ಹೈಕೋರ್ಟ್ 2018ರಲ್ಲಿ ಆದೇಶ ನೀಡಿತ್ತು. ಬಗರ್‌ಹುಕುಂ ಮಂಜೂರಾತಿ ಸಮಿತಿಗೆ ಬಿಜೆಪಿ ಶಾಸಕ ಆರ್.ಅಶೋಕ ಅಧ್ಯಕ್ಷರಾಗಿದ್ದರು. ತಮ್ಮ ವಿರುದ್ಧ ಎಸಿಬಿ ದಾಖಲಿಸಿದ್ದ ಎಫ್‌ಐಆರ್ ರದ್ದುಗೊಳಿಸುವಂತೆ ಅಶೋಕ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಬೆಂಗಳೂರು ಉತ್ತರ ತಾಲ್ಲೂಕು ಸಮಿತಿ ಅಧ್ಯಕ್ಷರಾಗಿದ್ದ ಅಶೋಕ ಅವರು ಸೋಮನಹಳ್ಳಿಯಲ್ಲಿ 8 ಎಕರೆ ಭೂಮಿಯನ್ನು ಅಕ್ರಮವಾಗಿ ಹಂಚಿಕೆ ಮಾಡಿದ್ದರು ಎಂದು ಆರೋಪಿಸಿ ಎಫ್‌ಐಆರ್ ದಾಖಲಿಸಲಾಗಿತ್ತು. ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 22ಕ್ಕೆ ಮುಂದೂಡಲಾಗಿದೆ. ರಾಜ್ಯ ಸರ್ಕಾರದ ಪರವಾಗಿ ವಕೀಲ ಡಿ.ಎಲ್. ಚಿದಾನಂದ ವಾದಿಸಿದರು.

ಶೀಲ ಶಂಕಿಸಿ ಪತ್ನಿ ಕೊಲೆ

ಆನೇಕಲ್: ತಾಲ್ಲೂಕಿನ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯ ರಾಚಮಾನ ಹಳ್ಳಿಯಲ್ಲಿ ವ್ಯಕ್ತಿಯೊಬ್ಬ ತನ್ನ ಪತ್ನಿ ಶೀಲ ಶಂಕಿಸಿ ಹತ್ಯೆ ಮಾಡಿರುವ ಘಟನೆ ನಡೆದಿದೆ.

ಮೈಸೂರಿನ ಅನಿತಾ (27) ಮೃತ ಮಹಿಳೆ. ಬಾಬು (32) ಪತ್ನಿ ಶೀಲ ಶಂಕಿಸಿ ಕೊಲೆ ಮಾಡಿದ ಆರೋಪಿ. ರಾಚಮಾನಹಳ್ಳಿ ನಿವಾಸಿ ಬಾಬು, ಕಳೆದ ಕೆಲವು ದಿನಗಳಿಂದ ಪತ್ನಿ ಶೀಲ ಶಂಕಿಸಿ ಆಗ್ಗಾಗ್ಗೆ ಜಗಳವಾಡುತ್ತಿದ್ದ. ಸೋಮವಾರ ರಾತ್ರಿ ಜಗಳ ವಿಕೋಪಕ್ಕೆ ತಿರುಗಿದ್ದು, ತಲೆಗೆ ದೊಣ್ಣೆಯಿಂದ ಹೊಡೆದಿದ್ದಾನೆ. ಇದರಿಂದ ಅಸ್ವಸ್ಥರಾದ ಅನಿತಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ: ಇ-ಜಿಎಸ್‌ಯು-ಇಎಲ್‌ಇ-2024-25-ಒಟಿ-15 ದಿನಾಂಕ 13.03.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಪ್ರಸ್ತಾಪಿತ ಕ್ವಾಡ್ರುಪ್ಲಿಂಗ್	12,39,00,011.20

ಸಂಬಂಧಿಸಿದಂತೆ ಹೂಡಿ ಹಾಲ್ಟ್ ಸ್ಟೇಷನ್ ಬಳಿ ಅಸ್ತಿತ್ವದಲ್ಲಿ ಇರುವ ಸಿಎಚ್. ನಂ 337/800-337/900ರಲ್ಲಿ 66ಕೆವಿ ಡಿಸಿ ಹೂಡಿ ಲಿಲೊ ಮಾರ್ಗವನ್ನು ಪ್ರಸ್ತಾಪಿತ 132ಕೆವಿ ವರ್ಗ 1000 ಎಸ್‌ಕ್ಯೂಎಂಎಂ ಭೂಗತ ಕೇಬಲ್ ಆಗಿ ಪರಿವರ್ತಿಸುವ ಕೆಲಸ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04-04-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ ಲಾಗಿನ್ ಮಾಡಿ www.ireps.gov.in

ಉಪ ಮುಖ್ಯ ವಿದ್ಯುತ್ ಅಭಿಯಂತರರು/ಗತಿ ಶಕ್ತಿ ಘಟಕ, ಬೆಂಗಳೂರು

ಪಿಯುಬಿ/856/ಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂಆರ್/2024-25

South Western Railway - SWR SWRRLY SWRRLY

ಯಶಸ್ವಿನಿ ನೋಂದಣಿ ಅವಧಿ ವಿಸ್ತರಣೆ

ರಾಮನಗರ: 2024-25ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆ ಮುಂದುವರೆಸಲು ಹಾಗೂ ಈ ಯೋಜನೆಯಡಿ ಹೊಸ ಸದಸ್ಯರನ್ನು ನೋಂದಾಯಿಸಲು/ ನವೀಕರಣಗೊಳಿಸುವ ಸಲುವಾಗಿ ಇದ್ದ ಅವಧಿಯನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ಅರ್ಹರು ಈ ಅವಕಾಶದ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಸಹಕಾರ ಸಂಘಗಳ ಉಪ ನಿಬಂಧಕರಾದ ಕವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಮಾರು 50 ಲೀಟರ್ ಪೆಟ್ರೋಲ್ ಸುರಿದ ಕಿಡಿಗೇಡಿಗಳು: ನಾಲ್ವರು ಪಾರು

ಗ್ರಾ. ಪಂ ಸದಸ್ಯನ ಮನೆಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿದರಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯನ ಮನೆಗೆ ಸೋಮವಾರ ಮಧ್ಯರಾತ್ರಿಯಲ್ಲಿ ಕಿಡಿಗೇಡಿಗಳು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ. ನಾಲ್ಕು ಜನರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಹಿರಂಡಹಳ್ಳಿ ಗ್ರಾಮದಲ್ಲಿರುವ ಜಗನ್ನಾಥ್ ಅವರ ಮನೆಯ ಕಿಟಕಿಗಳ ಮೂಲಕ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿದೆ. ಮನೆಯಲ್ಲಿದ್ದ ಜಗನ್ನಾಥ ಹಾಗೂ ಅವರ ಪತ್ನಿ, ಇಬ್ಬರು ಮಕ್ಕಳು ಅಗ್ನಿ ದುರಂತದಿಂದ ಪಾರಾಗಿದ್ದಾರೆ.

ಸೋಮವಾರ ಮಧ್ಯೆ ರಾತ್ರಿ 1.30ರ ಸಮಯದಲ್ಲಿ ಕಿಡಿಗೇಡಿಗಳು ಸುಮಾರು 60 ಲೀಟರ್ ಪೆಟ್ರೋಲ್ ತಂದು, ಅದರಲ್ಲಿ 50 ಲೀಟರ್ ಪೆಟ್ರೋಲ್ ಅನ್ನು ಕಿಟಕಿಯ ಮೂಲಕ ಸುರಿದು ಬೆಂಕಿ ಹಚ್ಚಿದ್ದಾರೆ. 10 ಲೀಟರ್ ಪೆಟ್ರೋಲ್ ಇದ್ದ ಇನ್ನೊಂದು ಕ್ಯಾನ್ ಅನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ.

ಸ್ಫೋಟದ ರೀತಿಯಲ್ಲಿ ಭಾರಿ ಶಬ್ದ ಕೇಳಿಬಂದ ಕೆಲವೇ ನಿಮಿಷದಲ್ಲಿ ಬೆಂಕಿ ಮನೆಯನ್ನು ಆವರಿಸಿಕೊಂಡು, ಟಿವಿ, ಫ್ರಿಜ್, ಪೀಠೋಪಕರಣಗಳು, ದಾಖಲೆಗಳು, ಗೃಹೋಪಯೋಗಿ ವಸ್ತುಗಳು ಸುಟ್ಟುಹೋಗಿವೆ.

‘ಮನೆಯಲ್ಲಿ ಶಬ್ದ ಹಾಗೂ ಬೆಂಕಿ ದಟ್ಟವಾದ ಹೊಗೆ ಕಾಣಿಸಿಕೊಂಡಿತ್ತು. ಮನೆಯ ಮಹಡಿಯಲ್ಲಿ ಮಲಗಿದ್ದ ನಮ್ಮ ಕುಟುಂಬದ ಸದಸ್ಯರು ಹಾಗೂ ಸ್ಥಳೀಯರು ಬಾಗಿಲು ಒಡೆದು ಮನೆಯಲ್ಲಿದ್ದವರನ್ನು ರಕ್ಷಣೆ ಮಾಡಿದರು’ ಎಂದು ಗ್ರಾಮ ಪಂಚಾಯಿತಿ ಸದಸ್ಯ ಜಗನಾಥ್ ತಿಳಿಸಿದರು.

ಮನೆಯಲ್ಲಿ ದಟ್ಟ ಹೊಗೆ ಆವರಿಸಿದ್ದರಿಂದ ಇಬ್ಬರು ಅಸ್ವಸ್ಥಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆವಲಹಳ್ಳಿ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.



ಹಿರಂಡಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯತಿ ಸದಸ್ಯ ಜಗನ್ನಾಥ್ ಅವರ ಮನೆಯಲ್ಲಿ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ

ಆವಲಹಳ್ಳಿ ಪೊಲೀಸರು ಮನೆ ಪರಿಶೀಲಿಸಿದರು

24ಕ್ಕೆ ಲಕ್ಷ್ಮೀದೇವಿ ಅಗ್ನಿಕೊಂಡ

ಕುದೂರು: ಗ್ರಾಮದ ಲಕ್ಷ್ಮೀದೇವಿ ಅಗ್ನಿಕೊಂಡ ಮಹೋತ್ಸವ ಮಾರ್ಚ್ 24 ರಂದು ನಡೆಯಲಿದೆ ಎಂದು ಲಕ್ಷ್ಮೀದೇವಿ ಉತ್ಸವ ಸಮಿತಿ ಅಧ್ಯಕ್ಷ ಕೆ.ಆರ್. ಯತಿರಾಜು ತಿಳಿಸಿದ್ದಾರೆ.

ಮಾರ್ಚ್ 22 ರಂದು ಸಂಜೆ 4.30ಕ್ಕೆ ಸೌದೆ ತುಂಬಿದ ಎತ್ತಿನ ಗಾಡಿಗಳ ಮೆರವಣಿಗೆ. ರಾತ್ರಿ 10ಕ್ಕೆ ದಾಸಪ್ಪನಪಾಳ್ಯ ಗ್ರಾಮಸ್ಥರಿಂದ ಗಂಗೆಪೂಜೆ ಮತ್ತು ಮಡಲಕ್ಕಿ ಸೇವೆ ನಡೆಯಲಿದೆ.

ಮಾರ್ಚ್ 23 ರಂದು ರಾತ್ರಿ 8.30ಕ್ಕೆ ಗ್ರಾಮಸ್ಥರಿಂದ ಉಪ್ಪಾರಸೇವೆ ಮತ್ತು ಅಗ್ನಿವಂಶ ಕ್ಷತ್ರಿಯರಿಂದ ಅಗ್ನಿಕೊಂಡ ನಿರ್ಮಾಣ ನಡೆಯಲಿದೆ. 24 ರಂದು ಬೆಳಿಗ್ಗೆ 10.20ಕ್ಕೆ ಅಗ್ನಿಕುಂಡಕ್ಕೆ ಮಹಾಮಂಗಳರಾತಿ ಮತ್ತು ಅಗ್ನಿಸ್ಪರ್ಶ ನಡೆಯಲಿದೆ. ಚಂಡೆವಾದ್ಯ, ನಾದಸ್ವರ, ಸ್ಯಾಕ್ಸೋಫೋನ್, ತಬಲ ವಾದ್ಯಗೋಷ್ಠಿ, ಚಿಟ್ಟಿಮೇಳ, ಅರೆ ತಮಟೆ ವಾದ್ಯ ನಡೆಯಲಿದೆ. ರಾತ್ರಿ 8.30ಕ್ಕೆ ಗ್ರಾಮದ ಮಕ್ಕಳಿಂದ ಬಾಯಿ ಬೀಗ ಸೇವೆ, ರಾತ್ರಿ 10ಕ್ಕೆ ಅಗ್ನಿಕೊಂಡ ಹಾಯುವ ಕಾರ್ಯಕ್ರಮ ನಡೆಯಲಿದೆ.

ಕರ್ನಾಟಕ ಸರ್ಕಾರ

ಸಮಾಜ ಕಲ್ಯಾಣ ಇಲಾಖೆ

ಇಂದಿರಾ ಗಾಂಧಿ ವೃತಿ ಅಭಿವೃದಿ ಕೇಂದ್ರ,
ಡಾ. ಬಾಬು ಜಗಜೀವನ್ ರಾಮ್ ಸಂಶೋಧನಾ ಮತ್ತು ತರಬೇತಿ ಕೇಂದ್ರ,
ಮಾಗಡಿ ಮುಖ್ಯ ರಸ್ತೆ, ಔಟರ್ ರಿಂಗ್ ರೋಡ್, ಸುಮ್ಮನಹಳ್ಳಿ ವೃತ್ತ,
ಬೆಂಗಳೂರು-560091, ದೂರವಾಣಿ ಸಂಖ್ಯೆ: 080-25578422

ಸಂಖ್ಯೆ: SWD/IGCCD/0S-04/03/2024-25 ದಿನಾಂಕ: 18.03.2025

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ ಮಾತ್ರ)

ಸಮಾಜ ಕಲ್ಯಾಣ ಇಲಾಖೆಯ, ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ Agricultural Science Students/ Graduates/ Scientists/Agricultural Diploma Holders ಅಭ್ಯರ್ಥಿಗಳಿಗೆ 15 ದಿನಗಳ ವಸತಿಯುತ **Drone ತರಬೇತಿ** ನೀಡುವ ಸಂಬಂಧ **ಮೈಸೂರು ಕಂದಾಯ** ವಿಭಾಗಕ್ಕೆ ಪ್ರತಿಷ್ಠಿತ ತರಬೇತಿ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕಟಣೆ ಸಂಖ್ಯೆ ಈ ಕೆಳಗಿನಂತಿವೆ.

NO:SWD/IGCCD/0S-04/Drone-R-Mys/2024

ಹೆಚ್ಚಿನ ವಿವರಗಳಿಗೆ **http://kppp.karnataka.gov.in** ವೆಬ್‌ಸೈಟನ್ನು ನೋಡಬಹುದಾಗಿದೆ.

ಸಹಿ/-
ಮುಖ್ಯ ಆಡಳಿತಾಧಿಕಾರಿಗಳು,
ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ,
ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/5757/ಎಸ್‌ಎಸ್‌ಸಿ/2024-25

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಕೊಠಡಿ ಸಂಖ್ಯೆ: 106, 1ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಸಚಿವಾಲಯ-3, ಬೆಂಗಳೂರು-560 001. ದೂರವಾಣಿ ಸಂ: 080-22864189
Email: Secybalbhavan.bng@gmail.com

ಸಂಖ್ಯೆ: ಬಾಭಸೊ/ವಾಹನ/ಟಿಪ್ರಕು/2025-25 ದಿನಾಂಕ: 14.03.2025

Tender Notification

Regarding the supply of A/C. Car for Secretary, Bal Bhavan Society for the period of One year.

ಬಾಲ ಭವನ ಸೊಸೈಟಿಯ ಕಾರ್ಯದರ್ಶಿಗಳ ಅಧಿಕೃತ ಕೆಲಸಗಳ ಉಪಯೋಗಕ್ಕಾಗಿ ಮಾಹೆಯಾನ ಗುತ್ತಿಗೆ ಆಧಾರದಲ್ಲಿ ವಾಹನ ಸೌಲಭ್ಯ ಒದಗಿಸುವ ಸಂಬಂಧ ಟೆಂಡರ್ ಅಧಿಸೂಚನೆ

ಟೆಂಡರ್ ಪ್ರಕಟಣೆ

ಬಾಲ ಭವನ ಸೊಸೈಟಿಯ ಕಾರ್ಯದರ್ಶಿಗಳ ಕಛೇರಿಯ ಅಧಿಕೃತ ಕೆಲಸಗಳ ಓಡಾಟಕ್ಕಾಗಿ ಒಂದು ವಾಹನದ ಅವಶ್ಯಕತೆ ಇರುವುದರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ಒಂದು ವರ್ಷದ ಅವಧಿಗೆ ಒಂದು ಎ.ಸಿ ಕಾರನ್ನು ಚಾಲಕರು ಹಾಗೂ ಇಂಧನ ಮತ್ತು ನಿರ್ವಹಣೆಗಳನ್ನೊಳಗೊಂಡಂತೆ ಗುತ್ತಿಗೆ ಆಧಾರದ ಮೇರೆಗೆ ಪಡೆಯಲು ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. **ಇ.ಎಂ.ಡಿ ಮೊತ್ತ ರೂ.12,000/-** (ರೂಪಾಯಿ ಹನ್ನೆರಡು ಸಾವಿರಗಳು ಮಾತ್ರ).

1. ಟೆಂಡರ್ ಫಾರಂಗಳನ್ನು ರೂ.500/- ಡಿ.ಡಿ ಮೂಲಕ ಪಾವತಿಸಿ ದಿನಾಂಕ: 12.03.2025ರ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ರವರೆಗೆ ಕಛೇರಿ ಕರ್ತವ್ಯದ ದಿನಗಳಲ್ಲಿ **ದಿನಾಂಕ: 12.04.2025 ಮಧ್ಯಾಹ್ನ 1.00 ಗಂಟೆಯ ಒಳಗೆ** ನೀಡಲಾಗುವುದು. ಟೆಂಡರ್ ಡಾಕ್ಯೂಮೆಂಟ್ ಅನ್ನು ರೂ.500/- (ರೂಪಾಯಿ ಐದು ನೂರು ಮಾತ್ರ) ಗಳ ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್ ಮೂಲಕ ಮಾತ್ರ ಪಾವತಿ ಮಾಡಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **12.04.2025ರ ಸಂಜೆ 4.00 ಗಂಟೆ** ಆಗಿರುತ್ತದೆ. ತಾಂತ್ರಿಕ ಲಕೋಟೆಯನ್ನು ದಿನಾಂಕ: **15.04.2025ರ ಸಂಜೆ 4.00 ಗಂಟೆಗೆ** ಹಾಗೂ ಹಣಕಾಸಿನ ಲಕೋಟೆಯನ್ನು ದಿನಾಂಕ: **18.04.2025ರ ಸಂಜೆ 4.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮತ್ತು ಟೆಂಡರ್ ಡಾಕ್ಯೂಮೆಂಟ್ ಅನ್ನು ಕಾರ್ಯದರ್ಶಿಗಳ ಕಛೇರಿ, ಬಾಲ ಭವನ ಸೊಸೈಟಿ, ಕಬ್ಬನ್‌ಪಾರ್ಕ್, ಬೆಂಗಳೂರು, ಇಲ್ಲಿ ಕಛೇರಿ ಕಾರ್ಯ ನಿರ್ವಹಿಸುವ ದಿನಗಳಂದು ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ ಮಾಹಿತಿ ಪಡೆಯಬಹುದು.

ಸಹಿ/-
ಸರ್ಕಾರದ ಉಪ ಕಾರ್ಯದರ್ಶಿಗಳು
ಹಾಗೂ ಟೆಂಡರ್ ಬುಲೆಟಿನ್ ಅಧಿಕಾರಿಗಳು
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಹಾಗೂ ವಿಕಲಚೇತನರ ಮತ್ತು ಹಿರಿಯನಾಗರೀಕರ
ಸಬಲೀಕರಣ ಇಲಾಖೆ, ಬೆಂಗಳೂರು

ವಾಸಾಸಂಇ/ವಾ.ಪ್ರ/5755/ಎಂಎಎ/2024-25

ವಾಹನ ಪಡೆಯಲು ಬಂದ ವ್ಯಕ್ತಿ ಮೇಲೆ ಹಲ್ಲೆ ನಡೆಸಿದ ಪ್ರಕರಣ

ಪಿಎಸ್‌ಐ, ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಪ್ತಿಯಾಗಿದ್ದ ದ್ವಿಚಕ್ರ ವಾಹನ ಪಡೆಯಲು ಬಂದ ಈಶ್ವರ್ ಅವರ ಮೇಲೆ ಹಲ್ಲೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ವಿಜಯನಗರ ಸಂಚಾರ ಠಾಣೆಯ ಪಿಎಸ್‌ಐ ಶಾಂತರಾಮ್ ಹಾಗೂ ಹೆಡ್‌ಕಾನ್‌ಸ್ಟೆಬಲ್ ಸಿದ್ದಿಕಿ ಅವರನ್ನು ಅಮಾನತುಗೊಳಿಸಿ ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಆದೇಶಿಸಿದ್ದಾರೆ.

ಮಾರ್ಚ್ 14ರಂದು ಜಿ. ಟಿ. ಮಾಲ್ ಬಳಿ ಡ್ರಿಂಕ್ ಆ್ಯಂಡ್ ಡ್ರೈವ್ ತಪಾಸಣೆ ಮಾಡುವ ವೇಳೆ ದ್ವಿಚಕ್ರ ವಾಹನ ಸವಾರ ಈಶ್ವರ್ ಪಾನಮತ್ತರಾಗಿರುವುದು ಪತ್ತೆಯಾಗಿತ್ತು.

'ನ್ಯಾಯಾಲಯದಲ್ಲಿ ದಂಡ ಪಾವತಿಸಿದರೆ ₹10 ಸಾವಿರ, ಸ್ಥಳದಲ್ಲಿಯೇ ₹3 ಸಾವಿರ ನೀಡಿದರೆ ಬಿಟ್ಟು ಕಳಿಸುತ್ತೇವೆ ಎಂದು ಪಿಎಸ್‌ಐ ಮತ್ತು ಸಿಬ್ಬಂದಿ ಹೇಳಿದ್ದರು' ಎಂದು ಈಶ್ವರ್ ಆರೋಪಿಸಿದ್ದಾರೆ.

‘ಆನ್‌ಲೈನ್‌ನಲ್ಲಿ ಹಣ ವರ್ಗಾಯಿಸಲು ಮುಂದಾದಾಗ ನಗದು ನೀಡುವಂತೆ ಪೊಲೀಸರು ಒತ್ತಾಯಿಸಿದ್ದರು. ನನ್ನ ಬಳಿ ಹಣವಿಲ್ಲ, ನ್ಯಾಯಾಲಯದಲ್ಲಿಯೇ ದಂಡ ಪಾವತಿಸುವುದಾಗಿ ಹೇಳಿದ್ದೆ. ದ್ವಿಚಕ್ರ ವಾಹನ ಜಪ್ತಿ ಮಾಡಿ, ದಂಡದ ರಶೀದಿ ಕೊಟ್ಟು ಕಳುಹಿಸಿದ್ದರು’ ಎಂದು ತಿಳಿಸಿದ್ದಾರೆ. ದಂಡ ಪಾವತಿ ಬಳಿಕ ಈಶ್ವರ್, ತಮ್ಮ ದ್ವಿಚಕ್ರ ವಾಹನ ಹಿಂಪಡೆಯಲು ಠಾಣೆ ಬಳಿ ಹೋಗಿದ್ದರು. ಈ ವೇಳೆ ಪೊಲೀಸ್ ಸಿಬ್ಬಂದಿ ಅವರನ್ನು ನಿಂದಿಸಿ, ಥಳಿಸಿದ ಕಾರಣ ಪ್ರಜ್ಞೆ ತಪ್ಪಿದ್ದಾರೆ. ತಕ್ಷಣ ಆಟೊ ಕರೆಸಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸಾರ್ವಜನಿಕರು, ಪೊಲೀಸರನ್ನು ತರಾಟೆ ತೆಗೆದುಕೊಂಡಿದ್ದಾರೆ. ‘ನಾನು ಹಲ್ಲೆ ಮಾಡಿಲ್ಲ’ ಎಂದು ಪಿಎಸ್‌ಐ ಹೇಳುತ್ತಿರುವ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು.

ಬಳಿಕ ಡಿಸಿಪಿ ಅನಿತಾ ಹದ್ದಣವರ ಅವರು ಎಸಿಪಿಗೆ ವರದಿ ನೀಡುವಂತೆ ಸೂಚಿಸಿದ್ದರು. ವರದಿ ಆಧರಿಸಿ ಇಬ್ಬರನ್ನು ಅಮಾನತುಗೊಳಿಸಿ, ಇಲಾಖೆ ವಿಚಾರಣೆ ಕಾಯ್ದಿರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಜೆಸಿಬಿ ಚಾಲಕ ಬಂಧನ

ಬೆಂಗಳೂರು: ರಸ್ತೆ ಕಾಮಗಾರಿ ವೇಳೆ ವಿದ್ಯುತ್ ಕಂಬ ಮುರಿದು ಬಿದ್ದು, ಇಬ್ಬರು ಮಹಿಳೆಯರು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಜೆಸಿಬಿ ಚಾಲಕ ರಾಜಕುಮಾರ್ ಅವರನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿ, ವಿಚಾರಣೆ ನಡೆಸಿದರು.

ಸುದ್ದಗುಂಟೆ ಪಾಳ್ಯ ನಿವಾಸಿಗಳಾದ ಸುಮತಿ (35) ಮತ್ತು ಸೋನಿ ಕುಮಾರಿ (35) ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ.

ಸುದ್ದಗುಂಟೆಪಾಳ್ಯ ಮುಖ್ಯರಸ್ತೆಯಲ್ಲಿ ಸೋಮವಾರ ರಸ್ತೆ ದುರಸ್ತಿ ಕಾಮಗಾರಿ ವೇಳೆ ಜೆಸಿಬಿಯೊಂದು ಹಿಮ್ಮುಖವಾಗಿ ಚಲಿಸುವಾಗ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ ಪರಿಣಾಮ ಆ ವಿದ್ಯುತ್ ಕಂಬ ಮುರಿದು, ಮಹಿಳೆಯರ ಮೇಲೆ ಬಿದ್ದಿದೆ. ಹೀಗಾಗಿ ಇಬ್ಬರೂ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಸೋನಿ ಕುಮಾರಿ ಬಿಹಾರದವರಾಗಿದ್ದು, ನಾಲ್ಕು ತಿಂಗಳ ಗರ್ಭಿಣಿಯಾಗಿದ್ದರು. ಎಂಟು ವರ್ಷಗಳಿಂದ ಇಬ್ಬರು ಮಕ್ಕಳೊಂದಿಗೆ ನಗರದಲ್ಲಿ ನೆಲಸಿದ್ದಾರೆ. ತಮಿಳುನಾಡು ಮೂಲದ ಸುಮತಿ ಅವರು ಪತಿ ಹಾಗೂ ಇಬ್ಬರು ಮಕ್ಕಳೊಂದಿಗೆ ಸುದ್ದಗುಂಟೆ ಪಾಳ್ಯದಲ್ಲಿ ವಾಸವಿದ್ದಾರೆ. ಮಕ್ಕಳನ್ನು ಟ್ಯೂಷನ್‌ನಿಂದ ಕರೆದುಕೊಂಡು ಮನೆಗೆ ಹೋಗುವಾಗ ಈ ಘಟನೆ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

60 ಗ್ರಾಂ ಚಿನ್ನಾಭರಣ ಕಳವು

ಬೆಂಗಳೂರು: ನಕಲಿ ಕೀ ಬಳಸಿ ಮನೆಯ ಬೀಗ ತೆಗೆದು 60 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ಹನುಮಂತನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಶ್ರೀನಿವಾಸ ನಗರದ ನಿವಾಸಿ ರೋಹಿಣಿ ಅವರು ಕುಟುಂಬ ಸಮೇತ ತಿರುಪತಿಗೆ ಹೋಗಿದ್ದರು. ಆ ಸಂದರ್ಭದಲ್ಲಿ ಕಳ್ಳರು ಮನೆಯ ಬೀಗವನ್ನು ನಕಲಿ ಕೀ ಬಳಸಿ ತೆಗೆದು, ಒಳಗೆ ನುಗ್ಗಿದ್ದಾರೆ. ಕೊಠಡಿಯಲ್ಲಿದ್ದ ಅಲ್ಮೆರಾ ಬೀಗ ತೆರೆದು ಚಿನ್ನಾಭರಣ ಹಾಗೂ ವಸ್ತುಗಳನ್ನು ಕಳವು ಮಾಡಿಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ರೋಹಿಣಿ ಕುಟುಂಬ ತಿರುಪತಿಯಿಂದ ವಾಪಸ್ ಮನೆಗೆ ಬಂದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಗಿ ಪೊಲೀಸರಿಗೆ ದೂರು ನೀಡಿದರು.

ಶ್ವಾನದಳ, ಬೆರಳಚ್ಚು ತಜ್ಞರೊಂದಿಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮನೆಯ ಸುತ್ತಮುತ್ತಲ ರಸ್ತೆಯ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ ಆರೋಪಿಗಳ ಪತ್ತೆಗೆ ಶೋಧ ಆರಂಭಿಸಿದ್ದಾರೆ.

ರನ್ಯಾ ನಿಂದನೆ: ಯತ್ನಾಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ಹರ್ಷವರ್ಧಿನಿ ರನ್ಯಾ ರಾವ್ ಅವರನ್ನು ನಿಂದಿಸಿ, ಗೌರವಕ್ಕೆ ಧಕ್ಕೆ ಉಂಟು ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗಪ್ಪ ರೆಡ್ಡಿ ಲೇಔಟ್ ನಿವಾಸಿ ಅಕುಲಾ ಅನುರಾಧ ಅವರ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 79 (ಮಹಿಳೆಯ ಗೌರವಕ್ಕೆ ಧಕ್ಕೆ) ಅಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ವಿಜಯಪುರದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ‘ಹರ್ಷವರ್ಧಿನಿ ರನ್ಯಾ ಅವರು ಯಾರ ಜತೆ ಸಂಬಂಧ ಹೊಂದಿದ್ದಾರೆ, ಎಲ್ಲಿಂದ ಚಿನ್ನ ತಂದರು ಎಂಬ ಮಾಹಿತಿ ತೆಗೆದುಕೊಂಡಿದ್ದೇನೆ’ ಎಂದು ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದರು. ಅಲ್ಲದೇ ರನ್ಯಾ ಬಗ್ಗೆ ಅಸಭ್ಯವಾಗಿ ಹೇಳಿಕೆ ನೀಡಿದ್ದಾರೆ. ಕನ್ನಡ, ತಮಿಳು, ತೆಲುಗು ಭಾಷೆಯ ಚಿತ್ರಗಳಲ್ಲಿ ನಟಿಸಿರುವ ನಟಿಯ ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ಹೇಳಿಕೆ ನೀಡಿರುವ ಯತ್ನಾಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಅಕುಲಾ ಅನುರಾಧ ಅವರು ದೂರಿನಲ್ಲಿ ತಿಳಿಸಿದ್ದಾರೆ.

ಹೂಡಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ ಭಾರತೀಯ ಸೇವಾ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಹೂಡಿ ರಾಮಚಂದ್ರ ನೆನಪಿನ ಕಾಣಿಕೆ ನೀಡಿದರು. ಹಳೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

ನಗರದ ಜರಗನಹಳ್ಳಿಯಲ್ಲಿ ವೀರಶೈವಸಮಾಜ ಆಯೋಜಿಸಿದ್ದ 'ಬೆಳದಿಂಗಳ ಕೂಟ' 269ನೇ ತಿಂಗಳ ಕಾರ್ಯಕ್ರಮದಲ್ಲಿ ಗಾಯಕ ಅನುರಾಗ್ ಗದ್ದಿ ಅವರು ಕನ್ನಡದ ಗಜಲ್ ಗಾಯನ ಪ್ರಸ್ತುತಪಡಿಸಿದರು. ವಾದ್ಯ ವೃಂದದಲ್ಲಿ ಕುಮಾರಶೇಖರ್– ಹಾರ್ಮೋನಿಯಂ, ಶ್ರೀನಿವಾಸ್ –ಕೀಬೋರ್ಡ್, ಗಿರೀಶ್ ಕೋಳಾಲ್– ವಯೊಲಿನ್ ಹಾಗೂ ಶರಣು ಗೋಗಿ – ತಬಲಾದಲ್ಲಿ ಸಾಥ್ ನೀಡಿದರು

ಸುಧಾ, ಮಯೂರ ಓದಿರಿ

ಕೈ, ಕಮಲ ಮುಖಂಡರ ನಡುವೆ ವಾಗ್ವಾದ

ಪ್ರಜಾವಾಣಿ ವಾರ್ತೆ

ಕನಕಪುರ: ಇಲ್ಲಿನ ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಕೆ ವಿಚಾರವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಮುಖಂಡರ ನಡುವೆ ಮಂಗಳವಾರ ವಾಗ್ವಾದ ನಡೆಯಿತು.

ಕನಕಪುರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ (ಪಿಎಲ್‌ಡಿ) ಬ್ಯಾಂಕ್‌ನ ಆಡಳಿತ ಮಂಡಳಿಯ ನಿರ್ದೇಶಕರ ಆಯ್ಕೆ ಚುನಾವಣೆಗೆ ಮಂಗಳವಾರ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು.

ಬಿಜೆಪಿ ಮುಖಂಡರು ನಾಮಪತ್ರ ಸಲ್ಲಿಸಲು ಪಿಎಲ್‌ಡಿ ಬ್ಯಾಂಕಿಗೆ ಬಂದಿದ್ದರು. ಆ ವೇಳೆ ನಾಮಪತ್ರ ಸಲ್ಲಿಕೆಯ ಸಮಯ ಮುಕ್ತಾಯವಾಗಿದ್ದು, ನಾಮಪತ್ರ ಸ್ವೀಕರಿಸಲು ಸಾಧ್ಯವಿಲ್ಲವೆಂದು ನಿರಾಕರಿಸಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರ ವಾಗ್ವಾದಕ್ಕೆ ಕಾರಣವಾಗಿದೆ.

3 ಗಂಟೆಗೆ ನಾಮಪತ್ರ ಸಲ್ಲಿಕೆಗೆ ಸಮಯ ಮುಗಿದಿದ್ದು, ಯಾರ ನಾಮಪತ್ರವನ್ನು ಸ್ವೀಕರಿಸಬಾರದು ಎಂಬುದು ಕಾಂಗ್ರೆಸ್ ಮುಖಂಡರ ಆಗ್ರಹ. ‘ನಾವು ಮೂರು ಗಂಟೆ ಸಮಯಕ್ಕಿಂತ ಮುಂಚಿತವಾಗಿ ಬ್ಯಾಂಕಿನೊಳಗೆ ಬಂದಿದ್ದೇವೆ ನಮ್ಮ ನಾಮಪತ್ರ ಸ್ವೀಕರಿಸಬೇಕೆಂದು’ ಬಿಜೆಪಿ ಮುಖಂಡರ ಒತ್ತಾಯಿಸಿದರು.



ಚುನಾವಣಾಧಿಕಾರಿ ಆಶಾ ಅವರೊಂದಿಗೆ ಬಿಜೆಪಿ ಮುಖಂಡರು ಚರ್ಚೆ ನಡೆಸುತ್ತಿರುವುದು

ಗುಡಿಸಲಿಗೆ ಬೆಂಕಿ: ದವಸ, ಧಾನ್ಯ ಭಸ್ಮ

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಕೋಡಿಹಳ್ಳಿ ಹೋಬಳಿ ಗುರುವಯ್ಯನ ದೊಡ್ಡಿ ಗ್ರಾಮದಲ್ಲಿ ಈಚೆಗೆ ಗುಡಿಸಲಿಗೆ ಬೆಂಕಿ ಬಿದ್ದು, ಗುಡಿಸಲಿನಲ್ಲಿದ್ದ ದವಸ, ಧಾನ್ಯ, ಮನೆಯಲ್ಲಿನ ಎಲ್ಲಾ ವಸ್ತುಗಳು ಸುಟ್ಟು ಭಸ್ಮವಾಗಿವೆ.

ಸುಟ್ಟ ಗುಡಿಸಲು ಗುರುವಯ್ಯನದೊಡ್ಡಿ ಗ್ರಾಮದ ಜಯಮ್ಮ ಎಂಬುವರಿಗೆ ಸೇರಿದ್ದಾಗಿದೆ. ಬೆಂಕಿಗೆ ಎರಡು ಮೇಕೆ, 300 ಕೆ.ಜಿ.ಹುರುಳಿಕಾಳು, ಹಲಸಂದೆ ಕಾಳು, ಒಂದು ಮೂಟೆ ಭತ್ತ, 400 ಕೆ.ಜಿ ರಾಗಿ, ಸೇರಿದಂತೆ ಲಕ್ಷಾಂತರ ರೂ ಬೆಲೆ ಬಾಳುವ ವಸ್ತುಗಳು ಸುಟ್ಟು ಭಸ್ಮವಾಗಿವೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್

(ಭಾರತ ಸರ್ಕಾರದ ಶಾಸನಬದ್ಧ ಅಂಗಸಂಸ್ಥೆ)
ನೆಲ್ಸನ್ ಮಂಡೇಲಾ ಮಾರ್ಗ, ವಸಂತ ಕುಂಜ,
ನವದೆಹಲಿ-110070
ವೆಬ್‌ಸೈಟ್: www.aicte-india.org

ಸಾರ್ವಜನಿಕ ಪ್ರಕಟಣೆ

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಸಂಸ್ಥೆಯಲ್ಲಿನ ವಿವಿಧ ಹುದ್ದೆಗಳಿಗೆ ನೇಮಕಾತಿ ಆಫರ್ ನೀಡಲಾಗುತ್ತದೆ ಎಂಬ ವಂಚಕ ಇಮೇಲ್‌ಗಳು ಮತ್ತು ಪತ್ರಗಳು ಹರಿದಾಡುತ್ತಿವೆ ಎಂಬುದು ಸದರಿ ಸಂಸ್ಥೆಯ ಗಮನಕ್ಕೆ ಬಂದಿರುತ್ತದೆ. ಈ ವಂಚಕರು ಎಐಸಿಟಿಇ ಸಂಸ್ಥೆಯ ಹೆಸರು ಮತ್ತು ಸಂಸ್ಥೆಯ ಇಮೇಲ್ ವಿಳಾಸವನ್ನು ಹೋಲುವ ಇಮೇಲ್ ವಿಳಾಸಗಳನ್ನು ಮತ್ತು ಇಐಸಿಟಿಯ ಅಧಿಕಾರಿಗಳ ಅಥವಾ ಪ್ರಾಧಿಕಾರಗಳ ಹೆಸರುಗಳನ್ನು ಕೂಡ ಬಳಸಿಕೊಳ್ಳುತ್ತಿದ್ದಾರೆ. ಹೀಗೆ ನೇಮಕಾತಿ ಆಫರ್ ನೀಡುವ ವಂಚಕ ಇಮೇಲ್‌ಗಳಲ್ಲಿ, ಅರ್ಜಿ ನಮೂನೆಗಾಗಿ, ಪರೀಕ್ಷೆ ಕೈಗೊಳ್ಳಲಿಕ್ಕಾಗಿ / ಸಂದರ್ಶನಕ್ಕಾಗಿ / ಸರ್ಕಾರಿ ವಸತಿಗಾಗಿ / ಸಮವಸ್ತ್ರ / ಆಹಾರ ಶುಲ್ಕ ಇತ್ಯಾದಿಗಳ ವ್ಯವಸ್ಥೆಗಾಗಿ ತಕ್ಷಣವೇ ಡಿಮಾಂಡ್ ಡ್ರಾಫ್ಟ್ / ಯುಪಿಐ ಅಥವಾ ಇನ್ಯಾವುದೇ ಡಿಜಿಟಲ್ ವಿಧಾನದಲ್ಲಿ ಹಣ ಪಾವತಿಸಬೇಕೆಂದು ಕೂಡ ಬೇಡಿಕೆ ಇಡಲಾಗುತ್ತದೆ.

ಆದ್ದರಿಂದ, ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಎಐಸಿಟಿಇ ಸಂಸ್ಥೆಯು ಯಾವುದೇ ಅನಧಿಕೃತ ಇಮೇಲ್ ಅಥವಾ ಪತ್ರಗಳ ಮುಖಾಂತರ ನೇಮಕಾತಿ ಆಫರ್ ನೀಡುವುದಿಲ್ಲ ಮತ್ತು ನೇಮಕಾತಿಗೆ ಸಂಬಂಧಿತ ಯಾವುದೇ ಪ್ರಕ್ರಿಯೆಗಾಗಿ ಶುಲ್ಕ / ಹಣಕ್ಕಾಗಿ ಬೇಡಿಕೆ ಇಡುವುದಿಲ್ಲ. ಎಐಸಿಟಿಇ ಸಂಸ್ಥೆಯಲ್ಲಿನ ಉದ್ಯೋಗಾವಕಾಶ ಕುರಿತಾತದ ಎಲ್ಲಾ ಅಧಿಕೃತ ಸಂವಹನಗಳನ್ನು, ಸಂಸ್ಥೆಯ ಅಧಿಕೃತ ವೆಬ್‌ಸೈಟ್ ಮೂಲಕವಷ್ಟೇ (www.aicte-india.org) ಪ್ರಕಟಿಸಲಾಗುತ್ತದೆ. ಎಐಸಿಟಿಇ ಸಂಸ್ಥೆಯು, ನೇಮಕಾತಿ ಪ್ರಕ್ರಿಯೆಗೆ ಸಂಬಂಧಿತ ತನ್ನ ಸಮಗ್ರತೆಯನ್ನು ನಿರ್ವ ಹಿಸುವಲ್ಲಿ ಕಂಕಣಬದ್ಧವಾಗಿದೆ.

ಆದ್ದರಿಂದ, ಉದ್ಯೋಗಾಕಾಂಕ್ಷಿಗಳು ಎಐಸಿಟಿಇ ಹೆಸರಿನಲ್ಲಿ ಸಂದಾಯವಾಗುವ ಯಾವುದೇ ಅನಧಿಕೃತ ನೇಮಕಾತಿ ಆಫರ್‌ಗಳ ಬಗ್ಗೆ ಜಾಗ್ರತೆ ವಹಿಸಬೇಕು ಮತ್ತು ಅಂತಹವುಗಳ ಅಧಿಕೃತತೆಯನ್ನು ಮರು ಪರಿಶೀಲಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಜಾಹೀರಾತು ಸಂ. ಎಐಸಿಟಿಇ/ಅಡ್ಮಿನ್ ಬ್ಯೂರೊ / 01(03)/2025

ಪ್ರೊ. ರಾಜೀವ್ ಕುಮಾರ್
ಸದಸ್ಯ ಕಾರ್ಯದರ್ಶಿ, ಎಐಸಿಟಿಇ

CBC 21300/12/0016/2425

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ - 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/96/2024-25 ದಿನಾಂಕ: 18-03-2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ವೆಂಕಟಾಪುರ** ಗ್ರಾಮವು **“ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ”** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **“ವ್ಯವಸಾಯ”** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ “ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) MAGS FINVEST PVT. LTD., Rep. by its Directors Smt. SHAGUN KAPUR Represented by Her POA Holder Suresh Kunder ಬಿನ್ ದೂಮಪ್ಪ ಕುಂದರ್, 2) ಶ್ರೀ ಯೋಗೇಶ್. ಕೆ.ಆರ್. ಬಿನ್ ಶ್ರೀ ರಾಜಣ್ಣ. ಕೆ.ಎಸ್.	ಬೆಂಗಳೂರು ಉತ್ತರ / ದಾಸನಪುರ / ವೆಂಕಟಾಪುರ	27/3	00-16	ವ್ಯವಸಾಯ	ವಸತಿ
		27/5	00-30		
		27/6	01-04		
		27/7	00-22		
		27/8	00-24		

ಷರಾ:- ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/5759/ಅಡ್ವಟೋರ್/2024-25

ರ್‍ಯಾಗಿಂಗ್‌ಗೆ ಒಳಗಾಗಿದ್ದ ಎಂ.ವಿ ಸಾವಿತ್ರಿ ಸಾವು

ಪ್ರಜಾವಾಣಿ ವಾರ್ತೆ

ಕಾಸರಗೋಡು: ಸುಮಾರು 28 ವರ್ಷಗಳ ಹಿಂದೆ ಕಾಞಂಗಾಡಿನ ನೆಹರೂ ಕಾಲೇಜಿನಲ್ಲಿ ಪ್ರಥಮ ಪಿಯು ಓದುತ್ತಿದ್ದಾಗ, ರ್‍ಯಾಗಿಂಗ್‌ಗೆ ಒಳಗಾಗಿ, ಅದರ ಆಘಾತದಿಂದ ಗಂಭೀರ ಮಾನಸಿಕ ಸಮಸ್ಯೆಗೆ ಸಿಲುಕಿದ್ದ ಚೆರ್ವತ್ತೂರು ವೆಂಗಾಟ್ ನಿವಾಸಿ ಎಂ.ವಿ.ಸಾವಿತ್ರಿ (45) ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ನಿಧನರಾದರು.

ಪ್ರತಿಭಾವಂತೆಯಾಗಿದ್ದ ಸಾವಿತ್ರಿ 1995-96ನೇ ಸಾಲಿನಲ್ಲಿ ಪ್ರಥಮ ಶ್ರೇಣಿಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾಗಿದ್ದರು. ಕಾಞಂಗಾಡಿನ ನೆಹರೂ ಕಾಲೇಜಿನಲ್ಲಿ ಪ್ರಥಮ ಪಿಯುಗೆ ಪ್ರವೇಶ ಪಡೆದಿದ್ದರು. ಆದರೆ, ಕಾಲೇಜಿಗೆ ಸೇರಿದ ಮೂರನೆಯ ದಿನವೇ ರ್‍ಯಾಗಿಂಗ್‌ಗೆ ಒಳಗಾಗಿದ್ದರು. ಈ ಘಟನೆಯಿಂದ ಮಾನಸಿಕವಾಗಿ ಕುಸಿದು ಹೋಗಿದ್ದ ವಿದ್ಯಾರ್ಥಿನಿ, ನಂತರ ಕಾಲೇಜಿಗೆ ಹೋಗುವುದನ್ನೇ ನಿಲ್ಲಿಸಿದ್ದರು. ಮನೆಯಿಂದಲೂ ಹೊರಗೆ ಹೆಜ್ಜೆ ಇರಿಸುತ್ತಿರಲಿಲ್ಲ. ಮಾನಸಿಕ ಒತ್ತಡದಿಂದ, ಜ್ಯಾಮಿಟ್ರಿ ಬಾಕ್ಸ್‌ನಲ್ಲಿದ್ದ ಕಂಪಾಸ್‌ನಿಂದ ತಮ್ಮ ಬಲಗಣ್ಣನ್ನು ಚುಚ್ಚಿಕೊಂಡು, ದೃಷ್ಟಿಯನ್ನೇ ಕಳೆದುಕೊಂಡಿದ್ದರು. ಮೂರು ದಶಕಗಳಿಂದ ಸಾವು-ಬದುಕಿನೊಂದಿಗೆ ಹೋರಾಡುತ್ತಿದ್ದರು.

ಸಾವಿತ್ರಿ ಅವರನ್ನು ಆರಂಭದಲ್ಲಿ ಕೊಯಿಕ್ಕೋಡ್ ಮತ್ತು ತಿರುವನಂತಪುರ ಆಸ್ಪತ್ರೆಗೆ ದಾಖಲಿಸಿ ಸತತ 10 ವರ್ಷ ಚಿಕಿತ್ಸೆ ನೀಡಲಾಗಿತ್ತು. ಅವರ ಆರೋಗ್ಯ ಸ್ಥಿತಿ ಸುಧಾರಿಸದ ಕಾರಣ ಮತ್ತು ಅವರಿಗೆ ಸ್ವಂತ ಸೂರಿಲ್ಲದ ಕಾರಣ ಅವರನ್ನು ಮಂಜೇಶ್ವರದ ಸ್ನೇಹಾಲಯಕ್ಕೆ ದಾಖಲಿಸಲಾಗಿತ್ತು. ಅಲ್ಲಿ ಬಿದ್ದು ಗಾಯಗೊಂಡಿದ್ದ ಅವರನ್ನು ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇತ್ತೀಚೆಗೆ ಕಾಞಂಗಾಡಿನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಸೋಮವಾರ ಅವರು ನಿಧನರಾದರು.

ಈ ನಡುವೆ ಸಾವಿತ್ರಿ ಅವರ ಎಸ್‌ಎಸ್‌ಎಲ್‌ಸಿ ಬ್ಯಾಚ್‌ನ ವಿದ್ಯಾರ್ಥಿಗಳು ಅವರಿಗೊಂದು ಸ್ವಂತ ಮನೆ ನಿರ್ಮಿಸಿಕೊಡುವ ಪ್ರಯತ್ನ ನಡೆಸಿದ್ದರು. ಆದರೆ, ಮನೆ ನಿರ್ಮಾಣಕ್ಕೆ ಬೇಕಾದ ಜಾಗ ಕುಟುಂಬದ ಬಳಿ ಇಲ್ಲದ ಕಾರಣ ಅದು ಕೈಗೂಡಿರಲಿಲ್ಲ. ಇತ್ತೀಚೆಗೆ ಪಂಚಾಯಿತಿ ವತಿಯಿಂದ ಲೈಫ್ ಯೋಜನೆಯಲ್ಲಿ ಅವರಿಗೆ ಮನೆ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಮಗಳನ್ನು ಸ್ವಂತ ಮನೆಗೆ ಕರೆದುಕೊಂಡು ಬಂದು ನೋಡಿಕೊಳ್ಳಬೇಕು ಎಂಬ ಮಹದಾಸೆ ತಾಯಿ ವಟ್ಟಚ್ಚಿ ಅವರಿಗಿತ್ತು. ಆದರೆ, ಅದಕ್ಕೂ ಮುನ್ನವೇ ಸಾವಿತ್ರಿ ನಿಧನರಾಗಿದ್ದಾರೆ.

₹600 ಕೋಟಿ ಪಾವತಿಗೆ ಗಡುವು

ವ್ಯಾಟ್‌ನಿಂದ ಜಿಎಸ್‌ಟಿ ನಡುವಿನ ವ್ಯತ್ಯಾಸ ತೆರಿಗೆ ಮೊತ್ತ ಪಾವತಿಗೆ ಕ್ರಮವಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಟ್‌ನಿಂದ ಜಿಎಸ್‌ಟಿ ನಡುವಿನ ವ್ಯತ್ಯಾಸದ ತೆರಿಗೆ ಮೊತ್ತ ಸುಮಾರು ₹600 ಕೋಟಿಯನ್ನು ಮಾರ್ಚ್ 31ರೊಳಗೆ ಪಾವತಿಸಬೇಕಾದ ಅನಿವಾರ್ಯ ಸ್ಥಿತಿ ರಾಜ್ಯ ಗುತ್ತಿಗೆದಾರರಿಗೆ ಎದುರಾಗಿದೆ.

ರಾಜ್ಯದಲ್ಲಿ 2019–20ರಿಂದ 2021–22ರ ಅವಧಿಯ ಕಾಮಗಾರಿಗಳಿಗೆ ಶೇ 4ರಷ್ಟು ವ್ಯಾಟ್ (ಮೌಲ್ಯವರ್ಧಿತ ತೆರಿಗೆ) ಅನ್ವಯವಾಗಿತ್ತು. ಈ ಅವಧಿಯಲ್ಲಿ ವ್ಯಾಟ್ ರದ್ದು ಮಾಡಿ, ಶೇ 12ರಷ್ಟು ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಜಾರಿ ಮಾಡಲಾಯಿತು. ತದನಂತರ, ಜಿಎಸ್‌ಟಿಯನ್ನು ಶೇ 18ಕ್ಕೆ ಹೆಚ್ಚಿಸಲಾಯಿತು. ಶೇ 12ರಿಂದ ಶೇ 18ಕ್ಕೆ ಹೆಚ್ಚುವರಿಯಾದ ಜಿಎಸ್‌ಟಿ ವ್ಯತ್ಯಾಸದ ಮೊತ್ತವನ್ನು ರಾಜ್ಯ ಸರ್ಕಾರ ಭರಿಸಿದೆ. ಆದರೆ, ವ್ಯಾಟ್ ರದ್ದಾದ ಮೇಲೆ ಶೇ 8ರಷ್ಟು ಹೆಚ್ಚಾದ ಜಿಎಸ್‌ಟಿ ಮೊತ್ತವನ್ನು ಇನ್ನೂ ಭರಿಸಿಲ್ಲ.

‘ಕೇಂದ್ರ ಸರ್ಕಾರ ಇತ್ತೀಚೆಗೆ ಗುತ್ತಿಗೆದಾರರಿಗೆ ಅಮ್ನೆಸ್ಟಿ ಯೋಜನೆಯನ್ನು ಜಾರಿ ಮಾಡಿ, ಮಾರ್ಚ್ 31ರೊಳಗೆ ಬಾಕಿ ಉಳಿದಿರುವ ವ್ಯಾಟ್– ಜಿಎಸ್‌ಟಿ ನಡುವಿನ ವ್ಯತ್ಯಾಸ ಮೊತ್ತವನ್ನು ಪಾವತಿಸಲು ಸೂಚಿಸಿದೆ. ಆದರೆ, ಇದನ್ನು ಪಾವತಿಸುವ ಸ್ಥಿತಿಯಲ್ಲಿ ಗುತ್ತಿಗೆದಾರರು ಇಲ್ಲ. ರಾಜ್ಯ ಸರ್ಕಾರ ಕೂಡಲೇ ಕ್ರಮ ಕೈಗೊಂಡು, ‘ಬುಕ್ ಅಡ್ಜೆಸ್ಟ್‌ಮೆಂಟ್’ ಪ್ರಕ್ರಿಯೆ ಪೂರ್ಣಗೊಳಿಸಬೇಕು’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಆಗ್ರಹಿಸಿದರು.

‘ಹೈಕೋರ್ಟ್‌ನ 2023ರ ಏಪ್ರಿಲ್ 11ರ ಸೂಚನೆಯಂತೆ ವ್ಯಾಟ್– ಜಿಎಸ್‌ಟಿ ನಡುವಿನ ವ್ಯತ್ಯಾಸ ಮೊತ್ತವನ್ನು ಭರಿಸಲು ರಾಜ್ಯ ಸರ್ಕಾರ ಭರವಸೆ ನೀಡಿತ್ತು. ಒಡಿಸ್ಸಾ ಮಾದರಿಯಂತೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುವುದಾಗಿಯೂ ಹೇಳಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಮುಂದೆಯೇ ಹಣಕಾಸು ಇಲಾಖೆ ಅಧಿಕಾರಿಗಳಿಗೆ ಹಲವು ಸೂಚನೆ ನೀಡಿದ್ದಾರೆ. ಆದರೆ, ಇದೀಗ ಕೇಂದ್ರದ ಗಡುವು ಸಮೀಪಕ್ಕೆ ಬಂದಿದ್ದು, ಗುತ್ತಿಗೆದಾರರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

‘ಅಧಿಕಾರಿಗಳಿಂದ ವಿಳಂಬ’

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಲವು ತಿಂಗಳಿಂದ ಮನವಿ ಸಲ್ಲಿಸಿ, ವ್ಯಾಟ್‌ನಿಂದ ಜಿಎಸ್‌ಟಿ ನಡುವಿನ ವ್ಯತ್ಯಾಸ ಮೊತ್ತವನ್ನು ಸರಿಪಡಿಸಲು ಕ್ರಮ ಕೈಗೊಳ್ಳಲು ಕೇಳಿಕೊಳ್ಳಲಾಗಿತ್ತು. ನಮ್ಮ ಮನವಿಗೆ ಅವರೂ ಸಮ್ಮತಿಸಿದ್ದರು. ಆದರೆ ಹಣಕಾಸು ಇಲಾಖೆಯಲ್ಲಿ ತ್ವರಿತವಾಗಿ ಕೆಲಸವಾಗಿಲ್ಲ. ಕೇಂದ್ರ ಹಣಕಾಸು ಸಚಿವರಿಗೂ ಪತ್ರ ಬರೆದು, ನಮ್ಮ ಸಂಕಷ್ಟಕ್ಕೆ ಪರಿಹಾರ ನೀಡಲು ಕೋರಿಕೊಳ್ಳಲಾಗಿದೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

ನೀರಿನಲ್ಲಿ ಮುಳುಗಿ ವಿದ್ಯಾರ್ಥಿ ಸಾವು

ಕೊಡಿಗೇನಹಳ್ಳಿ (ತುಮಕೂರು): ಶಾಲೆಯಲ್ಲಿ ಪರೀಕ್ಷೆ ಮುಗಿಸಿ, ಜಯಮಂಗಲಿ ನದಿಯಲ್ಲಿ ಈಜಾಡಲು ತೆರಳಿದ್ದ ಹರ್ಷವರ್ಧನ (14) ನೀರಿನಲ್ಲಿ ಮುಳುಗಿ ಮಂಗಳವಾರ ಮೃತಪಟ್ಟಿದ್ದಾನೆ.

ರಂಗನಹಳ್ಳಿ ಗ್ರಾಮದ ದೇವರಾಜು ಅವರ ಮಗ ಹರ್ಷವರ್ಧನ, ಕೊಡಿಗೇನಹಳ್ಳಿ ಸರ್ವೋದಯ ಪ್ರೌಢಶಾಲೆಯಲ್ಲಿ ಓದುತ್ತಿದ್ದ. ಪಟ್ಟಣದ ಬಿಸಿಎಂ ಹಾಸ್ಟೆಲ್‌ನಲ್ಲಿದ್ದ.

ಮಂಗಳವಾರ ಶಾಲೆಯಲ್ಲಿ ನಡೆದ ಚಿತ್ರಕಲೆ ಪರೀಕ್ಷೆಗೆ ಹಾಜರಾಗಿ ಮಧ್ಯಾಹ್ನ ಶಾಲೆ ಬಿಟ್ಟ ನಂತರ ಸ್ನೇಹಿತರೊಂದಿಗೆ ಜಯಮಂಗಲಿ ನದಿಯಲ್ಲಿ ಈಜಾಡಲು ಹೋಗಿ ಮುಳುಗಿ ಮೃತಪಟ್ಟಿದ್ದಾನೆ.

ಮಾನಸಿಕ ಆರೋಗ್ಯ ಮತ್ತು ಸರವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ತರಬೇತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಜತೆಗೆ ಎಎಫ್‌ಎಂಎಸ್ (ಆರ್ಮಿ ಫೋರ್ಸ್ ಮೆಡಿಕಲ್ ಸರ್ವೀಸ್) ಒಪ್ಪಂದ ಮಾಡಿಕೊಂಡಿದೆ. ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಹಾಗೂ ಎಎಫ್‌ಎಂಎಸ್‌ನ ವೈಸ್ ಅಡ್ಮಿರಲ್ ಆರತಿ ಸರೀನ್ ಅವರು ನಗರದಲ್ಲಿ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದರು

ಸಾಕಾನೆ ರೋಹಿತ್ ಪುಂಡಾಟ: ಮಾವುತನಿಗೆ ಗಾಯ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಾಕಾನೆ ರೋಹಿತ್ ಮಂಗಳವಾರ ಪುಂಡಾಟ ನಡೆಸಿದ್ದು, ವಾಹನ ಸವಾರರು ತೊಂದರೆ ಅನುಭವಿಸಿದರು.

ರಾಂಪುರ ಆನೆ ಶಿಬಿರದಿಂದ ಬಂಡೀಪುರಕ್ಕೆ ವಿಶೇಷ ತರಬೇತಿಗಾಗಿ ಕರೆತಂದ ಐದು ಆನೆಗಳಲ್ಲಿ ಒಂದಾದ ರೋಹಿತ್, ಬದಲಾದ ಪರಿಸರಕ್ಕೆ ಹೊಂದಿಕೊಳ್ಳದೆ, ಇದ್ದಕ್ಕಿದ್ದಂತೆ ರೊಚ್ಚಿಗೆದ್ದು ಮಾವುತ ವೆಂಕಟೇಶ್ ಮೇಲೂ ದಾಳಿ ನಡೆಸಿ, ಗಾಯಗೊಳಿಸಿದೆ. ಅವರಿಗೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಆನೆಯು ರಸ್ತೆಯಲ್ಲಿ ಚಲಿಸುವ ವಾಹನಗಳ ಮೇಲೆ ಏಕಾಏಕಿ ದಾಳಿ ನಡೆಸಲು ಮುಂದಾಗುತ್ತಿತ್ತು. ಕೆಲ ದ್ವಿಚಕ್ರ ವಾಹನ ಸವಾರರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಆನೆಯಿಂದಾಗಿ ಗಂಟೆಗಟ್ಟಲೆ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಆನೆ ನಿಯಂತ್ರಿಸಲು ಅರಣ್ಯ ಸಿಬ್ಬಂದಿ ಹರಸಾಹಸ ಪಡುತ್ತಿದ್ದರು.

‘ಪರಿಸರ ಬದಲಾದಂತೆ ಆನೆಗಳ ವರ್ತನೆಯೂ ಬದಲಾಗುತ್ತದೆ. ಆನೆಯನ್ನು ನಿಯಂತ್ರಿಸುವಲ್ಲಿ ಅರಣ್ಯ ಸಿಬ್ಬಂದಿ ಸತತ ಶ್ರಮಪಟ್ಟಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ತರಬೇತಿ ಸಮಯದಲ್ಲಿ ಆನೆ ರೋಹಿತ್ ಮಾವುತನನ್ನು ತಳ್ಳಿತ್ತು. ಅವರಿಗೆ ಚಿಕಿತ್ಸೆ ನೀಡಲಾಗಿದೆ. ತೊಂದರೆ ಇಲ್ಲ’ ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್ ತಿಳಿಸಿದರು.

ಕೊಂಕಣ ರೈಲ್ವೆ ವಿಲೀನಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ನಷ್ಟದ ಸುಳಿಗೆ ಸಿಲುಕಿರುವ ಕೊಂಕಣ ರೈಲ್ವೆ ನಿಗಮವನ್ನು ಭಾರತೀಯ ರೈಲ್ವೆಯೊಂದಿಗೆ ವಿಲೀನ ಮಾಡಬೇಕು ಹಾಗೂ ಮಂಗಳೂರು ರೈಲ್ವೆ ವ್ಯಾಪ್ತಿಯ ಆಡಳಿತಾತ್ಮಕ ಪುನರ್ ರಚನೆ ಮಾಡಬೇಕು ಎಂದು ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಆಗ್ರಹಿಸಿದರು.

ರೈಲ್ವೆ ಸಚಿವಾಲಯದ ಅನುದಾನ ಬೇಡಿಕೆ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಮಾತನಾಡಿದ ಚೌಟ ಅವರು, ‘ಭಾರತೀಯ ರೈಲ್ವೆಯಲ್ಲಿ ಶೇ 90ರಷ್ಟು ವಿದ್ಯುದೀಕರಣ ಕೆಲಸ ಆಗಿದ್ದು, ದೇಶವ್ಯಾಪಿ ಸುಮಾರು 1,300 ರೈಲು ನಿಲ್ದಾಣಗಳ ಪುನರ್ ನವೀಕರಣ ಮಾಡಲಾಗಿದೆ’ ಎಂದರು.

ಮಂಗಳೂರು- ಪುತ್ತೂರು- ಕಬಕ ಪ್ಯಾಸೆಂಜರ್ ರೈಲನ್ನು ಸುಬ್ರಹ್ಮಣ್ಯ ಜಂಕ್ಷನ್‌ಗೆ ವಿಸ್ತರಿಸಿರುವ ನಿರ್ಧಾರ ಸ್ವಾಗತಾರ್ಹ. ಇದರಿಂದ ದಿನನಿತ್ಯ ಓಡಾಡುವ ಪ್ರಯಾಣಿಕರು ಹಾಗೂ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಬರುವ ಯಾತ್ರಾರ್ಥಿಗಳಿಗೂ ಹೆಚ್ಚಿನ ಅನುಕೂಲ ಆಗಲಿದೆ ಎಂದರು.

ಆರ್ಥಿಕವಾಗಿ ಹಲವಾರು ಸವಾಲು ಎದುರಿಸುತ್ತಿರುವ ಕೊಂಕಣ ರೈಲ್ವೆ ನಿಗಮವನ್ನು ಭಾರತೀಯ ರೈಲ್ವೆಯೊಂದಿಗೆ ವಿಲೀನಗೊಳಿಸಬೇಕು. ಇದರಿಂದ ನಿಗಮದ ಸುಮಾರು ₹2,589 ಕೋಟಿ ಸಾಲದ ಹೊರೆ ತಪ್ಪಿಸಿ ಆರ್ಥಿಕ ಸದೃಢತೆ ಹೆಚ್ಚಿಸಬಹುದು. ಆ ಮೂಲಕ ಕೊಂಕಣ ರೈಲ್ವೆಯ ಕಾರ್ಯ ನಿರ್ವಹಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಸುಧಾರಣೆ ತರಬಹುದು ಎಂದು ಹೇಳಿದರು.

ಮಂಗಳೂರು ರೈಲ್ವೆ ಭಾಗದ ವ್ಯಾಪ್ತಿಯನ್ನು ದಕ್ಷಿಣ ರೈಲ್ವೆ ವಲಯದ ಪಾಲ್ಘಾಟ್ ವಿಭಾಗದಿಂದ ಬೇರ್ಪಡಿಸಿ ನೈರುತ್ಯ ರೈಲ್ವೆ ವ್ಯಾಪ್ತಿಗೆ ಬರುವ ಮೈಸೂರು ವಿಭಾಗಕ್ಕೆ ಸೇರಿಸಬೇಕು ಎಂದು ಆಗ್ರಹಿಸಿದರು.

ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಹಾಸನ- ಮಂಗಳೂರು ರೈಲ್ವೆ ಅಭಿವೃದ್ಧಿ ಕಂಪನಿಯನ್ನು ಕೂಡ ಭಾರತೀಯ ರೈಲ್ವೆಯೊಂದಿಗೆ ವಿಲೀನಗೊಳಿಸಬೇಕು. ಅಥವಾ ಕರ್ನಾಟಕ ಸರ್ಕಾರಕ್ಕೆ ಸಂಪೂರ್ಣ ಹೊಣೆ ನೀಡಿ ಆ ಮೂಲಕ ಸರಕು ಸಾಗಣೆ ಹಾಗೂ ಪ್ರಯಾಣಿಕರ ದಟ್ಟಣೆ ಹೆಚ್ಚಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

AUTHORISED DEALERSHIPS: BANGALORE: Kathriguppe: APPLE SUZUKI, Ph: 080-26697070/ 8080, 8884446504/08/02, **BTM Layout:** APPLE SUZUKI, Ph: 8884446512, **Kanakapura Road:** APPLE SUZUKI, Ph: 8884446503, **RR Nagar:** APPLE SUZUKI, Ph: 8884446502, **Old Airport Road (Domlur):** ARYAN SUZUKI, Ph: 9739969996, **Whitefield:** ARYAN SUZUKI, Ph: 9739969995, **K. R. Puram:** ARYAN SUZUKI,Ph: 9739949998, **Mahadevpura:** ARYAN SUZUKI, Ph: 9739929996, **Hoodi:**ARYAN SUZUKI – Bike Zone, Ph: 08047470000/8073783992, **KH Road:** AVANISH SUZUKI -9591931113, **KH Road:** AVANISH SUZUKI BIKEZONE-9900879000, **Vijaynagar:** AVANISH SUZUKI, Ph: 8971900111, 8197800222, **Kengeri:** AVANISH SUZUKI, Ph: 8197900111, 9108945333, **Nagarbhavi:** AVANISH SUZUKI, Ph: 9606988444/ 9148233644, **Banaswadi:** BHOJANNA SUZUKI, Ph: 9148656565, **Bellary Road:** MEGHAVATH SUZUKI, Ph: 9632899459, **M G Road:** MEGHDOOTH SUZUKI, Ph: 9513533384, **HBR Layout:** MEGHDOOTH SUZUKI: Ph: 9513533374. **Hosur Road:** NINESTAR SUZUKI, Ph: 9019023333, **HSR Layout:** NINESTAR SUZUKI, Ph: 9019023333, **Bannerghatta Road:** NINESTAR SUZUKI, Ph: 9019023333, **Koramangala:** ORION SUZUKI, Ph: 080-25524747, 9535081055, **JP NAGAR:** ORION SUZUKI, Ph: 96060 37441.**Rajaji Nagar:** SAPTAGIRI SUZUKI, Ph: 7066016611/ 9743200054, **Mathikere:** SAPTAGIRI SUZUKI, Ph: 9620152020, **Basaweshwara Nagar:** SAPTAGIRI SUZUKI, Ph: 8722037107, **Sheshadripuram:** SAPTAGIRI SUZUKI, Ph: 9741921526, **Kottigepalya:** SAPTAGIRI SUZUKI, Ph: 7899739267, **Peenya, Tumkur Road:** SAPTAGIRI SUZUKI, Ph: 9986466659, **Nelamangala:** SAPTAGIRI SUZUKI, Ph: 9591892296, **Vasanthnagar:** VALUE SUZUKI, Ph: 9845906084/ 9108258679, **Yelhanka:** HONNASIRI SUZUKI, Ph: 9945004047, **Basavanagudi:** ADVAITH SUZUKI, Ph: 9880741841,

ಸೌಜನ್ಯ ಕೊಲೆ: ಜಾಥಾ ನಡೆಸಲು ಸಮಾನಮನಸ್ಕರ ಸಭೆಯಲ್ಲಿ ನಿರ್ಣಯ

ನ್ಯಾಯಕ್ಕಾಗಿ ಧರ್ಮಸ್ಥಳ ಚಲೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಜನ್ಯ ಕೊಲೆ ಪ್ರಕರಣದಲ್ಲಿ ನ್ಯಾಯಕ್ಕಾಗಿ ಹಾಗೂ ತಪ್ಪಿತಸ್ಥರ ಶಿಕ್ಷೆಗೆ ಆಗ್ರಹಿಸಿ ಧರ್ಮಸ್ಥಳ ಚಲೊ ನಡೆಸಬೇಕು ಎಂಬ ನಿರ್ಣಯವನ್ನು ಸಮಾನಮನಸ್ಕರ ಸಭೆ ಕೈಗೊಂಡಿದೆ.

ಈ ಪ್ರಕರಣದಲ್ಲಿ ಮುಂದಿನ ಹೋರಾಟದ ಬಗ್ಗೆ ಚರ್ಚಿಸಲು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ಚಿಂತಕರು, ರಂಗಕರ್ಮಿಗಳು ಹಾಗೂ ಹೋರಾಟಗಾರರು ಭಾಗವಹಿಸಿದ್ದರು. ಪ್ರಕರಣದ ಬಗ್ಗೆ ಚರ್ಚಿಸಿದ ಅವರು, 'ಪಾದಯಾತ್ರೆ ಅಥವಾ ಬೈಕ್ ರ‍್ಯಾಲಿ ನಡೆಸಬೇಕು. ಧರ್ಮಸ್ಥಳದಲ್ಲಿ ಬೃಹತ್ ಸಮಾವೇಶವನ್ನೂ ಆಯೋಜಿಸಬೇಕು. ಅದಕ್ಕೂ ಮೊದಲು ಜಿಲ್ಲಾ ಮಟ್ಟದಲ್ಲಿ ಪೂರ್ವಭಾವಿ ಸಭೆಗಳನ್ನು ನಡೆಸಬೇಕು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅಂತಿಮವಾಗಿ, 'ಧರ್ಮಸ್ಥಳ ಚಲೋ ಹೆಸರಿನಲ್ಲಿ ಒಂದು ಜಾಥಾವನ್ನು ನಡೆಸಬೇಕು. ಅದರ ಸ್ವರೂಪ ಯಾವ ರೀತಿ ಇರಬೇಕು? ಎಲ್ಲಿಂದ ಪ್ರಾರಂಭಿಸಬೇಕು? ಜಿಲ್ಲೆಗಳಲ್ಲಿ ಯಾವ ರೀತಿ ಸಭೆ ನಡೆಸಬೇಕು? ಸಮಾವೇಶವನ್ನು ಎಲ್ಲಿ ಮಾಡಬೇಕು ಸೇರಿ ವಿವಿಧ ಸಂಗತಿಗಳ ಬಗ್ಗೆ ಚರ್ಚಿಸಿ, ರೂಪುರೇಷೆ ಸಿದ್ಧಪಡಿಸಲು ವಿವಿಧ ಸಂಘಟನೆಗಳ ಮುಖ್ಯಸ್ಥರ ಜತೆಗೆ ಇನ್ನೊಂದು ಸಭೆ ನಡೆಸಬೇಕು' ಎಂದು ಈ ಸಭೆಯಲ್ಲಿ ನಿರ್ಧರಿಸಲಾಯಿತು.

ಚಿಂತಕ ಸಿದ್ದನಗೌಡ ಪಾಟೀಲ, 'ಧರ್ಮ, ದೇವರು ಹಾಗೂ ಜನರ ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು ನಡೆಸಲಾಗುತ್ತಿರುವ ಅಪರಾಧದ ಬಗ್ಗೆ ಜಾಗೃತಿ ಮೂಡಿಸಬೇಕು' ಎಂದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದೇವಿ, 'ಸರ್ಕಾರವು ಅತ್ಯಾಚಾರಿಗಳು, ಕೊಲೆಗಡುಕರನ್ನು ಬೆಂಬಲಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಂಗಕರ್ಮಿ ರಘುನಂದನ್, 'ಈ ಪ್ರಕರಣಕ್ಕೆ ಸಂಬಂಧಿಸಿದ ಹೋರಾಟಕ್ಕೆ ಬೆಂಬಲ ನೀಡುವಂತೆ ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರಿಗೆ ಪತ್ರ ಬರೆಯಬೇಕು. ವಿವಿಧ ಕಾರ್ಯಕ್ರಮ ಗಳಲ್ಲಿಯೂ ಭಿತ್ತಿಪತ್ರ ವಿತರಣೆಯಂತಹ ಕ್ರಮ ಕೈಗೊಳ್ಳಬೇಕು' ಎಂದು ಹೇಳಿದರು.

ಅನಂತ ಸುಬ್ಬರಾವ್, ಶಿವಸುಂದರ್, ನರಸಿಂಹಮೂರ್ತಿ, ಹರೀಶ್ ಬೈರಪ್ಪ, ವಿನಯ್ ಶ್ರೀನಿವಾಸ್, ಮೈತ್ರೇಯಿ ಪಾಲ್ಗೊಂಡಿದ್ದರು.

ಸಭೆಯಲ್ಲಿ ಸಿದ್ದನಗೌಡ ಪಾಟೀಲ ಮಾತನಾಡಿದರು. ವಿವಿಧ ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಸಭೆಗೆ ಅಡ್ಡಿ: ಖಂಡನೆ

ಸೌಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯೋಜಿಸಲಾಗಿದ್ದ ದಿಕ್ಸೂಚಿ ಸಭೆಯನ್ನು ರದ್ದುಗೊಳಿಸುವಂತೆ ಪೊಲೀಸರು ಸೂಚಿಸಿರುವುದನ್ನು ಕರ್ನಾಟಕ ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಹಾಗೂ ಜಾಗೃತ ನಾಗರಿಕರು ಕರ್ನಾಟಕ ವೇದಿಕೆ ಖಂಡಿಸಿದೆ.

ಸಭೆ, ಪ್ರತಿಭಟನೆ ನಡೆಸುವುದು ಜನರ ಹಕ್ಕು. ಈ ಹಕ್ಕಿನ ದಮನ ಮಾಡುತ್ತಿರುವುದು ಖಂಡನೀಯ. ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಪೊಲೀಸ್ ಇಲಾಖೆಗೆ ತಿಳಿವಳಿಕೆ ನೀಡಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.

'ಕಾರ್ಮಿಕ ಸಂಘಟನೆಯ ಕಚೇರಿಯಲ್ಲಿ ಸಭೆ ನಡೆಸುವುದಕ್ಕೂ ನಿಷೇಧ ಹೇರುತ್ತಿರುವ ಬೆಂಗಳೂರು ಪೊಲೀಸರ ನಡೆ ಖಂಡನೀಯ' ಎಂದು ಜಾಗೃತ ನಾಗರಿಕರು ಕರ್ನಾಟಕ ವೇದಿಕೆಯ ಕೆ. ಮರುಳಸಿದ್ದಪ್ಪ, ವೆಂಕಟರಾಮಯ್ಯ ತಿಳಿಸಿದ್ದಾರೆ.

ಸೋರಸ್ ನಂಟು: ಇ.ಡಿ ಶೋಧ

ವಿದೇಶಿ ದೇಣಿಗೆ ದುರ್ಬಳಕೆ ಆರೋಪ: ಬೆಂಗಳೂರು ಸೇರಿ ಹಲವೆಡೆ ದಾಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೂಡಿಕೆ ಹೆಸರಿನಲ್ಲಿ ದೇಣಿಗೆ ವರ್ಗಾವಣೆ ಆರೋಪ
- ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ ಉಲ್ಲಂಘನೆ ಶಂಕೆ
- ಹಣ ಯಾರಿಗೆ ತಲುಪಿದೆ ಎಂಬುದರ ಬೆನ್ನುಬಿದ್ದ ಇ.ಡಿ

ಬೆಂಗಳೂರು: ಅಮೆರಿಕದ ಜಾರ್ಜ್ ಸೋರಸ್‌ನ ಕಂಪನಿಯ ದೇಣಿಗೆ ಪಡೆದಿರುವ ಭಾರತದ ಹಲವು ಸ್ವಯಂಸೇವಾ ಸಂಸ್ಥೆಗಳ (ಎನ್‌ಜಿಒ) ಮೇಲೆ ಜಾರಿ ನಿರ್ದೇಶನಾಲಯವು (ಇ.ಡಿ) ದಾಳಿ ನಡೆಸಿದೆ. ಬೆಂಗಳೂರು ಸೇರಿ ದೇಶದಲ್ಲಿ ಒಟ್ಟು ಎಂಟು ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ.

'ಕೇಂದ್ರ ಸರ್ಕಾರವನ್ನು ಅಸ್ಥಿರಗೊಳಿಸಲು ಉದ್ಯಮಿ ಜಾರ್ಜ್ ಸೋರಸ್ ಭಾರತದಲ್ಲಿನ ಎನ್‌ಜಿಒಗಳಿಗೆ ದೇಣಿಗೆ ನೀಡುತ್ತಿದ್ದಾನೆ' ಎಂಬುದು ಬಿಜೆಪಿಯ ಆರೋಪ. 'ಹೀಗೆ ದೇಣಿಗೆ ನೀಡುವಲ್ಲಿ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯನ್ನು (ಫೆಮಾ) ಉಲ್ಲಂಘಿಸಲಾಗಿದೆ ಎಂದು ದೂರು ಬಂದಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ' ಎಂದು ಇ.ಡಿ ಮೂಲಗಳು ಖಚಿತಪಡಿಸಿವೆ.

ಬೆಂಗಳೂರಿನ ಅಶೋಕ ನಗರದಲ್ಲಿರುವ 'ಆಸ್ಪದಾ ಇನ್ವೆಸ್ಟ್‌ಮೆಂಟ್ ಅಡ್ವೈಸರೀಸ್ ಲಿಮಿಟೆಡ್' ಕಚೇರಿ ಮತ್ತು ಅದರಿಂದ ದೇಣಿಗೆ ಪಡೆದ ಎನ್‌ಜಿಒಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ದಾಖಲೆಗಳು, ಬ್ಯಾಂಕ್ ವಹಿವಾಟು ವಿವರಗಳು, ಕಂಪ್ಯೂಟರ್ ಹಾರ್ಡ್‌ಡಿಸ್ಕ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

'ಅಮೆರಿಕದ 'ಓಪನ್ ಸೊಸೈಟಿ ಫೌಂಡೇಷನ್ಸ್ (ಒಎಸ್‌ಎಫ್)' ಮೂಲಕ ಸೋರಸ್ ದೇಣಿಗೆ ವಿತರಿಸುತ್ತಿದ್ದಾರೆ. ಭಾರತದಲ್ಲಿ ಆಸ್ಪದಾ ಮೂಲಕ ಹಲವು ಎನ್‌ಜಿಒಗಳಿಗೆ ದೇಣಿಗೆ ಒದಗಿಸಲಾಗುತ್ತಿದೆ. ಯಾವ ಉದ್ದೇಶಕ್ಕೆ ಪಡೆಯಲಾಗಿದೆಯೋ, ಅದಕ್ಕೆ ದೇಣಿಗೆ ಬಳಕೆಯಾಗುತ್ತಿಲ್ಲ ಎಂದು ಗೊತ್ತಾಗಿದೆ. ಈ ಸಂಬಂಧ ದಾಖಲೆ ಕಲೆ ಹಾಕಲಾಗುತ್ತಿದೆ' ಎಂದು ಮೂಲಗಳು ಮಾಹಿತಿ ನೀಡಿವೆ.

'ಸೋರಸ್‌ನ ಒಎಸ್‌ಎಫ್ 1999ರಿಂದಲೂ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಮೂಲಸೌಕರ್ಯ ಅಭಿವೃದ್ಧಿ, ವಿದ್ಯಾರ್ಥಿ ವೇತನ ಒದಗಿಸಲು ದೇಣಿಗೆ ನೀಡುತ್ತಿದೆ ಎಂದು ದಾಖಲೆಗಳು ಹೇಳುತ್ತವೆ' ಎಂದು ಪಿಟಿಐ ವರದಿ ಮಾಡಿದೆ.

'ಕೆಲವು ಉದ್ದೇಶದ ಸಾಮಾಜಿಕ ಕಾರ್ಯಗಳಿಗೆ ವಿದೇಶಿ ದೇಣಿಗೆ ಪಡೆಯುವುದನ್ನು ಫೆಮಾ ನಿಷೇಧಿಸುತ್ತದೆ. ಈ ನಿಷೇಧವನ್ನು ತಪ್ಪಿಸಿ ದೇಣಿಗೆ ನೀಡಲು ಒಎಸ್‌ಎಫ್, ಆಸ್ಪದಾ ಕಂಪನಿಯಲ್ಲಿ ಹೂಡಿಕೆ ಮಾಡುತ್ತಿದೆ. ಹೂಡಿಕೆಯನ್ನು ದೇಣಿಗೆ ರೂಪದಲ್ಲಿ ಎನ್‌ಜಿಒಗಳಿಗೆ ವರ್ಗಾವಣೆ ಮಾಡುತ್ತಿರುವ ಅನುಮಾನವಿದೆ. ಈ ಕಾರಣದಿಂದಲೇ ಇ.ಡಿ ದಾಳಿ ನಡೆಸಿದೆ' ಎಂದು ಪಿಟಿಐ ಹೇಳಿದೆ.

ದಲಿತ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ತಾಲ್ಲೂಕಿನ ಸೋಮಯಾಜಲಹಳ್ಳಿ ಬಸ್ ನಿಲ್ದಾಣ ಬಳಿ ಹಣದ ವಿಚಾರಕ್ಕೆ ಸೋಮವಾರ ರಾತ್ರಿ ಪರಿಶಿಷ್ಟ ಪಂಗಡಕ್ಕೆ ಸೇರಿದ ನಾಯಕ ಸಮುದಾಯದ ಯುವಕನನ್ನು ಕೊಲೆ ಮಾಡಲಾಗಿದ್ದು, ರೊಚ್ಚಿಗೆದ್ದ ಕುಟುಂಬಸ್ಥರು ಕೊಲೆ ಆರೋಪಿ ಮನೆಗೆ ಬೆಂಕಿ ಹಚ್ಚಿದ್ದಾರೆ.

ಮಂಜುನಾಥ್

ಶ್ರೀಮೂರ್ತಿ

ಗುಂತಬಾರಿಪಲ್ಲಿ ಗ್ರಾಮದ ನಿವಾಸಿ ಮಂಜುನಾಥ್ (33) ಮೃತ ವ್ಯಕ್ತಿ. ಕೂಲಿಗಾರ್ಲ ನಿವಾಸಿ ಒಕ್ಕಲಿಗ ಸಮುದಾಯದ ಶ್ರೀಮೂರ್ತಿ ಕೊಲೆ ಆರೋಪಿಯಾಗಿದ್ದು, ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ ಶ್ರೀಮೂರ್ತಿ ಆಂಧ್ರದ ವ್ಯಕ್ತಿಯೊಬ್ಬರ ಬಳಿ ಹಣದ ಲೇವಾದೇವಿ ಮಾಡಿದ್ದ. ಆದರೆ, ಹಣ ವಾಪಸ್ ಕೊಟ್ಟಿರಲಿಲ್ಲ. ಆಗ ಆಂಧ್ರದ ವ್ಯಕ್ತಿಗಳು ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಮಂಜುನಾಥ್ ಬಳಿ ಬಂದಿದ್ದಾರೆ. ಆತ ಸಂಧಾನ ಮಾಡಿ ಹಣ ಕೊಡುವಂತೆ ಏರುಧ್ವನಿಯಲ್ಲಿ ಹೇಳಿದ್ದಾನೆ. ಇದರಿಂದ ಕೋಪಗೊಂಡ ಶ್ರೀಮೂರ್ತಿ, ಸೋಮಯಾಜಲಹಳ್ಳಿಗೆ ಬಂದು ಮಂಜುನಾಥ್‌ಗೆ ಕರೆ ಮಾಡಿ ಬೆದರಿಕೆ ಹಾಕಿದ್ದಾನೆ. ಮಂಜುನಾಥ್ ತನ್ನ ಸ್ನೇಹಿತರೊಂದಿಗೆ ಗ್ರಾಮದ ಬಸ್ ನಿಲ್ದಾಣಕ್ಕೆ ಬಂದಿದ್ದಾನೆ. ಈ ವೇಳೆ ಅಲ್ಲಿ ಬಂದ ಶ್ರೀಮೂರ್ತಿ, ಅವಾಚ್ಯವಾಗಿ ನಿಂದಿಸಿ ಚಾಕುವಿನಿಂದ ಮಂಜುನಾಥ್ ಎದೆಗೆ ಇರಿದು ಆಂಧ್ರ ಕಡೆಗೆ ಪರಾರಿಯಾಗಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

ಕೊಲೆ ವಿಚಾರ ತಿಳಿಯುತ್ತಿದ್ದಂತೆಯೇ ಮೃತನ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಕೂಲಿಗಾರ್ಲಕ್ಕೆ ತೆರಳಿ ಆರೋಪಿ ಮನೆಗೆ ಸೋಮವಾರ ರಾತ್ರಿ ನುಗ್ಗಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮನೆ ಬಾಗಿಲು, ಕಿಟಕಿ, ಒಳಗಿದ್ದ ಪೀಠೋಪಕರಣ ಸುಟ್ಟು ಭಸ್ಮವಾಗಿವೆ. ಸ್ಥಳದಲ್ಲಿ ನೂರಾರು ಮಂದಿ ಜಮಾಯಿಸಿ ನ್ಯಾಯಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರಿಂದ ಉದ್ವಿಗ್ನ ವಾತಾವರಣ ಉಂಟಾಗಿತ್ತು. ಸ್ಥಳಕ್ಕೆ ಕೇಂದ್ರ ವಲಯ ಐಜಿಪಿ ಲಾಬೂರಾಮ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಭೇಟಿ ನೀಡಿದರು.

ಅನ್ನಭಾಗ್ಯ: ಅಕ್ಕಿ ಪೂರೈಕೆ ವಿಳಂಬ

ಒಂದನೇ ಪುಟದಿಂದ...

ಆದರೆ ಈ ತಿಂಗಳ ಮೂರನೇ ವಾರವಾದರೂ ಹಲವು ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿ ಪೂರೈಕೆಯಾಗಿಲ್ಲ.

'ನಮಗೆ ಪ್ರತಿ ತಿಂಗಳ 15ರ ವೇಳೆಗೆ ಪಡಿತರ ನೀಡಲಾಗುತ್ತಿತ್ತು. ಆದರೆ ಮಾರ್ಚ್‌ನಲ್ಲಿ ಈವರೆಗೂ ನೀಡಿಲ್ಲ. ಕೇಳಿದರೆ, 'ದಾಸ್ತಾನು ಇಲ್ಲ. 20ರ ನಂತರ ಬನ್ನಿ' ಎನ್ನುತ್ತಾರೆ. ಒಂದೆರಡು ಬಾರಿ ಅಂಗಡಿಗೆ ಹೋಗಿ ವಾಪಸು ಬಂದಿದ್ದೇವೆ' ಎನ್ನುತ್ತಾರೆ ಬೆಳಗಾವಿ ಜಿಲ್ಲೆಯ ವಡಗಾವಿಯ ಕಾಡಪ್ಪ ಗುದಗಾಪೂರ.

ರಾಮನಗರದ ಮಾಗಡಿ ತಾಲ್ಲೂಕಿನ ಸೋಲೂರು ವ್ಯಾಪ್ತಿಯಲ್ಲೂ ಇದೇ ಸ್ಥಿತಿ ಇದೆ. ಸೋಲೂರು ಹೋಬಳಿಯ ಮೂಡಲಪಾಳ್ಯದ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿ ದಾಸ್ತಾನು ಇಲ್ಲ. 'ಇಲ್ಲಿ ಅಂಗಡಿಗಳಲ್ಲಿ ಅಕ್ಕಿ ಪ್ರತಿ ಕೆ.ಜಿಗೆ ₹60-₹70 ಬೆಲೆ ಇದೆ. ಅಷ್ಟು ಕೊಟ್ಟು ಅಕ್ಕಿ ಖರೀದಿಸಲು ಸಾಧ್ಯವಿಲ್ಲ. ಅನ್ನಭಾಗ್ಯದ ಅಕ್ಕಿಯನ್ನೇ ಕಾದುಕೊಂಡಿದ್ದೇವೆ' ಎನ್ನುತ್ತಾರೆ ಮೂಡಲಪಾಳ್ಯದ ಮಂಜಮ್ಮ.

'ನಾವು ಮೂರು ಮಂದಿ ಇದ್ದೇವೆ. ಕಳೆದ ತಿಂಗಳು 15 ಕೆ.ಜಿ. ಕೊಟ್ಟಿದ್ದರು. ಅದು ಕೆಲವೇ ದಿನಗಳಲ್ಲಿ ಖಾಲಿ ಆಗಿದೆ. ಈ ಸಲ ಇನ್ನೂ ಕೊಟ್ಟಿಲ್ಲ. ಒಟ್ಟು 45 ಕೆ.ಜಿ ಕೊಡುತ್ತೇವೆ, ಆದರೆ ಈಗ ಇನ್ನೂ ಬಂದಿಲ್ಲ ಎನ್ನುತ್ತಿದ್ದಾರೆ. ಅಕ್ಕಿ ಬರುವವರೆಗೂ ರಾಗಿ ಮುದ್ದೆಯೇ ಗಟ್ಟಿ' ಎಂದರು.

ಸಂಕ್ಷಿಪ್ತ ಸುದ್ದಿ

ಶಾಸಕ ಭರತ್ ಮೊಬೈಲ್‌ಗೆ ಬೆದರಿಕೆ ಸಂದೇಶ: ವ್ಯಕ್ತಿ ಸೆರೆ

ಬಳ್ಳಾರಿ: ಶಾಸಕ ನಾರಾ ಭರತ್ ರೆಡ್ಡಿ ಅವರ ಮೊಬೈಲ್ ಫೋನ್‌ಗೆ 'ನಿಮ್ಮ ಕುಟುಂಬದಲ್ಲಿ ಬಾಂಬ್ ಇದೆ' ಎಂಬ ಸಂದೇಶ ಕಳುಹಿಸಿದ ಸಂತೋಷ (30) ಎಂಬ ಆರೋಪಿಯನ್ನು ಗಾಂಧಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿ ತಾಲ್ಲೂಕಿನ ರೂಪನಗುಡಿ ರಸ್ತೆ ನಿವಾಸಿ ಸಂತೋಷ ಸೋಮವಾರ ರಾತ್ರಿ ಸಂದೇಶ ಕಳುಹಿಸಿದ್ದ. ಕೂಡಲೇ ಆತನನ್ನು ಬಂಧಿಸಲಾಗಿದೆ. ವೈದ್ಯಕೀಯ ಪರೀಕ್ಷೆ ಮಾಡಿಸಿದಾಗ, ಆತ ಮಾನಸಿಕ ಅಸ್ವಸ್ಥನಾಗಿರುವುದು ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ.

ಬ್ರಹ್ಮಕಲಶೋತ್ಸವಕ್ಕೆ ಸಜ್ಜುಗೊಳ್ಳುತ್ತಿರುವ ಮಧೂರು ದೇವಾಲಯ

ಕಾಸರಗೋಡು: ಮಧೂರು ಮದನಂತೇಶ್ವರ ಸಿದ್ಧಿವಿನಾಯಕ ದೇವಾಲಯ ಬ್ರಹ್ಮಕಲಶೋತ್ಸವಕ್ಕೆ ಸಜ್ಜುಗೊಳ್ಳುತ್ತಿದೆ. ಇದೇ 27ರಿಂದ ಏ.7ರವರೆಗೆ ವಿವಿಧ ಕಾರ್ಯಕ್ರಮ ನಡೆಯಲಿವೆ.

ಈ ಅವಧಿಯಲ್ಲಿ ಅಪರೂಪದ 'ಮೂಡಪ್ಪ ಸೇವೆ' ನಡೆಯಲಿದೆ. ಶಿವಪ್ರಸಾದ್ ತಂತ್ರಿ ದೇರೆಬೈಲು ಬ್ರಹ್ಮಕಲಶೋತ್ಸವ ಮತ್ತು ತಂತ್ರಿ ಉಳಿಯತ್ತಾಯ ವಿಷ್ಣು ಆಸ್ರ ಮೂಡಪ್ಪ ಸೇವೆಯ ನೇತೃತ್ವ ವಹಿಸಲಿದ್ದಾರೆ.

ನೂತನ ಮಹಾದ್ವಾರ, ರಾಜಗೋಪುರ ಮತ್ತು ರಾಜಾಂಗಣ ಲೋಕಾರ್ಪಣೆ ಹಾಗೂ ದೇವಾಲಯದ ಆವರಣದಲ್ಲಿ ದಿನಕ್ಕೆ ಎರಡು ಧಾರ್ಮಿಕ ಸಭೆಗಳು ನಡೆಯಲಿವೆ. ಸಾಂಸ್ಕೃತಿಕ ಕಾರ್ಯಕ್ರಮ, ಶಾಸ್ತ್ರೀಯ ಸಂಗೀತ, ಯಕ್ಷಗಾನ, ತಾಳಮದ್ದಲೆ, ಹರಿಕಥೆ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಬೆಳಿಗ್ಗೆಯಿಂದ ರಾತ್ರಿವರೆಗೆ ವಿವಿಧ ವೇದಿಕೆಗಳಲ್ಲಿ ನಡೆಯಲಿವೆ. ಉತ್ಸವದ ಎಲ್ಲ ದಿನ ಮಧ್ಯಾಹ್ನ ಮತ್ತು ರಾತ್ರಿ ಪ್ರಸಾದ ವ್ಯವಸ್ಥೆ ಇರಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ದೇವಾಲಯಕ್ಕೆ ಮಾಯಿಪ್ಪಾಡಿ ಅರಸ ದಾನ ಮಾರ್ತಾಂಡವರ್ಮ ರಾಜ ಅವರು ಆನುವಂಶಿಕ ಮೊಕ್ತೇಸರರಾಗಿದ್ದಾರೆ. ಬಾರಿಕ್ಕಾಡು ರತನ್ ಕುಮಾರ್ ಕಾಮಡ ಪವಿತ್ರಪಾಣಿಯಾಗಿದ್ದಾರೆ. ಉದ್ಯಮಿ ಸದಾಶಿವ ಶೆಟ್ಟಿ ಕನ್ಯಾನ, ಮಹಾಬಲೇಶ್ವರ ಭಟ್ ಎಡಕ್ಕಾನ, ಬಿ.ಎಸ್. ರಾವ್, ಮಂಜುನಾಥ ಕಾಮತ್, ಜಯದೇವ ಖಂಡಿಗೆ ನೇತೃತ್ವದಲ್ಲಿ ಉತ್ಸವ ಸಮಿತಿ ರಚಿಸಲಾಗಿದೆ.

ದೇವಸ್ಥಾನ

ಕಳಸ, ನಾಪೋಕ್ಲುವಿನಲ್ಲಿ ಮಳೆ

ಕಳಸ (ಚಿಕ್ಕಮಗಳೂರು): ತಾಲ್ಲೂಕು ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಮಂಗಳವಾರ ಸಂಜೆ ಮಳೆ ಆಗಿದ್ದು, ಕೃಷಿಕರು ಸಂತಸಗೊಂಡಿದ್ದಾರೆ.

ಮಂಗಳವಾರ ಮಧ್ಯಾಹ್ನದಿಂದ ಮೋಡ ಕವಿದಿತ್ತು. ಹದವಾಗಿ ಸುರಿದ ಮಳೆಯು ಕಾಫಿ, ಅಡಿಕೆ ತೋಟಕ್ಕೆ ಬೇಕಾದ ತೇವಾಂಶ ಒದಗಿಸಿತು.

ಕಳಸ, ಇಡಕಿಣಿ, ನೆಲ್ಲಿಬೀಡು, ಕುದುರೆಮುಖ, ಎಸ್.ಕೆ.ಮೇಗಲ್, ಕಳಕೋಡು, ಎಡೂರು ಪ್ರದೇಶದಲ್ಲಿ 3ರಿಂದ 15 ಮಿ.ಮೀ. ಮಳೆ ಆಗಿದೆ.

ಮಡಿಕೇರಿ ವರದಿ: ತಾಲ್ಲೂಕಿನ ಕೆಲವೆಡೆ ಮಂಗಳವಾರವೂ ಮಳೆ ಮುಂದುವರಿದಿದೆ. ನಾಪೋಕ್ಲು ಪಟ್ಟಣ, ಬೇತು, ಹಳೆಯ ತಾಲ್ಲೂಕು, ಕೊಟ್ಟಮುಡಿ, ಚೆರಿಯಪರಂಬು, ಕೊಳಕೇರಿ ಗ್ರಾಮಗಳಲ್ಲಿ ಗುಡುಗು ಸಹಿತ ಮಳೆ ಸುರಿದಿದೆ.

'ನಾಗರಹೊಳೆ ಅಭಯಾರಣ್ಯದಲ್ಲೂ ಸೋಮವಾರ ರಾತ್ರಿ ಭಾರಿ ಮಳೆಯಾಗಿದ್ದು, ಅಲ್ಲಲ್ಲಿ ನೀರು ನಿಂತು ವನ್ಯಪ್ರಾಣಿಗಳಿಗೆ ಅನುಕೂಲವಾಗಿದೆ' ಎಂದು ನಾಗರಹೊಳೆ ಎಸಿಎಫ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.

ಠಾಣೆಯಲ್ಲೇ ಇಸ್ಪೀಟ್ ಆಡಿದ ಪೊಲೀಸರು!

ಕಲಬುರಗಿ: ಚಿತ್ತಾಪುರ ತಾಲ್ಲೂಕಿನ ವಾಡಿ ಪೊಲೀಸ್ ಠಾಣೆಯ ಕಟ್ಟಡದ ಮೊದಲನೇ ಮಹಡಿಯಲ್ಲಿ ಐವರು ಪೊಲೀಸ್ ಕಾನ್‌ಸ್ಟೆಬಲ್‌ಗಳು ಇಸ್ಪೀಟ್ ಆಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಖಾಕಿ ಬಟ್ಟೆಯ ಸಮವಸ್ತ್ರದಲ್ಲಿ ಇಬ್ಬರು ಹಾಗೂ ಸಾಮಾನ್ಯ ಬಟ್ಟೆ ಧರಿಸಿದ ಮೂವರು ಕಾನ್‌ಸ್ಟೆಬಲ್‌ಗಳು ಇಸ್ಪೀಟ್ ಆಡುತ್ತಿದ್ದಾರೆ. ಪಕ್ಕದಲ್ಲೇ ಗುಟ್ಕಾ, ತಂಬಾಕು ಮತ್ತು ಸುಣ್ಣದ ಪ್ಯಾಕೆಟ್‌ಗಳು ಇರುವುದು 7 ಸೆಕೆಂಡ್‌ಗಳ ವಿಡಿಯೊದಲ್ಲಿದೆ. ವಿಡಿಯೊ ಮಾಡುತ್ತಿರುವುದನ್ನು ಗಮನಿಸಿದ ಕಾನ್‌ಸ್ಟೆಬಲ್ ಒಬ್ಬರು, ವಿಡಿಯೊ ಮಾಡಬೇಡ ಎಂದು ಸನ್ನೆಯ ಮೂಲಕ ಸೂಚಿಸಿದ ದೃಶ್ಯವೂ ಇದೆ.

'ಕಾನ್‌ಸ್ಟೆಬಲ್‌ಗಳ ಇಸ್ಪೀಟ್ ಜೂಜಾಟದ ವಿಡಿಯೊ ಹಳೆಯದ್ದು. ದಸರಾ ಹಬ್ಬದ ಆಯುಧಪೂಜೆಯ ದಿನ ಮಧ್ಯಾಹ್ನದ ವೇಳೆ ಕಾನ್‌ಸ್ಟೆಬಲ್‌ಗಳು ಇಸ್ಪೀಟ್ ಆಡುತ್ತಿದ್ದರು. ಅದನ್ನು ಮಹಿಳಾ ಕಾನ್‌ಸ್ಟೆಬಲ್ ಒಬ್ಬರು ಸೆರೆಹಿಡಿದಿದ್ದರು. ಈ ವಿಡಿಯೊ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಸಹ ಮಾಡಿದ್ದರು. ಈ ವಿಚಾರ ಮೇಲಧಿಕಾರಿಗಳ ಗಮನಕ್ಕೆ ಬಂದು ಅವರನ್ನು ವರ್ಗಾವಣೆ ಮಾಡಿದ್ದಾರೆ. ಈಗ ವಿಡಿಯೊವನ್ನು ಬಹಿರಂಗಪಡಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, 'ಇಸ್ಪೀಟ್ ಜೂಜಾಟದ ವಿಡಿಯೊ ಹಳೆಯದ್ದು ಎನ್ನುತ್ತಿದ್ದಾರೆ. ಈ ಸಂಬಂಧ ತಕ್ಷಣವೇ ವರದಿ ನೀಡುವಂತೆ ಸೂಚಿಸಿದ್ದೇನೆ. ವರದಿ ಆಧರಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ವಿಡಿಯೊ ಎಷ್ಟೇ ಹಳೆಯದ್ದು ಆಗಿದ್ದರೂ ಠಾಣೆಯಲ್ಲಿ ಇಸ್ಪೀಟ್ ಆಡಿರುವುದನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು.

ವಾಡಿ ಪೊಲೀಸ್ ಠಾಣೆಯ ಕಟ್ಟಡದಲ್ಲಿ ಕಾನ್‌ಸ್ಟೆಬಲ್‌ಗಳು ಇಸ್ಪೀಟ್ ಆಡುತ್ತಿದ್ದಾರೆ ಎನ್ನಲಾದ ವಿಡಿಯೊದಲ್ಲಿನ ದೃಶ್ಯ

ಮಂಗಳೂರು ಮಹಾನಗರಪಾಲಿಕೆ

DMA/2024-25/WORK INDENT NO.37183, 37196, 37199, 37258, 37488, 37491, 37493, 36915, 37490, 37355, 37201 ದಿನಾಂಕ: 17.03.2025

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಸಾಮಾನ್ಯ ನಿಧಿಯಲ್ಲಿ **DMA/2024-25/WORK INDENT NO.37183, 37196, 37199, 37258, 37488, 37491, 37493, 36915, 37490, 37355, 37201** ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 11 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 103.93** ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04–04–2025 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/1617/24-25 dt: 18.03.2025

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂವಿ :ಟಿ.ಎನ್‌ಡಿ:(56ಇ)ಜೆಇ–2:2024–25 ದಿನಾಂಕ: 17.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೆಕ್ಕಶೀರ್ಷಿಕೆ:–5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು ರಡಿ ಇಂಡೆಂಟ್ ನಂ: 19470. ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 24.03.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ ಮತ್ತು **ಲೆಕ್ಕಶೀರ್ಷಿಕೆ: 5054–04–337–0–01–154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 20301. ಈ ಕಾಮಗಾರಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 26.03.2025 (ಅಪರಾಹ್ನ 4.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಕೆ,ಡಬ್ಲ್ಯೂ–3 & ಕೆ,ಡಬ್ಲ್ಯೂ– 4 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. 95.00 ಲಕ್ಷ, ಗರಿಷ್ಠ ಅಂದಾಜು ಮೊತ್ತ ರೂ.150.00 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **https://kppp.karnataka.gov.in**ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

DIPR/MNG/KSMCA/1614/24-25 dt.18.03.2025

ಸಣ್ಣ ನೀರಾವರಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಐ.ಎಫ್.ಟಿ. ಸಂ: 31/2024–25 ದಿನಾಂಕ: 13.03.2025

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)–ಕೆ.ಡಬ್ಲೂ–2

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲೂ–2 ರ ಅನ್ವಯ ಶಿವಮೊಗ್ಗ ಉಪವಿಭಾಗ ವ್ಯಾಪ್ತಿಯಲ್ಲಿನ 3 ಸಂಖ್ಯೆ ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಕನಿಷ್ಠ ಮೊತ್ತ ರೂ.33.80 ಲಕ್ಷಗಳು ರಿಂದ 42.34 ಲಕ್ಷಗಳು ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ:http:/kppp.karnataka.gov.in ನಲ್ಲಿ ದಿನಾಂಕ:13.03.2025 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:21.03.2025. 17:00ಘಂಟೆ. ಇನ್ನುಳಿದಂತೆ ವೆಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/24–25/116/03/1905

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತಿ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು.

ದೂರವಾಣಿ ಸಂಖ್ಯೆ:08262–220936 E-Mail: zpedckm@rediffmail.com

ಟೆಂಡರ್ ಪ್ರಕಟಣೆ ಸಂಖ್ಯೆ:28/2024–25 3030 ದಿನಾಂಕ:14.03.2025

–:ಟೆಂಡರ್ ಪ್ರಕಟಣೆ :–

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ಮತ್ತು ಮೂಡಿಗೆರೆ ತಾಲ್ಲೂಕಿನ ಪ್ಯಾಕೇಜ್ ಕಾಮಗಾರಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ **ಅಂದಾಜು ಮೊತ್ತ ರೂ.94.00 ಲಕ್ಷಗಳು** ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯುಮೆಂಟ್‌ಗಳನ್ನು **ದಿನಾಂಕ:14.03.2025 ರಿಂದ ದಿನಾಂಕ:28.03.2025 ರವರೆಗೆ ಸಂಜೆ 5.30 ಗಂಟೆಯೊಳಗೆ** ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ಸಾಧ್ಯವಾದಲ್ಲಿ **ದಿನಾಂಕ:31.03.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.** ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ **ದಿನಾಂಕ:05.04.2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.** ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು **kppp.karnataka.gov.in website** ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

(www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 08022122856

E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 16/2024–25 ದಿನಾಂಕ: 15–03–2025

ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಕೆಡಬ್ಲ್ಯೂ–2, ನಿಯಮಗಳಂತೆ ಸಿ.ಟಿ.ಓ ಕೇಂದ್ರ ಕಛೇರಿ, ಕಾಳಿದಾಸ ರಸ್ತೆ ಹಾಗೂ ಜೀವನ್‌ಭೀಮಾನಗರದ & ಕೋರಮಂಗಲ ವಸತಿಗೃಹ, ಬೆಂಗಳೂರು ಕಾಮಗಾರಿಗಳಿಗಾಗಿ ಮೀಸಲಾತಿ ಹಂಚಿಕೆ ಕ್ರ ಸಂ: 1 ರಿಂದ 4 ರ ವರೆಗೆ (ಇತರೆ) ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(https://kppp.karnataka.gov.in/)** ಪಿಡಬ್ಲ್ಯೂಡಿಯಲ್ಲಿ ನೊಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಯಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 17.03.2025 ರಿಂದ 24.03.2025 ಸಂಜೆ 4.30 ಗಂಟೆಯವರೆಗೆ
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 24.03.2025 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: 26.03.2025 ರಂದು ಸಂಜೆ 4.30 ಕ್ಕೆ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

DIPR/CP/5758/Zen/2024-25

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆಕಾಇಂ/ಲೋಇವಿ/ಮಧುಸಇಂ–2/ಟೆಂಡರ್/2024–25 ದಿ: 10.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:33/2024–25 (ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-3 & kw-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಸಿರಾ, ಮಧುಗಿರಿ ಹಾಗೂ ಪಾವಗಡ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ 402.38 ಲಕ್ಷಗಳವರೆಗೆ, ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 19–03–2025 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 20–03–2025 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 21–03–2025 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 15–03–2025 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/714/KSMCA/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ: ಮುಇಂವಿ/ಟಿಮತ್ತುಪಿ/ಅಇಂ(ವಿ)–2/2024–25/9977–90 ದಿ: 18.03.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ/ ಕಾಮಗಾರಿಯ ವಿವರ
1. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್2159
ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕಿನ **ಜಾಣಗೆರೆ** ಯಲ್ಲಿ **2X20ಎಂವಿಎ,** 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, 66/11ಕೆವಿ ಜಿಡ್ಡಿಗೆರೆ ಉಪಕೇಂದ್ರದಲ್ಲಿ 1 ಸಂಖ್ಯೆಯ 66ಕೆವಿ ಟರ್ಮಿನಲ್ ಬೇ ಹಾಗೂ ಹಾಲಿಯಿರುವ 66/11ಕೆವಿ ಜಿಡ್ಡಿಗೆರೆ ಉಪಕೇಂದ್ರದಿಂದ **7.562ಕಿಮೀಗಳ** ಉದ್ದಕ್ಕೆ 66ಕೆವಿ ಡಿಸಿ **(DC)** ಪ್ರಸರಣ ಮಾರ್ಗವನ್ನು 110ಕೆವಿ ಡಿಸಿ **(DC)** ಗೋಪುರಗಳ ಮೇಲೆ ಪ್ಯಾಂಥರ್ **(Panther)** ವಾಹಕದಿಂದ ನಿರ್ಮಿಸುವುದು.
2. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್2160
ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಹೊನ್ನೇಬಾಗಿ (ವಡ್ನಾಳ್) ಯಲ್ಲಿ **2X20ಎಂವಿಎ,** 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಹಾಲಿಯಿರುವ 66ಕೆವಿ ಬೆಂಕಿಕೆರೆ–ಗೊಪ್ಪೇನಹಳ್ಳಿ ಎಸ್‌ಸಿ **(SC)** ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66ಕೆವಿ ಹೊನ್ನೇಬಾಗಿ (ವಡ್ನಾಳ್) ಉಪಕೇಂದ್ರದವರೆಗೆ ಕೊಯೋಟ್ **(Coyote)** ವಾಹಕದಿಂದ **0.757ಕಿಮೀಗಳ** ಉದ್ದಕ್ಕೆ 66ಕೆವಿ ಲಿಲೋ**(LILO)** ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್2155
ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ **ತೊರೆಹಳ್ಳಿಯಲ್ಲಿ 2X20ಎಂವಿಎ, 110/11ಕೆವಿ** ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆವಿ ನಿಟ್ಟೂರು–ಗುಬ್ಬಿ SC ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆವಿ ತೊರೆಹಳ್ಳಿ ಉಪಕೇಂದ್ರದವರೆಗೆ **(DC)** ಗೋಪುರಗಳ ಮೇಲೆ ಪ್ಯಾಂಥರ್ **(Panther)** ವಾಹಕದಿಂದ **1.368ಕಿಮೀಗಳ** ಉದ್ದಕ್ಕೆ 110 ಕೆ.ವಿ ಲಿಲೋ **(LILO)** ಪ್ರಸರಣ ಮಾರ್ಗವನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯು ವೆಬ್‌ಸೈಟ್ **https://kptcl.karnataka.gov.in**ನ ಹೈಪರ್‌ಲಿಂಕ್ **"ಇ–ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ"** ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **24.03.2025 ರಂದು ಅಪರಾಹ್ನ 15:00 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **08.04.2025 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್) ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560 009. ದೂ: 080–22274744.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ, ಭಾರತ ಸರ್ಕಾರ

ವಿವಿಧ ಕುಶಲತೆಗಳ ತರಬೇತಿ ಕೇಂದ್ರ (ಎಂ.ಡಿ.ಟಿ.ಸಿ.), ವಿಜಿನಪುರ, ಎಫ್.ಸಿ.ಐ. ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು – 560016, ಕರ್ನಾಟಕ ದೂ: 080-2565 0285, ಇ–ಮೇಲ್: kvicbang@gmail.com

Ministry of Micro, Small and Medium Enterprises, Government of India

ನಿರುದ್ಯೋಗಿ ಯುವಕ/ಯುವತಿ/ಮಹಿಳೆ/ಎನ್.ಜಿ.ಓ/ಎಸ್.ಹೆಚ್.ಜಿ.ಗಳಿಗೆ ಸಉದ್ಯೋಗ ಕಲಿಸುವ ತರಬೇತಿ ಕಾರ್ಯಕಮ

ನಿರುದ್ಯೋಗಿ ಯುವಕ/ಯುವತಿ/ಮಹಿಳೆ/ಎನ್.ಜಿ.ಓ/ಎಸ್.ಹೆಚ್.ಜಿ.ಗಳಿಗೆ ಸ್ವಉದ್ಯೋಗ ಕಲ್ಪಿಸುವ ತರಬೇತಿ ಕಾರ್ಯಕ್ರಮಕ್ಕಾಗಿ ಕಡಿಮೆ ಶುಲ್ಕದೊಂದಿಗೆ ಅರ್ಜಿ ಕರೆಯಲಾಗಿದ್ದು, ವಿವಿಧ ಕುಶಲತೆಗಳ ತರಬೆತಿ ಕೇಂದ್ರ (ಎಂ.ಡಿ.ಟಿ.ಸಿ), ಖಾದಿ ಗ್ರಾಮೋದ್ಯೋಗ ಆಯೋಗ(ಕೆವಿಐಸಿ), ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ (ಎಂ.ಎಸ್.ಎಂ.ಇ), ಭಾರತ ಸರ್ಕಾರ, ವಿಜಿನಪುರ, ಎಫ್.ಸಿ.ಐ ಗೊಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು – 16 ಮತ್ತು ನೋಂದಾಯಿತ ಕೌಶಲ್ಯ ತರಬೇತಿ ಸಂಸ್ಥೆಗಳು(ಪಿಟಿಎ) ರವರು ಕೆಳಗಿನ ಬೇರೆ ಬೇರೆ ಸ್ಥಳಗಳಲ್ಲಿ ತರಬೇತಿ ನೀಡಲಿದ್ದಾರೆ.

ಕ್ರ. ಸಂ.	ತರಬೇತಿಯ ಹೆಸರು	ಅವಧಿ	ತರಬೇತಿ ನೀಡುವ ಸಂಸ್ಥೆ	ಸ್ಥಳ	ಸಂಪರ್ಕ	ಶುಲ್ಕ
1	ಟೈಲರಿಂಗ್ ಮತ್ತು ಎಂಬ್ರಾಯಿಡರಿ	3 ತಿಂಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	3000/–
2	ಟೈಲರಿಂಗ್ ಮತ್ತು ಎಂಬ್ರಾಯಿಡರಿ	3 ತಿಂಗಳು	ಪಿಟಿಎ–ಶ್ರೀ ವಿನಾಯಕ ಎಂ.	ಕೆ.ಆರ್. ಪುರಂ, ಬೆಂಗಳೂರು	9886916515	3000/–
3	ಟೈಲರಿಂಗ್ ಮತ್ತು ಎಂಬ್ರಾಯಿಡರಿ	3 ತಿಂಗಳು	ಪಿಟಿಎ–ಚಿಲುಮೆ ಎಸ್‌ಎಸ್‌ಟಿ	ಕಮ್ಮನಹಳ್ಳಿ, ಬೆಂಗಳೂರು	9945400845	3000/–
4	ಬ್ಯೂಟಿಷಿಯನ್ ತರಬೇತಿ	1 ತಿಂಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	2500/–
5	ಬ್ಯೂಟಿಷಿಯನ್ ತರಬೇತಿ	2 ತಿಂಗಳು	ಪಿಟಿಎ–ಎಸ್‌ಜಿಸಿಇಟಿ	ಮಹಾಲಕ್ಷ್ಮೀ ಲೇಔಟ್, ಬೆಂಗಳೂರು	9483141411	1500/–
6	ಬ್ಯೂಟಿಷಿಯನ್ ತರಬೇತಿ	1 ತಿಂಗಳು	ಪಿಟಿಎ–ಎಸ್‌ಎಸ್‌ಡಬ್ಲ್ಯೂಡಿಎಫ್	ಯಲಹಂಕ, ಬೆಂಗಳೂರು	8197693975	2500/–
7	ಕಂಪ್ಯೂಟರ್ ಬೇಸಿಕ್ ತರಬೇತಿ	1 ತಿಂಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	2000/–
8	ಕಂಪ್ಯೂಟರ್ ಬೇಸಿಕ್ ತರಬೇತಿ	1 ತಿಂಗಳು	ಪಿಟಿಎ–ಮಾಡ್ರನ್ ಎಜು. ಟ್ರಸ್ಟ್	ಶ್ರೀನಿವಾಸಪುರ, ಕೋಲಾರ	9901020518	1500/–
9	ಬೇಸಿಕ್ ಬೇಕರಿ ತರಬೇತಿ	05 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	1000/–
10	ಬೇಸಿಕ್ ರಿನಿವೇಬಲ್ ಎನರ್ಜಿ	05 ದಿನಗಳು	ಪಿಟಿಎ–ಪೈರಾ ವಿಂಡೂ	ಮಾರ್ಗೊಂಡನಹಳ್ಳಿ, ಬೆಂಗಳೂರು	9980095896	5000/–
11	ಕಾಗದದ ವಸ್ತುಗಳ ತಯಾರಿಕೆ	10 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	1000/–
12	ಹಣ್ಣು ಮತ್ತು ತರಕಾರಿ ಸಂಸ್ಕರಣೆ	10 ದಿನಗಳು	ಪಿಟಿಎ–ಕೆಎಂಕೆ ಸಂಘ	ಹೆಗ್ಗನಹಳ್ಳಿ, ಬೆಂಗಳೂರು	7760339885	1000/–
13	ಗೃಹೋಪಯೋಗಿ ಕೆಮಿಕಲ್ ವಸ್ತುಗಳು	5 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	1000/–
14	ಹಣ್ಣು ಮತ್ತು ತರಕಾರಿ ಸಂಸ್ಕರಣೆ	10 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	2000/–
15	ಖಾದಿ ಪರಿಸರಸ್ನೇಹಿ ಬಣ್ಣ ತಯಾರಿಕೆ	5 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	2000/–
16	ಆರಿ ಎಂಬ್ರಾಯಿಡರಿ	5 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	1000/–
17	ಗೃಹೋಪಯೋಗಿ ಕೆಮಿಕಲ್ ವಸ್ತುಗಳು	5 ದಿನಗಳು	ಪಿಟಿಎ–ಗಂಗಾ ಸಿ. ಟ್ರಸ್ಟ್	ದೇವರಾಜ, ಮೈಸೂರು	9740097600	1000/–
18	ಬೇಸಿಕ್ ಜೇನು ಸಾಕಾಣಿಕೆ	5 ದಿನಗಳು	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ಬೆಂ.	ಎಂ.ಡಿ.ಟಿ.ಸಿ, ಕೆ.ವಿ.ಐ.ಸಿ., ವಿಜಿನಪುರ	080–25650285	1000/–

ಇತರೆ ಕಸುಬುಗಳ ಕರಕುಶಲ ತರಬೇತಿಯನ್ನು ಸಹ ನೀಡಲಾಗುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ದೂರವಾಣಿ 080–25650285, 9449354126, 8299377420 ಸಂಪರ್ಕಿಸಿ ಮಾಹಿತಿ ಪಡೆಯಬಹುದು. ತರಬೇತಿ ಪೂರ್ತಿಗೊಳಿಸಿದ ಅಭ್ಯರ್ಥಿಗಳಿಗೆ ಭಾರತ ಸರ್ಕಾರದಿಂದ ಪಿ.ಎಂ.ಇ.ಜಿ.ಪಿ. ಯೋಜನೆಯಡಿಯಲ್ಲಿ 15% ರಿಂದ 35% ರಷ್ಟು ಸಹಾಯಧನದೊಂದಿಗೆ ತಮ್ಮ ಯೋಜನೆಗಳನ್ನು ಪ್ರಾರಂಭಿಸಲು ರೂ. 25 ಲಕ್ಷದಿಂದ ರೂ. 50 ಲಕ್ಷಗಳವರೆಗೆ ಯೋಜನಾ ವೆಚ್ಚ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : www.kvic.org.in

ಸಹಿ/– ನಿರ್ದೇಶಕರು / ಪ್ರಾಂಶುಪಾಲರು

ವಿಧಾನಸಭೆ: ಬಜೆಟ್ ಮೇಲಿನ ಚರ್ಚೆಯಲ್ಲಿ ಬಿಜೆಪಿಯ ಶಾಸಕ ಅರವಿಂದ ಬೆಲ್ಲದ ಮಾತು

ಆರ್ಥಿಕತೆ: ಮದ್ಯ ಮಾರಾಟ ಅವಲಂಬನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ಆರ್ಥಿಕತೆ ಮದ್ಯ ಮಾರಾಟವನ್ನೇ ಅವಲಂಬಿಸಿದೆ. ₹ 40,000 ಕೋಟಿ ಅಬಕಾರಿ ತೆರಿಗೆ ಸಂಗ್ರಹಿಸಲು ಜನರಿಗೆ ಲಕ್ಷಾಂತರ ಕೋಟಿ ರೂಪಾಯಿ ಮೌಲ್ಯದ ಮದ್ಯ ಕುಡಿಸುವುದು ಸರಿಯಲ್ಲ' ಎಂದು ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಂಗಳವಾರ ಪಾಲ್ಗೊಂಡು ಮಾತನಾಡಿದ ಅವರು, 'ಅಬಕಾರಿ ತೆರಿಗೆಯಲ್ಲಿ 18 ಹಂತಗಳಿವೆ. ಈ ಪೈಕಿ ಬಡವರು ಕುಡಿಯುವ ಕಡಿಮೆ ದರದ ಮದ್ಯವೇ ಹೆಚ್ಚು ಮಾರಾಟ ಆಗುತ್ತಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಲ್ಲಿರುವ ಬಡವರಿಗೆ ಹೆಚ್ಚು ಮದ್ಯ ಕುಡಿಸಿ ತೆರಿಗೆ ವರಮಾನ ಹೆಚ್ಚಿಸಿಕೊಳ್ಳುವುದು ಬೇಕೆ' ಎಂದು ಕೇಳಿದರು.

'ಮದ್ಯ ಮಾರಾಟ ಹೆಚ್ಚಿದಂತೆಲ್ಲ ಮಹಿಳೆಯರು ಮತ್ತು ಮಕ್ಕಳು ಸಮಸ್ಯೆಗೆ ಸಿಲುಕುತ್ತಾರೆ. ಅವರ ಹೊಟ್ಟೆಯ ಮೇಲೆ ಹೊಡೆದು ಗ್ಯಾರಂಟಿ ಯೋಜನೆಗಳನ್ನು ನೀಡಿದರೆ ಏನು ಪ್ರಯೋಜನ' ಎಂದು ಪ್ರಶ್ನಿಸಿದರು.

'ಸಾಲ ಮಾಡಿ ತುಪ್ಪ ತಿನ್ನಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದೆ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಆದರೆ, ಈ ಬಾರಿ ₹ 1.16 ಲಕ್ಷ ಕೋಟಿ ಸಾಲ ಮಾಡುವ ಪ್ರಸ್ತಾವವನ್ನು ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ. ಇಷ್ಟೊಂದು ಸಾಲ ಮಾಡಿ ಯಾರಿಗೆ ಬಿರಿಯಾನಿ ತಿನ್ನಿಸಲು ಹೊರಟಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಶಿಕ್ಷಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ, ಲೋಕೋಪಯೋಗಿ, ಗೃಹ, ನಗರಾಭಿವೃದ್ಧಿ, ಕೃಷಿ, ತೋಟಗಾರಿಕೆ ಸೇರಿದಂತೆ ಬಹುತೇಕ ಕ್ಷೇತ್ರಗಳಿಗೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಮೊತ್ತವನ್ನು ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಒದಗಿಸಲಾಗಿದೆ. ಇದರಿಂದ ಅಭಿವೃದ್ಧಿ ಕುಂಠಿತವಾಗಲಿದೆ ಎಂದರು.

ವಿಧಾನ ಸಭೆಯ ಕಲಾಪದಲ್ಲಿ ಬಿಜೆಪಿ ಶಾಸಕ ಅರವಿಂದ ಬೆಲ್ಲದ್ ಮಾತನಾಡಿದರು

'ಎರಡು ಬಾಟಲಿ ಮದ್ಯ ಉಚಿತ ಕೊಡಿ'

'ಗ್ಯಾರಂಟಿ ಯೋಜನೆಗಳ ಮಾದರಿಯಲ್ಲೇ ಪುರುಷರಿಗೆ ಉಚಿತವಾಗಿ ವಾರಕ್ಕೆ ಎರಡು ಬಾಟಲಿ ಮದ್ಯ ವಿತರಿಸುವ ಹೊಸ ಯೋಜನೆ ಜಾರಿಗೊಳಿಸಿ. ಸಹಕಾರ ಸಂಘಗಳ ಮೂಲಕ ಉಚಿತ ಮದ್ಯ ವಿತರಣೆಗೆ ವ್ಯವಸ್ಥೆ ಮಾಡಿ' ಎಂದು ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಸಲಹೆ ನೀಡಿದರು.

'ದುಡಿಯುವ ಜನರು ಮದ್ಯ ಸೇವಿಸುತ್ತಾರೆ. ಅದನ್ನು ತಪ್ಪಿಸಲು ಆಗುವುದಿಲ್ಲ. ಪುರುಷರಿಗೆ ಉಚಿತವಾಗಿ ಮದ್ಯ ವಿತರಿಸುವ ಯೋಜನೆ ಜಾರಿಗೊಳಿಸಿ' ಎಂದರು.

ಎಂ.ಟಿ. ಕೃಷ್ಣಪ್ಪ

'ಧರ್ಮಾಧಾರಿತ ಶಾಲೆ ಆರಂಭ ಬೇಡ'

'ಧರ್ಮದ ಆಧಾರದಲ್ಲಿ ಪ್ರತ್ಯೇಕ ಶಾಲೆಗಳು, ವಸತಿ ಶಾಲೆಗಳನ್ನು ಸರ್ಕಾರವೇ ತೆರೆಯುವುದು ಸರಿಯಲ್ಲ. ಈ ರೀತಿಯ ಯೋಜನೆಗಳನ್ನು ಕೈಬಿಡಬೇಕು' ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಆಗ್ರಹಿಸಿದರು.

'ಅಲ್ಪಸಂಖ್ಯಾತರಿಗಾಗಿ ಮೌಲಾನಾ ಆಜಾದ್ ವಸತಿ ಶಾಲೆಗಳನ್ನು ಆರಂಭಿಸಲಾಗುವುದು' ಎಂಬ ಬಜೆಟ್ ಘೋಷಣೆಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, 'ಎಲ್ಲ ಜಾತಿ, ಧರ್ಮದ ಮಕ್ಕಳು ಶಾಲೆಯಲ್ಲಿ ಒಟ್ಟಾಗಿ ಕಲಿಯಬೇಕು. ಒಟ್ಟಾಗಿ ಆಡಬೇಕು. ಕೈ-ಕೈ ಹಿಡಿದು ನಲಿಯಬೇಕು. ಒಕ್ಕಲಿಗರಿಗೆ, ಮುಸ್ಲಿಮರಿಗೆ, ಪರಿಶಿಷ್ಟರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯುತ್ತಾ ಹೋದರೆ ನಮ್ಮ ಸಮಾಜ ಎಲ್ಲಿಗೆ ತಲುಪುತ್ತದೆ' ಎಂದು ಕೇಳಿದರು. ಎಲೆ ಚುಕ್ಕಿ ರೋಗದ ಬಾಧೆಯಿಂದ ಅಡಿಕೆ ಬೆಳೆಗಾರರ ಜೀವನವೇ ಮುಗಿದುಹೋಗುವ ಪರಿಸ್ಥಿತಿ ಎದುರಾಗಿದೆ. ಬಜೆಟ್‌ನಲ್ಲಿ ₹ 62 ಕೋಟಿ ಒದಗಿಸಿದ್ದರೂ ಸ್ಪಷ್ಟತೆ ಇಲ್ಲ. ಸಮಸ್ಯೆ ಪರಿಹಾರಕ್ಕೆ ₹ 100 ಕೋಟಿ ಒದಗಿಸಬೇಕು ಎಂದು ಆಗ್ರಹಿಸಿದರು.

ಆರಗ ಜ್ಞಾನೇಂದ್ರ

'ಜೆಜೆಎಂ ಹೆಸರಿನಲ್ಲಿ ಲೂಟಿ'

'ಜಲ ಜೀವನ್ ಮಿಷನ್ (ಜೆಜೆಎಂ) ಹೆಸರಿನಲ್ಲಿ ಬೊಕ್ಕಸದ ಹಣ ಲೂಟಿಯಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ₹ 161 ಕೋಟಿ ವೆಚ್ಚ ಮಾಡಿ ಕೊಳವೆ ಮಾರ್ಗ ಅಳವಡಿಸಿದ್ದಾರೆ. ಆದರೆ, ಬಾವಿಗಳನ್ನೂ ತೋಡಿಲ್ಲ, ಜಲ ಮೂಲಗಳನ್ನೂ ಗುರುತಿಸಿಲ್ಲ' ಎಂದು ಕಾಂಗ್ರೆಸ್‌ನ ಬಿ.ಆರ್. ಪಾಟೀಲ ಆರೋಪಿಸಿದರು.

'ಜೆಜೆಎಂ ಎಲ್ಲಿಯೂ ಯಶಸ್ವಿಯಾಗಿಲ್ಲ. ನೀರಿನ ಲಭ್ಯತೆಯನ್ನೇ ಗುರುತಿಸದೇ ಕೊಳವೆ ಮಾರ್ಗ ಅಳವಡಿಸಿ ರಸ್ತೆಗಳನ್ನು ಅಗೆದು ಹಾಕಲಾಗಿದೆ. ನನ್ನ ಕ್ಷೇತ್ರದ 33 ಗ್ರಾಮಗಳಲ್ಲಿ ಇದರಿಂದ ಸಮಸ್ಯೆಯಾಗಿದೆ' ಎಂದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೈಗಾರಿಕೆಗಳ ಸ್ಥಾಪನೆಯ ಹೆಸರಿನಲ್ಲಿ ಫಲವತ್ತಾದ ಕೃಷಿ ಜಮೀನುಗಳನ್ನು ರೈತರಿಂದ ಕಿತ್ತು ಉದ್ಯಮಿಗಳಿಗೆ ನೀಡುತ್ತಿದೆ. ಇದರ ಹಿಂದೆ ದೊಡ್ಡ ಜಾಲವೇ ಇದೆ. ಜಮೀನು ಪಡೆದವರು ಉದ್ದಿಮೆಗಳನ್ನೇ ಆರಂಭಿಸುತ್ತಿಲ್ಲ ಎಂದು ದೂರಿದರು.

ಸಾಲ ಮನ್ನಾ: ಮಾತಿನ ಜಟಾಪಟಿ

ಉತ್ತರ ನೀಡುವಾಗ ಅಡ್ಡಿಪಡಿಸಿದರೆ ಹೆದರುವುದಿಲ್ಲ–ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೋದಿ ರೈತರ ಸಾಲ ಮನ್ನಾ ಮಾಡಿಲ್ಲ. ಅವರು ಸಾಲ ಮನ್ನಾ ಮಾಡಿರುವುದು ಉದ್ಯಮಿಗಳದ್ದು. ಅದಾನಿ, ಅಂಬಾನಿಯದ್ದು' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತಿಗೆ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ವಿಚಾರದಲ್ಲಿ ಆಡಳಿತ–ವಿಪಕ್ಷ ಸದಸ್ಯರ ನಡುವೆ ಮಾತಿನ ಜಟಾಪಟಿಯೇ ನಡೆಯಿತು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಉತ್ತರ ನೀಡುತ್ತಿದ್ದ ವೇಳೆ ಸಾಲ ಮನ್ನಾ ವಿಷಯ ಪ್ರಸ್ತಾಪಿಸಿದ ಮುಖ್ಯಮಂತ್ರಿ, 'ರೈತರ ಸಾಲ ಮನ್ನಾ ಮಾಡಿ ಎಂದಾಗ ನೋಟು ಪ್ರಿಂಟ್ ಮಾಡುವ ಮಷಿನ್ ಇಲ್ಲ ಎಂದು ಇದೇ ಸದನದಲ್ಲಿ ಯಡಿಯೂರಪ್ಪ ಹೇಳಿದ್ದರು. ಮೋದಿ ಉದ್ಯಮಿಗಳ ₹ 16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ್ದಾರೆ' ಎಂದರು.

ಆಗ ಕ್ರಿಯಾಲೋಪ ಎತ್ತಿದ ಬಿಜೆಪಿಯ ಸಿ.ಟಿ. ರವಿ, 'ಮುಖ್ಯಮಂತ್ರಿ ಸುಳ್ಳು ಹೇಳುತ್ತಿದ್ದಾರೆ' ಎಂದರು. 'ಉತ್ತರ ಕೊಡುವಾಗ ಕ್ರಿಯಾಲೋಪ ಎತ್ತಲು ಅವಕಾಶ ಇಲ್ಲ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. 'ಸಾಂವಿಧಾನಿಕ ಸ್ಥಾನದಲ್ಲಿರುವ ಮುಖ್ಯಮಂತ್ರಿ ಸದನದ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ರವಿ ಆಕ್ರೋಶ ವ್ಯಕ್ತಪಡಿಸಿದರು.

'ನಾನು ಉತ್ತರ ನೀಡುವಾಗ ಅಡ್ಡಿ-ಪಡಿಸಿದರೆ, ಯಾರಿಗೂ ಹೆದರುವುದಿಲ್ಲ' ಎಂದು ಮುಖ್ಯಮಂತ್ರಿ ತಿರುಗೇಟು ನೀಡಿದರು.

'ನಮ್ಮ ಸರ್ಕಾರದ 'ಗ್ಯಾರಂಟಿ'ಯನ್ನು ಮೋದಿ ಕಾಪಿ ಮಾಡಿದರು' ಎಂದು ಮುಖ್ಯಮಂತ್ರಿ ಹೇಳಿದಾಗ, 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಹೀಗಾಗಿ ನಾವೂ ಗ್ಯಾರಂಟಿ ತಂದೆವು' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸಮರ್ಥಿಸಿದರು.

ಮೂರು ಗಂಟೆಗೂ ಹೆಚ್ಚು ಹೊತ್ತು ಉತ್ತರ ನೀಡಿದ ಮುಖ್ಯಮಂತ್ರಿ, 'ವಂದನಾ ನಿರ್ಣಯ ಅಂಗೀಕರಿಸಬೇಕು' ಎಂದು ಕೋರಿದರು. ಆಗ ಬಿಜೆಪಿ ಸದಸ್ಯರು, 'ಮುಖ್ಯಮಂತ್ರಿಯ ಉತ್ತರ ತೃಪ್ತಿ ಕೊಟ್ಟಿಲ್ಲ' ಎಂದು ಸಭಾತ್ಯಾಗ ಮಾಡಿದರು.

ಸಿದ್ದರಾಮಯ್ಯ ಅವರು 'ಪ್ರಜಾವಾಣಿ' ವರದಿಯನ್ನು ಪ್ರದರ್ಶಿಸಿದರು. ಎನ್.ಎಸ್. ಬೋಸರಾಜು, ಕೆ. ಗೋವಿಂದರಾಜು, ಸಲೀಂ ಅಹಮದ್ ಇದ್ದರು

'ಛಲವಾದಿ ನೀನು ಆರ್‌ಎಸ್‌ಎಸ್ ಅಲ್ಲ'

'ನೀನು ಆರ್‌ಎಸ್‌ಎಸ್ ಅಲ್ಲ. ಆರ್‌ಎಸ್‌ಎಸ್ ನಿನ್ನನ್ನು ಒಳಗೂ ಸೇರಿಸಲ್ಲ' ಎಂದು ಛಲವಾದಿ ನಾರಾಯಣಸ್ವಾಮಿಯನ್ನು ಉದ್ದೇಶಿಸಿ ಮುಖ್ಯಮಂತ್ರಿ ಹೇಳಿದರು. ಆಗ ನಾರಾಯಣಸ್ವಾಮಿ, 'ನಾನು ಆರ್‌ಎಸ್‌ಎಸ್ ಅಲ್ಲ ಬಿಜೆಪಿ. ಆರ್‌ಎಸ್‌ಎಸ್ ಅನ್ನು ಗೌರವಿಸುತ್ತೇನೆ' ಎಂದರು. ಈ ವೇಳೆ, 'ನಾನು ಆರ್‌ಎಸ್‌ಎಸ್, ನಾನೂ ಆರ್‌ಎಸ್‌ಎಸ್. ಭಾರತ್ ಮಾತಾಕಿ ಜೈ' ಎಂದು ಬಿಜೆಪಿ ಸದಸ್ಯರು ಜಯಕಾರ ಹಾಕಿದರು. ಆಗ ಸಂತೋಷ್ ಲಾಡ್, 'ಬಾಬಾ ಸಾಹೇಬ್ ಅಂಬೇಡ್ಕರ್‌ಗೆ ಜೈ' ಎಂದರು. ಬಿಜೆಪಿ ಸದಸ್ಯರು 'ಜೈ ಭೀಮ್, ಜೈ ರಾಮ್' ಎಂದು ಕೂಗಿದರು.

'ಥೂ... ನಿನ್ ಜನ್ಮಕ್ಕೆ'

'ಹಿಂದಿನ ಮುಖ್ಯಮಂತ್ರಿ ಐದು ಸಹಿ ಮಾಡಿದರೆ, ಅವರ ಮಗ 50 ಸಹಿ ಮಾಡುತ್ತಿದ್ದರು. ಅದರಲ್ಲಿ ಸಂಪಾದಿಸಿದ ಆ ಹಣವನ್ನು ವಿಮಾನದಲ್ಲಿ ಎಲ್ಲಿಗೆ ತೆಗೆದುಕೊಂಡು ಹೋದರು ಎಂಬುದರ ತನಿಖೆಗೆ ಎಸ್‌ಐಟಿ ರಚಿಸಬೇಕು' ಎಂದು ಯಡಿಯೂರಪ್ಪ ಮತ್ತು ವಿಜಯೇಂದ್ರ ಹೆಸರು ಹೇಳದೆ ಕಾಂಗ್ರೆಸ್‌ನ ಪುಟ್ಟಣ್ಣ ಪ್ರಸ್ತಾಪಿಸಿದ್ದು ಕೋಲಾಹಲಕ್ಕೆ ಕಾರಣವಾಯಿತು.

'ರಾಜ್ಯಪಾಲರ ಭಾಷಣಕ್ಕೂ ಆ ವಿಷಯಕ್ಕೂ ಏನು ಸಂಬಂಧ' ಎಂದು ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ವಿಪಕ್ಷ ಉಪನಾಯಕ ಸುನಿಲ್ ವಲ್ಯಾಪುರೆ ಮಧ್ಯಪ್ರವೇಶಿಸಿ, 'ನೀ ಯಾವ್ಯಾವ ಪಾರ್ಟಿಲಿದ್ರಿ, ಹೆಂಗೆ ಬಂದ್ರಿ ಅಂತ ಗೊತ್ತಿದೆ' ಎಂದು ತಿರುಗೇಟು ನೀಡಿದರು.

'ನೀವು ಹೇಗೆ ಬಂದ್ರಿ ಏನು ಅಂತ ನಮಗೆ ಗೊತ್ತು. ಪಕ್ಕದಲ್ಲೇ ವಿಶ್ವನಾಥ್ ಇದ್ದಾರೆ ಅವರನ್ನೇ ಕೇಳಿ' ಎಂದ ಪುಟ್ಟಣ್ಣ, 'ಥೂ ನಿನ್ ಜನ್ಮಕ್ಕೆ' ಎಂಬ ಪದ ಬಳಸಿದ್ದು ವಿಪಕ್ಷ ಸದಸ್ಯರನ್ನು ಕೆರಳಿಸಿತು.

ಲೋಕಸೇವಾ ಆಯೋಗ ಸ್ವಚ್ಛಗೊಳಿಸಲು ಸದನದಲ್ಲಿ ಪಕ್ಷಾತೀತವಾಗಿ ಒತ್ತಾಯ

ಕೆಪಿಎಸ್‌ಸಿಗೆ ಆರಂಭಿಕ ಚಿಕಿತ್ಸೆ: ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸುಧಾರಣೆ ತರುವ ಉದ್ದೇಶದ 'ಕರ್ನಾಟಕ ಲೋಕಸೇವಾ ಆಯೋಗ (ವ್ಯವಹಾರ ನಿರ್ವಹಣೆ ಮತ್ತು ಹೆಚ್ಚುವರಿ ಪ್ರಕಾರ್ಯಗಳು) ತಿದ್ದುಪಡಿ ಮಸೂದೆ'ಯು ಸುದೀರ್ಘ ಚರ್ಚೆಯ ಬಳಿಕ ವಿಧಾನಸಭೆಯಲ್ಲಿ ಮಂಗಳವಾರ ಅಂಗೀಕಾರ ಪಡೆಯಿತು.

ಮುಖ್ಯಮಂತ್ರಿಯವರ ಪರವಾಗಿ ಮಸೂದೆಯನ್ನು ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು, 'ಸಂಪೂರ್ಣ ಹದಗೆಟ್ಟಿರುವ ಕೆಪಿಎಸ್‌ಸಿಗೆ ತಕ್ಷಣದ 'ಚಿಕಿತ್ಸೆ' ನೀಡುತ್ತಿದ್ದೇವೆ. ಆಯೋಗದ ಕಾರ್ಯವೈಖರಿಯ ಬಗ್ಗೆ ಮುಖ್ಯಮಂ-ತ್ರಿಯವರೂ ಅಸಂತೋಷಗೊಂಡಿ-ದ್ದಾರೆ. ಹೈಕೋರ್ಟ್‌ನಲ್ಲಿ ನ್ಯಾಯಾಧೀಶ ಕೃಷ್ಣದೀಕ್ಷಿತ್ ಅವರು ಆಯೋಗದ ಬಗ್ಗೆ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಅವರು ತೂಕದಿಂದ ಕೂಡಿದ ಸತ್ಯವಾದ ಮಾತುಗಳನ್ನೇ ಹೇಳಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ' ಎಂದರು.

'ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಕೆಲವು ನಿಬಂಧನೆಗಳಿವೆ. ಹೀಗಾಗಿ ಯಾವುದೇ ಕ್ರಮ ತೆಗೆದುಕೊಳ್ಳಲು ಸರ್ಕಾರ ಸ್ವತಂತ್ರವಲ್ಲ, ದುರ್ಬಲ ಎನಿಸಿದೆ. ಈಗ ನಾವು ಮಾಡಿರುವ ತಿದ್ದುಪಡಿಗಳಿಂ-ದಾಗಿ ಕೆಲವು ನಿಯಂತ್ರಣ ಕ್ರಮಗಳನ್ನು ಜರುಗಿಸಲು ಸಾಧ್ಯವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ರಾಜಕಾರಣಿಗಳು ತಪ್ಪು ಮಾಡಿದಾಗ ಆತ್ಮಸಾಕ್ಷಿಗೆ ಅನುಗುಣವಾಗಿ ರಾಜೀನಾಮೆ ಕೇಳಲಾಗುತ್ತದೆ. ಪರೀಕ್ಷೆಗ-ಳಲ್ಲಿ ಅಕ್ರಮ ನಡೆಸುವವರು, ಸರಿಯಾದ ಸಮಯದಲ್ಲಿ ಪರೀಕ್ಷೆ ನಡೆಸದೇ ಇರುವುದು, ಫಲಿತಾಂಶ ಪ್ರಕಟಿಸದೇ ಇರುವವರು, ತಪ್ಪು ತಪ್ಪು ಪ್ರಶ್ನೆ ಪತ್ರಿಕೆ-ಗಳನ್ನು ಪ್ರಕಟಿಸುವ ಇವರಿಗೆ ಆತ್ಮಸಾಕ್ಷಿ ಇಲ್ಲವೇ' ಎಂದು ಎಚ್.ಕೆ.ಪಾಟೀಲ ಪ್ರಶ್ನಿಸಿದರು.

'ಕೆಪಿಎಸ್‌ಸಿಯವರು (ಅಧ್ಯಕ್ಷ ಮತ್ತು ಸದಸ್ಯರು) ಆತ್ಮಸಾಕ್ಷಿಯಿಂದ ನಡೆದುಕೊಳ್ಳಬೇಕು. ರಾಜೀನಾಮೆ ಕೊಡಬೇಕು ಎಂಬುದು ನಾಡಿನ ಜನರು, ನ್ಯಾಯಾಲಯ ಮತ್ತು ಪತ್ರಿಕೆಗಳ ಅಭಿಪ್ರಾಯ' ಎಂದು ಅವರು ಹೇಳಿದರು.

ಯುಪಿಎಸ್‌ಸಿ ಸೇರಿ ಬೇರೆ ರಾಜ್ಯಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಲೋಕಸೇವಾ ಆಯೋಗದ ಬಗ್ಗೆ ಅಧ್ಯಯನ ನಡೆಸಿ ನಮ್ಮಲ್ಲಿ ಅಳವಡಿಸಿಕೊಳ್ಳಬಹುದು
ತನ್ವೀರ್ ಸೇಠ್, ಕಾಂಗ್ರೆಸ್ ಶಾಸಕ

ಆಪರೇಷನ್ ಥಿಯೇಟರ್‌ನಲ್ಲಿ ರೋಗಿಗೆ ಶಸ್ತ್ರ ಚಿಕಿತ್ಸೆ ಮಾಡುವುದು ಬಿಟ್ಟು ಔಷಧಿ, ಮಾತ್ರೆ ಕೊಟ್ಟು ಕಳಿಸಿದಂತೆ, ಕೆಪಿಎಸ್‌ಸಿಗೆ ಸರ್ಜರಿ ಮಾಡುವ ಬದಲು ಚಿಕಿತ್ಸೆ ನೀಡುತ್ತಿದ್ದೀರಿ
ಆರ್.ಅಶೋಕ, ವಿಪಕ್ಷ ನಾಯಕ

ಕೆಪಿಎಸ್‌ಸಿ ಕನ್ನಡಿಗರಿಗೆ ಶಾಪವಾಗಿದೆ. ಹಿಂದುಳಿದ, ಗ್ರಾಮೀಣ ಭಾಗದ ಯುವಕರು ಸರ್ಕಾರಿ ಸೇವೆಗೆ ಪ್ರವೇಶಿಸದಂತೆ ತಡೆಯುತ್ತಿದೆ. ಭ್ರಷ್ಟ ರಹಿತರನ್ನು ನೇಮಿಸಿ
ಬಸನಗೌಡಪಾಟೀಲ ಯತ್ನಾಳ, ಬಿಜೆಪಿ ಶಾಸಕ

ಕೆಪಿಎಸ್‌ಸಿಗೆ ಮೇಜರ್ ಸರ್ಜರಿಯೇ ಆಗಬೇಕು. ಸಣ್ಣಪುಟ್ಟ ಚಿಕಿತ್ಸೆ ನಾಟುವುದಿಲ್ಲ. ಶುದ್ಧ ಚಾರಿತ್ರ್ಯದ ವ್ಯಕ್ತಿಗಳನ್ನು ನೇಮಿಸಬೇಕು
ಆರಗ ಜ್ಞಾನೇಂದ್ರ, ಬಿಜೆಪಿ ಶಾಸಕ

ಕೆಪಿಎಸ್‌ಸಿ ಭ್ರಷ್ಟಾಚಾರದ ಚಿಲುಮೆ

'ಮೂಲ ಉದ್ದೇಶವನ್ನೇ ಮರೆತಿರುವ ಕೆಪಿಎಸ್‌ಸಿ ಭ್ರಷ್ಟಾಚಾರದ ಚಿಲುಮೆಯಾಗಿದೆ. ಅದನ್ನು ಸ್ವಚ್ಛಗೊಳಿಸುವ ಅಭಿಯಾನದಲ್ಲಿ ಇದೊಂದು ಆರಂಭಿಕ ಹೆಜ್ಜೆ' ಎಂದು ಬಿಜೆಪಿಯ ಎಸ್.ಸುರೇಶ್‌ಕುಮಾರ್ ಹೇಳಿದರು.

'ಉದ್ಯೋಗ ಸೌಧದ ಮುಂದೆ ಪ್ರತಿದಿನ 500ರಿಂದ 1000 ಯುವಕರು ಬಿಸಿಲಿನಲ್ಲಿ ಸಪ್ಪೆ ಮೋರೆ ಹಾಕಿಕೊಂಡು ನಿಂತಿರುತ್ತಾರೆ. ಅಲ್ಲಿ ಇವರನ್ನು ಒಳಗೆ ಬಿಡುವುದಿಲ್ಲ, ಕುಡಿಯುವ ನೀರು ಇರುವುದಿಲ್ಲ. ಅಲ್ಲಿ ಕುಳಿತಿರುವ ಹೊಟ್ಟೆ ತುಂಬಿದವರಿಗೆ ಹಸಿದವರ ಅಳಲು ಗೊತ್ತಾಗುವುದಿಲ್ಲ' ಎಂದು ಅವರು ಕಿಡಿ ಕಾರಿದರು.

'ಯಾವುದೇ ಪಕ್ಷದ ಸರ್ಕಾರ ಇದ್ದರೂ ಅಲ್ಲಿಗೆ ಅಪಾತ್ರರೇ ನೇಮಕಗೊ-ಳ್ಳುತ್ತಿದ್ದಾರೆ. ಕೆಪಿಎಸ್‌ಸಿ ಶುದ್ಧೀಕರಣ ಮಾಡದೇ ಇದ್ದರೆ ಮುಂದಿನ ದಶಕದಲ್ಲಿ ಆತಂಕ ಕಾದಿದೆ. 12 ವರ್ಷಗಳಲ್ಲಿ ಕೇವಲ 3 ಸಲ ಮಾತ್ರ ಕೆಎಎಸ್ ಪರೀಕ್ಷೆ ಮಾಡಿದ್ದಾರೆ. ಹಣ ಕೊಟ್ಟು ಆಯ್ಕೆಯಾಗುವ ಅಭ್ಯರ್ಥಿ ಎಷ್ಟರ ಮಟ್ಟಿಗೆ ಪ್ರಾಮಾ-ಣಿಕನಾಗಿರಲು ಸಾಧ್ಯ' ಎಂದು ಅವರು ಪ್ರಶ್ನಿಸಿದರು.

ಏನೆಲ್ಲಾ ತಿದ್ದುಪಡಿಗಳು

- ಪರೀಕ್ಷಾ ನಿಯಂತ್ರಕ ಮತ್ತು ಜಂಟಿ ಪರೀಕ್ಷಾ ನಿಯಂತ್ರಕರು ಯಾರು ಎಂಬುದನ್ನು ವ್ಯಾಖ್ಯಾನಿಸುವುದು
- ಆಯೋಗ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಆಗುವ ವಿಳಂಬ ತಡೆಯಲು ಸುತ್ತೋಲೆ ಮೂಲಕ ನಿರ್ಣಯ ತೆಗೆದುಕೊಳ್ಳುವ ಪದ್ಧತಿಯನ್ನು ಹಿಂದಕ್ಕೆ ಪಡೆಯುವುದು
- ಆಯೋಗದ ಸಭೆಯಲ್ಲಿ ಅಧ್ಯಕ್ಷರು ಸೇರಿ ಶೇ 50 ರಷ್ಟು ಸದಸ್ಯರಿದ್ದರೆ ಕೋರಂ ಎಂದು ಪರಿಗಣಿಸುವುದು
- ಆಯೋಗವು ಗೊತ್ತು ಮಾಡಿ ಯಾವುದೇ ಒಬ್ಬ ಸದಸ್ಯ ನೇಮಕಾತಿಯ ಸಂದರ್ಶನ (ಮಂಡಳಿ ಅಧ್ಯಕ್ಷತೆ ವಹಿಸಿರುವವನು) ನಡೆಸಬಹುದು

ಅಪರಾಧ ಕೃತ್ಯ ಹೆಚ್ಚಳ: ಅಶೋಕ

ಬೆಂಗಳೂರು: 'ರಾಜ್ಯದಲ್ಲಿ ತಲೆ ತಗ್ಗಿಸುವ ಅಪರಾಧದ ಚಟುವಟಿಕೆಗಳು ನಡೆ-ಯುತ್ತಿದ್ದರೂ ಸರ್ಕಾರ ಯಾರನ್ನೂ ಬಂಧಿಸಿಲ್ಲ. ಇದರಿಂದ ಸರ್ಕಾರ ಬದುಕಿದೆಯೇ ಅಥವಾ ಸತ್ತಿದೆಯೇ? ಹೇಳುವವರು– ಕೇಳುವವರು ಯಾರೂ ಇಲ್ಲವೇ' ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಕಾನೂನು ಮತ್ತು ಸುವ್ಯವಸ್ಥೆಯ ಕುರಿತು ವಿಧಾನಸಭೆಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಡದಿಯಲ್ಲಿರುವ ಟೊಯೋಟಾ ಕಂಪನಿಯ ಶೌಚಾಲಯದ ಗೋಡೆಯ ಮೇಲೆ ಪಾಕಿಸ್ತಾನ ಜಿಂದಾಬಾದ್ ಮತ್ತು ಕನ್ನಡಿಗರನ್ನು ಅವಾಚ್ಯವಾಗಿ ನಿಂದಿಸಿ ಬರೆದ ದುಷ್ಕರ್ಮಿಗಳನ್ನು ಪತ್ತೆ ಮಾಡಿ ಬಂಧಿಸಬೇಕು' ಎಂದು ಆಗ್ರಹಿಸಿದರು.

ಇಂತಹ ಕಿಡಿಗೇಡಿಗಳಿಂದ ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತಿದೆ. ಟೊಯೋಟಾ ಪ್ರತಿಷ್ಠಿತ ಕಂಪನಿಯಾಗಿದ್ದು, ಎಲ್ಲ ಕಡೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇದೆ. ಅದನ್ನು ಪರಿಶೀಲಿಸಿ ತಪ್ಪಿಸ್ಥರನ್ನು ಬಂಧಿಸುವ ಕೆಲಸ ಪೊಲೀಸರು ಮಾಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಭಾವಿ ಸಚಿವರ 'ಹನಿ ಟ್ರ್ಯಾಪ್'ಗೆ ಯತ್ನ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಭಾವಿ ಸಚಿವ-ರೊಬ್ಬರನ್ನು 'ಹನಿ ಟ್ರ್ಯಾಪ್'ಗೆ ಕೆಡವುವ ಪ್ರಯತ್ನ ವಿಫಲವಾಗಿದ್ದು, 'ಹನಿ ಟ್ರ್ಯಾಪ್'ಗೆ ಮುಂದಾಗಿದ್ದ ತಂಡವೇ ಸಚಿವರು ತೋಡಿದ ಖೆಡ್ಡಾಕ್ಕೆ ಬಿದ್ದಿದೆ ಎಂಬ ಸುದ್ದಿ ಮಂಗಳವಾರ ಎಲ್ಲೆಡೆ ಹರಿದಾಡಿತು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಪ್ತರಾಗಿರುವ ಸಚಿವರನ್ನು ಹನಿ ಟ್ರ್ಯಾಪ್‌ಗೆ ಕೆಡವಲು ವಿಧಾನಸೌಧದ ವ್ಯಾಪ್ತಿಯಲ್ಲೇ ಸಂಚು ನಡೆದಿತ್ತು. ಸಚಿವರು ಸ್ವಲ್ಪ ಎಚ್ಚರ ತಪ್ಪಿದ್ದರೂ, ದುಷ್ಟ ತಂಡದ ಬಲೆಗೆ ಬೀಳುವ ಸಾಧ್ಯತೆ ಇತ್ತು. ಸಚಿವರು ಸಕಾಲಕ್ಕೆ ಎಚ್ಚೆತ್ತುಕೊಂಡು ದೊಡ್ಡ ಷಡ್ಯಂತ್ರವನ್ನು ಬಯಲು ಮಾಡಿದ್ದಾರೆ. ಜತೆಗೆ, ಅವರಿಗೆ ತಕ್ಕ ಪಾಠ ಕಲಿಸಿದ್ದಾರೆ' ಎಂಬ ಸುದ್ದಿ ಕಾಂಗ್ರೆಸ್ ವಲಯದಲ್ಲೂ ಜೋರು ಸದ್ದು ಮಾಡಿದೆ. ವಿಧಾನ ಮಂಡಲದ ಉಭಯ ಸದನಗಳ ಮೊಗಸಾಲೆಯಲ್ಲೂ ಈ ಬಗ್ಗೆ ಚರ್ಚೆ ನಡೆದಿತ್ತು.

ಈ ಹನಿ ಟ್ರ್ಯಾಪ್ ಪ್ರಯತ್ನದ ಹಿಂದೆ ಪ್ರಭಾವಿ ನಾಯಕರೊಬ್ಬರು ಇದ್ದಾರೆ. ಸಿದ್ದರಾಮಯ್ಯ ಪರವಾಗಿ ನಿರಂತರ ಹೇಳಿಕೆ ನೀಡುತ್ತಿದ್ದ ಅವರ ಸಂಪುಟದ ಪ್ರಮುಖ ಸಚಿವರನ್ನು ಹೇಗಾದರೂ ಮಾಡಿ ಮೌನವಾಗಿಸಲು ಇಂತಹ ತಂತ್ರ ರೂಪಿಸಲಾಗಿದೆ ಎನ್ನಲಾಗಿದ್ದು, ಹನಿ ಟ್ರ್ಯಾಪ್‌ನಿಂದ ತಪ್ಪಿಸಿಕೊಂಡ ಸಚಿವರೇ ಘಟನೆಯ ವಿವರವನ್ನು ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಹೈಕಮಾಂಡ್‌ಗೂ ತಲುಪಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ, 'ಈಚಿನ ದಿನಗಳಲ್ಲಿ ಇದೊಂದು ಉದ್ಯೋಗವಾಗಿದೆ. ರಾಜಕಾರಣದಲ್ಲಿ ಇಂಥವು ನಡೆಯುತ್ತಾ ಇರುತ್ತವೆ' ಎಂದರು.

ಇಂತಹ ಪ್ರಕರಣ ನಡೆದಿರುವುದು ಸತ್ಯವಾದರೆ ಅದಕ್ಕೆ ಕ್ಷಮೆಯೇ ಇಲ್ಲ. ಅಂಥವರ ವಿರುದ್ಧ ಕಾನೂನು ಕ್ರಮ ಅನಿವಾರ್ಯ
ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

ಕರ್ನಾಟಕ ಸುಸಂಸ್ಕೃತ ರಾಜ್ಯ, ಇತರರಿಗೆ ಮಾದರಿ ಆಗಿದ್ದೆವು. ಸಿ.ಡಿ. ಯೂನಿಟ್‌ನಿಂದ ಕೆಟ್ಟ ಹೆಸರು ಬಂದಿದೆ. ಇಂತಹ ರಾಜಕಾರಣಕ್ಕೆ ಛೀಮಾರಿ ಹಾಕಬೇಕು
ಬಿ.ಕೆ. ಹರಿಪ್ರಸಾದ್
ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಎಚ್.ಎಂ. ರೇವಣ್ಣ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ. ರೇವಣ್ಣ ಅವರು ತಮ್ಮ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿದ್ದಾರೆ' ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತೆ ನಂದಿನಿ ನಾಗರಾಜ್ ಅವರು ಹೈಗ್ರೌಂಡ್ಸ್ ಪೊಲೀಸ್ ಠಾಣೆ ಹಾಗೂ ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ.

ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರಿಗೆ ಮಂಗಳವಾರ ದೂರು ನೀಡಿರುವ ನಂದಿನಿ, 'ರೇವಣ್ಣ ಅವರು ನನ್ನನ್ನು ಅವಾಚ್ಯ ಪದಗಳಿಂದ ನಿಂದಿಸಿ, ಹಲ್ಲೆ ಮಾಡಿದ್ದಾರೆ. ದಲಿತ ಮಹಿಳೆಯಾದ ನನಗೆ ನ್ಯಾಯ ಒದಗಿಸಬೇಕು' ಎಂದು ಮನವಿ ಮಾಡಿದ್ದಾರೆ.


ಎಚ್.ಎಂ. ರೇವಣ್ಣ

ನಾಗಲಕ್ಷ್ಮಿ ಚೌಧರಿ ಅವರು ಮಾತನಾಡಿ, 'ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ, ವರದಿ ನೀಡುವಂತೆ ಸ್ಥಳೀಯ ಡಿಸಿಪಿಗೆ ಪತ್ರ ಬರೆಯಲಾ ಗುವುದು. ಮಹಿಳಾ ಆಯೋಗದಲ್ಲಿ ಪಕ್ಷಗಳ ವಿಚಾರ ಬರುವುದಿಲ್ಲ. ಇಲ್ಲಿ ಹೆಣ್ಣು ಎಂಬುದು ಮಾತ್ರ ಮುಖ್ಯ, ಮಹಿಳೆಗೆ ನ್ಯಾಯ ಒದಗಿಸುವ ಕೆಲಸ ಮಾಡುತ್ತೇವೆ. ರೇವಣ್ಣ ಅವರಿಗೂ ಪತ್ರ ಬರೆದು ಸ್ಪಷ್ಟನೆ ಕೇಳುತ್ತೇನೆ' ಎಂದು ತಿಳಿಸಿದರು.

'ಪ್ರಕರಣದ ತನಿಖೆ ಕೈಗೊಳ್ಳ-ಬೇಕಾಗಿರುವ ಕಾರಣ, ದೂರಿಗೆ ಸಂಬಂಧಪಟ್ಟಂತೆ ದಾಖಲೆ ಮತ್ತು ಸಾಕ್ಷ್ಯಾಧಾರ ಒದಗಿಸುವಂತೆ ದೂರುದಾರರಿಗೆ ಸೂಚಿಸಿ, ನೋಟಿಸ್ ನೀಡಲಾಗಿದೆ' ಎಂದು ಹೈಗ್ರೌಂಡ್ಸ್ ಠಾಣೆಯ ಪೊಲೀಸರು ತಿಳಿಸಿದರು.

'ಪೊಲೀಸರು ಮತ್ತು ಆಯೋಗಕ್ಕೆ ದೂರು ನೀಡಿದ ಬಳಿಕ ನನಗೆ ಜೀವ ಬೆದರಿಕೆ ಕರೆಗಳು ಬರುತ್ತಿದ್ದು, ರೇವಣ್ಣ ಪ್ರಭಾವಿ ವ್ಯಕ್ತಿಯಾಗಿರುವುದರಿಂದ ನನಗೆ ರಕ್ಷಣೆ ಒದಗಿಸಬೇಕು' ಎಂದು ನಂದಿನಿ ಮನವಿ ಮಾಡಿದ್ದಾರೆ.

ಪ್ರಕರಣದ ಹಿನ್ನೆಲೆ: 'ಕುಮಾರಕೃಪಾ ಅತಿಥಿಗೃಹದಲ್ಲಿದ್ದ ಎಚ್.ಎಂ. ರೇವಣ್ಣ ಅವರನ್ನು ಭೇಟಿಮಾಡಲು ಹೋಗಿದ್ದೆ. ಆಗ ನನಗೆ ಜಾತಿ ನಿಂದನೆ ಮಾಡಿದ್ದಾರೆ. ಈ ಬಗ್ಗೆ ಪ್ರಶ್ನಿಸಿದಾಗ ನನ್ನ ಮೇಲೆ ಹಲ್ಲೆ ಮಾಡಿ, ನನ್ನ ಬೆರಳು ಮುರಿದಿದ್ದಾರೆ' ಎಂದು ನಂದಿನಿ ದೂರಿನಲ್ಲಿ ಆರೋಪಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಕುರಿ ಕಾಯಲು ತೋಳ ನೇಮಕ'

ಬೆಂಗಳೂರು: ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಮಿತಿಗಳನ್ನು ನೇಮಕ ಮಾಡಿರುವ ರಾಜ್ಯ ಸರ್ಕಾರದ ಕ್ರಮ 'ಕುರಿ ಕಾಯಲು ತೋಳಗಳನ್ನು ನೇಮಿಸಿದಂತೆ' ಆಗಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತಾನಾಡಿದ ಅವರು, ಗ್ಯಾರಂಟಿ ಯೋಜನೆಗಳ ಆಸೆ ತೋರಿಸಿ, ಜನರನ್ನು ಕೆಲಸಕ್ಕೆ ಹೋಗದಂತೆ ಮಾಡಲಾಗಿದೆ. ದಿನಕ್ಕೆ ₹1 ಸಾವಿರ ದುಡಿಯುತ್ತಿದ್ದ ಜನರು ಗ್ಯಾರಂಟಿ ಹಣಕ್ಕಾಗಿ ಕಾದು ಕುಳಿತುಕೊಂಡಿದ್ದಾರೆ. ಅತ್ತ ದುಡಿಮೆಯೂ ಇಲ್ಲದೆ, ಇತ್ತ ಯೋಜನೆಗಳ ಹಣವೂ ಸರಿಯಾಗಿ ದೊರಕದೆ ಪರಿತ-ಪಿಸುವಂತಾಗಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳ-ಲಾಗುತ್ತಿದೆ. ಪರಿಶಿಷ್ಟರ ಬಗ್ಗೆ ನಿಜವಾದ ಕಾಳಜಿ ಇದ್ದರೆ ಈಗ ನೀಡುತ್ತಿರುವ ಗ್ಯಾರಂಟಿ ಹಣವನ್ನು ದ್ವಿಗುಣ ಮಾಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ನಸೀರ್ ಅಹಮದ್ ಮಾತನಾಡಿ, ಬಿಜೆಪಿ ಮತ್ತು ಜೆಡಿಎಸ್ ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡುತ್ತಿವೆ. ಆ ಮೂಲಕ ಜನರ ವಿಶ್ವಾಸವನ್ನು ಸಂಪೂರ್ಣ ಕಳೆದುಕೊಳ್ಳುತ್ತಿವೆ ಎಂದರು.

ಶಾಸಕರಿಗೆ ಅಗೌರವ: ಹಕ್ಕು ಬಾಧ್ಯತಾ ಸಮಿತಿಗೆ

ಬೆಂಗಳೂರು: ಕಾಂಗ್ರೆಸ್ ಶಾಸಕ ರಾಜು ಕಾಗೆ ಮತ್ತು ಬಿಜೆಪಿ ಶಾಸಕ ಬಸವರಾಜ ಮತ್ತಿಮಡು ಅವರಿಗೆ ಅಧಿಕಾರಿಗಳು ಅಗೌರವ ತೋರಿಸಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ ವಿಧಾನ-ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಎರಡೂ ಪ್ರಕರಣಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸುವುದಾಗಿ ರೂಲಿಂಗ್ ನೀಡಿದರು.

ವಿಧಾನಸಭೆಯಲ್ಲಿ ಮಂಗಳವಾರ ಇಬ್ಬರೂ ಶಾಸಕರು ತಮಗಾದ ಕಹಿ ಅನುಭವವನ್ನು ಸದನದ ಮುಂದೆ ಬಿಚ್ಚಿಟ್ಟರು. ಮೂರು ಪಕ್ಷಗಳ ಶಾಸಕರೂ, ಈ ಪ್ರಕರಣಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.

ಆಗ ಮಧ್ಯಪ್ರವೇಶಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ, 'ಬಾಧಿತ ಶಾಸಕರು, ಸಂಬಂಧಿಸಿದ ಅಧಿಕಾರಿಗಳು, ಕಂದಾಯ ಸಚಿವರು ಮತ್ತು ಹಕ್ಕುಚ್ಯುತಿ ಸಮಿತಿ ಅಧ್ಯಕ್ಷ ಸಿ.ಸಿ.ಪಾಟೀಲರನ್ನು ಕರೆಸಿ ಮುಂದಿನ ನಿರ್ಣಯ ಕೈಗೊಳ್ಳಬೇಕು' ಎಂದು ಸಭಾಧ್ಯಕ್ಷರಿಗೆ ಸಲಹೆ ನೀಡಿದರು. ಯಾವುದೇ ಸದಸ್ಯರೂ ಅದನ್ನು ಒಪ್ಪಲಿಲ್ಲ.

ಸಚಿವರ ಸಲಹೆಯನ್ನು ಒಪ್ಪದ ಸಭಾಧ್ಯಕ್ಷ ಖಾದರ್ ಅವರು, 'ಶಾಸಕರನ್ನು ಅವಮಾನ ಮಾಡಿದ ಘಟನೆ ಗಂಭೀರವಾದುದು. ಐಎಎಸ್ ಇರಲಿ ಯಾರೇ ಇರಲಿ ಶಾಸಕರಿಗೆ ಗೌರವ ಕೊಡಬೇಕು. ಶಾಸಕರು ಹೇಳಿದ ಕೆಲಸ ಮಾಡುವುದು ಬಿಡುವುದು ಬೇರೆ ವಿಚಾರ. ಆದರೆ, ಅವಮಾನ ಆಗುವಂತೆ ನಡೆದುಕೊಳ್ಳುವುದನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ಹಕ್ಕುಬಾಧ್ಯತಾ ಸಮಿತಿಗೆ ಪ್ರಕರಣಗಳನ್ನು ಒಪ್ಪಿಸುತ್ತೇನೆ. ಆದಷ್ಟು ಬೇಗ ತೀರ್ಪು ನೀಡಬೇಕು' ಎಂದು ರೂಲಿಂಗ್ ನೀಡಿದರು.

ಉದ್ಯೋಗ ವಾಣಿ

VIDYAVARDHAKA SANGHA (REGD), Mysuru
VIDYAVARDHAKA COLLEGE OF ENGINEERING
Autonomous Institute, Accredited by NBA & NAAC, with "A" Grade
Gokulam 3rd Stage Mysuru-02, | Ph : (0821) 4276200
Call For Full Time Ph.D Research Scholars
Candidates who have cleared Ph.D. entrance examination conducted by VTU may apply for pursuing full-time Ph.D. in the following research centres of this college:
ME, Civil Engg., CS&E, E&CE, E&EE, Chemistry, Physics, Mathematics and Master of Business Administration.
Eligibility: Candidates with valid VTU-ETR score (valid for two years).
Fellowship of Rs.25,000/- per month is given. Age: Less than 30 years
For further details and to apply visit:
https://vvce.ac.in/careers

Dr. AMBEDKAR INSTITUTE OF TECHNOLOGY
(AIDED BY GOVT.OF. KARNATAKA)
Near Jnana Bhatrathi BDA outer ring road Mallathahalli,Bengaluru-560056
Ph:080-232112232, Fax:080-23217789, Mail Id:principal@dr-ait.org.
DR.AIT/EST/ 3303 /2025-26 Date:19.03.2025
APPOINTMENTS (Un-Aided)
Application are invited for the following posts from the Eligible candidates.
1.Administrator and 2. Managers for Administrative Office.
Qualification: Sl No.1: Degree in any discipline with Experience, Ex-Service Personnel will be preferred. Sl No.2: Degree/Master's Degree in any discipline/MBA with relevant experience.
Eligible candidates are advised to get the details from the college website www.drait.edu.in. The last date for submission of application is 01.04.2025 on or before 4.30pm.
Sd/- Principal
Sd/- Managing Trustee/Secretary

WE ARE HIRING!
Jai a market leader in wood-working machineries is seeking the following professionals immediately.
Jai For now. Forever.
1. **SALES EXECUTIVE :** The candidate should have 2-3 years of experience in Sales & Marketing of capital equipments. Candidate who are BE / Diploma in Mechanical Engineering will have added advantage.
2. **SERVICE ENGINEER :** Candidates are required for machine maintenance and installation on field and off field. Candidates should be BE/Diploma/ITI in Mechanical or electrical engineering, Candidates with Mechatronic or electronic engineering will have added advantage.

Interested candidates may apply with their detailed C.V. to M.R. Manager, E-mail : hrd@jaiindustries.com M : 97236 73349
Bangalore Office : #155, 3rd Phase, 10th Main Rd, Peenya Industrial Area, Peenya, Bangalore - 560 058 Ph : 079 2291 1400 / 1900 Web : www.JAIindustries.com

ಖಾಸಗಿ ವಾಹನಗಳ ಸಂಚಾರ ನಿಯಂತ್ರಣಕ್ಕೆ ಬೆಂಗಳೂರು ವಿವಿ ಒತ್ತಾಯ

ವಾಹನಗಳ ಭರಾಟೆ ಶೈಕ್ಷಣಿಕ ಚಟುವಟಿಕೆಗೆ ಕಿರಿಕಿರಿ

ಬೆಂಗಳೂರು ವಿಶ್ವವಿದ್ಯಾಲಯದ ಆವರಣ ಪ್ರವೇಶಿಸಲು ಜ್ಞಾನಭಾರತಿ ಮೆಟ್ರೊ ನಿಲ್ದಾಣದ(ಮೈಸೂರು ರಸ್ತೆ) ಸಿಗ್ನಲ್‌ನಲ್ಲಿ ನಿಂತಿರುವ ವಾಹನಗಳು ಪ್ರಜಾವಾಣಿ ಚಿತ್ರ

ಸುರಂಗ ರಸ್ತೆ; ಚರ್ಚೆ ಹಂತದಲ್ಲಿದೆ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ವಾಹನಗಳ ದಟ್ಟಣೆ, ಅಪಘಾತ ಪ್ರಕರಣಗಳನ್ನು ತಪ್ಪಿಸಲು ಸುರಂಗ ರಸ್ತೆ (ಅಂಡರ್ ಪಾಸ್) ನಿರ್ಮಿಸುವ ಕುರಿತು ಉನ್ನತ ಶಿಕ್ಷಣ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಚಿಂತನೆ ನಡೆಸಿದ್ದವು. ಅದಿನ್ನೂ ಚರ್ಚೆ ಹಂತದಲ್ಲೇ ಇದೆ. ಅಪಘಾತ ತಪ್ಪಿಸಲು ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಆವರಣದ ರಸ್ತೆಗಳನ್ನು ಬಂದ್ ಮಾಡಲಾಗುತ್ತಿದೆ. ಮೈಸೂರು ರಸ್ತೆ–ಉಲ್ಲಾಳು ವೃತ್ತ ಸಂಪರ್ಕಿಸುವ ಮುಖ್ಯ ರಸ್ತೆ ಮಾತ್ರ ತೆರೆದಿರುತ್ತದೆ. ಆದರೆ, ಇದರಿಂದ ಕಾಲೇಜು ಅವಧಿಯಲ್ಲಿ ಉಂಟಾಗುವ ವಾಹನ ದಟ್ಟಣೆ ಸಮಸ್ಯೆ ಬಗೆಹರಿಯುವುದಿಲ್ಲ ಎನ್ನುತ್ತಾರೆ ಸಿಬ್ಬಂದಿ.

• ಗಾಣಧಾಳು ಶ್ರೀಕಂಠ

ಬೆಂಗಳೂರು: 'ಸಂಚಾರ ದಟ್ಟಣೆ ತಪ್ಪಿಸಿಕೊಳ್ಳುವುದಕ್ಕಾಗಿ ವಾಹನಗಳೆಲ್ಲ ಮುಖ್ಯರಸ್ತೆಯಿಂದ ವಿಶ್ವವಿದ್ಯಾಲಯದ ರಸ್ತೆಗೆ ತಿರುಗುತ್ತವೆ. ಹೆಚ್ಚಾದ ವಾಹನಗಳ ಸಂಚಾರ ಶಬ್ದ, ವಾಯು ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಕ್ಯಾಂಪಸ್‌ನಲ್ಲಿ ನೆಮ್ಮದಿಯಾಗಿ ಕಲಿಯುವುದೇ ಕಷ್ಟವಾಗಿದೆ...'

ಜ್ಞಾನಭಾರತಿ ಆವರಣದಲ್ಲಿ ನಿತ್ಯ ಉಂಟಾಗುತ್ತಿರುವ ಸಂಚಾರ ದಟ್ಟಣೆಯ ಕಿರಿಕಿರಿಯಿಂದ ಬೇಸತ್ತಿರುವ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಸಿಬ್ಬಂದಿಯ ಅಸಹಾಯಕ ನುಡಿಗಳಿವು.

ನಿತ್ಯ ಬೆಳಿಗ್ಗೆ 8 ರಿಂದ 11.30ವರೆಗೆ ಹಾಗೂ ಸಂಜೆ 5.30 ರಿಂದ 7 ಗಂಟೆಯವರೆಗೂ ವಿಶ್ವ ವಿದ್ಯಾಲಯದ ಆವರಣದಲ್ಲಿ ವಾಹನ ಸಂಚಾರ ಹೆಚ್ಚಾಗುತ್ತದೆ. ಬೆಳಿಗ್ಗೆ ವಿದ್ಯಾರ್ಥಿಗಳು ತರಗತಿಗಳಿಗೆ ತೆರಳುವ ವೇಳೆ, ರಸ್ತೆ ದಾಟುವುದೇ ಕಷ್ಟವಾಗುತ್ತದೆ. ಇದೇ ಅವಧಿಯಲ್ಲಿ ಪ್ರಾಯೋಗಿಕ ಹಾಗೂ ಥಿಯರಿ ತರಗತಿಗಳು ನಡೆಯುತ್ತಿರುತ್ತವೆ. ವಾಹನಗಳು ಹೊಮ್ಮಿಸುವ ಶಬ್ದದಿಂದ ಕಲಿಕಾ ಚಟುವಟಿಕೆಗೆ ಕಿರಿಕಿರಿಯಾಗುತ್ತಿದೆ ಎನ್ನುತ್ತಾರೆ ವಿದ್ಯಾರ್ಥಿಗಳು.

'47 ವಿಭಾಗಗಳು ಸುಮಾರು 6 ಸಾವಿರ ವಿದ್ಯಾರ್ಥಿಗಳು, ಸಾವಿರಕ್ಕೂ ಹೆಚ್ಚಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಿರುವ ವಿಶ್ವ ವಿದ್ಯಾಲಯ ಆವರಣದಲ್ಲಿ ಹಲವು ರಸ್ತೆಗಳು, ವೃತ್ತಗಳಿವೆ. ಇಲ್ಲೆಲ್ಲ ವಾಹನಗಳ ಸಂಚಾರ ಚಿಹ್ನೆಗಳ ಕೊರತೆಯಿದೆ. ಎರಡೂ ಜಂಕ್ಷನ್‌ಗಳಿಂದ(ಉಲ್ಲಾಳು–ಮೈಸೂರು ರಸ್ತೆ) ವಾಹನಗಳು ವೇಗವಾಗಿ ಸಾಗುತ್ತವೆ. ರಸ್ತೆ ದಾಟುವಾಗ ಅಪಘಾತಗಳು ಸಂಭವಿಸಿವೆ. ವಾಹನ ಸಂಚಾರ ಹೆಚ್ಚಾಗುವ ವೇಳೆಯಲ್ಲಿ ಅವುಗಳನ್ನು ನಿಯಂತ್ರಿಸಿ, ವಿದ್ಯಾರ್ಥಿಗಳನ್ನು ರಸ್ತೆ ದಾಟಿಸುವ ವ್ಯವಸ್ಥೆಯೂ ಇಲ್ಲ' ಎಂದು ವಿದ್ಯಾರ್ಥಿನಿಯೊಬ್ಬರು ಸಮಸ್ಯೆಯ ಮೂಲದತ್ತ ಬೊಟ್ಟು ಮಾಡಿದರು.

ಪರ್ಯಾಯ ಮಾರ್ಗ: ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ರಸ್ತೆ, ಹೊರ ವರ್ತುಲ ರಸ್ತೆ, ನಾಗರಬಾವಿ ಮುಖ್ಯರಸ್ತೆ ಮತ್ತು ಮರಿಯಪ್ಪನಪಾಳ್ಯ, ಜ್ಞಾನಭಾರತಿ ಸೇರಿದಂತೆ ಹಲವು ಜನವಸತಿ ನಗರ ಪ್ರದೇಶಗಳಿಗೆ ಹೊಂದಿಕೊಂಡಿದೆ. ಈ ವಸತಿ ಪ್ರದೇಶಗಳ ನಾಗರಿಕರು ಮೈಸೂರು ರಸ್ತೆ ತಲುಪಲು ವಿಶ್ವವಿದ್ಯಾಲಯದ ಮಾರ್ಗವನ್ನು ಬಳಸುತ್ತಾರೆ. ಇನ್ನೊಂದೆಡೆ, ಜ್ಞಾನಭಾರತಿ ಮೆಟ್ರೊ ನಿಲ್ದಾಣದ ಬಳಿ ಅಥವಾ ಉಲ್ಲಾಳ ಜಂಕ್ಷನ್, ನಾಗರಬಾವಿ ಸರ್ಕಲ್ ಬಳಿ ಸಂಚಾರ ದಟ್ಟಣೆ ಹೆಚ್ಚಾದಾಗ ಪರ್ಯಾಯ ಮಾರ್ಗವಾಗಿ ವಿಶ್ವ ವಿದ್ಯಾಲಯದ ದಾರಿಯಲ್ಲಿ ಸಾಗಿ, ಮುಂದೆ ಮುಖ್ಯ ರಸ್ತೆ ಸೇರಿಕೊಳ್ಳುತ್ತಾರೆ. ಇದರಿಂದಲೂ ವಿದ್ಯಾಲಯದ ಒಳಗಿನ ರಸ್ತೆಯಲ್ಲಿ ವಾಹನಗಳ ಓಡಾಟ ಹೆಚ್ಚಾಗುತ್ತಿದೆ.

ಸುಮಾರು 1200 ಎಕರೆ ವಿಸ್ತೀರ್ಣವಿರುವ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಕೇಂದ್ರಗಳ ಜೊತೆಗೆ, ಜೀವವೈವಿಧ್ಯ ಉದ್ಯಾನವಿದೆ. ಅನೇಕ ಪಕ್ಷಿ, ಪ್ರಾಣಿಗಳು, ಸಸ್ಯ ಸಂಕುಲಗಳಿವೆ. ವಿಶ್ವವಿದ್ಯಾಲಯದಲ್ಲಿ ಪ್ರತಿ ನಿತ್ಯ ಸುಮಾರು 25 ರಿಂದ 30 ಸಾವಿರ ವಾಹನಗಳು ಸಂಚರಿಸುತ್ತವೆ ಎಂದು ಅಂದಾಜಿಸಲಾಗಿದೆ. 'ಅತಿಯಾದ ವಾಹನ ಸಂಚಾರದಿಂದ ಶೈಕ್ಷಣಿಕ ಚಟುವಟಿಕೆಗೆ ಅಲ್ಲದೇ, ಪರಿಸರ, ಜೀವವೈವಿಧ್ಯಕ್ಕೂ ಹಾನಿಯಾಗುತ್ತದೆ' ಎನ್ನುತ್ತಾರೆ ಪರಿಸರ ವಿಜ್ಞಾನ ವಿಭಾಗದ ಉಪನ್ಯಾಸಕ ಡಿ.ಪರಮೇಶ ನಾಯ್ಕ.

'ತರಗತಿಗಳಿಗೆ ತೆರಳಲು ಸಹ ಸಮಸ್ಯೆ'

ಭಾರಿ ಸರಕು ವಾಹನಗಳನ್ನು ನಿಷೇಧಿಸಲಾಗಿದೆ. ಆದರೂ ಟ್ರಾಫಿಕ್ ಸಮಸ್ಯೆ ಇದೆ. ವಿದ್ಯಾರ್ಥಿಗಳು ತರಗತಿಗಳಿಗೆ ತೆರಳಲು ಸಮಸ್ಯೆಯಾಗುತ್ತದೆ. ಈ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೊತೆಯೂ ಚರ್ಚಿಸಿದ್ದೇವೆ. ಅವರು ಶಾಶ್ವತ ಪರಿಹಾರದ ಕುರಿತು ಭರವಸೆ ನೀಡಿದ್ದಾರೆ. ದಟ್ಟಣೆ ಸಮಸ್ಯೆ ಬಗೆಹರಿದರೆ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗಲಿದೆ.

ಜಯಕರ ಎಸ್.ಎಂ, ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

'ಖಾಸಗಿ ವಾಹನ ಸಂಚಾರ ನಿರ್ಬಂಧಿಸಬೇಕು'

ವಿಶ್ವವಿದ್ಯಾಲಯದಲ್ಲಿ ವಾಹನಗಳ ಓಡಾಟ ಹೆಚ್ಚಾಗಿರುವುದರಿಂದ ವಿದ್ಯಾರ್ಥಿಗಳಿಗೆ ತರಗತಿಗಳಿಗೆ ತೆರಳಲು ಸಮಸ್ಯೆಯಾಗುತ್ತದೆ. ಹಾಸ್ಟೆಲ್ ರಸ್ತೆಗಳಲ್ಲಿ ತಡರಾತ್ರಿ ಖಾಸಗಿ ವಾಹನಗಳ ಸಂಚಾರದಿಂದ ವಿದ್ಯಾರ್ಥಿನಿಯರಲ್ಲಿ ಆತಂಕ ಮೂಡಿಸುತ್ತದೆ. ಅಲ್ಲದೇ ಕಾರುಗಳಲ್ಲಿ ಬಂದು ವಿಶ್ವವಿದ್ಯಾಲಯದ ಆವರಣದಲ್ಲಿ ಕಸ ಎಸೆಯುವಂತಹ ಘಟನೆಗಳು ನಡೆಯುತ್ತಿವೆ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯ ಆವರಣದಲ್ಲಿ ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಬೇಕು

ಸುಗುಣ, ಸಂಶೋಧನಾ ವಿದ್ಯಾರ್ಥಿನಿ, ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಸಾಗುತ್ತಿರುವ ವಾಹನಗಳು

2022ರಲ್ಲಿ ಗಣಿತಶಾಸ್ತ್ರದ ಸ್ನಾತಕೋತ್ತರ ವಿದ್ಯಾರ್ಥಿನಿ ಮೇಲೆ ಬಿಎಂಟಿಸಿ ಬಸ್ ಹರಿದು ಮೃತಪಟ್ಟಿದ್ದರು. ಈ ಸಂಬಂಧ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಾರ್ವಜನಿಕ ವಾಹನ ನಿಷೇಧಿಸುವಂತೆ ಪ್ರತಿಭಟಿಸಿದ್ದರು. ಆದರೂ ನಿರ್ಬಂಧ ಸಾಧ್ಯವಾಗಿಲ್ಲ ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸುತ್ತಾರೆ.

'ಈ ವಿಶ್ವವಿದ್ಯಾಲಯಕ್ಕೆ ಹೊಂದಿಕೊಂಡಂತೆ ಬಡಾವಣೆಗಳಿವೆ. ಮುಖ್ಯ ರಸ್ತೆ ತಲುಪಲು ಸುಲಭ ಹಾಗೂ ಸಮಯ ಉಳಿತಾಯವಾಗುವುದರಿಂದ ಸಾರ್ವಜನಿಕರು ವಿಶ್ವವಿದ್ಯಾಲಯದ ರಸ್ತೆಯನ್ನೇ ಅವಲಂಬಿಸಿದ್ದಾರೆ' ಎಂದು ಜ್ಞಾನಭಾರತಿ ಬಡಾವಣೆಯ ನಿವಾಸಿಗಳು ಹೇಳುತ್ತಾರೆ.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಹಟ್ಟಿಯವರು ವಿಶ್ವ ವಿದ್ಯಾಲಯ ಆವರಣದಲ್ಲಿನ ಸಂಚಾರ ದಟ್ಟಣೆಯ ಸಮಸ್ಯೆ ಬಗೆಹರಿಸುವಂತೆ ಮುಖ್ಯಮಂತ್ರಿ ಹಾಗೂ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದರು. ಇದಾದ ನಂತರ, ಬೆಂಗಳೂರು ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು, ವಿಶ್ವವಿದ್ಯಾಲಯದ ಆವರಣದಲ್ಲಿ ಸರಕು ವಾಹನಗಳ ಸಂಚಾರ ನಿಷೇಧಿಸಿ ಆದೇಶ ಹೊರಡಿಸಿದ್ದರು. ಸದ್ಯ ಸರಕು ವಾಹನಗಳನ್ನು ನಿಯಂತ್ರಿಸಿದ್ದರೂ ಸಂಚಾರ ದಟ್ಟಣೆ ಬಗೆ ಹರಿದಿಲ್ಲ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎನ್ನುತ್ತಾರೆ ವಿಶ್ವವಿದ್ಯಾಲಯದ ಸಿಬ್ಬಂದಿ.

ಸುದ್ದಿ 2 ನಿಮಿಷ

ಸಚಿವ ಮಲ್ಲಿಕಾರ್ಜುನ ವಿರುದ್ಧ ಸಭಾಪತಿ ಹೊರಟ್ಟಿ ಸಿಟ್ಟು

ಬೆಂಗಳೂರು: 'ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಗೆ ಬಿಜೆಪಿಯ ಹಣಮಂತ ನಿರಾಣಿ ಅವರನ್ನು ನಾಮನಿರ್ದೇಶನ ಮಾಡುವಂತೆ ವಿಧಾನಪರಿಷತ್‌ನಿಂದ ಪ್ರಸ್ತಾವ ಸಲ್ಲಿಸಿದ್ದರೂ, ಕ್ರಮಕೈಗೊಂಡಿಲ್ಲ. ಈ ಪ್ರಕರಣವನ್ನು ಹಕ್ಕುಚ್ಯುತಿಗೆ ನೀಡುತ್ತೇನೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಎಚ್ಚರಿಸಿದರು.

ಹಣಮಂತ ನಿರಾಣಿ ಮಾತನಾಡಿ, ವಿಧಾನಸಭೆ ಹಾಗೂ ವಿಧಾನಪರಿಷತ್‌ನಿಂದ ತಲಾ ಒಬ್ಬರನ್ನು ನಾಮನಿರ್ದೇಶನ ಮಾಡಲಾಗಿದೆ. ಕಳೆದ ಆಗಸ್ಟ್‌ನಲ್ಲೇ ಪ್ರಸ್ತಾವ ಸಲ್ಲಿಸಿದರೂ, ನಾಮನಿರ್ದೇಶನ ಮಾಡಿಲ್ಲ. ಹಲವು ಬಾರಿ ಅಲೆದರೂ ಆದೇಶ ನೀಡಿಲ್ಲ. ಸಭಾಪತಿ ಪೀಠಕ್ಕೆ ಬೆಲೆ ಇಲ್ಲವೇ ಎಂದು ಪ್ರಶ್ನಿಸಿದರು.

ಅವರ ಪ್ರಶ್ನೆಗೆ ಉತ್ತರಿಸಿದ ತೋಟಗಾರಿಕಾ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, 'ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಮುಖ್ಯಮಂತ್ರಿ ಜತೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು' ಎಂದರು.



'ಯಾಕ್ರಿ ಮಾಡಿಲ್ಲ, ಸದನಕ್ಕೆ ಗೌರವ ಕೊಡೋಕಾಗಲ್ವಾ? ಸಭಾಪತಿ ಆದೇಶ ಕೊಟ್ಟ ಮೇಲೆ ಮುಖ್ಯಮಂತ್ರಿ ಹತ್ತಿರ ಮಾತನಾಡುವುದು ಏನಿದೆ? ತಕ್ಷಣ ಆದೇಶ ಕೊಡಿ, ಇಲ್ಲ ಹಕ್ಕುಚ್ಯುತಿಗೆ ನೀಡುತ್ತೇನೆ' ಎಂದರು.

ಮುಖ್ಯಮಂತ್ರಿಗೆ ನೀವು ಆಪ್ತರು..

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ನಿಮಗೆ ಆಪ್ತರು' ಎಂದ ಜವಳಿ ಸಚಿವ ಶಿವಾನಂದ ಪಾಟೀಲ ವಿರುದ್ಧ ಕಾಂಗ್ರೆಸ್‌ನ ಉಮಾಶ್ರೀ ಕೋಪಗೊಂಡರು.

ವಿಧಾನಪರಿಷತ್‌ನಲ್ಲಿ ಮಾತನಾಡಿದ ಉಮಾಶ್ರೀ, ರೈತರು ಮತ್ತು ನೇಕಾರರು ಒಂದೇ ದೋಣಿಯ ಪಯಣಿಗರು. ರೈತರ ಆತ್ಮಹತ್ಯೆಗೆ ಪರಿಹಾರ ನೀಡುವ ಸರ್ಕಾರ, ನೇಕಾರರು ಆತ್ಮಹತ್ಯೆಗೆ ಪರಿಹಾರ ಏಕೆ ನೀಡುತ್ತಿಲ್ಲ ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಶಿವಾನಂದ ಪಾಟೀಲ, 'ಪರಿಹಾರ ನೀಡಲು ನಿಯಮವಿಲ್ಲ. ಐದು ವರ್ಷಗಳಲ್ಲಿ 51 ನೇಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಖ್ಯಮಂತ್ರಿ ಪರಿಹಾರ ನಿಧಿಯಲ್ಲಿ ಮೃತ 25 ನೇಕಾರರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಲಾಗಿದೆ. ವಿದ್ಯುತ್ ಚಾಲಿತ ನೇಕಾರರಿಗೆ ಈ ಸೌಲಭ್ಯ ಸಿಕ್ಕಿಲ್ಲ. ಈ ಕುರಿತು ಮುಖ್ಯಮಂತ್ರಿ ಜತೆ ಚರ್ಚೆ ಮಾಡಲು ನಿಮ್ಮನ್ನೂ ಕರೆದುಕೊಂಡು ಹೋಗುವೆ. ನೀವು ಅವರಿಗೆ ಆಪ್ತರು' ಎಂದರು.

ಅದಕ್ಕೆ ಕೋಪಗೊಂಡ ಉಮಾಶ್ರೀ 'ನೀವು ಎಲ್ಲವನ್ನೂ ನಮ್ಮ ಮೇಲೆ ಹಾಕುವಿರಿ, ಹಾಗೆ ಮಾತನಾಡಬೇಡಿ, ನಿಮಗಿಂತ ನಾನು ಆಪ್ತಳಲ್ಲ' ಎಂದು ತಿರುಗೇಟು ನೀಡಿದರು.

'ಅಂಗವಿಕಲರ ಮನೆ ಬಾಗಿಲಿಗೆ ಸೌಲಭ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರನ್ನು ಗುರುತಿಸಿ, ಅವರ ಮನೆ ಬಾಗಿಲಿಗೇ ಸೌಲಭ್ಯಗಳನ್ನು ತಲುಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಹೇಳಿದರು.

ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ, ಜಿಲ್ಲಾ ಪುನರ್ವಸತಿ ಕೇಂದ್ರದ, ಜಿಲ್ಲಾ ನಿರ್ವಹಣಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಅಂಗವಿಕಲರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲೇ ತಲುಪಿಸಲಾಗುತ್ತದೆ. ಅವರ ಸರ್ವಾಂಗೀಣ ಅಭಿವೃದ್ಧಿಗಾಗಿ ಜಿಲ್ಲಾ ಪುನರ್ವಸತಿ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಆ ಮೂಲಕ ಸೌಲಭ್ಯ ಪಡೆಯಬಹುದು ಎಂದರು.

ಬೆಂಗಳೂರು ನಗರ ಜಿಲ್ಲಾ ಪುನರ್ವಸತಿ ಯೋಜನೆಯನ್ನು ಕುಮಾರ ಪಾರ್ಕ್ ಟ್ರಸ್ಟ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕೇಂದ್ರದಲ್ಲಿ ತಪಾಸಣಾ ಶಿಬಿರಗಳ ಮೂಲಕ ಅಂಗವಿಕಲರ ಸಮೀಕ್ಷೆ ಹಾಗೂ ಗುರುತಿಸುವಿಕೆ, ವೈಕಲ್ಯವನ್ನು ತಡೆಗಟ್ಟುವುದು, ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ ಕಾರ್ಡ್) ಮಾಡಿಸುವುದು, ಅಗತ್ಯ ಸಾಧನ ಸಲಕರಣೆಗಳನ್ನು ನೀಡುವುದು, ರಿಯಾಯಿತಿ ದರದ ಬಸ್ ಪಾಸ್, ಅಂಗವಿಕಲತೆಯ ನಿವಾರಣಾ ಶಸ್ತ್ರಚಿಕಿತ್ಸೆಗೆ ಮಾಹಿತಿ ನೀಡುವುದು ಹಾಗೂ ಇಲಾಖೆಯ ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸೌಲಭ್ಯಗಳನ್ನು ಪಡೆಯಲು, ಜಿಲ್ಲಾ ಪುನರ್ವಸತಿ ಕೇಂದ್ರ, ಕುಮಾರ ಪಾರ್ಕ್ ಟ್ರಸ್ಟಿ, ದೂರವಾಣಿ 080-41179472 ಅನ್ನು ಸಂಪರ್ಕಿಸಬಹುದು ಎಂದರು.

ಬೆಂಗಳೂರು ನಗರ ಜಿಲ್ಲೆ ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ನಾಯಕ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೃಷ್ಣಮೂರ್ತಿ ಕೆ, ಕುಮಾರ ಪಾರ್ಕ್ ಟ್ರಸ್ಟ್ ಸದಸ್ಯ ಕಾರ್ಯದರ್ಶಿ ರಾಜು ಚಂದ್ರಶೇಖರ್ ಉಪಸ್ಥಿತರಿದ್ದರು.

'ದಶಧರ್ಮ ಸೂತ್ರದಿಂದ ಜೀವನ ವಿಕಸನ'

ಅಜ್ಜಂಪುರ (ಚಿಕ್ಕಮಗಳೂರು): 'ರೇಣುಕಾಚಾರ್ಯರು ಬೋಧಿಸಿದ ಅಹಿಂಸಾದಿ ಧ್ಯಾನ ಪರ್ಯಂತರವಾದ ದಶ ಧರ್ಮ ಸೂತ್ರಗಳು ಜೀವನದ ವಿಕಸನಕ್ಕೆ ಭದ್ರ ಬುನಾದಿಯಾಗಿವೆ' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಗಡಿಗಿರಿಯಪುರದಲ್ಲಿ ಮಂಗಳವಾರ ನಡೆದ 'ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಧರ್ಮ ಜಾಗೃತಿ ಸಮಾರಂಭ'ದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಕಾಯಕ ಮತ್ತು ದಾಸೋಹದ ಮೂಲಕ ಯಶಸ್ಸು ಸಾಧಿಸಬಹುದು ಎಂಬುದನ್ನು ತೋರಿದ, ಸರ್ವರೂ ಸಮಾನರೆಂಬುದನ್ನು ಬೋಧಿಸಿದ ಕೀರ್ತಿ ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಡಿ.ಎಸ್. ಸುರೇಶ್‌ಕಾರ್ಯಕ್ರಮ ಉದ್ಘಾಟಿಸಿದರು.

ಪರಿಶಿಷ್ಟರು, ಹಿಂದುಳಿದವರು, ಮುಸ್ಲಿಂ ಸಮುದಾಯದವರಿಗೆ ಮೀಸಲಾತಿ

ಗುತ್ತಿಗೆಯಲ್ಲಿ ಮೀಸಲು: ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ–ಪಂಗಡ, ಹಿಂದುಳಿದವರು ಹಾಗೂ ಮುಸ್ಲಿಂ ಸಮುದಾಯದ ಗುತ್ತಿಗೆದಾರರಿಗೆ ₹2 ಕೋಟಿ ವೆಚ್ಚದ ಕಾಮಗಾರಿಗಳು, ₹1 ಕೋಟಿವರೆಗಿನ ಸರಕು ಮತ್ತು ಸೇವೆಗಳ ಪೂರೈಕೆಯ ಟೆಂಡರ್‌ನಲ್ಲಿ ಮೀಸಲಾತಿ ಕಲ್ಪಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಮಸೂದೆ 2025 ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.



ಎಚ್‌.ಕೆ.ಪಾಟೀಲ

ಮುಖ್ಯಮಂತ್ರಿಯವರ ಪರವಾಗಿ ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅವರು ಮಸೂದೆಯನ್ನು ಮಂಡಿಸಿದರು.

ಗ್ರಾ.ಪಂ ವ್ಯಾಪ್ತಿಯ ಆಸ್ತಿಗೂ ಇ ಖಾತೆ: ಗ್ರಾಮೀಣ ಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿಗೆ ಎಲ್ಲ ಆಸ್ತಿಗಳನ್ನು ತಂದು ಆರ್ಥಿಕ ಸಂಪನ್ಮೂಲ ಸಂಗ್ರಹ ಜಾಲಕ್ಕೆ ಒಳಪಡಿಸುವ ಉದ್ದೇಶದ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ 2025' ಅನ್ನು ಮಂಡಿಸಲಾಯಿತು.

ಗ್ರಾಮೀಣ ಪ್ರದೇಶದಲ್ಲಿ ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ಇರುವ ಕಟ್ಟಡ ನಿವೇಶನಗಳಿಗೆ ಹೊಸಖಾತಾ ಅಥವಾ ಪಿಐಡಿ ನೀಡಲು ಗ್ರಾಮ ಪಂಚಾಯಿತಿ ಅಥವಾ ಪ್ರಾಧಿಕಾರಗಳು ಯೋಜನಾ ಪ್ರಾಧಿಕಾರದ ಮೂಲಕ ಲೇಔಟ್ ಪ್ಲಾನ್‌ಗಾಗಿ ಅನುಮೋದನೆ ಪಡೆದುಕೊಳ್ಳಬೇಕು. ಅಲ್ಲದೇ, ಅನಧಿಕೃತ ವಸತಿ ಪ್ರದೇಶದಲ್ಲಿರುವ ಆವರಣಗಳು ಮತ್ತು ಕಟ್ಟಡಗಳಿಗೆ ಸ್ವತ್ತು ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಭೂ ಕಬಳಿಕೆಗೆ ₹50 ಸಾವಿರ ದಂಡ

ಭೂ ಕಬಳಿಕೆ ಕೃತ್ಯಗಳ ವಿಚಾರಣೆ ತ್ವರಿತವಾಗಿ ನಡೆಸಿ ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯ ಸ್ಥಾಪಿಸುವುದು, ಸರ್ಕಾರಿ ಭೂಮಿ ರಕ್ಷಿಸುವುದು ಮತ್ತು ಕಂದಾಯ ಅಧಿಕಾರಿಗಳು ಭೂಕಬಳಿಕೆ ತಡೆಯುವ ಪ್ರಾಥಮಿಕ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳದಂತೆ ಹೊಣೆಗಾರಿಕೆಯನ್ನು ನಿಗದಿಪಡಿಸಲು ಕರ್ನಾಟಕ ಭೂಕಬಳಿಕೆ ನಿಷೇಧ (ತಿದ್ದುಪಡಿ) ಮಸೂದೆಯನ್ನು ಮಂಡಿಸಲಾಯಿತು.

ಒತ್ತುವರಿ ಪ್ರಕರಣಗಳ ಅಂತರವನ್ನು ವೈಮಾನಿಕವಾಗಿಯೇ ಲೆಕ್ಕ ಹಾಕಬೇಕು. ಭೂಕಬಳಿಕೆ ದಂಡ ಪ್ರಮಾಣವನ್ನು ₹25 ಸಾವಿರದಿಂದ ₹50 ಸಾವಿರಕ್ಕೆ ಹೆಚ್ಚಿಸಲಾಗಿದೆ.

ದಾಖಲೆಗಳನ್ನು ಫೋರ್ಜರಿ ಮಾಡಿ ಸರ್ಕಾರಿ ಭೂಮಿಯನ್ನು ಕಬಳಿಕೆ ಮಾಡುವುದನ್ನು ತಡೆಯಲು ಕರ್ನಾಟಕ ಭೂಕಂದಾಯ(ತಿದ್ದುಪಡಿ) ಮಸೂದೆಯನ್ನು ಮಂಡಿಸಲಾಯಿತು.

ಮಂಡ್ಯ ಕೃಷಿ ವಿಜ್ಞಾನಗಳ ವಿ.ವಿ ಸ್ಥಾಪನೆಗೆ ಮಸೂದೆ ಮಂಡನೆ

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳ ವ್ಯಾಪ್ತಿಯನ್ನು ಒಳಗೊಂಡ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಆರಂಭಿಸಲು ಅವಕಾಶ ಕಲ್ಪಿಸುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ– 2025 ಅನ್ನು ಮಂಡಿಸಲಾಯಿತು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವ್ಯಾಪ್ತಿಯಿಂದ ಈ ಐದು ಜಿಲ್ಲೆಗಳನ್ನು ಬೇರ್ಪಡಿಸಿ ಹೊಸ ವಿಶ್ವ ವಿದ್ಯಾಲಯ ಆರಂಭಿಸುವ ಪ್ರಸ್ತಾವ ಮಸೂದೆಯಲ್ಲಿದೆ.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಪುರುಷೋತ್ತಮ ದಾಸ್ ಹೆಗ್ಗಡೆ (ಎಡಬದಿ) ಅವರ 'ಯಯಾತಿ' ಕಾದಂಬರಿಯನ್ನು ಸಾಹಿತಿ ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಿದರು. ವಿಮರ್ಶಕ ಎಚ್‌.ದಂಡಪ್ಪ, ನಿಮ್ಹಾನ್ಸ್ ಮಾನಸಿಕ ಚಿಕಿತ್ಸಾ ವಿಭಾಗದ ಪ್ರೊ. ಎಂ. ಮಂಜುಳ, ವಂಶಿ ಪ್ರಕಾಶನದ ಎನ್‌.ಪ್ರಕಾಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಜಮೀರ್‌ಗೆ ಲೆಕ್ಕ ಹೇಳಿಕೊಟ್ಟ ಮೇಷ್ಟ್ರು ಯಾರು?: ಸುನಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಜಮೀರ್ ಅವರಿಗೆ ಗಣಿತ ಹೇಳಿಕೊಟ್ಟ ಮೇಷ್ಟ್ರು ಯಾರು? ಅವರು ಓದಿದ ಶಾಲೆ ಯಾವುದು' ಎಂದು ವಿಧಾನಸಭೆಯಲ್ಲಿ ಬಿಜೆಪಿಯ ವಿ.ಸುನಿಲ್‌ಕುಮಾರ್ ಮತ್ತು ಇತರರು ಸಚಿವರ ಕಾಲೆಳೆದ ಪ್ರಸಂಗ ನಡೆಯಿತು.

ಬಜೆಟ್ ಕುರಿತು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಮಾತನಾಡುತ್ತಿದ್ದಾಗ ವಸತಿ ವಿಷಯ ಪ್ರಸ್ತಾಪಿಸಿದರು. ಆಗ ಎದ್ದು ನಿಂತ ಜಮೀರ್ ಅವರು, 'ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಆವಾಸ್ ಯೋಜನೆಯಲ್ಲಿ ಮನೆಗಳ ನಿರ್ಮಾಣಕ್ಕೆ ₹1.5 ಲಕ್ಷ ಕೊಡುತ್ತದೆ. ಆದರೆ, ಶೇ 18 ರಷ್ಟು ಜಿಎಸ್‌ಟಿ ಹಾಕಿ ₹1.38 ಲಕ್ಷ ವಾಪಸ್ ಪಡೆಯುತ್ತಿದೆ' ಎಂದರು.

'ಇದು ಹೇಗೆ ಸಾಧ್ಯ? ನಿಮಗೆ ಗಣಿತ ಹೇಳಿಕೊಟ್ಟವರು ಯಾರು. ಸುಳ್ಳು ಲೆಕ್ಕ ಕೊಡುತ್ತಿದ್ದೀರಿ' ಎಂದು ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. 'ಉಲ್ಟಾ ಓದುವುದನ್ನು ಕೇಳಿದ್ದೇವೆ. ಉಲ್ಟಾ ಲೆಕ್ಕ ಹೇಳುವುದು ಗೊತ್ತಿರಲಿಲ್ಲ. ₹1.5 ಲಕ್ಷದಲ್ಲಿ ಶೇ 18 ಜಿಎಸ್‌ಟಿ ಹಿಡಿದರೆ ಎಷ್ಟಾಗುತ್ತದೆ ಹೇಳಿ' ಎಂದು ಸುನಿಲ್‌ಕುಮಾರ್ ಪುನಃ ಕಾಲೆಳೆದರು. ಆಗ ಜಮೀರ್ ಹಳೇ ಉತ್ತರವನ್ನೇ ಪುನರಾವರ್ತಿಸಿದರು.

ಆಗ ಅವರ ನೆರವಿಗೆ ಬಂದ ಸಚಿವ ಎಚ್.ಕೆ.ಪಾಟೀಲ, '₹1.38 ಲಕ್ಷ ಜಿಎಸ್‌ಟಿ ಎಷ್ಟು ಹಣಕ್ಕೆ' ಎಂದಾಗ, '₹5 ಲಕ್ಷಕ್ಕೆ' ಎಂದು ಜಮೀರ್ ಹೇಳಿದರು.

'₹5 ಲಕ್ಷಕ್ಕೆ ಲೆಕ್ಕ ಹಾಕಿದರೂ ₹90 ಸಾವಿರ ಆಗುತ್ತದೆಯೇ ಹೊರತು ₹1.38 ಲಕ್ಷ ಆಗುವುದಿಲ್ಲ' ಎಂದು ಬಿಜೆಪಿ ಸದಸ್ಯರು ತಕರಾರು ತೆಗೆದರು.

'ಜಮೀರ್ ಲೆಕ್ಕ ಸರಿ ಇಲ್ಲ ಅವರು ಓದಿರುವ ಶಾಲೆ ಮುಚ್ಚಬೇಕು, ಆ ಶಾಲೆ ಮುಂದುವರೆಯಲು ಅರ್ಹತೆ ಇಲ್ಲ. ಶಿಕ್ಷಣ ಸಚಿವರು ಇಲ್ಲಿದ್ದಾರೆ, ಆದೇಶ ಮಾಡಿಬಿಡಿ' ಎಂದು ಸುನಿಲ್ ಛೇಡಿಸಿದರು. ಕೊನೆಗೆ ಲೆಕ್ಕ ಸರಿಪಡಿಸಿಕೊಂಡ ಜಮೀರ್ 'ಕೇಂದ್ರ, ರಾಜ್ಯ ಮತ್ತು ಫಲಾನುಭವಿಗಳ ಮೊತ್ತ ಸೇರಿ ₹7.5 ಲಕ್ಷ ಆಗುತ್ತದೆ. ಅದಕ್ಕೆ ₹1.38 ಲಕ್ಷ ಜಿಎಸ್‌ಟಿ ಆಗುತ್ತದೆ' ಎಂದರು.

ನಗರದಲ್ಲಿ ಇಂದು

ಮೂರು ದಿನಗಳ ಅನೇಕಾ ನಾಟಕೋತ್ಸವ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಜಯಂತ್ ಕಾಯ್ಕಿಣಿ, 'ರಕ್ತ ವಿವಾಹ' ನಾಟಕ ಪ್ರದರ್ಶನ: ನಿರ್ದೇಶನ: ಅಪೂರ್ವ ಆನಗಳ್ಳಿ, ಪ್ರಸ್ತುತಿ: ಕೋಶಿಕಾ, ಆಯೋಜನೆ: ಅನೇಕಾ ರಂಗತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಟಿ.ಎಸ್. ನಾಗಾಭರಣ

ಜಯನಗರ ಶರಣ ಸಾಹಿತ್ಯ ಸಮ್ಮೇಳನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಸಿ. ಸೋಮಶೇಖರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಗೌರವ ಸಮರ್ಪಣೆ: ಗೊ.ರು. ಚನ್ನಬಸಪ್ಪ, ಗಂಗಾಂಬಿಕೆ ಮಲ್ಲಿಕಾರ್ಜುನ್, ಅತಿಥಿಗಳು: 'ಮುಖ್ಯಮಂತ್ರಿ' ಚಂದ್ರು, ಗೀತಾ ಜಯಂತ್, ಆಯೋಜನೆ: ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಜಯನಗರ ಘಟಕ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಗದ್ಗುರು ಶಿವರಾತ್ರೀಶ್ವರ ವೃತ್ತ, ಒಂದನೇ ಮುಖ್ಯರಸ್ತೆ, ಜಯನಗರ ಎಂಟನೇ ಬ್ಲಾಕ್, ಬೆಳಿಗ್ಗೆ 10ರಿಂದ

ಡಾ. ಪುಟ್ಟಶಂಕರಪ್ಪ ರಾಜಲಕ್ಷ್ಮಿ ದತ್ತಿ ಉಪನ್ಯಾಸ: 'ಉಪನಿಷತ್ತು ಹಾಗೂ ಅದರಲ್ಲಿನ ನೀತಿಪಾಠ' ಉಪನ್ಯಾಸ: ಪ್ರಗಲ್ಭ ಆರ್.ಎಸ್., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಕೊಕೇನ್ ಕಳ್ಳಸಾಗಣೆ: ಮಹಿಳೆ ಬಂಧನ

ದೇವನಹಳ್ಳಿ: ಮಾದಕ ವಸ್ತು ಕೊಕೇನ್ ಕಳ್ಳಸಾಗಣೆ ಮಾಡುತ್ತಿದ್ದ ಪ್ರಯಾಣಿಕರೊಬ್ಬರನ್ನು ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

ಮಹಿಳೆಯೊಬ್ಬರು ಕತಾರ್‌ನಿಂದ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದ್ದರು. ಖಚಿತ ಮಾಹಿತಿ ಮೇರೆಗೆ ಅವರನ್ನು ಡಿಆರ್‌ಐ ಅಧಿಕಾರಿಗಳು ತಪಾಸಣೆಗೆ ಒಳಪಡಿಸಿದ್ದಾರೆ. ಆಗ ಅವರ ಬಳಿ 3.2 ಕೆ.ಜಿಯಷ್ಟು ಸುಮಾರು ₹38.4 ಕೋಟಿ ಮೌಲ್ಯದ ಕೊಕೇನ್ ಪತ್ತೆಯಾಗಿದ್ದು, ಅದನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿಕೆ

ರೈತರಿಗಿಲ್ಲ ಶೂನ್ಯ ಬಡ್ಡಿಯ ಗರಿಷ್ಠ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 1.73 ಲಕ್ಷ ರೈತರಿಗೆ ₹5 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆಯಲು ಅರ್ಹತೆ ಇದ್ದರೂ, 2024–25ನೇ ಸಾಲಿನಲ್ಲಿ 13,689 ರೈತರಿಗಷ್ಟೇ ಪ್ರಯೋಜನ ದೊರೆತಿದೆ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಕೆ.ಎನ್. ರಾಜಣ್ಣ

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಮೊದಲು ₹3 ಲಕ್ಷದವರೆಗೆ ಇದ್ದ ಶೂನ್ಯ ಬಡ್ಡಿದರದ ಬೆಳೆ ಸಾಲವನ್ನು 2023–2024ನೇ ಸಾಲಿನ ಬಜೆಟ್‌ನಲ್ಲಿ ₹5 ಲಕ್ಷಕ್ಕೆ ಹೆಚ್ಚಿಸಲಾಗಿತ್ತು. ಆ ವರ್ಷ 6,744 ರೈತರು ಪ್ರಯೋಜನ ಪಡೆದಿದ್ದರು. ಪ್ರಸಕ್ತ ವರ್ಷ ಈ ಸಂಖ್ಯೆ ದ್ವಿಗುಣಗೊಂಡಿದ್ದರೂ, ಶೇ 92.11 ರೈತರಿಗೆ ಗರಿಷ್ಠ ಸಾಲ ನೀಡಲು ಸಾಧ್ಯವಾಗಿಲ್ಲ ಎಂದರು.

ರಾಜ್ಯದ 10 ಕೃಷಿ ವಲಯಗಳಿಗೆ ರಾಜ್ಯಮಟ್ಟದ ತಾಂತ್ರಿಕ ತಜ್ಞರ ಸಮಿತಿಯಲ್ಲಿ ಪ್ರತಿ ಬೆಳೆಗೆ ನಿಗದಿಪಡಿಸಿದ ಹಣಕಾಸು ಮಿತಿ, ರೈತರು ಹೊಂದಿರುವ ಭೂ ಹಿಡುವಳಿ ಹಾಗೂ ಬೆಳೆಯುವ ಬೆಳೆ ಆಧರಿಸಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಗರಿಷ್ಠ ಸಾಲ ಮಿತಿ ನಿಗದಿ ಮಾಡಲಾಗುತ್ತದೆ. ಈ ವರ್ಷ ಅಂತಹ ಅರ್ಹತೆ ಪಡೆದ ರೈತರು 1.73 ಲಕ್ಷ ಇದ್ದಾರೆ. ರಿಯಾಯಿತಿ ಬಡ್ಡಿದರದಲ್ಲಿ ನಬಾರ್ಡ್ ನೀಡುವ ಪುನರ್ಧನದ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಹಾಗಾಗಿ, ಶೂನ್ಯ ಬಡ್ಡಿದರದಲ್ಲಿ ಬೇಡಿಕೆ ಸಲ್ಲಿಸಿದ ಎಲ್ಲ ರೈತರಿಗೂ ಸಾಲ ನೀಡಲು ಸಾಧ್ಯವಾಗಿಲ್ಲ. ಡಿಸಿಸಿ ಬ್ಯಾಂಕ್‌ಗಳು ತಮ್ಮ ಸಂಪನ್ಮೂಲಗಳಿಂದಲೇ ₹589.12 ಕೋಟಿ ಸಾಲ ನೀಡಿವೆ. ಹೊಸದಾಗಿ ಅರ್ಜಿ ಸಲ್ಲಿಸಿದ ರೈತರಿಗೆ ₹ 3ಲಕ್ಷದ ಮಿತಿ ಹಾಕಲಾಗಿದೆ ಎಂದು ವಿವರ ನೀಡಿದರು.

ಬೆಳೆ ಸಾಲ ಸೇರಿದಂತೆ ಎಲ್ಲ ಫಲಾನುಭವಿಗಳಿಗೂ ಕೃಷಿ ಸಾಲಗಳನ್ನು ವಿತರಿಸಲು ₹79,237 ಕೋಟಿ ಅಗತ್ಯವಿದೆ. ಪ್ರಸಕ್ತ ಸಾಲಿನಲ್ಲಿ 35.10 ಲಕ್ಷ ರೈತರಿಗೆ ₹25,000 ಕೋಟಿ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಜಿಲ್ಲೆಯ ಸಹಕಾರ ಸಂಘಗಳು ಹೊಂದಿರುವ ಮೀಸಲು ನಿಧಿಯನ್ನು ಕಡ್ಡಾಯವಾಗಿ ಡಿಸಿಸಿ ಬ್ಯಾಂಕ್‌ಗಳಲ್ಲೇ ವಿನಿಯೋಗಿಸಲು ಸುತ್ತೋಲೆ ಹೊರಡಿಸಲಾಗಿದೆ. ಮುಜರಾಯಿ ಇಲಾಖೆ ಮತ್ತು ಕೃಷಿ ಮಾರುಕಟ್ಟೆ ಸಮಿತಿಗಳು ಹೊಂದಿರುವ ಹೆಚ್ಚುವರಿ ನಿಧಿಯನ್ನೂ ಡಿಸಿಸಿ ಬ್ಯಾಂಕ್‌ಗಳ ಮೂಲಕವೇ ವಿನಿಯೋಗಿಸುವಂತೆ ಮನವೊಲಿಸಲಾಗುತ್ತಿದೆ. ಎಲ್ಲ ಮೂಲಗಳನ್ನು ಬಳಸಿಕೊಂಡರೂ ಪ್ರತಿ ವರ್ಷ ಶೇ 20ರಷ್ಟು ಹೆಚ್ಚುವರಿ ಸಾಲ ನೀಡಲಷ್ಟೇ ಸಾಧ್ಯವಾಗಿದೆ ಎಂದರು.

ಸ್ವತಂತ್ರ ಕೃಷಿ ಮಾರುಕಟ್ಟೆ ಸಮಿತಿಗೆ ಒಲವು

ಸ್ವತಂತ್ರ ಕೃಷಿ ಮಾರುಕಟ್ಟೆ ಸಮಿತಿ ರಚಿಸಲು ಬೇಡಿಕೆ ಇದ್ದು, ಆರ್ಥಿಕ ಸಮೀಕ್ಷೆಯ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.



ಶಿವಾನಂದ ಪಾಟೀಲ

ಕಾಂಗ್ರೆಸ್‌ನ ಎಂ. ನಾಗರಾಜು ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ರಾಜ್ಯದಲ್ಲಿ 167 ಎಪಿಎಂಸಿಗಳಿವೆ. ಹೊಸದಾಗಿ ನಾಲ್ಕು ಸ್ಥಾಪಿಸಲಾಗಿದೆ. 410 ಉಪ ಮಾರುಕಟ್ಟೆಗಳು ಕಾರ್ಯನಿರ್ವಹಿಸುತ್ತಿವೆ. ಕೃಷಿ ಉತ್ಪನ್ನಗಳ ನೇರ ಮಾರಾಟಕ್ಕೆ ರೈತರಿಗೆ ಆಯ್ಕೆಗಳನ್ನು ಕಲ್ಪಿಸಲಾಗಿದೆ. ನಾಲ್ಕು ಖಾಸಗಿ ಮಾರುಕಟ್ಟೆಗಳು ಹಾಗೂ 65 ನೇರ ಖರೀದಿ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ವಾಲಿಬಾಲ್ ಟೂರ್ನಿ ಗಲಾಟೆ: ಪುರಸಭಾ ಸದಸ್ಯನಿಗೆ ಗಾಯ

ಶ್ರೀನಿವಾಸಪುರ: ತಾಲ್ಲೂಕಿನ ನಂಬಿಹಳ್ಳಿ ಗ್ರಾಮ ಜಾತ್ರೆ ಪ್ರಯುಕ್ತ ವಾಲಿಬಾಲ್ ಟೂರ್ನಿಯಲ್ಲಿ ಉಂಟಾದ ಎರಡು ಗುಂಪುಗಳ ನಡುವಿನ ಗಲಾಟೆ ನಿಯಂತ್ರಿಸುತ್ತಿದ್ದ ವೇಳೆ ಪೊಲೀಸರು ಪುರಸಭಾ ಸದಸ್ಯರೊಬ್ಬರನ್ನು ಥಳಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಪುರಸಭಾ ಸದಸ್ಯ ಕೆ.ಆರ್. ನಾಗೇಶ್ ಕುಮಾರ್ ತೀವ್ರವಾಗಿ ಗಾಯಗೊಂಡಿದ್ದು, ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. 'ಗಲಾಟೆ ಬಿಡಿಸಲು ಹೋಗಿದ್ದ ವೇಳೆ ನನ್ನ ಮೇಲೆ ಕಾನ್‌ಸ್ಟೆಬಲ್‌ಗಳಾದ ಆನಂದ್, ಸಂತೋಷ್, ಪ್ರವೀಣ್ ಹಲ್ಲೆ ಮಾಡಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಟೂರ್ನಿಯಲ್ಲಿ ಆಕಸ್ಮಿಕವಾಗಿ ಉಂಟಾದ ಮಾತಿನ ಚಕಮಕಿ ಗಲಾಟೆಗೆ ತಿರುಗಿದೆ. ಸ್ಥಳದಲ್ಲಿದ್ದ ಪೊಲೀಸರು ಗುಂಪುಗಳನ್ನು ಚದುರಿಸಲು ಮುಂದಾಗಿದ್ದಾರೆ. ಈ ಸಂದರ್ಭದಲ್ಲಿ ನಾಗೇಶ್ ಕುಮಾರ್ ಮಾತ್ರ ಕದಲಿಲ್ಲ. ಪುರಸಭಾ ಸದಸ್ಯ ಎಂದು ಪರಿಚಯಿಸಿಕೊಂಡ ಅವರಿಗೆ ಪೊಲೀಸರು ಕೂಡಲೇ ಜಾಗ ಖಾಲಿ ಮಾಡು ಎಂದು ಎಚ್ಚರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

₹750 ಕೋಟಿ ಬಿಡುಗಡೆ

ಬೆಂಗಳೂರು: ರಾಜ್ಯ ಸರ್ಕಾರ 'ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ' ಯೋಜನೆಯಡಿ 2024–25ನೇ ಸಾಲಿನ ನಾಲ್ಕನೇ ಹಾಗೂ ಕೊನೆ ಕಂತಿನ ₹750 ಕೋಟಿ ಅನುದಾನವನ್ನು ಬಿಬಿಎಂಪಿಗೆ ನಗರಾಭಿವೃದ್ಧಿ ಇಲಾಖೆ ಮಾರ್ಚ್ 18ರಂದು ಬಿಡುಗಡೆ ಮಾಡಿದೆ.

2024–25ನೇ ಸಾಲಿನಲ್ಲಿ ನಿಗದಿಪಡಿಸಲಾಗಿರುವ ₹3 ಸಾವಿರ ಕೋಟಿ ಅನುದಾನದಲ್ಲಿ, ಮೂರು ತ್ರೈಮಾಸಿಕದಲ್ಲಿ ತಲಾ ₹750 ಕೋಟಿ ಬಿಡುಗಡೆ ಮಾಡಲಾಗಿತ್ತು. ವಿಶೇಷ ಮೂಲಸೌಕರ್ಯ ಯೋಜನೆಯಡಿ ಬೃಹತ್ ರಸ್ತೆಗಳು, ಮೇಲ್ಸೇತುವೆ, ಕಾರಿಡಾರ್ ಮುಂತಾದ ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಕಾಮಗಾರಿಗಳ ಬಾಬ್ತು ₹2,000 ಕೋಟಿಯಷ್ಟು ಬಿಲ್ ಪಾವತಿ ಬಾಕಿ ಉಳಿದಿದೆ. ಸಕಾಲದಲ್ಲಿ ಬಿಲ್ ಪಾವತಿಸದಿದ್ದಲ್ಲಿ ಕಾಮಗಾರಿಗಳ ಪ್ರಗತಿ ಕುಂಠಿತವಾಗುವ ಸಂಭವವಿರುತ್ತದೆ ಎಂದು ಮುಖ್ಯ ಆಯುಕ್ತರು ತಿಳಿಸಿದ್ದಾರೆ. ಹೀಗಾಗಿ, ಈ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'2024ರ ಫೆಬ್ರುವರಿ 28ರ ನಂತರದ ಬಿಲ್‌ಗಳ ಪಾವತಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದ್ದಾರೆ.

ಶೋಷಿತರ ಸಂಘರ್ಷ ದಿನಾಚರಣೆ ನಾಳೆ

ಬೆಂಗಳೂರು: ಮಹಾಡ ಸತ್ಯಾಗ್ರಹದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಬೆಂಗಳೂರು ನಗರ ಜಿಲ್ಲಾ ಸಮಿತಿಯಿಂದ ಮಾ. 20ರಂದು ಕುಮಾರಕೃಪಾ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಶೋಷಿತರ ಸಂಘರ್ಷ ದಿನಾಚರಣೆ ಹಮ್ಮಿಕೊಂಡಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ನಗರ ಜಿಲ್ಲಾ ಸಮಿತಿ ಸಂಚಾಲಕ ಸಂಪಂಗಿರಾಮ, 'ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ, ಬರಹಗಾರ ಸುಬ್ಬು ಹೊಲೆಯಾರ್, ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಆನ್‌ಲೈನ್‌ನಲ್ಲಿ ಹೊಸ ಖಾತಾ

ಬೆಂಗಳೂರು: ಫ್ಲ್ಯಾಟ್ ಹಾಗೂ ವಾಣಿಜ್ಯ ಘಟಕಗಳಿಗೆ ಖಾತಾ ಹೊಂದಿರದ ಮಾಲೀಕರು ಆನ್‌ಲೈನ್ ಮೂಲಕ ಹೊಸದಾಗಿ ಇ–ಖಾತಾ ಪಡೆದುಕೊಳ್ಳಬಹುದು.

ಕಟ್ಟಡಗಳ ಅಭಿವೃದ್ದಿದಾರರು/ ಮಾಲೀಕರು, ಎಲ್ಲಾ ಬಹು ಫ್ಲ್ಯಾಟ್/ ವಾಣಿಜ್ಯ ಘಟಕಗಳಿಗೆ ಹೊಸ ಖಾತಾ ಪಡೆಯಬಹುದು. ಬಿಬಿಎಂಪಿಯ https://BBMP.karnataka.gov.in/NewKhata ಮೂಲಕ ಅರ್ಜಿ ಸಲ್ಲಿಸಬಹುದು.

ಮಾಲೀಕರ ಆಧಾರ್ ಸಂಖ್ಯೆ, ಎ- ಖಾತಾ ಬೇಕಾದಲ್ಲಿ ಕಟ್ಟಡದ ಅನುಮೋದಿತ ನಕ್ಷೆ ಮತ್ತು ಸ್ವಾಧೀನ ಪ್ರಮಾಣ ಪತ್ರ, 'ಆಸ್ತಿಯ ಚಿತ್ರಗಳನ್ನು ಅಪ್‌ಲೋಡ್ ಮಾಡಬೇಕು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಅಡಿಕೆ ಮಂಡಳಿ ಸ್ಥಾಪನೆ ಇಲ್ಲ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಡಿಕೆ ಕೃಷಿ ಪ್ರದೇಶ ವಿಸ್ತರಣೆ ಹಾಗೂ ಬೆಳೆಗಾರರ ಸಮಸ್ಯೆಗಳಿಗೆ ಸ್ಪಂದಿಸುವ ಸಲುವಾಗಿ ಕರ್ನಾಟಕದಲ್ಲಿ ಪ್ರತ್ಯೇಕ ಅಡಿಕೆ ಮಂಡಳಿ ಸ್ಥಾಪಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ಕೃಷಿ ಕಲ್ಯಾಣ ಸಚಿವಾಲಯ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಕೇಳಿದ ಪ್ರಶ್ನೆಗೆ ಇಲಾಖೆಯ ರಾಜ್ಯ ಸಚಿವ ರಾಮನಾಥ ಠಾಕೂರ್ ಉತ್ತರ ನೀಡಿ, ‘ಅಡಿಕೆ ಸಂಶೋಧನೆ ಹಾಗೂ ಅಭಿವೃದ್ಧಿಗಾಗಿ ಭಾರತೀಯ ಕೃಷಿ ಸಂಶೋಧನಾ ಪರಿಷತ್, ಸಿಪಿಸಿಆರ್‌ಐ, ಶಿವಮೊಗ್ಗದ ಕೃಷಿ ವಿಶ್ವವಿದ್ಯಾಲಯ ಸೇರಿದಂತೆ ಹಲವು ಸಂಸ್ಥೆಗಳು ಶ್ರಮಿಸುತ್ತಿವೆ. ಈಗಿರುವ ಸಾಂಸ್ಥಿಕ ವ್ಯವಸ್ಥೆಯ ಮೂಲಕವೇ ಈ ಕೃಷಿಯ ಸಂಶೋಧನೆ ಹಾಗೂ ಅಭಿವೃದ್ಧಿಗೆ ಅಗತ್ಯ ಬೆಂಬಲ ನೀಡಲಾಗುತ್ತಿದೆ. ಪ್ರತ್ಯೇಕ ಮಂಡಳಿಯ ಅಗತ್ಯ ಇಲ್ಲ’ ಎಂದರು.

‘ಅತೀ ಹೆಚ್ಚು ಅಡಿಕೆ ಬೆಳೆಯುತ್ತಿರುವುದು ಕರ್ನಾಟಕದಲ್ಲಿ. ಅಡಿಕೆಯ ಕನಿಷ್ಠ ಬೆಂಬಲ ಬೆಲೆಯನ್ನು ಕೆ.ಜಿ.ಗೆ ₹351ಕ್ಕೆ ಪರಿಷ್ಕರಿಸಲಾಗಿದೆ. ಅಡಿಕೆ ಆಮದಿನ ಮೇಲೆ ನಿರ್ಬಂಧ ವಿಧಿಸಲಾಗಿದೆ’ ಎಂದರು.

ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳದಿಂದ ಉದರಬೇನೆ, ಬೆವರುಗುಳ್ಳೆಯಂತಹ ಪ್ರಕರಣ ಹೆಚ್ಚಳ

ಬಿಸಿಲ ಧಗೆಗೆ ಅನಾರೋಗ್ಯ ಬಾಧೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಬಿಸಿಲ ಧಗೆಗೆ ಉದರಬೇನೆ, ಬೆವರುಗುಳ್ಳೆಯಂತಹ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿದ್ದು, ಆಸ್ಪತ್ರೆಗಳಲ್ಲಿ ಹೊರರೋಗಿಗಳ ಸಂಖ್ಯೆ ಶೇ 20 ರಷ್ಟು ಹೆಚ್ಚಳವಾಗಿದೆ.

ಹವಾಮಾನ ಇಲಾಖೆ ಪ್ರಕಾರ ನಗರದಲ್ಲಿ ಸಾಮಾನ್ಯಕ್ಕಿಂತ ಮೂರು ಡಿಗ್ರಿ ಸೆಲ್ಸಿಯಸ್‌ವರೆಗೂ ಉಷ್ಣಾಂಶ ಅಧಿಕ ವರದಿಯಾಗುತ್ತಿದೆ. ಈ ತಿಂಗಳ ಬಹುತೇಕ ದಿನಗಳು ಗರಿಷ್ಠ ಉಷ್ಣಾಂಶವು 34ರಿಂದ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಆಗಾಗ ಬಿಸಿ ಗಾಳಿಯೂ ಬೀಸುತ್ತಿರುವುದರಿಂದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅಸ್ವಸ್ಥಗೊಳ್ಳುತ್ತಿದ್ದು, ಕೆಂಪು ಗುಳ್ಳೆಗಳು, ಜ್ವರ ಹಾಗೂ ಉಸಿರಾಟ ಸಂಬಂಧಿ ಸಮಸ್ಯೆಗಳಿಗೆ ವಿವಿಧ ವಯೋಮಾನದವರು ಆಸ್ಪತ್ರೆಗಳಿಗೆ ಅಧಿಕ ಸಂಖ್ಯೆಯಲ್ಲಿ ಭೇಟಿ ನೀಡಲಾರಂಭಿಸಿದ್ದಾರೆ.

ಕಲುಷಿತ ನೀರು, ಅಸುರಕ್ಷಿತ ಆಹಾರ ಸೇವನೆಯಿಂದ ಉದರಬೇನೆ, ವಿಷಮಶೀತ ಜ್ವರ, ಕಾಲರಾದಂತಹ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಆರೋಗ್ಯ ಇಲಾಖೆಯ ವಿಶ್ಲೇಷಣೆ ಪ್ರಕಾರ ಪ್ರಕಾರ ಮಾರ್ಚ್ ಮೊದಲ ವಾರದಿಂದ ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ ಹಾಗೂ ಅತಿಸಾರ ಪ್ರಕರಣಗಳು ಏರುಗತಿ ಪಡೆದಿವೆ. ವಾರದಲ್ಲಿ ದೃಢಪಡುತ್ತಿರುವ ಅತಿಸಾರ ಪ್ರಕರಣಗಳು 3 ಸಾವಿರದ ಗಡಿ ದಾಟಿದೆ.

ಬಿಸಿಲಾಘಾತದಿಂದ ಸಮಸ್ಯೆ: ಉಷ್ಣಾಂಶ ಹೆಚ್ಚಳದಿಂದ ಜ್ವರ, ತಲೆನೋವು, ಊತಗಳು, ಸ್ನಾಯು ಸೆಳೆತ, ಪ್ರಜ್ಞೆ ತಪ್ಪುವಿಕೆ, ಸುಸ್ತು ಸೇರಿ ವಿವಿಧ ಸಮಸ್ಯೆಗಳು ನಗರದ ಜನರಲ್ಲಿ ಕಾಣಿಸಿಕೊಳ್ಳುತ್ತಿವೆ. ವಿಕ್ಟೋರಿಯಾ, ಜಯನಗರ ಸಾರ್ವಜನಿಕ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ಕಿಮ್ಸ್, ಮಣಿಪಾಲ್, ಫೋರ್ಟಿಸ್, ಅಪೋಲೊ, ನಾರಾಯಣ ಹೆಲ್ತ್ ಸೇರಿದಂತೆ ಪ್ರಮುಖ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರ ರೋಗಿಗಳಲ್ಲಿ, ಶೇ 10 ಹಾಗೂ ಅದಕ್ಕಿಂತ ಅಧಿಕ ರೋಗಿಗಳು ಉದರಬೇನೆ, ವಿಷಮಶೀತ ಜ್ವರ, ಅತಿಸಾರ, ಬೆವರು ಗುಳ್ಳೆಯಂತಹ ಸಮಸ್ಯೆಗಳಿಂದ ಬಳಲುತ್ತಿರುವವರಾಗಿದ್ದಾರೆ.

‘ಉದರಬೇನೆ ಸಮಸ್ಯೆಗೆ ಹೊರ ರೋಗಿಗಳ ವಿಭಾಗಕ್ಕೆ ಪ್ರತಿ ದಿನ ಸರಾಸರಿ 15 ರೋಗಿಗಳು ಬರುತ್ತಿದ್ದಾರೆ. ಶುಚಿ ಇಲ್ಲದ ಆಹಾರ ಮತ್ತು ನೀರು ಸೇವನೆಯಿಂದ ಈ ಸಮಸ್ಯೆ ಉಂಟಾಗುತ್ತಿದೆ’ ಎಂದು ಇಂದಿರಾ ನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ಕಣ್ಣಿನ ಊತ, ಚರ್ಮದ ಸೋಂಕು

ಅತಿಯಾದ ಬಿಸಿಲಿಗೆ ಕಣ್ಣುರಿ, ಕಣ್ಣಿನಲ್ಲಿ ನೀರು, ತುರಿಕೆ, ಕಣ್ಣು ಕೆಂಪಾಗುವುದು, ಕಣ್ಣಿನ ಊತ ಸೇರಿ ವಿವಿಧ ಸಮಸ್ಯೆಗಳಿಗೆ ಜನ ಆಸ್ಪತ್ರೆಗಳತ್ತ ಮುಖಮಾಡುತ್ತಿದ್ದಾರೆ. ಇದರಿಂದಾಗಿ ನಗರದ ಪ್ರಮುಖ ಕಣ್ಣಿನ ಆಸ್ಪತ್ರೆಗಳಾದ ಮಿಂಟೊ, ನಾರಾಯಣ ನೇತ್ರಾಲಯ, ಡಾ.ಅಗರವಾಲ್ಸ್ ಐ ಹಾಸ್ಪಿಟಲ್, ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಬೆಂಗಳೂರು ನೇತ್ರಾಲಯದಲ್ಲಿ ಹೊರ ರೋಗಿಗಳ ಸಂಖ್ಯೆ ಶೇ 10ರಷ್ಟು ಹೆಚ್ಚಳವಾಗಿದೆ.

ಚರ್ಮಕ್ಕೆ ಸಂಬಂಧಿಸಿದಂತೆ ಕೆಂಪು ಗುಳ್ಳೆಗಳು, ಬೆವರು ಗುಳ್ಳೆಗಳು, ಶಿಲೀಂದ್ರ ಸೋಂಕು, ಬೊಬ್ಬೆಗಳು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಮಕ್ಕಳಲ್ಲಿ ಹೆಚ್ಚಾಗಿ ‘ಚಿಕನ್ ಪಾಕ್ಸ್’ ಸೋಂಕು ದೃಢಪಡುತ್ತಿದೆ ಎಂದು ಚರ್ಮರೋಗ ತಜ್ಞರು ತಿಳಿಸಿದರು.

ವಾರದ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)

ದಿನಾಂಕ	ಗರಿಷ್ಠ	ಕನಿಷ್ಠ
ಮಾ.12	32.8	20.8
ಮಾ.13	34.7	20.7
ಮಾ.14	35.4	20.6
ಮಾ.15	34.8	18.8
ಮಾ.16	34.6	19.5
ಮಾ.17	35.3	22.2
ಮಾ.18	35.3	22.7

ಈಗ ಅತಿನೇರಳೆ ಕಿರಣಗಳು ಬಲಿಷ್ಠವಾಗಿರುತ್ತವೆ. ಮಕ್ಕಳು, ವೃದ್ಧರ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಶುದ್ಧ ನೀರನ್ನು ಹೆಚ್ಚು ಕುಡಿಯಬೇಕು

ಡಾ. ಸಂಜಯ್ ಕೆ.ಎಸ್. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಬಿಸಿಲ ಧಗೆಗೆ ಚರ್ಮಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳು ಕೆಲವರಲ್ಲಿ ಕಾಣಿಸಿಕೊಳ್ಳುತ್ತಿವೆ. ಈ ಸಂಬಂಧ ಚಿಕಿತ್ಸೆಗೆ ಬರುವವರ ಸಂಖ್ಯೆ ಶೇ 20 ರಷ್ಟು ಹೆಚ್ಚಳವಾಗಿದೆ

ಡಾ.ಎಂ.ಎಸ್. ಗಿರೀಶ್, ರಾಜಾಜಿನಗರ ಇಎಸ್‌ಐ ಆಸ್ಪತ್ರೆಯ ಚರ್ಮರೋಗ ತಜ್ಞ

ಕಾವೇರಿ ಆರತಿ: ಕೈಬಿಡಲು ಆಗ್ರಹಿಸಿ ಪತ್ರ

ಕೆರೆಯ ಪರಿಸರ ವ್ಯವಸ್ಥೆ, ಜೀವವೈವಿಧ್ಯಕ್ಕೆ ಧಕ್ಕೆ ಆರೋಪ • 2023ರ ಹೈಕೋರ್ಟ್ ಆದೇಶ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಕೆರೆಯಲ್ಲಿ ಇದೇ 21 ರಂದು ಜಲಮಂಡಳಿ ಆಯೋಜಿಸುತ್ತಿರುವ ‘ಕಾವೇರಿ ಆರತಿ’ ಕಾರ್ಯಕ್ರಮವನ್ನು ಕೈಬಿಡುವಂತೆ ಆಗ್ರಹಿಸಿ ಎಚ್.ಎಂ.ವೆಂಕಟೇಶ್, ಲೋಕೇಶ್ ಬಿ.ಎಸ್. ಸೇರಿದಂತೆ ವಿವಿಧ ಸಂಘಟನೆಗಳ ಕಾರ್ಯಕರ್ತರ ತಂಡವೊಂದು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ(ಕೆಟಿಸಿಡಿಎ), ಬೆಂಗಳೂರು ಜಲಮಂಡಳಿ, ಬಿಬಿಎಂಪಿಗೆ ಪತ್ರ ಬರೆದಿವೆ.

ಕಾರ್ಯಕರ್ತರು ಪತ್ರದಲ್ಲಿ 2023ರ ಹೈಕೋರ್ಟ್ ಆದೇಶವನ್ನು ಉಲ್ಲೇಖಿಸಿದ್ದಾರೆ. ಆ ಪ್ರಕಾರ ಕೆರೆ ಅಥವಾ ಕೆರೆ ದಂಡೆಯ ಪ್ರದೇಶದಲ್ಲಿ ವಾಣಿಜ್ಯ ಅಥವಾ ಮನರಂಜನಾ ಚಟುವಟಿಕೆಯನ್ನು ನಡೆಸಬಾರದು. ಸರ್ಕಾರವೂ ಇಂಥ ಕಾರ್ಯಕ್ರಮಗಳನ್ನು ನಡೆಸಲು ಅನುಮತಿ ನೀಡಬಾರದು ಎಂದು ಉಲ್ಲೇಖವಾಗಿದೆ. ಹಾಗೆಯೇ, ಪತ್ರದಲ್ಲಿ ಕೆಟಿಸಿಡಿಎ 2014ರ ಕಾಯ್ದೆಯನ್ನು ಉಲ್ಲೇಖಿಸಿದ್ದು, ಆ ಪ್ರಕಾರ ಕೆರೆಗೆ ಹಾನಿ ಮಾಡುವಂತಹ ಯಾವುದೇ ಚಟುವಟಿಕೆಗಳನ್ನು ಕೈಗೊಳ್ಳಬಾರದು.

ಇಷ್ಟೆಲ್ಲ ಕಾಯ್ದೆ, ನಿಯಮ ನಿಬಂಧನೆಗಳಿದ್ದರೂ, ಬೆಂಗಳೂರಿನ ಜೀವನಾಡಿಯಾಗಿರುವ ಕಾವೇರಿ ನದಿಗೆ ನಮಿಸುವುದಕ್ಕಾಗಿ ಹಾಗೂ ಜಲಸಂರಕ್ಷಣೆ ಕುರಿತು ಜನ ಜಾಗೃತಿ ಮೂಡಿಸುವುದಕ್ಕಾಗಿ ಕಾವೇರಿ ಆರತಿ ಕಾರ್ಯಕ್ರಮ ಮಾಡುತ್ತಿರುವುದಾಗಿ ಜಲಮಂಡಳಿ ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಸ್ಯಾಂಕಿ ಕೆರೆಯ ಆವರಣದಲ್ಲಿ ನಡೆಸುವ ಈ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಸೇರುತ್ತಾರೆ. ಮನರಂಜನಾ ಕಾರ್ಯಕ್ರಮದಲ್ಲಿ ಭಾರಿ ಧ್ವನಿ ಹೊಮ್ಮುವ ಧ್ವನಿವರ್ಧಕಗಳನ್ನು ಹಾಕಲಾಗುತ್ತಿದೆ. ಪ್ರಖರ ದೀಪಗಳನ್ನು ಅಳವಡಿಸಲಾಗುತ್ತಿದೆ. ಈ ಎಲ್ಲ ಚಟುವಟಿಕೆಗಳು ಕೆರೆಯ ಪರಿಸರ ವ್ಯವಸ್ಥೆ ಮತ್ತು ಜೀವವೈವಿಧ್ಯಕ್ಕೆ ಧಕ್ಕೆ ಉಂಟು ಮಾಡುತ್ತವೆ ಎಂದು ಪರಿಸರ ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದ್ದಾರೆ. ಸ್ಯಾಂಕಿ ಕೆರೆಯ ಸಂರಕ್ಷಣೆಯ ದೃಷ್ಟಿಯಿಂದ, ಕಾವೇರಿ ಆರತಿ ನಡೆಸಲು ನೀಡಿರುವ ಅನುಮತಿ ರದ್ದುಗೊಳಿಸುವಂತೆ ಕೆಟಿಸಿಡಿಎ, ಬಿಬಿಎಂಪಿ ಪತ್ರ ಬರೆದಿದ್ದಾರೆ.

ಈ ನಡುವೆ ಸ್ಯಾಂಕಿ ಕೆರೆಯಲ್ಲಿ ನಡೆಯುತ್ತಿರುವ ‘ಕಾವೇರಿ ಆರತಿ’ ಕಾರ್ಯಕ್ರಮವನ್ನು ನಿಲ್ಲಿಸುವಂತೆ ಕೋರಿ ವಕೀಲ ಜಿ.ಆರ್. ಮೋಹನ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ‘ಈ ಚಟುವಟಿಕೆಯಿಂದ ಜಲಮೂಲವನ್ನು ಆಶ್ರಯಿಸಿರುವ ಪಕ್ಷಿಗಳಿಗೆ ತೊಂದರೆ ಉಂಟಾಗುತ್ತದೆ’ ಎಂದು ಅವರು ಅರ್ಜಿ ಅಲ್ಲಿ ಉಲ್ಲೇಖಿಸಿದ್ದಾರೆ.

ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿಗೆ ನಡೆದಿರುವ ಸಿದ್ಧತೆ

‘ಜಲ ಸಂರಕ್ಷಣೆ ಅರಿವು ಮೂಡಿಸುವ ಉದ್ದೇಶ’

ಬೆಂಗಳೂರು: ನೀರಿನ ಮಹತ್ವ, ಕೆರೆಗಳು ಮತ್ತು ಜಲಮೂಲಗಳ ಸಂರಕ್ಷಣೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ‘ಕಾವೇರಿ ಆರತಿ’ ಕಾರ್ಯಕ್ರಮವನ್ನು ಸ್ಯಾಂಕಿ ಕೆರೆಯ ಆವರಣ ದಲ್ಲಿ ಆಯೋಜಿಸಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ .

1876 ರಲ್ಲಿ ಬೆಂಗಳೂರು ನಗರವು ತೀವ್ರ ಕ್ಷಾಮ ಹಾಗೂ ನೀರಿನ ಕೊರತೆಯಿಂದ ಬಳಲುತ್ತಿತ್ತು. ಆಗ ಪರಿಸ್ಥಿತಿಯನ್ನು ಸುಧಾರಿಸಲು, ಅಂದಿನ ಕರ್ನಲ್ ರಿಚರ್ಡ್ ಹಿರಾಮ್ ಸ್ಯಾಂಕಿ 1882 ರಲ್ಲಿ ಸ್ಯಾಂಕಿ ಕೆರೆ ನಿರ್ಮಿಸಿದರು. ಮಳೆ ನೀರು ಸಂಗ್ರಹದಿಂದ ನಗರದ ನೀರಿನ ಕೊರತೆ ನಿವಾರಿಸಬಹುದು ಎನ್ನುವುದನ್ನು ಈ ಮೂಲಕ ತಿಳಿಸಿಕೊಟ್ಟರು. ಒಂದೂವರೆ ಶತಮಾನದಿಂದ ಮಳೆ ನೀರು ಸಂಗ್ರಹದ ಮಹತ್ವ ಸಾರುತ್ತಿರುವ, ಸ್ಯಾಂಕಿ ಕೆರೆಯ ಮಹತ್ವದ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ರಾಮ್‌ಪ್ರಸಾತ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಮುಂದುವರಿಕೆ

ದೇವನಹಳ್ಳಿ: ತಾಲ್ಲೂಕಿನ ಬೀರಸಂದ್ರದಲ್ಲಿರುವ ಜಿಲ್ಲಾಡಳಿತ ಭವನದ ಆವರಣದಲ್ಲಿ ಚನ್ನರಾಯಪಟ್ಟಣ ಹೋಬಳಿಯ ರೈತರು ನಡೆಸುತ್ತಿರುವ ಅಹೋರಾತ್ರಿ ಧರಣಿ ಮಂಗಳವಾರವೂ ಮುಂದುವರಿಯಿತು.

1,080 ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಗೆ ಆದಿ ಚುಂಚನಗಿರಿ ಮಠದ ಚಿಕ್ಕಬಳ್ಳಾಪುರ ಶಾಖೆಯ ಮಂಗಳನಾಥ ಸ್ವಾಮೀಜಿ ಖುದ್ದು ಧರಣಿ ನಡೆಯುತ್ತಿರುವ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿ ರೈತರ ಹೋರಾಟಕ್ಕೆ ಬಲ ತುಂಬಿದರು.

ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ಮಂಗಳನಾಥ ಸ್ವಾಮೀಜಿ, ‘ರೈತರ ಸ್ಥಿತಿಯನ್ನು ಕಂಡು ಮನಸ್ಸಿಗೆ ತುಂಬಾ ನೋವಾಗುತ್ತಿದೆ. ಕೃಷಿಕರಿಗೆ ಸರ್ಕಾರ ನೀಡುತ್ತಿರುವ ಸಂಕಷ್ಟಗಳು ಅವರ ಜೀವನವನ್ನೇ ಹಾಳು ಮಾಡುವಂತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.‘ಅಭಿವೃದ್ಧಿ ಹೆಸರಿನಲ್ಲಿ ಅನ್ನದಾತರನ್ನು ಒಕ್ಕಲೆಬ್ಬಿಸಿ, ಕೈಗಾರಿಕೆ ಸ್ಥಾಪನೆ ಮಾಡಿ ಯಾರನ್ನು ಉದ್ಧಾರ ಮಾಡುತ್ತಾರೆ. ಫಲವತ್ತಾದ ಕೃಷಿ ಭೂಮಿಯನ್ನು ಬಿಟ್ಟು ಬರಡು ಭೂಮಿಯಲ್ಲಿ ಸರ್ಕಾರ ಕೈಗಾರಿಕೆಗಳನ್ನು ಮಾಡಿಕೊಳ್ಳಲಿ. ರೈತರಿಗೆ ಅನ್ಯಾಯ ಮಾಡಿದರೆ ಇಡೀ ದೇಶಕ್ಕೆ ಅನ್ಯಾಯ ಮಾಡಿದಂತೆ. ಕಂಪ್ಯೂಟರ್‌ಗಳಿಂದ ಅನ್ನ ಬೆಳೆಯಲು ಸಾಧ್ಯವಿಲ್ಲ’ ಎಂದರು.

ಚಿತ್ರಾವಳಿ

ರಾಜರಾಜೇಶ್ವರಿನಗರದ ಅನ್ನಪೂರ್ಣೇಶ್ವರಿ ಯುವಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪುನೀತ್ ರಾಜ್‌ಕುಮಾರ್ ಅವರ 50ನೇ ವರ್ಷದ ಜನ್ಮದಿನಾಚರಣೆಯಲ್ಲಿ ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಸದಸ್ಯರಾದ ಗಂಗಾಧರ್, ನವೀನ್ ಸುಂಕದಕಟ್ಟೆ, ಸುರೇಶ್, ಲೋಕೇಶ್, ಚಿತ್ರನಿರ್ಮಾಪಕ ರಾಮಣ್ಣ, ಸಪ್ತಗಿರಿ ಆನಂದ್ ಇದ್ದರು

ಮಲ್ಲತ್ತಹಳ್ಳಿಯಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಡಿ.ಕೆ.ಸುರೇಶ್, ನೆಲಮಂಗಲ ಶಾಸಕ ಎನ್.ಶ್ರೀನಿವಾಸ್ ಅವರನ್ನು ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ, ನೇತ್ರಾ ರಮೇಶ್, ನಳಿನ ಕೃಷ್ಣಪ್ಪ, ಸುಲಕ್ಷಣ ಬೈರೇಗೌಡ ಅವರು ಸನ್ಮಾನಿಸಿದರು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಬೆಂಗಳೂರು ಘಟಕ, ವೀರಶೈವ ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ ದಾಸರಹಳ್ಳಿ ಕ್ಷೇತ್ರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಕಾಯಕಯೋಗಿ ಸಹಕಾರ ಸಂಘ ನಿಯಮಿತ ಮತ್ತು ಅಕ್ಕಮಹಾದೇವಿ ಮಹಿಳಾ ಸಂಘದ ವತಿಯಿಂದ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ 118ನೇ ಜನ್ಮದಿನೋತ್ಸವದಲ್ಲಿ ರಾಯಚೂರಿನ ಮಹಾಂತೇಶ್ವರ ಮಠದ ಮಹಾಂತ ಸ್ವಾಮೀಜಿ ವಚನಾಮೃತ, ಆಧ್ಯಾತ್ಮಿಕ ಪ್ರವಚನ ನಡೆಸಿಕೊಟ್ಟರು



ಕೆಂಗೇರಿ ಉಪನಗರದ ಓಂಕಾರ್ ಬಾಯ್ಸ್ ಸಂಘದ ವತಿಯಿಂದ ಪುನೀತ್ ರಾಜ್‌ಕುಮಾರ್ ಅವರ 50ನೇ ಜನ್ಮದಿನ ಆಚರಿಸಲಾಯಿತು. ವಿಧಾನಪರಿಷತ್ ಸದಸ್ಯ ಟಿ.ಎನ್.ಜವರಾಯಿಗೌಡ, ಪಾಲಿಕೆ ಮಾಜಿ ಸದಸ್ಯ ಆಂಜನಪ್ಪ, ಮುಖಂಡರಾದ ಕೇಶವಮೂರ್ತಿ, ಕೃಷ್ಣಮೂರ್ತಿ, ಚೇತನ್ ಗೌಡ, ಶಶಿಕುಮಾರ್, ನಾಗರಾಜ್, ಪ್ರಭಾಕರ್ ಲಾಡರ್ ಉಪಸ್ಥಿತರಿದ್ದರು

‘ಯುಪಿಎಸ್‌ಸಿ ಪರೀಕ್ಷೆ ಪ್ರತ್ಯೇಕ ಅವಕಾಶ ಸಲ್ಲದು’

ನವದೆಹಲಿ (ಪಿಟಿಐ): ಕೇಂದ್ರ ಲೋಕ ಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆ ಬರೆಯಲು ‘ಸಹಜ ಅಭ್ಯರ್ಥಿಯಾಗಿ’ ಹಾಗೂ ‘ಅಂಗವಿಕಲ ಅಭ್ಯರ್ಥಿಯಾಗಿ’ ಪ್ರತ್ಯೇಕ ಅವಕಾಶ ಪಡೆದುಕೊಳ್ಳುವಂತಿಲ್ಲ ಎಂದು ಮಾಜಿ ಐಎಎಸ್ ಪ್ರೊಬೇಷನರಿ ಅಧಿಕಾರಿ ಪೂಜಾ ಖೇಡ್ಕರ್ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಪೂಜಾ ಅವರಿಗೆ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಒಂಬತ್ತು ಬಾರಿ ಅವಕಾಶ ನೀಡಲಾಗಿದೆ. ನಂತರ ಅವರು ಅಂಗವೈಕಲ್ಯದ ನಕಲಿ ಪ್ರಮಾಣಪತ್ರ ಪಡೆದು ಹೆಚ್ಚುವರಿ ಅವಕಾಶ ಪಡೆದಿದ್ದಾರೆ ಎಂದು ಆರೋಪಿಸಲಾಗಿತ್ತು. ಅಲ್ಲದೇ, ಅರ್ಹತೆ ಇಲ್ಲದಿದ್ದರೂ ಒಬಿಸಿ ಮತ್ತು ಅಂಗವಿಕಲ ಕೋಟಾ ಸೌಲಭ್ಯ ಪಡೆದ ಆರೋಪವನ್ನೂ ಅವರು ಎದುರಿಸುತ್ತಿದ್ದಾರೆ.

ದೆಹಲಿ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರಕ್ಕೆ ಪ್ರತಿಕ್ರಿಯೆ ಸಲ್ಲಿಸಲು ಪೂಜಾ ಅವರ ವಕೀಲರು ಸಮಯ ಕೇಳಿದ ಕಾರಣ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಎಸ್.ಸಿ. ಶರ್ಮ ಅವರು ಇರುವ ವಿಭಾಗೀಯ ಪೀಠವು ವಿಚಾರಣೆಯನ್ನು ಏಪ್ರಿಲ್ 15ಕ್ಕೆ ಮುಂದೂಡಿದೆ.

ಮದರಸಾ ವಿವಾದ: ಜಿಲ್ಲಾಧಿಕಾರಿಗೆ ತರಾಟೆ

ಮೈಸೂರಿನ ಮಸ್ಜಿದ್ ಎ ಸಿದ್ದಿಖಿ ಅಕ್ಬರ್ ಟ್ರಸ್ಟ್ ಅರ್ಜಿ • ಶಾಂತಿಸಭೆ ನಡೆಸಲು ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರು ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಹಲೀಂ ಸಾದಿಯಾ ಮದರಸಾವನ್ನು ಮಸೀದಿಯಾಗಿ ಪರಿವರ್ತನೆ ಮಾಡುವ ಚಟುವಟಿಕೆ ನಡೆಯುತ್ತಿವೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದಶಕಗಳಿಂದ ಮುಂದುವರಿದಿರುವ ವಿವಾದವನ್ನು ಬಗೆಹರಿಸಲು ಹೋದರೆ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ ಎಂಬ ಕಾರಣ ಮುಂದೊಡ್ಡಿ ಸಮಸ್ಯೆ ಪರಿಹರಿಸದೇ ಇರುವ ನಿಮ್ಮ ನಡೆ ಒಪ್ಪತಕ್ಕದ್ದಲ್ಲ’ ಎಂದು ಹೈಕೋರ್ಟ್ ಮೈಸೂರು ಜಿಲ್ಲಾಧಿಕಾರಿಯನ್ನು ತರಾಟೆಗೆ ತೆಗೆದುಕೊಂಡಿದೆ.

‘ಮಸ್ಜಿದ್ ಎ ಸಿದ್ದಿಖಿ ಅಕ್ಬರ್ ಟ್ರಸ್ಟ್ ಸಲ್ಲಿಸುವ ಮನವಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ನ್ಯಾ.ಎಂ.ನಾಗಪ್ರಸನ್ನ ಅವರು ನೀಡಿರುವ ಆದೇಶ ಪಾಲನೆ ಮಾಡಲು ಸರ್ಕಾರ ವಿಫಲವಾಗಿದೆ’ ಎಂದು ಆರೋಪಿಸಿ ಗಾಯತ್ರಿಪುರಂ ಎರಡನೇ ಹಂತದಲ್ಲಿರುವ ಹಲೀಂ ಸಾದಿಯಾ ಶೈಕ್ಷಣಿಕ ಸಂಸ್ಥೆ ಮತ್ತು ಮಸ್ಜಿದ್ ಎ ಸಿದ್ದಿಖಿ ಅಕ್ಬರ್ ಟ್ರಸ್ಟ್‌ನ ಅಧಿಕೃತ ಪ್ರತಿನಿಧಿ ಮುನಾವರ್ ಪಾಶ ಬಿನ್ ಅಬ್ದುಲ್ ವಹೀದ್ ಅವರು ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾ. ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಮೊಹಮದ್ ತಾಹೀರ್, ‘ಸರ್ಕಾರ ಸಬೂಬು ಹೇಳಿ ಬೇಕೆಂದೇ ಸಮಸ್ಯೆ ಬಗೆಹರಿಸುವ ಮನಸ್ಸು ಮಾಡುತ್ತಿಲ್ಲ’ ಎಂದು ಆರೋಪಿಸಿದರು.

ಇದನ್ನು ಅಲ್ಲಗಳೆದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಿ.ಎಸ್. ಪ್ರದೀಪ್ ಮತ್ತು ಸರ್ಕಾರದ ಪರ ವಕೀಲೆ ಬಿ.ಜಿ. ನಮಿತಾ ಮಹೇಶ್, ‘ಇದೊಂದು ದಶಕಗಳಿಂದ ನನೆಗುದಿಗೆ ಬಿದ್ದಿರುವ ವಿಷಯ. ಇದಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆ ಮತ್ತು ಅಪರಾಧಿಕ ಕೃತ್ಯಗಳಲ್ಲಿ ಈತನಕ ಕನಿಷ್ಠ 10 ಜನ ಬಲಿಯಾಗಿದ್ದಾರೆ. 64 ಕ್ರಿಮಿನಲ್ ಪ್ರಕರಣ ದಾಖಲಾಗಿವೆ’ ಎಂದು ವಸ್ತುಸ್ಥಿತಿಯನ್ನು ನ್ಯಾಯಪೀಠಕ್ಕೆ ಅರುಹಿದರು.

ವಾದ ಆಲಿಸಿದ ನ್ಯಾಯಪೀಠ, ವಿಚಾರಣೆಯಲ್ಲಿ ಖುದ್ದು ಹಾಜರಿದ್ದ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಮತ್ತು ಮೈಸೂರು ನಗರ ಪೊಲೀಸ್ ಎಸಿಪಿ ಕೆ.ರಾಜೇಂದ್ರ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು.

‘ಯಥಾಸ್ಥಿತಿ ಕಾಪಾಡುವ ಆದೇಶವನ್ನೇ ಮುಂದುವರಿಸಿಕೊಂಡು ಹೋಗುತ್ತೇವೆ ಎನ್ನುವುದಾದರೆ ನೀವು ಇರುವುದಾದರೂ ಯಾತಕ್ಕೆ? ಕಾನೂನು ಸುವ್ಯವಸ್ಥೆ ಪಾಲಿಸಲು ಕಷ್ಟ ಎನ್ನುವ ನೀವು ಮುಖ್ಯಮಂತ್ರಿ ತವರು ಜಿಲ್ಲೆಯಲ್ಲೇ ಇಂತಹ ಸಮಸ್ಯೆ ಬಗೆಹರಿಸಲಿಲ್ಲ ಎಂದರೆ ಇನ್ನಾವ ಜಿಲ್ಲೆಯ ಸಮಸ್ಯೆ ಬಗೆಹರಿಸಬಲ್ಲಿರಿ? ಜಿಲ್ಲಾಧಿಕಾರಿ ಹುದ್ದೆ ಎಂದರೆ ಅದೇನು ಎಂಜಾಯ್ ಮಾಡುವುದಕ್ಕೆ ಇದೆಯಾ?’ ಎಂದು ಕಿಡಿ ಕಾರಿತು.

ಇದಕ್ಕೆ ಲಕ್ಷ್ಮಿಕಾಂತ ಅವರು, ‘ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ’ ಎಂದು ಸಮಜಾಯಿಷಿ ನೀಡಿದರು. ಈ ಮಾತಿಗೆ ದನಿಗೂಡಿಸಿದ ಪ್ರದೀಪ್, ‘ಶಾಂತಿಸಭೆ ನಡೆಸಿದರೆ ಸಭೆಯಲ್ಲಿ ಭಾಗವಹಿಸಿದವರನ್ನು ಗುರಿ ಮಾಡಲಾಗುತ್ತದೆ. ಇದರಲ್ಲಿ ಎರಡೂ ಕೋಮಿನ ಜನರಿಗೂ ಅಪಾಯ ಇದೆ’ ಎಂದು ಆತಂಕ ವ್ಯಕ್ತಪಡಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಕೂಡಲೇ ಶಾಂತಿಸಭೆ ನಡೆಸಿ ಮುಂದಿನ ವಿಚಾರಣೆಯಲ್ಲಿ ಅದರ ವರದಿ ಸಲ್ಲಿಸಿ’ ಎಂದು ತಾಕೀತು ಮಾಡಿ ವಿಚಾರಣೆಯನ್ನು ಏಪ್ರಿಲ್ 3ಕ್ಕೆ ಮುಂದೂಡಿತು.

ಬಾಲಕಿ ಮೇಲೆ ಅತ್ಯಾಚಾರ: ಅಪರಾಧಿಗೆ 35 ವರ್ಷ ಜೈಲು ಶಿಕ್ಷೆ

ಕಲಬುರಗಿ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಾಬೀತಾಗಿದ್ದರಿಂದ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೊ) ನ್ಯಾಯಾಲಯವು ಅಪರಾಧಿಗೆ 35 ವರ್ಷ ಜೈಲು ಶಿಕ್ಷೆಯನ್ನು ಮಂಗಳವಾರ ವಿಧಿಸಿದೆ.

ವಾಡಿ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರ ನಿವಾಸಿ ರಿಜ್ವಾನ್ ಮಹಿಬೂಬ್‌ಸಾಬ್ ಬಳಗಾರ (21) ಶಿಕ್ಷೆಗೆ ಗುರಿಯಾದ ಅಪರಾಧಿ.

15 ವರ್ಷದ ಬಾಲಕಿಯನ್ನು ಪ್ರೀತಿಸಿ ಮದುವೆಯಾಗುವುದಾಗಿ ರಿಜ್ವಾನ್ ನಂಬಿಸಿದ್ದ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಆತ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಈ ಬಗ್ಗೆ ಯಾರಿಗಾದರೂ ಹೇಳಿದರೆ ಸಾಯಿಸುವುದಾಗಿ ಬೆದರಿಕೆ ಹಾಕಿದ್ದ. ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಬಾಲಕಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅತ್ಯಾಚಾರದಿಂದ ಗರ್ಭಿಣಿಯಾಗಿರುವುದು ಬೆಳಕಿಗೆ ಬಂದಿದೆ. ಪೋಷಕರು ರಿಜ್ವಾನ್‌ನನ್ನು ಮನೆಗೆ ಕರೆಸಿ ವಿಚಾರಿಸಿದಾಗ, ಬಾಲಕಿ ಅನ್ಯ ಜಾತಿಯವಳು ಎಂಬ ಕಾರಣಕ್ಕೆ ಮದುವೆಯಾಗಲು ನಿರಾಕರಿಸಿದ್ದ. ಕೆಲ ತಿಂಗಳ ಬಳಿಕ ಬಾಲಕಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ತನಿಖಾಧಿಕಾರಿಗಳಾದ ವಾಡಿ ಠಾಣೆಯ ಎಸ್.ಎಚ್. ಶೀಲವಂತ, ಪಿಎಸ್‌ಐ ತಿರುಮಲೇಶ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು, ರಿಜ್ವಾನ್‌ಗೆ ಎಸ್‌ಸಿ, ಎಸ್‌ಟಿ ಪಿಎ, ಪೋಕ್ಸೊ ಕಾಯ್ದೆಯ ವಿವಿಧ ಸೆಕ್ಷನ್ ಅಡಿ ಜೈಲು ಶಿಕ್ಷೆ ಮತ್ತು ₹34 ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ. ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ₹7 ಲಕ್ಷವನ್ನು ಪರಿಹಾರವಾಗಿ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ. ಸರ್ಕಾರದ ಪರ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ.ತುಪ್ಪದ ವಾದ ಮಂಡಿಸಿದ್ದರು.

‘ಸೀಮಿತ ಕದನ ವಿರಾಮ?’

ವಾಷಿಂಗ್ಟನ್(ಎಪಿ): ಉಕ್ರೇನ್ ವಿರುದ್ಧ ಯುದ್ಧ ನಿರತ ರಷ್ಯಾ, ಅಲ್ಲಿನ ಇಂಧನ ಮತ್ತು ಮೂಲಸೌಕರ್ಯಗಳನ್ನು ಗುರಿಯಾಗಿಸಿ ತಾನು ನಡೆಸುತ್ತಿರುವ ದಾಳಿಗೆ ಸಂಬಂಧಿಸಿ ‘ಸೀಮಿತ ಕದನ ವಿರಾಮ’ ಘೋಷಿಸುವ ಸಾಧ್ಯತೆ ಇದೆ ಎಂದು ಶ್ವೇತಭವನ ಮಂಗಳವಾರ ಹೇಳಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ದೂರವಾಣಿ ಮೂಲಕ ಮಾತುಕತೆ ನಡೆಸಿದ ವೇಳೆ ಈ ಕುರಿತು ಚರ್ಚೆನಡೆದಿದ್ದು, ‘ಸೀಮಿತ ಕದನ ವಿರಾಮ’ದ ಬಗ್ಗೆ ಉಭಯ ನಾಯಕರಲ್ಲಿ ಸಹಮತ ಮೂಡಿದೆ ಎಂದು ಶ್ವೇತಭವನ ತಿಳಿಸಿದೆ.

ಉಕ್ರೇನ್ ವಿರುದ್ಧದ ಯುದ್ಧ ಕೊನೆಗಾಣಿಸಿ, ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಇಟ್ಟಿರುವ ಮೊದಲ ಹೆಜ್ಜೆ ಇದು ಎಂದು ಶ್ವೇತಭವನ ಬಣ್ಣಿಸಿದೆ.

‘ಈ ಕದನ ವಿರಾಮವು, ಕಪ್ಪು ಸಮುದ್ರದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೂ ಅನ್ವಯವಾಗಲಿದೆ ಹಾಗೂ ಆ ಮೂಲಕ ಉಭಯ ದೇಶಗಳ ನಡುವಿನ ಯುದ್ಧ ಸಂಪೂರ್ಣವಾಗಿ ನಿಲ್ಲುವ ವಿಶ್ವಾಸ ಇದೆ’ ಎಂದೂ ಹೇಳಿದೆ.

‘ಈ ಕುರಿತ ಮಾತುಕತೆಗಳಿಗೆ ಶೀಘ್ರವೇ ಚಾಲನೆ ನೀಡಲಾಗುವುದು’ ಎಂದು ಶ್ವೇತಭವನ ಹೇಳಿದ್ದರೂ, ಹಂತಹಂತವಾಗಿ ಜಾರಿಯಾಗುವ ಕದನ ವಿರಾಮ ಕುರಿತ ಮಾತುಕತೆಯಲ್ಲಿ ಉಕ್ರೇನ್ ಕೂಡ ಪಾಲ್ಗೊಳ್ಳಲಿದೆಯೇ ಎಂಬುದು ಸ್ಪಷ್ಟವಾಗಿಲ್ಲ ಎಂದು ಮೂಲಗಳು ಹೇಳಿವೆ.

ಸುದೀರ್ಘ ಮಾತುಕತೆ: ಅಧ್ಯಕ್ಷ ಟ್ರಂಪ್ ಹಾಗೂ ವ್ಲಾಡಿಮಿರ್ ಪುಟಿನ್ ಅವರು ಸುದೀರ್ಘ ಮಾತುಕತೆ ನಡೆಸಿದರು. ಯುದ್ಧ ನಿಲ್ಲಿಸುವುದಕ್ಕೆ ಸಂಬಂಧಿಸಿ ತಾನು ಮುಂದಿಟ್ಟಿರುವ 30 ದಿನಗಳ ಕದನ ವಿರಾಮ ಕುರಿತ ಮಾತುಕತೆಗೆ ಶ್ವೇತಭವನ ಒತ್ತು ನೀಡಿತು.

ಡೊನಾಲ್ಡ್ ಟ್ರಂಪ್ ಹಾಗೂ ವ್ಲಾಡಿಮಿರ್ ಪುಟಿನ್ ಮಂಗಳವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದರು ಎಎಫ್‌ಪಿ ಚಿತ್ರ

ಐ ಲೀಗ್ ಫುಟ್‌ಬಾಲ್: ರಿಯಲ್ ಕಾಶ್ಮೀರ ತಂಡಕ್ಕೆ ನಿರಾಸೆ

ಎಸ್‌.ಸಿ. ಬೆಂಗಳೂರು ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು ಮಂಗಳವಾರ ನಡೆದ ಐ ಲೀಗ್ ಫುಟ್‌ಬಾಲ್ ಟೂರ್ನಿಯ ರೋಚಕ ಪಂದ್ಯದಲ್ಲಿ ರಿಯಲ್ ಕಾಶ್ಮೀರ ಎಫ್‌ಸಿ ತಂಡದ ವಿರುದ್ಧ 3–2 ಗೋಲುಗಳಿಂದ ಗೆಲುವು ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆತಿಥೇಯ ತಂಡದ ಸನಟೊಂಬ ಸಿಂಗ್ ಅವರಿಗೆ 60ನೇ ನಿಮಿಷದಲ್ಲಿ ಕೆಂಪು ಕಾರ್ಡ್ ದರ್ಶನವಾಯಿತು. ನಂತರವೂ ಬೆಂಗಳೂರು ತಂಡ ಹಿಡಿತವನ್ನು ಸಡಿಲಿಸದೆ ಪಾರಮ್ಯ ಮೆರೆಯಿತು. ಹಿಂಬಡ್ತಿಯ ಆತಂಕದಲ್ಲಿದ್ದ ಬೆಂಗಳೂರು ತಂಡಕ್ಕೆ ಈ ಗೆಲುವಿನಿಂದ ಮಹತ್ವದ ಬಡ್ತಿ ದೊರೆಯಿತು.

ಥೋಮ್ಯಾ ಶಿಮ್ರೆ ಐದನೇ ನಿಮಿಷದಲ್ಲೇ ಬೆಂಗಳೂರು ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ, 20 ನಿಮಿಷ ಅಂತರದಲ್ಲಿ ಗ್ನೋಹೆರೆ ಕ್ರಿಜೊ (12ನೇ ನಿ ಮತ್ತು 32ನೇ ನಿ) ರಿಯಲ್ ಕಾಶ್ಮೀರ ತಂಡದ ಪರ ಚೆಂಡನ್ನು ಗುರಿ ಸೇರಿಸಿ, ತಂಡಕ್ಕೆ ಮುನ್ನಡೆ ಒದಗಿಸಿದರು.

ಅದಾದ ನಾಲ್ಕೇ ನಿಮಿಷದಲ್ಲಿ ಬೆಂಗಳೂರು ತಂಡದ ಶ್ರವಣ್ ಶೆಟ್ಟಿ (36ನೇ) ಗೋಲು ಗಳಿಸಿದರು. ಹೀಗಾಗಿ, ತಂಡಗಳ ಸ್ಕೋರ್ 2–2 ಸಮಬಲಗೊಂಡಿತು. ಉತ್ತರಾರ್ಧದಲ್ಲಿ ಫಸ್ಲುರೆಹಮಾನ್ ಮೆತುಕಯಿಲ್ (48ನೇ ನಿ.) ಬೆಂಗಳೂರು ಪರ ಗೆಲುವಿನ ಗೋಲು ದಾಖಲಿಸಿದರು.

ಈ ಗೆಲುವಿನೊಂದಿಗೆ ಬೆಂಗಳೂರು ತಂಡವು 19 ಪಂದ್ಯಗಳಿಂದ 20 ಅಂಕ ಸಂಪಾದಿಸಿ (5 ಗೆಲುವು, 5 ಡ್ರಾ, 9 ಸೋಲು) ಐಜ್ವಾಲ್ ಎಫ್.ಸಿ. ತಂಡವನ್ನು ಹಿಂದಿಕ್ಕಿ 10ನೇ ಸ್ಥಾನಕ್ಕೆ ಏರಿತು. ಕಾಶ್ಮೀರ ತಂಡವು 19 ಪಂದ್ಯಗಳಿಂದ 32 ಅಂಕಗಳೊಂದಿಗೆ (9 ಗೆಲುವು, 5 ಡ್ರಾ, 5 ಸೋಲು) ಮೂರನೇ ಸ್ಥಾನದಲ್ಲಿದೆ.

ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡದ ಶ್ರವಣ್ ಶೆಟ್ಟಿ (ಎಡ) ಮತ್ತು ರಿಯಲ್ ಕಾಶ್ಮೀರ ಎಫ್‌ಸಿಯ ಮೊಹಮ್ಮದ್ ಆಕೀಬ್ ಚೆಂಡಿಗಾಗಿ ಸೆಣಸಾಟ ನಡೆಸಿದರು

ಚಿತ್ರ: ಪುಷ್ಕರ್ ವಿ.

ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಎಂಎನ್‌ಕೆ ರಾವ್ ತಂಡ ಕ್ವಾರ್ಟರ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಶಿಷ್ಠ ಮತ್ತು ಜಾಧವ್ ಅವರ ಆಟದ ಬಲದಿಂದ ಆತಿಥೇಯ ಎಂ.ಎನ್.ಕೆ ರಾವ್ ತಂಡವು ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ರೋಚಕ ಪಂದ್ಯದಲ್ಲಿ 53–51ರಿಂದ ವೈಒಎಸ್‌ಸಿ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಬಸವನಗುಡಿಯ ಎಂ.ಎನ್. ಕೆ. ರಾವ್ ಪಾರ್ಕ್ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ನಾಲ್ಕನೇ ದಿನವಾದ ಮಂಗಳವಾರ ಪ್ರಿ ಕ್ವಾರ್ಟರ್ ಫೈನಲ್ ಹಂತದ ಪಂದ್ಯಗಳು ನಡೆದವು.

ಆತಿಥೇಯ ತಂಡವು ವಿರಾಮದ ವೇಳೆ 10 ಅಂಕಗಳ (28–16) ಮುನ್ನಡೆ ಪಡೆದಿತ್ತು. ಆದರೆ, ಉತ್ತರಾರ್ಧದಲ್ಲಿ ವೈಒಎಸ್‌ಸಿ ತಂಡ ಚುರುಕಿನ ಆಟವಾಡಿ ತೀವ್ರ ಪೈಪೋಟಿ ನೀಡಿ, ಎರಡು ಪಾಯಿಂಟ್ಸ್‌ಗಳಿಂದ ಪರಾಭವಗೊಂಡಿತು. ವಶಿಷ್ಠ ಮತ್ತು ಜಾಧವ್ ಕ್ರಮವಾಗಿ 17 ಮತ್ತು 13 ಗಳಿಸಿದರು. ವೈಒಎಸ್‌ಸಿ ತಂಡದ ಅವ್ಯಂ 19, ದೈವಿಕ್ 10 ಪಾಯಿಂಟ್ಸ್ ಗಳಿಸಿದರು.

ಕ್ವಾರ್ಟರ್ ಫೈನಲ್ ಪಂದ್ಯಗಳ ಫಲಿತಾಂಶ: ಪುರುಷರು: ಪಿಪಿಸಿ (ಅಕ್ಷತ್ 21, ಆರ್ಯಮಾನ್ 10) 49–30ರಿಂದ ದಕ್ಷಿಣ ಕನ್ನಡ ಜಿಲ್ಲೆ ವಿರುದ್ಧ; ಮೈಸೂರು ಜಿಲ್ಲೆ ಎ (ಕುಶಾಲ್ 30) 49–31ರಿಂದ ಹೆಬ್ಬಾಳ (ಸುಹಾಸ್ 15, ಚರಣ್‌ರಾಜ್ 10) ವಿರುದ್ಧ; ವಿಮಾನಪುರ ಎಸ್‌.ಸಿ (ಪ್ರಣೀತ್ 14) 50–36ರಿಂದ ಎವಿಬಿಸಿ ವಿರುದ್ಧ; ಎಚ್‌ಬಿಆರ್ ಬಿ.ಸಿ (ರಿಶಿತ್ 18, ಸಂವೇಗ್ 16) 49–28ರಿಂದ ಕೋರಮಂಗಲ ಎಸ್‌.ಸಿ ವಿರುದ್ಧ; ಎಂಸಿಎಚ್‌ಎಸ್ (ಕುಶಾಲ್ 18, ಅರ್ಚಿತ್ 12) 53–36ರಿಂದ ಮೈಸೂರು ಜಿಲ್ಲೆ ಬಿ (ಕೇಶವ್ 10, ಇಮ್ಯಾನುಯೆಲ್ 10) ವಿರುದ್ಧ; ಬೀಗಲ್ಸ್ ಎಸ್‌.ಸಿ (ಸೌರವ್ 10, ಅರ್ಮಾನ್ 13) 48–6ರಿಂದ ಹಾಸನ ಜಿಲ್ಲೆ ವಿರುದ್ಧ; ವೈಎನ್‌ಬಿಸಿ (ಚತುರ 31) 49–47ರಿಂದ (ಸೋಮ 11, ಮಧುಸೂದನ್ 10) ಬೆಂಗಳೂರು ಸ್ಪೋರ್ಟಿಂಗ್ ವಿರುದ್ಧ ಜಯ ಸಾಧಿಸಿದವು.

ಮಹಿಳೆಯರ ವಿಭಾಗ: ಡಿವೈಇಎಸ್ ವಿದ್ಯಾನಗರ (ಶೀತಲ್ 10, ಇಶಿತಾ 10) 30–12ರಿಂದ (ಪೂರ್ವಿ 10) ಎದುರು; ಭಾರತ್ ಎಸ್‌.ಯು 39–31ರಿಂದ ಧಾರವಾಡ ಜಿಲ್ಲೆ ಬಿ ಎದುರು; ಪಿಪಿಸಿ (ಮಹೇಕ್ ಎಸ್ 21) 45–23ರಿಂದ ಜೆಎಸ್‌ಸಿ ಎದುರು; ವಿವೇಕ್ಸ್ ಎಸ್‌ಸಿ (ರುತ್ 14, ಆರೋಹಿ 11) 37–19ರಿಂದ ವೈಒಎಸ್‌ಸಿ ಎದುರು; ಬೆಂಗಳೂರು ವ್ಯಾನ್ಗಾರ್ಡ್ಸ್ (ಅದಿತಿ ಎಸ್.33) 51–35ರಿಂದ ಬೀಗಲ್ಸ್ ಬಿ.ಸಿ (ನೇತ್ರಾ 11) ಎದುರು; ಎಂ.ಎನ್. ಕೆ. ರಾವ್ (ಹಿಯಾ 30) 46–40ರಿಂದ ಹಾಸನ ಜಿಲ್ಲೆ (ನೇಹಾ 26, ಶ್ರೇಷ್ಠಾ 10) ಎದುರು; ಮೈಸೂರು ಜಿಲ್ಲೆ ಎ (ಅಂಚಲ್ 22, ಶ್ರಾವಣಿ 16) 59–27ರಿಂದ ಬೆಂಗಳೂರು ಸ್ಪೋರ್ಟಿಂಗ್ (ಪವಿತ್ರಾ 13, ಹಲೀಮಾ 10) ಎದುರು ಗೆಲುವು ಸಾಧಿಸಿದವು.

ಅಪಘಾತ: ಹಿಂಬದಿ ಕುಳಿತಿದ್ದ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನದಲ್ಲಿದ್ದ ಮಹಿಳೆ ರಾಷ್ಟ್ರೀಯ ಹೆದ್ದಾರಿ 75ರ ಮೇಲ್ಸೇತುವೆಯ ಮೇಲಿಂದ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ಮಂಗಳವಾರ ಮುಂಜಾನೆ ನಡೆದಿದೆ.

ತಾಲ್ಲೂಕಿನ ತೊಂಡಹಳ್ಳಿ ಗ್ರಾಮದ ಸುಮಮ್ಮ (45) ಮೃತ ಮಹಿಳೆ.

ಸುಮಮ್ಮ ಅವರು ಪತಿ ಭಾಸ್ಕರ್ ಜೊತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಕೋಲಾರ ಕಡೆಯಿಂದ ಸ್ವಗ್ರಾಮದ ಕಡೆಗೆ ತೆರಳುವಾಗ ಸೊಣ್ಣವಾಡಿ ಮೇಲ್ಸೇತುವೆ ಮೇಲೆ ಘಟನೆ ನಡೆದಿದೆ.

ದ್ವಿಚಕ್ರ ವಾಹನ ಸವಾರ ಭಾಸ್ಕರ್ ಅವರಿಗೂ ಗಂಭೀರ ಗಾಯಗಳಾಗಿವೆ. ಸದ್ಯ ಅವರು ಕೋಲಾರ ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತಂತ್ರಜ್ಞಾನ



ಚೀನಾದ ವುಕ್ಸಿ ಬೈಟಾ ಫಾರ್ಮಾಟೆಕ್ ಕಂಪನಿ ಅಭಿವೃದ್ಧಿ ಪಡಿಸಿರುವ ಪರಮಾಣು ಬ್ಯಾಟರಿಯ ಮೂಲಮಾದರಿ (ಚಿತ್ರ: ಕ್ಸಿನ್‌ಹುವಾ ವೆಬ್‌ಸೈಟ್)

ಪರಮಾಣು ಬ್ಯಾಟರಿ ಭವಿಷ್ಯದ 'ಶಕ್ತಿ'ಕೋಶ?

ಸೂರ್ಯನಾರಾಯಣ ವಿ.

ರೀಚಾರ್ಜ್ ಮಾಡದೆಯೇ ನೂರಾರು ವರ್ಷಗಳವರೆಗೆ ಕೆಲಸ ಮಾಡಬಲ್ಲ ಪರಮಾಣುಶಕ್ತಿ ಆಧಾರಿತ ಸಣ್ಣ ಬ್ಯಾಟರಿಯ ಮೂಲ ಮಾದರಿಯನ್ನು ಅಭಿವೃದ್ಧಿಪಡಿಸಿರುವುದಾಗಿ ಚೀನಾದ ವುಕ್ಸಿ ಬೈಟಾ ಫಾರ್ಮಾಟೆಕ್ ಕಂಪನಿ ಕಳೆದ ವಾರ ಹೇಳಿಕೊಂಡಿದೆ. ಚೀನಾದ ನಾರ್ತ್‌ವೆಸ್ಟ್ ನಾರ್ಮಲ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಈ ಬ್ಯಾಟರಿಯನ್ನು ಅಭಿವೃದ್ಧಿ ಪಡಿಸಿರುವುದಾಗಿ ಅದು ಹೇಳಿದೆ. ಕಾರ್ಬನ್‌–14 (ಸಿ–14) ರೇಡಿಯೊ ಐಸೊಟೋಪ್ (ವಿಕಿರಣಪಟು ಸಮಸ್ಥಾನಿ) ಬಳಸಿಕೊಂಡು ಈ ಮೂಲಮಾದರಿ ಬ್ಯಾಟರಿಯನ್ನು ತಯಾರಿಸಲಾಗಿದೆ. ಅದಕ್ಕೆ 'ಝುಲಾಂಗ್‌–1' ಎಂದು ಹೆಸರಿಡಲಾಗಿದೆ.

ಕಳೆದ ವರ್ಷದ ಜನವರಿಯಲ್ಲಿ ಚೀನಾದ ರಾಜಧಾನಿ ಬೀಜಿಂಗ್‌ನ ಬೀಟಾವೋಲ್ಟ್ ಟೆಕ್ನಾಲಜಿ ಎಂಬ ನವೋದ್ಯಮ ಕಂಪನಿಯು ರೀಚಾರ್ಜ್ ಮಾಡದೆ 50 ವರ್ಷಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸಬಲ್ಲ ನಾಣ್ಯಕ್ಕಿಂತಲೂ ಚಿಕ್ಕ ಗಾತ್ರದ ಪರಮಾಣುಶಕ್ತಿ ಆಧಾರಿತ 'ಬಿವಿ100' ಎಂಬ ಪುಟಾಣಿ ಬ್ಯಾಟರಿಯನ್ನು ಅಭಿವೃದ್ಧಿ ಪಡಿಸಿ ಜಗತ್ತಿನಾದ್ಯಂತ ಸದ್ದು ಮಾಡಿತ್ತು. ಈ ಬ್ಯಾಟರಿಗೆ ಕಂಪನಿಯು ನಿಕ್ಕೆಲ್‌–63 ರೇಡಿಯೊ ಐಸೊಟೋಪ್ ಬಳಸಿತ್ತು.

> ಪರಮಾಣುಶಕ್ತಿಯುತ ಬ್ಯಾಟರಿಗಳು ದೀರ್ಘ ಅವಧಿಗೆ ಬಾಳಿಕೆ ಏನೋ ಬರುತ್ತವೆ. ಆದರೆ, ಪರಮಾಣು ಎಂದ ತಕ್ಷಣ ಅಲ್ಲಿ ವಿಕಿರಣದಿಂದಾಗುವ ಅಡ್ಡಪರಿಣಾಮದ ಆತಂಕ ಇದ್ದೇ ಇರುತ್ತದೆ. ಬ್ಯಾಟರಿಗಳ ವಿಚಾರದಲ್ಲೂ ವಿಕಿರಣದಿಂದ ಮನುಷ್ಯರು, ಪರಿಸರದ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ವಿಜ್ಞಾನಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಅಧ್ಯಯನಗಳೂ ನಡೆದಿವೆ.
>
> **ವಿಕಿರಣದ ಆತಂಕ**
>
> 'ಮಾನವನ ದೇಹ ವಿಕಿರಣಕ್ಕೆ ತೆರೆದುಕೊಳ್ಳುವುದು, ವಿಕಿರಣಗಳು ವಾತಾವರಣಕ್ಕೆ ಸೋರಿಕೆಯಾಗುವುದು ಮನುಷ್ಯನ ಆರೋಗ್ಯಕ್ಕೆ ಕುತ್ತು ತರಬಹುದು. ಹೀಗಿರುವಾಗ ಪರಮಾಣುಶಕ್ತಿಯಿಂದಲೇ ಕಾರ್ಯನಿರ್ವಹಿಸುವ ಬ್ಯಾಟರಿಗಳನ್ನು ಅಳವಡಿಸಿರುವ ಸಾಧನಗಳನ್ನು ಬಳಸುವುದು ಅಪಾಯಕಾರಿ' ಎಂಬುದು ವಿಜ್ಞಾನಿಗಳ ಕಳವಳ.

ಬ್ರಿಟನ್ನಿನ ಪರಮಾಣುಶಕ್ತಿ ಪ್ರಾಧಿಕಾರ ಮತ್ತು ಬ್ರಿಸ್ಟಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು, ಸಾವಿರಾರು ವರ್ಷಗಳ ವರೆಗೆ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಶಕ್ತಿಯನ್ನು ಪೂರೈಸಬಲ್ಲ ಕಾರ್ಬನ್‌–14 ಬ್ಯಾಟರಿಯನ್ನು ಅಭಿವೃದ್ಧಿ ಪಡಿಸಿರುವುದಾಗಿ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಘೋಷಿಸಿದ್ದರು.

ಅಮೆರಿಕದ ಸಿಟಿಲ್ಯಾಬ್ಸ್ ಎಂಬ ಕಂಪನಿಯು ಜಲಜನಕದ ರೇಡಿಯೊ ಐಸೊಟೋಪ್ ಆಗಿರುವ ಟ್ರಿಷಿಯಮ್ ಅನ್ನು ಬಳಸಿಕೊಂಡು ಪರಮಾಣುಶಕ್ತಿ ಆಧಾರಿತ ಪುಟ್ಟ ಬ್ಯಾಟರಿಯನ್ನು ಅಭಿವೃದ್ಧಿ ಪಡಿಸಿದೆ. ಈ ಕಂಪನಿಯು 2010ರಿಂದಲೇ ಇಂತಹ ಬ್ಯಾಟರಿಗಳ ಉತ್ಪಾದನೆಯಲ್ಲಿ ತೊಡಗಿದೆ.

ಇವು ನಾಲ್ಕು ಉದಾಹರಣೆಗಳಷ್ಟೆ. ಅಮೆರಿಕ ಸೇರಿ ಜಗತ್ತಿನ ವಿವಿಧ ರಾಷ್ಟ್ರಗಳ ಕಂಪನಿಗಳು ಪರಮಾಣುಶಕ್ತಿಯನ್ನು ಬಳಸಿಕೊಂಡು ಕಾರ್ಯನಿರ್ವಹಿಸುವ ಸಣ್ಣ ಬ್ಯಾಟರಿಗಳನ್ನು ಅಭಿವೃದ್ಧಿ ಪಡಿಸುತ್ತಿವೆ. ಜಗತ್ತಿನಲ್ಲಿ ಈಗ ಪರಮಾಣು ಬ್ಯಾಟರಿಗಳ ಅಭಿವೃದ್ಧಿಯಲ್ಲಿ ಕಂಪನಿಗಳ ನಡುವೆ ಸಮರವೇ ನಡೆಯುತ್ತಿದೆ.

ಪರಮಾಣುಶಕ್ತಿ ಆಧಾರಿತ ಬ್ಯಾಟರಿ ತಂತ್ರಜ್ಞಾನ ಹೊಸದೇನಲ್ಲ. ಹಲವು ದಶಕಗಳಿಂದಲೇ ತಂತ್ರಜ್ಞಾನ ಜಗತ್ತಿಗೆ ಇದರ ಪರಿಚಯ ಇದೆ. ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಇದರ ಬಳಕೆ ಹೆಚ್ಚಿದೆ. ಅನ್ಯಗ್ರಹಗಳಿಗೆ ಕಳುಹಿಸುವ ರೋವರ್‌ಗಳು, ಗಗನನೌಕೆಗಳಿಗೆ ದೀರ್ಘ ಸಮಯಕ್ಕೆ ವಿದ್ಯುತ್ ಪೂರೈಕೆಯ ಅಗತ್ಯ ಇರುವುದರಿಂದ ರೇಡಿಯೊ ಐಸೊಟೋಪ್‌ಗಳನ್ನು ಬಳಸಿ ತಯಾರಿಸಿದ ಬ್ಯಾಟರಿಗಳನ್ನು ಬಳಸುವ ಕ್ರಮ ಇದೆ. 2013ರಲ್ಲಿ ಚೀನಾವು ಚಂದ್ರನಲ್ಲಿಗೆ ಕಳುಹಿಸಿದ್ದ ಚಾಂಗ್‌'ಇ–3 ರೋವರ್, ನಾಸಾವು ಮಂಗಳನಲ್ಲಿಗೆ ಕಳುಹಿಸಿದ್ದ ಕ್ಯೂರಿಯಾಸಿಟಿ ಮತ್ತು ಪರ್ಸಿವರೆನ್ಸ್ ರೋವರ್‌ಗಳಲ್ಲೂ ಇದೇ ತಂತ್ರಜ್ಞಾನದ ಬ್ಯಾಟರಿ ಬಳಸಲಾಗಿತ್ತು (ಆ ಬ್ಯಾಟರಿಗಳಲ್ಲಿ ಪ್ಲುಟೋನಿಯಂ–238 ಬಳಸಲಾಗಿತ್ತು).

ಈಗ ಜಗತ್ತಿನ ಹಲವು ಕಂಪನಿಗಳು ಐಸೊಟೋಪ್ ತಂತ್ರಜ್ಞಾನವನ್ನು ಬಳಸಿಕೊಂಡು ಚಿಕ್ಕದಾದ ಮತ್ತು ವಾಣಿಜ್ಯ ಉದ್ದೇಶದ ಬ್ಯಾಟರಿಗಳನ್ನು ತಯಾರಿಸುವ ನಿಟ್ಟಿನಲ್ಲಿ ದೃಷ್ಟಿಯನ್ನು ನೆಟ್ಟಿವೆ. ಪರಮಾಣುಶಕ್ತಿ ಆಧಾರಿತ ಬ್ಯಾಟರಿಗಳು ಪರಿಸರಸ್ನೇಹಿ ಮತ್ತು ಅತಿ ಉಷ್ಣತೆ, ಅತಿ ಶೀತ ವಾತಾವರಣ ಸೇರಿದಂತೆ ಎಂತಹುದೇ ಪರಿಸ್ಥಿತಿಯಲ್ಲೂ ಯಾವುದೇ ಅಡೆತಡೆ ಇಲ್ಲದೆ ಇವು ಕಾರ್ಯನಿರ್ವಹಿಸಬಲ್ಲವು ಎಂಬುದು ಕಂಪನಿಗಳ ಹೇಳಿಕೆ.

ಕಾರ್ಯನಿರ್ವಹಣೆ ಹೇಗೆ?: ಸಾಂಪ್ರದಾಯಿಕ ಬ್ಯಾಟರಿಗಳಿಗೆ ಹೋಲಿಸಿದರೆ, ಪರಮಾಣು ಬ್ಯಾಟರಿಗಳು ಸಂಪೂರ್ಣ ಭಿನ್ನವಾಗಿ ಕಾರ್ಯನಿರ್ವಹಿಸುತ್ತವೆ. ಈ ಬ್ಯಾಟರಿಗಳು ಐಸೊಟೋಪ್‌ಗಳು ಹೊರಸೂಸುವ ವಿಕಿರಣಗಳನ್ನು ಬಳಸಿಕೊಂಡು ಶಕ್ತಿಯನ್ನು ಉತ್ಪಾದಿಸುತ್ತವೆ.

ದೀರ್ಘ ಬಾಳಿಕೆ: ಈ ಐಸೊಟೋಪ್‌ಗಳು ವಿಕಿರಣವನ್ನು ಹೊರಸೂಸುತ್ತಾ ಕ್ಷಯಿಸುತ್ತಾ (decay) ಹೋಗುತ್ತವೆ (ಅಂದರೆ ಅವುಗಳ ವಿಕಿರಣಪಟುತ್ವ ಕಡಿಮೆಯಾಗುತ್ತದೆ). ವಿಕಿರಣ ಹೊರಸೂಸುವ ಈ ರಾಸಾಯನಿಕ ವಸ್ತುಗಳ ಪೂರ್ಣ ಕ್ಷಯಿಸುವ ಅವಧಿ ತುಂಬಾ ದೀರ್ಘವಾಗಿರುತ್ತದೆ. ಕೆಲವು ವರ್ಷಗಳಿಂದ ಹಿಡಿದು, ನೂರು, ಸಾವಿರಾರು ವರ್ಷಗಳವರೆಗೂ ಬೇಕಾಗುತ್ತವೆ. ಉದಾಹರಣೆ ನಿಕ್ಕೆಲ್‌–63 ಐಸೊಟೋಪ್ ಅರ್ಧದಷ್ಟು ಕ್ಷಯಿಸಲು 100 ವರ್ಷಗಳಿಂತಲೂ ಹೆಚ್ಚು ಸಮಯ (half-life exceeding 100 years) ತೆಗೆದುಕೊಳ್ಳುತ್ತದೆ. ಅದೇ ಕಾರ್ಬನ್‌–14 ಐಸೊಟೋಪ್‌ನ ವಿಕಿರಣ ಸೂಸುವಿಕೆ ಸಾಮರ್ಥ್ಯ ಅರ್ಧದಷ್ಟು ಕಡಿಮೆಯಾಗಲು 5,730 ವರ್ಷಗಳು ಬೇಕು. ಹಾಗಾಗಿ, ಈ ಐಸೊಟೋಪ್‌ಗಳನ್ನು ಬಳಸಿದ ಬ್ಯಾಟರಿಗಳು ವರ್ಷಾನುಗಟ್ಟಲೆ ತಡೆರಹಿತ ವಿದ್ಯುತ್‌ಶಕ್ತಿಯನ್ನು ಪೂರೈಸಬಲ್ಲವು.

ಯಾವುದಕ್ಕೆಲ್ಲ ಬಳಸಬಹುದು?: ಈ ಬ್ಯಾಟರಿಗಳನ್ನು ನಾಗರಿಕ ಬಳಕೆಗೆ ಮಾತ್ರವಲ್ಲದೆ, ಆರೋಗ್ಯಕ್ಷೇತ್ರ (ಉದಾ: ಪೇಸ್‌ಮೇಕರ್), ಬಾಹ್ಯಾಕಾಶ ಕ್ಷೇತ್ರ, ನಿರಂತರ ನಿಗಾ ವಹಿಸುವ ಉದ್ದೇಶದ ರಕ್ಷಣಾ ಉದ್ದೇಶದ ಡ್ರೋನ್‌ಗಳು ಸೇರಿದಂತೆ ಸೇನೆಯ ಇತರ ಸಲಕರಣೆಗಳಲ್ಲಿ, ಆಳ ಸಮುದ್ರದಲ್ಲಿಯ ನಿಗಾ ವ್ಯವಸ್ಥೆ ಸೇರಿದಂತೆ ಕಠಿಣ ಹವಾಮಾನ ಪರಿಸ್ಥಿತಿಗಳಲ್ಲೂ ಕಾರ್ಯನಿರ್ವಹಿಸಬೇಕಾದ ಕ್ಷೇತ್ರಗಳಲ್ಲಿ ಇವುಗಳನ್ನು ಬಳಸಬಹುದು ಎಂಬುದು ವಿಜ್ಞಾನಿಗಳ ಹೇಳಿಕೆ.

ಕಳೆದ ವರ್ಷ ಜನವರಿಯಲ್ಲೇ ನಾಣ್ಯಗಾತ್ರದ ಬ್ಯಾಟರಿಯ ಮೂಲಮಾದರಿ ತಯಾರಿಸಿದ್ದ ಬೀಟಾವೋಲ್ಟ್ ಟೆಕ್ನಾಲಜಿ, ವರ್ಷಾಂತ್ಯದೊಳಗೆ ದೊಡ್ಡ ಪ್ರಮಾಣದಲ್ಲಿ ಬ್ಯಾಟರಿಗಳನ್ನು ತಯಾರಿಸುವುದಾಗಿ ಹೇಳಿತ್ತು. ಆದರೆ, ಇನ್ನೂ ಮಾರುಕಟ್ಟೆಗೆ ಬಂದಿಲ್ಲ. ಇತರ ಕಂಪನಿಗಳು ತಯಾರಿಸಿರುವ ಬ್ಯಾಟರಿ ಕೂಡ ಮಾದರಿಯಲ್ಲಷ್ಟೇ ಇವೆ. ಪ್ರಾಯೋಗಿಕ ಹಂತದಲ್ಲಿವೆ. ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲು ಇನ್ನಷ್ಟು ಸಮಯ ಬೇಕು. ❖

ಬಂತು ಡಿಎನ್‌ಎ ರೋಬೊ

ನೇಸರ ಕಾಡನಕುಪ್ಪೆ

ವೈದ್ಯಕೀಯ ಲೋಕ ದಿನೇ ದಿನೇ ಪ್ರಗತಿಯನ್ನು ಸಾಧಿಸುತ್ತಲೇ ಇದೆ. ಅಂದರೆ, ಕಡಿಮೆ ರಕ್ತನಷ್ಟ, ಕಡಿಮೆ ಆಸ್ಪತ್ರೆವಾಸ, ತ್ವರಿತ ಉಪಶಮನ ಎನ್ನುವುದು ಈಗಿನ ವೈದ್ಯಕೀಯಲೋಕದ ಮಂತ್ರಗಳಾಗಿವೆ. ರೋಗಿಗಳೂ ಇದನ್ನೇ ಬಯಸುತ್ತಾರೆ; ಹಾಗೂ ಅದೇ ಸೂಕ್ತವಾದುದು. ಈ ರೀತಿ ತ್ವರಿತ ಗುಣಮಂತ್ರಕ್ಕೆ ಈಗ ಹೊಸ ಸೇರ್ಪಡೆಯಾಗಿದೆ. ಅದೇ ಡಿಎನ್‌ಎ ರೋಬೊ!

ಕಾಯಿಲೆಗೆ ಪರಿಣಾಮಕಾರಿ ಮದ್ದನ್ನು ಕೊಡುವುದು ಎಂದರೆ ರೋಗದ ಮೂಲಕ್ಕೆ ಮದ್ದು ಕೊಡುವುದು ಎನ್ನುವುದೇ ಬಹುಮುಖ್ಯವಾದ ಪರಿಣಾಮಕಾರಿ ವಿಧಾನ. ಇದಕ್ಕೆ ಎಲ್ಲ ಬಗೆಯ ವೈದ್ಯಕೀಯ ವಿಧಾನಗಳೂ ಮನ್ನಣೆ ನೀಡುತ್ತವೆ. ಚರ್ಮರೋಗವೊಂದು ಕಾಣಿಸಿಕೊಂಡರೆ ಕೇವಲ ಮುಲಾಮು ನೀಡುವುದಕ್ಕಿಂತ, ಪೌಷ್ಟಿಕಾಂಶ ಕೊರತೆ ಇರಬಹುದೇ, ಜೀರ್ಣಕ್ರಿಯೆಯ ಸಮಸ್ಯೆ ಇರಬಹುದೇ ಎಂಬುದನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಿದರೆ, ಚರ್ಮರೋಗ ತನಗೆ ತಾನೇ ಗುಣವಾಗಬಹುದು. ಇದೇ ಮಂತ್ರವನ್ನು ಮೂಲಾಧಾರವಾಗಿ ಇರಿಸಿಕೊಂಡು ಜರ್ಮನಿಯ ಯೂನಿರ್ವಸಿಟಿ ಆಫ್ ಸ್ಟಟ್‌ಗಾರ್ಟ್ ವಿಶ್ವವಿದ್ಯಾಲಯದ ವಿಜ್ಞಾನಿ ಲಾರಾ ನಾ ಲಿಯೂ ನೇತೃತ್ವದ ತಂಡವು ವರ್ಣತಂತು (ಡಿಎನ್‌ಎ) ಆಧರಿಸಿದ ರೋಬೊಗಳನ್ನು ನಿರ್ಮಿಸಿದೆ. ಇವರ ಈ ಸಂಶೋಧನೆಯು ಪ್ರತಿಷ್ಠಿತ 'ನೇಚರ್ ಮಟೀರಿಯಲ್ಸ್' ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ.

ಈ ತಂಡದ ಪ್ರಕಾರ, ಮೇಲೆ ಉದಾಹರಿಸಿದಂತೆ ರೋಗದ ಮೂಲಕ್ಕೆ ಮದ್ದನ್ನು ನೀಡುವುದೇ ಆಗಿದೆ. ಯಾವುದೇ ಜೀವಿಯ ಯಾವುದೇ ಅಂಗ, ಪ್ರಕ್ರಿಯೆ, ವರ್ತನೆಗಳು ಆ ಜೀವಿಯ ಡಿಎನ್‌ಎಗಳ ಮೇಲೆಯೇ ಅವಲಂಬಿಸಿರುತ್ತದೆ. ವರ್ಣತಂತುಗಳು ನಮ್ಮ ದೇಹದ ಅಡಿಪಾಯ ಎನ್ನಬಹುದು. ನಮ್ಮ ಬಣ್ಣ, ಆಕಾರ, ಮಾನಸಿಕ ವರ್ತನೆ ಇವೆಲ್ಲವೂ ನಮ್ಮ ಪೂರ್ವಿಕರ ಮೂಲಕ ನಮಗೆ ವರ್ಗಾವಣೆಯಾಗಿರುತ್ತವೆ. ನಮ್ಮ ಪ್ರತಿ ಜೀವಕೋಶದಲ್ಲೂ ಡಿಎನ್‌ಎ ಇರುತ್ತದೆ. ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್ ಮೂಲಕ ನೋಡಿದಾಗ ಮಾತ್ರ ಕಾಣುವಷ್ಟು ಅತಿ ಸೂಕ್ಷ್ಮರಚನೆಗಳು ಇವು. ಅಷ್ಟು ನ್ಯಾನೋ ಸೂಕ್ಷ್ಮಗಾತ್ರದಲ್ಲಿ ಈ ಡಿಎನ್‌ಎಗಳು ಇರುತ್ತವೆ.
ಯಾವುದೇ ರೋಗ ಕಾಣಿಸಿಕೊಳ್ಳಬೇಕಾದರೆ, ಈ ಡಿಎನ್‌ಎಗಳು ಸಹ ಕಾರಣವಾಗಬಹುದು. ಅಂದರೆ, ದೋಷಪೂರಿತ ಡಿಎನ್‌ಎಗಳು, ಹಾಳಾದ, ಗಾಸಿಯಾದ ಡಿಎನ್‌ಎಗಳು ಇತ್ಯಾದಿ. ಈ ಹಾಳಾದ, ದೋಷಪೂರಿತ ಡಿಎನ್‌ಎಗಳನ್ನು ದುರಸ್ತಿ ಮಾಡಿದರೆ ಹೇಗೆ? ಇದೇ ಪ್ರಶ್ನೆಯನ್ನು ಸಂಶೋಧನಾ ಅಡಿಪಾಯವಾಗಿ ಇರಿಸಿಕೊಂಡು ಲಾರಾ ಅವರು ಡಿಎನ್‌ಎ ನ್ಯಾನೋ ರೋಬೊಗಳನ್ನು ನಿರ್ಮಿಸಿದ್ದಾರೆ.



ಹೇಗಿದರ ಕಾರ್ಯಾಚರಣೆ?

ಇದರ ಕಾರ್ಯಾಚರಣೆ ಹಾಗೂ ರಚನೆ ಬಹುಸಂಕೀರ್ಣವಾದುದು. ಕೆಲವೇ ಕೆಲವು ನ್ಯಾನೋಮೀಟರ್ ಗಾತ್ರದಲ್ಲಿರುವ ಈ ರೋಬೊ ಅನ್ನು ಕಾಯಿಲೆ ಕಾಣಿಸಿಕೊಳ್ಳುವ ಜಾಗಕ್ಕೆ ಇಂಜೆಕ್ಷನ್ ಮೂಲಕ ದೇಹದ ಒಳಕ್ಕೆ ಕಳುಹಿಸಲಾಗುತ್ತದೆ. ಅಂದರೆ, ಇದು ದ್ರಾವಣದ ಮೂಲಕ ದೇಹದ ಪ್ರವೇಶ ಮಾಡುತ್ತದೆ. ಈ ದ್ರಾವಣದಲ್ಲಿರುವ ಡಿಎನ್‌ಎ ರೋಬೊಗಳು ದೋಷಪೂರಿತ ಜೈವಿಕ ಡಿಎನ್‌ಎಗಳನ್ನು ಗುರುತಿಸುತ್ತವೆ. ಅಲ್ಲಿ ತಲುಪಿದ ಕೂಡಲೇ ಗಾಸಿಯಾದ ಡಿಎನ್‌ಎಗಳನ್ನು ದುರಸ್ತಿ ಮಾಡಲು ಶುರು ಮಾಡುತ್ತವೆ. ಅಂದರೆ, ಹಾಳಾದ ಡಿಎನ್‌ಎ ಅನ್ನು ಸಂಪೂರ್ಣವಾಗಿ ಬದಲಿಸುವುದು. ಅಥವಾ ಅದನ್ನೇ ಸರಿಪಡಿಸುವುದು. ಈ ಡಿಎನ್‌ಎ ರೋಬೊ ಯಂತ್ರದ ಸ್ವರೂಪದಲ್ಲಿ ಇರುವುದಿಲ್ಲ.

ಸಾಮಾನ್ಯವಾಗಿ ರೋಬೊ ಎಂದರೆ, ಯಂತ್ರದಂತಿರುವ, ಚಿತ್ರಗಳಲ್ಲಿ ನೋಡಿರುವ ಎರಡು ಕೈ, ಎರಡು ಕಾಲುಗಳಿರುವ ಸ್ವರೂಪವೇ ಇರಬೇಕು ಎಂದೇನಿಲ್ಲ. ವಾಹನ ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ ಬಳಕೆಯಾಗುವ ರೋಬಾಟ್‌ಗಳು ವಿಶೇಷ ಆಕಾರದಲ್ಲಿದ್ದು, ಕೆಲಸವನ್ನು ಮಾಡಲು ಬೇಕಾದ ನಿರ್ದಿಷ್ಟ ಆಕಾರದಲ್ಲಿ ಇರುತ್ತವೆ. ಅದೇ ರೀತಿ ಈ ಡಿಎನ್‌ಎ ರೋಬೊ ಸಹ ಇದೆ. ಈ ಡಿಎನ್‌ಎ ರೋಬೊಗಳು ದೇಹದಲ್ಲಿರುವ ವಿದ್ಯುತ್ ಬಳಸಿಕೊಂಡು ಆ ವಿದ್ಯುತ್ತನ್ನು ದೋಷಪೂರಿತ ಡಿಎನ್‌ಎಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಹಾಯಿಸುತ್ತವೆ. ಆಗ, ಡಿಎನ್‌ಎಗಳಲ್ಲಿ ಬದಲಾವಣೆಯಾಗಿ ಅದು ಅದರ ಮೂಲರೂಪಕ್ಕೆ ಬರುತ್ತದೆ. ಸಂಪೂರ್ಣ ಹಾಳಾದ ಡಿಎನ್‌ಎಗಳನ್ನು ಬದಲಿಸಲಾಗುತ್ತದೆ.

ಆದರೆ, ಹೀಗೆ ವಿವರಿಸಿದಷ್ಟು ಸುಲಭವಾದ ಪ್ರಕ್ರಿಯೆ ಇದಲ್ಲ. ಡಿಎನ್‌ಎಗಳನ್ನು ದುರಸ್ತಿ ಮಾಡುವುದು ಅಥವಾ ಬದಲಿಸುವುದು ಸುಲಭವಲ್ಲ. ಏಕೆಂದರೆ, ಇದರಲ್ಲಿ ಕೊಂಚವೇ ಹೆಚ್ಚು ಕಡಿಮೆಯಾದರೂ ಸಾವೇ ಸಂಭವಿಸಬಹುದು ಅಥವಾ ದೈಹಿಕ, ಮಾನಸಿಕ ಬದಲಾವಣೆಗಳು ಆಗಬಹುದು. ಅಲ್ಲದೇ, ಡಿಎನ್‌ಎ ಚಿಕಿತ್ಸೆ ಈಗ ಹೊಸದೇನೂ ಅಲ್ಲ. ಸಾಕಷ್ಟು ದಿನಗಳಿಂದಲೂ ಬಳಕೆಯಲ್ಲಿದೆ. ಹಾಲಿ ಜಾರಿಯಲ್ಲಿರುವ ಡಿಎನ್‌ಎ ಚಿಕಿತ್ಸಾ ವಿಧಾನಗಳನ್ನೇ ಬಳಸಿಕೊಂಡು ಈ ಹೊಸ ಡಿಎನ್‌ಎ ರೋಬೊಗಳನ್ನು ಬಳಸಿಕೊಂಡರೆ ಮತ್ತಷ್ಟು ತ್ವರಿತ, ಹೆಚ್ಚು ಪರಿಣಾಮಕಾರಿ ಚಿಕಿತ್ಸೆ ಸಾಧ್ಯ ಎಂದು ಪ್ರೊ. ಲಾರಾ ಅವರ ತಂಡವು ಅಭಿಪ್ರಾಯಪಟ್ಟಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

68) ಬ್ರಯೋಫಿಲಮ್ ಎಲೆ ಅಂಚಿಬುದ್ದಕ್ಕೂ ಇರುವ ಕುಳಿಗಳಲ್ಲಿ ಮೊಗ್ಗುಗಳು ಉತ್ಪತ್ತಿಯಾಗುವ ಚಿತ್ರವನ್ನು ಬರೆಯಿರಿ

ಉತ್ತರ:–



69) ಆಹಾರದ ಜೀರ್ಣಕ್ರಿಯೆಯಲ್ಲಿ ಲಾಲಾರಸದ ಪಾತ್ರವೇನು?

ಉತ್ತರ:– ಲಾಲಾರಸ ಗ್ರಂಥಿಗಳು ಸ್ರವಿಸುವ ಲಾಲಾರಸದಿಂದ ಆಹಾರವು ತೇವಗೊಳ್ಳುವುದು. ಲಾಲಾರಸದಲ್ಲಿರುವ ಸಲಿವರಿ ಅಮಲೈಸ್ ಎಂಬ ಕಿಣ್ವವು ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವುದು.

70) ಪೋಷಣಾ ಸ್ತರಗಳು ಎಂದರೇನು? ಆಹಾರ ಸರಪಳಿಗೆ ಒಂದು ಉದಾಹಣೆ ಕೊಡಿ ಮತ್ತು ಅದರಲ್ಲಿನ ವಿವಿಧ ಪೋಷಣಾ ಸ್ತರಗಳನ್ನು ಹೆಸರಿಸಿ.

ಉತ್ತರ:– ಆಹಾರ ಶಕ್ತಿಯು ವರ್ಗಾವಣೆಯಾಗುವ ಆಹಾರ ಸರಪಳಿಯ ಹಂತಗಳನ್ನು ಪೋಷಣಾ ಸ್ತರಗಳು ಎನ್ನುತ್ತಾರೆ ಉದಾ ಹುಲ್ಲುಗಾವಲಿನಲ್ಲಿ ಕಂಡುಬರುವ ಆಹಾರ ಸರಪಳಿ

ಹುಲ್ಲು ⇨ ಕೀಟಗಳು ⇨ ಕಪ್ಪೆಗಳು ⇨ ಹಾವುಗಳು

ಹುಲ್ಲು.................ಪೋಷಣಾ ಸ್ತರ–1
ಕೀಟಗಳು ....ಪೋಷಣಾ ಸ್ತರ–2
ಕಪ್ಪೆಗಳು ....ಪೋಷಣಾ ಸ್ತರ–3
ಹಾವುಗಳು .... ಪೋಷಣಾ ಸ್ತರ–4

71) ಮಿದುಳಿನ ಯಾವ ಭಾಗವು ದೇಹದ ಭಂಗಿ ಮತ್ತು ಸಮತೋಲನವನ್ನು ನಿರ್ವಹಿಸುತ್ತದೆ?

ಉತ್ತರ:– ಹಿಮ್ಮಿದುಳಿನ ಅನುಮಸ್ತಿಷ್ಕ ಭಾಗವು ದೇಹದ ಭಂಗಿ ಮತ್ತು ಸಮತೋಲನ ಕಾಪಾಡುವುದು.

72) ಪೀನ ದರ್ಪಣದ ಉಪಯೋಗಗಳನ್ನು ತಿಳಿಸಿ

ಉತ್ತರ:– ಪೀನ ದರ್ಪಣದ ಉಪಯೋಗಗಳು:–
ಪೀನ ದರ್ಪಣಗಳನ್ನು ಸಾಮಾನ್ಯವಾಗಿ, ವಾಹನಗಳಲ್ಲಿ ಹಿನ್ನೋಟ (rear view) ದರ್ಪಣವಾಗಿ ಬಳಸುತ್ತಾರೆ. ಈ ದರ್ಪಣಗಳನ್ನು ವಾಹನದ ಪಾರ್ಶ್ವಗಳಲ್ಲಿ, ವಾಹನ ಚಾಲಕನು ಹಿಂಬದಿಯಲ್ಲಿ ಬರುತ್ತಿರುವ ವಾಹನಗಳನ್ನು ವೀಕ್ಷಿಸಿ ಸುರಕ್ಷಿತ ಚಾಲನೆಗೆ ಅನುಕೂಲವಾಗುವಂತೆ ಜೋಡಿಸಿರುತ್ತಾರೆ. ಯಾವಾಗಲೂ ಚಿಕ್ಕದಾದ ಮತ್ತು ನೇರ ಪ್ರತಿಬಿಂಬಗಳನ್ನೇ ಉಂಟುಮಾಡುವ ಪೀನ ದರ್ಪಣಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ ಏಕೆಂದರೆ ಹೊರ ಅಂಚಿನ ಕಡೆಗೆ ವಕ್ರತೆಯನ್ನು ಹೊಂದಿರುವುದರಿಂದ ಇವುಗಳ ದೃಷ್ಟಿ ಕ್ಷೇತ್ರವು ಬಹಳ ಅಧಿಕವಾಗಿರುತ್ತದೆ. ಹೀಗೆ ಸಮತಲ ದರ್ಪಣಕ್ಕೆ ಹೋಲಿಸಿದರೆ ಪೀನ ದರ್ಪಣಗಳು ಚಾಲಕರಿಗೆ ಅವರ ಹಿಂಭಾಗದ ಹೆಚ್ಚಿನ ಕ್ಷೇತ್ರವನ್ನು ವೀಕ್ಷಿಸಲು ಸಹಾಯಕವಾಗಿವೆ.

73) ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯದ ಕುರಿತು ಬರೆಯಿರಿ

ಉತ್ತರ:– ಕಣ್ಣಿನ ಮಸೂರವು ತಂತುಗಳು, ಜೆಲ್ಲಿಯಂತಹ ವಸ್ತುಗಳಿಂದ ಕೂಡಿದೆ. ಇದರ ವಕ್ರತೆಯನ್ನು ಸಿಲಿಯರಿ ಸ್ನಾಯುಗಳಿಂದ ಸ್ವಲ್ಪಮಟ್ಟಿಗೆ ಮಾರ್ಪಡಿಸಬಹುದು. ಕಣ್ಣಿನ ಮಸೂರದ ವಕ್ರತೆಯ ಬದಲಾವಣೆಯಿಂದ ಅದರ ಸಂಗಮದೂರವನ್ನು ಬದಲಾಯಿಸಬಹುದು. ಸ್ನಾಯುಗಳು ವಿಶ್ರಾಂತಗೊಂಡಾಗ ಮಸೂರವು ತೆಳ್ಳಗಾಗುತ್ತದೆ ಮತ್ತು ಸಂಗಮ ದೂರ ಹೆಚ್ಚಾಗುತ್ತದೆ. ಇದರಿಂದ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಹುದು. ನೀವು ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮ ದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಕಣ್ಣಿನ ಮಸೂರದ ಸಂಗಮ ದೂರವನ್ನು ಹೊಂದಾಣಿಕೆ ಮಾಡುವ ಕಣ್ಣಿನ ಮಸೂರದ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆ ಎನ್ನುತ್ತೇವೆ. ಆದರೂ ಸಹ ಕಣ್ಣಿನ ಮಸೂರದ ಸಂಗಮ ದೂರವನ್ನು ಒಂದು ಕನಿಷ್ಟ ಮಿತಿಗಿಂತ ಕಡಿಮೆ ಮಾಡಲು ಸಾಧ್ಯವಿಲ್ಲ. ಮುದ್ರಿತವಾದ ಒಂದು ಪುಟವನ್ನು ಕಣ್ಣಿಗೆ ತುಂಬಾ ಹತ್ತಿರ ಹಿಡಿದುಕೊಂಡು ಓದಲು ಪ್ರಯತ್ನಿಸಿದರೆ ಮಸುಕಾಗಿರುವ ಬಿಂಬವನ್ನು ನೋಡಬಹುದು ಅಥವಾ ಕಣ್ಣಿಗೆ ಹೆಚ್ಚು ದಣಿವಾಗಬಹುದು

ಒಂದು ವಸ್ತುವನ್ನು ಆರಾಮವಾಗಿ ಮತ್ತು ಅತ್ಯಂತ ಸ್ಪಷ್ಟವಾಗಿ ವೀಕ್ಷಿಸಲು ಅದನ್ನು ಕಣ್ಣಿನಿಂದ 25 ಸೆಂ.ಮೀ. ಅಂತರದಲ್ಲಿಡಬೇಕು. ಕಣ್ಣಿಗೆ ವಸ್ತುವು ಸ್ಪಷ್ಟವಾಗಿ ಹಾಗೂ ಒತ್ತಡರಹಿತವಾಗಿ ಕಾಣುವ ಕನಿಷ್ಟ ದೂರವನ್ನು ಸ್ಪಷ್ಟ ದೃಷ್ಟಿಯ ಕನಿಷ್ಟ ದೂರ ಎನ್ನುತ್ತೇವೆ. ಇದನ್ನು ಕಣ್ಣಿನ ಸಮೀಪ ಬಿಂದು ಎಂದೂ ಸಹ ಕರೆಯುತ್ತೇವೆ. ಸಾಮಾನ್ಯ ದೃಷ್ಟಿ ಹೊಂದಿರುವ ಒಬ್ಬ ಪ್ರೌಢ ವಯಸ್ಕನಿಗೆ ಇದು 25 ಸೆಂ.ಮೀ. ಆಗಿದೆ. ಕಣ್ಣು ಸ್ಪಷ್ಟವಾಗಿ ವೀಕ್ಷಿಸಲು ಸಾಧ್ಯವಾಗುವ ಅತಿ ಗರಿಷ್ಟ ದೂರವನ್ನು ಕಣ್ಣಿನ ಗರಿಷ್ಟ ದೂರ ಬಿಂದು ಎನ್ನುತ್ತೇವೆ. ಇದು ಸಾಮಾನ್ಯ ಕಣ್ಣಿಗೆ ಅನಂತದೂರವಾಗಿದೆ. ಗಮನಿಸಬೇಕಾದ ಅಂಶವೆಂದರೆ ಸಾಮಾನ್ಯ ಕಣ್ಣು 25 ಸೆಂ.ಮೀ. ಮತ್ತು ಅನಂತ ದೂರದ ನಡುವಿನ ವಸ್ತುಗಳನ್ನು ಸ್ಪಷ್ಟವಾಗಿ ನೋಡುತ್ತದೆ. ವಯಸ್ಸಾದವರಿಗೆ ಕೆಲವೊಮ್ಮೆ ಕಣ್ಣಿನ ಸ್ಫಟಿಕ ಮಸೂರವು ಹಾಲಿನಂತೆ ಬೆಳ್ಳಗೆ ಹಾಗೂ ಮೋಡ ಕವಿದಂತಾಗುತ್ತದೆ. ಈ ಸ್ಥಿತಿಯನ್ನು ಕಣ್ಣಿನ ಪೊರೆ (cataract) ಎನ್ನುತ್ತೇವೆ. ಇದು ಭಾಗಶಃ ಅಥವಾ ಪೂರ್ಣ ದೃಷ್ಟಿ ನಷ್ಟ ಉಂಟುಮಾಡುತ್ತದೆ. ಕಣ್ಣಿನಪೊರೆ ಶಸ್ತ್ರಕ್ರಿಯೆಯ ಮೂಲಕ ಕಣ್ಣಿನ ದೃಷ್ಟಿ ಪುನರ್ ಸ್ಥಾಪಿಸಲು ಸಾಧ್ಯವಿದೆ.

74) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಕಿಂತಲೂ ಸಮಾಂತರವಾಗಿ ಜೋಡಿಸುವುದು ಅನುಕೂಲಕರ ಏಕೆ?

ಉತ್ತರ:– * ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾದ ವಿಭಿನ್ನ ಮೌಲ್ಯದ ವಿದ್ಯುತ್ ಪ್ರವಾಹ ಅಗತ್ಯವಿದೆ.

* ಸರಣಿ ಕ್ರಮದಲ್ಲಿ ಜೋಡಿಸಿದಾಗ ಯಾವುದಾದರೂ ಘಟಕ ವಿಫಲವಾದರೆ ಮಂಡಲವು ಮುರಿದುಹೋಗುತ್ತದೆ. ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. ಆದರೆ
* ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.
* ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ವಿಭಿನ್ನ ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾಂತರ ಜೋಡಣೆ ಸಹಕಾರಿಯಾಗಿವೆ.

75) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಥೈರಾಕ್ಸಿನ್ ಹಾರ್ಮೋನ್ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು? (ಮಾರ್ಚ್ 2020)

ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡ ರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ.

ಉತ್ತರ:– (ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - CET CHEMISTRY

MULTIPLE CHOICE QUESTIONS

22) An organic compound 'A' burns with a sooty flame. It is negative towards Tollen's reagent test and positive for Borsche's reagent test. The compound 'A' is -

a) Benzaldehyde b) Acetophenone
c) Acetone d) Salicylic acid

Ans:- b

23) In electrophilic aromatic substitution reaction, the nitro group is meta directing because it

a) increases electron density at meta position
b) increases electron density at ortho and para positions
c) decreases electron density at ortho and para positions
d) decreases electron density at meta position

Ans:- c

24) The correct arrangement for the ions in the increasing order of their radii is........

a) Na^+, Cl^-, Ca^{2+} b) Ca^{2+}, K^+, S^{2-}
c) Na^+, AL^{3+}, Be^{2+} d) Cl^-, F^-, S^{2-}

Ans:- b

Expln:-

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

25) 0.06% (w/v) aqueous solution of urea is isotonic with

a) 0.6% glucose solution
b) 0.1 M glucose solution
c) 0.06% glucose solution
d) 0.01 M glucose solution

Ans: **(d)**

$$\text{Expln:–Molarity of urea solution} = \frac{0.06 \times 10}{60} = 0.01\ M.$$

26) With regard to the photoelectric effect, identify the correct statement among the following:

a) Number of electrons ejected increases with the increase in work function
b) Number of electrons ejected increases with the increase in the intensity of incident light
c) Energy of ejected electrons increases with the increase in the intensity of incident light
d) Numbers of electrons ejected increases with the increase in the frequency of the incident light

Ans: (b)

Expln:- Photoelectric effect is the emission of electrons from a certain metal surface when it is irradiated with photons or light. The minimum frequency required to eject an electron from a metal surface is called threshold frequency. (υ_0)

The equation for the photoelectric effect is: $H\upsilon = h\upsilon_0 + KE$, where υ = frequency of the incident radiation

Here $h\upsilon_0$ is the work function. The number of electrons ejected does not depend on work function.

The number of electrons ejected increases with the increase in the intensity of incident light, an increase in the intensity of incident light means that the number of photons incident per unit surface area of the metal increases. (Provided the incident photons has its frequency more than the threshold frequency)

The energy of the ejected electrons increases with an increase in the frequency of incident light.

27) In $H_2 - O_2$ fuel cell the reaction occurring at cathode is

a) $O_2(g) + 2H_2O\ (l) + 4e^- \rightarrow 4\overline{O}H\ (aq)$
b) $H^+(aq) + \overline{O}H\ (aq) \rightarrow H_2O\ (l)$
c) $2H_2\ (g) + O_2(g) \rightarrow 2\ H_2O\ (l)$
d) $H^+ + e^- \rightarrow \frac{1}{2}H_2$

Ans:- a

28) Which one of the following statements is true?

a) Drying of oil involves hydrolysis
b) Saponification of oil yields a diol
c) Refining of oil involves hydrogenation
d) Addition of antioxidant to oil minimizes rancidity

Ans:- d

29) The distinguishing test between methanoic acid and ethanoic acid is

a) Tollen's test b) Sodium bicarbonate test
c) Litmus test d) Esterification test

Ans:- a {Expln:- Methanoic acid is an example for bifunctional compound containing –CHO group,

$$H-\overset{\overset{\Large O}{\|}}{C}-O-H.$$

hence it reduces Tollen's reagent to shining silver mirror.}

30) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

ಸಂಕ್ಷಿಪ್ತ ಸುದ್ದಿ

ಅಕ್ರಮ ಹೋಂ ಸ್ಟೇ ವಿದ್ಯುತ್ ಕಡಿತ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಸಾಣಾಪುರದಲ್ಲಿ ಈಚೆಗೆ ಇಬ್ಬರು ಯುವತಿಯರ ಮೇಲೆ ಅತ್ಯಾಚಾರ ಹಾಗೂ ಯುವಕನ ಕೊಲೆ ನಡೆದ ಬಳಿಕ ಎಚ್ಚೆತ್ತುಕೊಂಡಿರುವ ಅಧಿಕಾರಿಗಳು ಅಕ್ರಮವಾಗಿ ಹೋಂ ಸ್ಟೇ ಹಾಗೂ ರೆಸಾರ್ಟ್‌ಗಳನ್ನು ನಡೆಸುತ್ತಿದ್ದ ವರಿಗೆ ಚಾಟಿ ಬೀಸಿದ್ದಾರೆ.

ಸಾಣಾಪುರ, ಆನೆಗೊಂದಿ ಭಾಗದಲ್ಲಿ ಅಕ್ರಮವಾಗಿ ಪಡೆಯಲಾಗಿದ್ದ ವಿದ್ಯುತ್ ಸಂಪರ್ಕವನ್ನು ಮಂಗಳವಾರ ಕಡಿತ ಮಾಡಲಾಗಿದೆ. ಹೋಟೆಲ್‌ಗಳಿಗೂ ಇದರ ಬಿಸಿ ತಟ್ಟಿದೆ. ಅಕ್ರಮ ರೆಸಾರ್ಟ್, ಹೋಂ ಸ್ಟೇಗಳಿಗೆ ಕಡಿವಾಣ ಹಾಕಲು ಜಿಲ್ಲಾಡಳಿತ ತಂಡಗಳನ್ನು ರಚಿಸಿದೆ.

ಸಾಣಾಪುರದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವ ಭೂಮಿಯಲ್ಲಿ ಗುಡಿಸಲು ಕೊಠಡಿಗಳನ್ನು ನಿರ್ಮಿಸಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದವರು ಸಮಯಾವಕಾಶ ನೀಡುವಂತೆ ಕೋರಿದರೆ, ಇನ್ನು ಕೆಲವರು ತಮ್ಮ ರೆಸಾರ್ಟ್ ಕುರಿತು ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವ ದಾಖಲೆ ತೋರಿಸಿದರು.

‘ಅಕ್ರಮವಾಗಿ ನಿರ್ಮಿಸಿಕೊಂಡಿರುವ ರೆಸಾರ್ಟ್‌ಗಳು ಮತ್ತು ಹೋಂ ಸ್ಟೇಗಳನ್ನು ತೆರವು ಮಾಡುವಂತೆ ಹಿಂದೆ ನೋಟಿಸ್ ನೀಡಿದ್ದರೂ ಯಾರೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದ್ದರಿಂದ ಈಗ ವಿದ್ಯುತ್ ಸಂಪರ್ಕ ಕಡಿತ ಮಾಡಲಾಗಿದೆ’ ಎಂದು ಗಂಗಾವತಿ ತಹಶೀಲ್ದಾರ್ ಯು. ನಾಗರಾಜ ತಿಳಿಸಿದರು.

ಸ್ವಾತಿ ಮನೆಗೆ ಭೇಟಿ ನೀಡದ ಸಚಿವ ಆಕ್ರೋಶ

ಹಾವೇರಿ: ‘ಸ್ವಾತಿ ಬ್ಯಾಡಗಿಯವರ ಕೊಲೆ ನಡೆದು 16 ದಿನಗಳಾದರೂ ಅವರ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡಿ, ಸಾಂತ್ವನ ಹೇಳಿಲ್ಲ. ಅದೇ ಮುಸ್ಲಿಂ ಯುವತಿಗೆ ಈ ಸ್ಥಿತಿ ಬಂದಿದ್ದರೆ, ಇಡೀ ಕಾಂಗ್ರೆಸ್ ಸರ್ಕಾರವೇ ಮನೆಗೆ ಬರುತ್ತಿತ್ತು’ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಟೀಕಿಸಿದರು.

ರಟ್ಟೀಹಳ್ಳಿ ತಾಲ್ಲೂಕಿನ ಮಾಸೂರಿ ನಲ್ಲಿರುವ ಸ್ವಾತಿ ಅವರ ಮನೆಗೆ ಮಂಗಳವಾರ ಭೇಟಿ ನೀಡಿದ ಅವರು ಕುಟುಂಬದವರಿಗೆ ಸಾಂತ್ವನ ಹೇಳಿದರು. ವೈಯಕ್ತಿಕವಾಗಿ ₹50 ಸಾವಿರ ನೆರವು ನೀಡಿದರು.

‘ಸ್ವಾತಿ ಅವರ ತಾಯಿ ಅಂಗನವಾಡಿ ಕೇಂದ್ರದಲ್ಲಿ ಅಡುಗೆ ಮಾಡಿ, ಜೀವನ ನಡೆಸುತ್ತಾರೆ. ಅವರ ಬಡತನದ ಕಥೆ ಕೇಳಿ ಕಣ್ಣೀರು ಬಂತು. ಸ್ವಾತಿ ಅವರ ಹತ್ಯೆ ಖಂಡನೀಯ. ಈ ರೀತಿ ಹಿಂದೂ ಯುವತಿಯರನ್ನು ಕೊಲ್ಲುವವರನ್ನು ಗುಂಡಿಟ್ಟು ಕೊಲ್ಲುವ ಕಾನೂನು ಜಾರಿ ಆಗಬೇಕು’ ಎಂದು ಹೇಳಿದರು.

‘ಕಾಂಗ್ರೆಸ್ ಸರ್ಕಾರವು ಮುಸ್ಲಿಮರ ಗುಲಾಮಗಿರಿ ಮಾಡುತ್ತಿದೆ. ಮತಕ್ಕಾಗಿ ಮುಸ್ಲಿಂರನ್ನು ಓಲೈಸುತ್ತಿದೆ. ಸ್ವಾತಿ ಅವರ ಪ್ರಕರಣದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಎಸ್ಪಿ ಎಚ್ಚೆತ್ತುಕೊಂಡಿಲ್ಲ. ಜಿಲ್ಲಾಧಿಕಾರಿಗೆ ತಹಶೀಲ್ದಾರ್ ಈವರೆಗೆ ವರದಿ ನೀಡಿಲ್ಲ. ಇಂಥ ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ಸೌಲಭ್ಯ ನೀಡಿದ ಆರೋಪ

ರನ್ಯಾರಾವ್‌ಗೆ ನೆರವು: ವರದಿ ಶೀಘ್ರ

ಪ್ರಜಾವಾಣಿ ವಾರ್ತೆ

ರಾಮಚಂದ್ರ ರಾವ್

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ನಿಯಮ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ಹರ್ಷವರ್ಧಿನಿ ರನ್ಯಾ ರಾವ್ ಅವರ ಮಲತಂದೆ ಡಿಜಿಪಿ ರಾಮಚಂದ್ರ ರಾವ್ ಅವರ ವಿಚಾರಣೆ ಪೂರ್ಣಗೊಳಿಸಿರುವ ಗೌರವ ಗುಪ್ತ ನೇತೃತ್ವದ ತನಿಖಾ ತಂಡ, ಸರ್ಕಾರಕ್ಕೆ ಸದ್ಯವೇ ವರದಿ ಸಲ್ಲಿಸಲಿದೆ.

ಶಿಷ್ಟಾಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಪ್ರಕರಣದ ತನಿಖಾಧಿಕಾರಿ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) ವ್ಯವಸ್ಥಾಪಕ ನಿರ್ದೇಶಕರಾದ ಗೌರವ್ ಗುಪ್ತ ನೇತೃತ್ವದ ತಂಡ, ಶಿಷ್ಟಾಚಾರ ಸಿಬ್ಬಂದಿಯಾದ ಹೆಡ್ ಕಾನ್‌ಸ್ಟೆಬಲ್ ಬಸವರಾಜು, ವಿಮಾನ ನಿಲ್ದಾಣ ಗುಪ್ತದಳ ವಿಭಾಗದ ಕಾನ್‌ಸ್ಟೆಬಲ್ ಧನುಷ್ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಮಂದಿಯ ವಿಚಾರಣೆ ನಡೆಸಿ, ಹೇಳಿಕೆಯನ್ನು ದಾಖಲಿಸಿಕೊಂಡಿದೆ.

ರನ್ಯಾಗೆ ವಿಮಾನ ನಿಲ್ದಾಣದಲ್ಲಿ ಯಾವ ರೀತಿಯ ಶಿಷ್ಟಾಚಾರದ ನಿಯಮಗಳನ್ನು ನೀಡಲಾಗುತ್ತಿತ್ತು, ಆಕೆಯನ್ನು ಕರೆದೊಯ್ಯಲು ಯಾವ ಹಂತದ ಅಧಿಕಾರಿಗಳು ನಿಲ್ದಾಣಕ್ಕೆ ಬರುತ್ತಿದ್ದರು ಎಂಬೆಲ್ಲಾ ಮಾಹಿತಿ ಕಲೆ ಹಾಕಿದೆ.

ರೇಸ್ ಕೋರ್ಸ್ ರಸ್ತೆಯಲ್ಲಿರುವ ಶಕ್ತಿ ಭವನದ ಕಚೇರಿಯಲ್ಲಿ ರಾಮಚಂದ್ರ ರಾವ್ ಅವರನ್ನು ಸೋಮವಾರ ಎರಡು ತಾಸು ವಿಚಾರಣೆಗೊಳಪಡಿಸಿದ ತನಿಖಾ ತಂಡ, ‘ರನ್ಯಾಗೆ ಶಿಷ್ಟಾಚಾರ ನೀಡಲು ಯಾರಿಗಾದರೂ ಕರೆ ಮಾಡಿ ಸೂಚನೆ ನೀಡಿದ್ದೀರಾ?, ವಿಮಾನ ನಿಲ್ದಾಣಕ್ಕೆ ಸರ್ಕಾರಿ ವಾಹನವನ್ನು ಕಳುಹಿಸಿ ಕೊಟ್ಟಿದ್ದೀರಾ?, ರನ್ಯಾ ಕರೆತರಲು ನೀವು ವಿಮಾನ ನಿಲ್ದಾಣಕ್ಕೆ ಹೋಗಿದ್ದೀರಾ ಎಂಬ ಪ್ರಶ್ನೆಗಳಿಗೆ ರಾಮಚಂದ್ರ ಅವರು ‘ಇಲ್ಲ’ ಎಂದು ಉತ್ತರ ನೀಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಶಿಷ್ಟಾಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ತನಿಖಾ ತಂಡ, ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯ, ರನ್ಯಾ ರಾವ್, ರಾಮಚಂದ್ರ ರಾವ್ ಹಾಗೂ ವಿಮಾನ ನಿಲ್ದಾಣ ಸಿಬ್ಬಂದಿಯ ಮೊಬೈಲ್ ಕರೆಗಳ ವಿವರ ಕಲೆ ಹಾಕಿದೆ.

ದುಬೈನಿಂದ ಚಿನ್ನ ಕಳ್ಳಸಾಗಣೆ ಸಾಗಿಸುತ್ತಿದ್ದ ಆರೋಪದಡಿ ನಟಿ ರನ್ಯಾ ರಾವ್ ಅವರನ್ನು ಡಿಆರ್‌ಐ ಅಧಿಕಾರಿಗಳು ಮಾರ್ಚ್ 3ರಂದು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದರು.

ಮುಖ್ಯಾಂಶಗಳು

- ರನ್ಯಾ ರಾವ್ ಮಲತಂದೆ ಡಿಜಿಪಿ ರಾಮಚಂದ್ರ ರಾವ್ ವಿಚಾರಣೆ ಪೂರ್ಣ
- ರನ್ಯಾ ಕರೆದೊಯ್ಯಲು ಬರುತ್ತಿದ್ದ ಅಧಿಕಾರಿಗಳ ಮಾಹಿತಿ ಸಂಗ್ರಹ
- ಗೌರವ ಗುಪ್ತ ನೇತೃತ್ವದ ತಂಡದಿಂದ ತನಿಖೆ

ಜಮೀನು ವಿವಾದ: ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ ಆರೋಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹರ್ಲಾಪುರ ಗ್ರಾಮದಲ್ಲಿ ಜಮೀನಿಗಾಗಿ ನಡೆದ ಜಗಳದಲ್ಲಿ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ಹಲ್ಲೆ ಮಾಡಲಾಗಿದೆ ಎನ್ನಲಾಗಿದೆ. ಆದರೆ, ಇದಕ್ಕೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ‘ತಂಟೆ ನಡೆದಿದ್ದು ನಿಜ. ವಿವಸ್ತ್ರಗೊಳಿಸಿ ಹಲ್ಲೆ ಮಾಡಲಾಗಿಲ್ಲ’ ಎಂದಿದ್ದಾರೆ.

‘10 ಎಕರೆ ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ನನ್ನ ಪತಿಯ ಸಹೋದರಿಯರು ಹಾಗೂ ಇತರ 15 ಜನ ಸೇರಿ ಫೆಬ್ರುವರಿ 20ರಂದು ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ್ದಾರೆ. ಅರೆಬೆತ್ತಲೆಯಾಗಿಯೇ ನಾನು ಸವದತ್ತಿ ಪೊಲೀಸ್ ಠಾಣೆಗೆ ಹೋಗಿದ್ದೆ. ಆದರೆ, ಪೊಲೀಸರು ದೂರು ದಾಖಲಿಸಿಕೊಳ್ಳಲಿಲ್ಲ. ಬೆತ್ತಲೆ ಮಾಡಿ, ಹೊಡೆದಿದ್ದಕ್ಕೆ ಸಾಕ್ಷಿ ಕೊಡಿ ಎಂದು ಕೇಳಿದರು. ಜಗಳದಲ್ಲಿ ನನ್ನ ಹೊಟ್ಟೆಗೆ ತೀವ್ರ ಪೆಟ್ಟಾಗಿದ್ದರಿಂದ ಆಸ್ಪತ್ರೆಗೆ ದಾಖಲಾಗಲು ನಾನು ಧಾರವಾಡಕ್ಕೆ ಹೋದೆ’ ಎಂದು ಸಂತ್ರಸ್ತೆ ನಗರದಲ್ಲಿ ಮಂಗಳವಾರ ಮಾಧ್ಯಮಗಳ ಮುಂದೆ ದೂರಿದ್ದಾರೆ.

ಇದನ್ನು ಅಲ್ಲಗಳೆದ ಎಸ್‌ಪಿ, ‘ಫೆಬ್ರುವರಿ 20ರಂದು ಜಮೀನಿಗೆ ಸಂಬಂಧಿಸಿದಂತೆ ಗಲಾಟೆ ನಡೆದ ಬಗ್ಗೆ 112 ನಂಬರ್‌ಗೆ ಜನ ಕರೆ ಮಾಡಿ ತಿಳಿಸಿದ್ದರು. ಪೊಲೀಸರು ಸ್ಥಳಕ್ಕೆ ಹೋಗಿ ವಿಚಾರಿಸಿದ್ದಾರೆ. ಜಗಳವಾಗಿದ್ದು ನಿಜ. ಆದರೆ, ಬೆತ್ತಲೆ ಮಾಡಿ ಹೊಡೆದ ಘಟನೆ ನಡೆದಿಲ್ಲ. ಆಸುಪಾಸಿನ ಜನರಿಂದಲೂ ಹೇಳಿಕೆ ಪಡೆಯಲಾಗಿದೆ. ಅದೇ ದಿನ ಮಹಿಳೆಯನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಆಗ ಅವರು ದೂರು ನೀಡಲು ನಿರಾಕರಿಸಿದ್ದರು. ನಂತರ ಧಾರವಾಡದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. 10 ದಿನಗಳ ಬಳಿಕ ಪೊಲೀಸರೇ ಆಸ್ಪತ್ರೆಗೆ ಹೋಗಿ ಕೇಳಿದರೂ ಅವರು ದೂರು ನೀಡಿಲ್ಲ. ಊರ ಹಿರಿಯರ ಮಾತು ಕೇಳುತ್ತೇನೆ ಅಂದಿದ್ದಾರೆ’ ಎಂದು ತಿಳಿಸಿದರು.

ಎರಡು ಬಾರಿ ಎಫ್‌ಐಆರ್: ‘4 ಎಕರೆ 19 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕಳೆದ ಕೆಲವು ವರ್ಷಗಳಿಂದ ತಕರಾರು ನಡೆದೇ ಇದೆ. 2024ರ ಜೂನ್ 15ರಂದು ಜಮೀನಿನಲ್ಲಿ ಬಿತ್ತಲು ಮುಂದಾದಾಗ ಏಳು ಜನ ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿದ್ದಾರೆ ಎಂದು ಸಂತ್ರಸ್ತೆ ಜೂನ್ 18ರಂದು ದೂರು ನೀಡಿದ್ದರು. ಅದೇ ರೀತಿ, ಡಿಸೆಂಬರ್ 19ರಂದು ಹೊಲದಲ್ಲಿ ಕಳೆ ತೆಗೆಯುತ್ತಿದ್ದಾಗ ಯಲ್ಲಪ್ಪ ಅಲಿಯಾಸ್ ಪಟ್ಟಣಗೌಡ ಪಾಟೀಲ ಎಂಬುವರು ಹೊಲಕ್ಕೆ ಬಂದು ಜಗಳ ತೆಗೆದು, ಬಟ್ಟೆ ಹರಿದು ಮಾನಭಂಗ ಮಾಡಲು ಯತ್ನಿಸಿದರು ಎಂದೂ 2025ರ ಜನವರಿ 1ರಂದು ದೂರು ದಾಖಲಿಸಿದ್ದಾರೆ. ಈ ಎರಡೂ ಪ್ರಕರಣಗಳಲ್ಲಿ ಜಾರ್ಜ್‌ಶೀಟ್ ಸಲ್ಲಿಸಲಾಗಿದೆ’ ಎಂದರು.

‘ಸಂತ್ರಸ್ತೆಯ ಪತಿ ತೀರಿಕೊಂಡಿದ್ದಾರೆ. ವಿವಾದಕ್ಕೆ ಒಳಪಟ್ಟ ಜಮೀನನ್ನು ಆಕೆಯ ನಾದಿನಿಯರ (ಗಂಡನ ಸಹೋದರಿಯರು) ಹೆಸರಿಗೆ ಗೇಣಿ ನೀಡಲಾಗಿದೆ. ಹೀಗಾಗಿ, ಅವರು ಉಳುಮೆ ಮಾಡುತ್ತಿದ್ದಾರೆ. ಅದರಲ್ಲೂ ತಮಗೆ ಪಾಲು ಬರುತ್ತದೆ ಎಂದು ಸಂತ್ರಸ್ತೆ ವ್ಯಾಜ್ಯ ಹೂಡಿದ್ದಾರೆ’ ಎಂದರು.

ವಿದ್ಯುತ್ ತಂತಿ ಸ್ಪರ್ಶಿಸಿದ ಬಳಿಕ ನೇತಾಡುತ್ತಿದ್ದ ಯುವಕನ ಮೃತದೇಹ

ಮದುವೆ ಮಾಡದ್ದಕ್ಕೆ ವಿದ್ಯುತ್ ಸ್ಪರ್ಶಿಸಿ ಪ್ರಾಣ ಬಿಟ್ಟ ಯುವಕ

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ‘ಮದುವೆ ಮಾಡಲಿಲ್ಲ’ ಎಂಬ ಕಾರಣಕ್ಕೆ, ತಾಲ್ಲೂಕಿನ ಮಧುವನಹಳ್ಳಿಯ ಮದ್ಯ ವ್ಯಸನಿ ಯುವಕ ಮಸಣಶೆಟ್ಟಿ (27), ಲಿಂಗಾಣಪುರ ಬಳಿ ಹೈ ಟೆನ್ಷನ್ ವಿದ್ಯುತ್ ಕಂಬ ಏರಿ, ತಂತಿ ಸ್ಪರ್ಶಿಸಿ ತಾಯಿಯ ಎದುರೇ ಮಂಗಳವಾರ ಮೃತಪಟ್ಟ.

‘ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದ ಯುವಕ ಮದುವೆ ಮಾಡುವಂತೆ ಮೂರು ದಿನಗಳ ಹಿಂದೆ ಪೋಷಕರನ್ನು ಆಗ್ರಹಿಸಿದ್ದ. ಕುಡಿತಬಿಟ್ಟರೆ ಮದುವೆ ಮಾಡುವುದಾಗಿ ಅವರು ಹೇಳಿದ್ದರು. ಬೆಳಿಗ್ಗೆ ಮನೆಯಿಂದ ಬಂದ ಆತ ವಿದ್ಯುತ್ ಕಂಬ ಏರಿದ್ದನ್ನು ಕಂಡ ಜಮೀನಿನ ಮಾಲೀಕ ಕೂಡಲೇ ಸೆಸ್ಕ್ ಸಿಬ್ಬಂದಿಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಅಗ್ನಿಶಾಮಕ ದಳ ಹಾಗೂ ಸೆಸ್ಕ್ ಸಿಬ್ಬಂದಿಯೊಡನೆ ಸ್ಥಳಕ್ಕೆ ಧಾವಿಸಿ ಕೆಳಗಿಳಿಯುವಂತೆ ಯುವಕನ ಮನವೊಲಿಸುವ ಪ್ರಯತ್ನ ನಡೆಯಿತು. ಆಗ ತಾಯಿಯನ್ನು ಕರೆಸಬೇಕೆಂದು ಕೇಳಿಕೊಂಡ. ಸ್ಥಳಕ್ಕೆ ತಾಯಿ ಸಿದ್ದರಾಜಮ್ಮ ಬಂದಾಗ, ‘ಅವ್ವಾ ನಾನೇ ಬರ್ತೇನೆ, ಕೆಳಗೆ ಹಿಡ್ಕೋ’ ಎನ್ನುತ್ತಾ, ವಿದ್ಯುತ್ ಲೈನ್ ಹಿಡಿದು ಕ್ಷಣ ಮಾತ್ರದಲ್ಲಿ ಮೃತಪಟ್ಟ’ ಎಂದರು.

‘ಹೈ-ಟೆನ್ಷನ್ ತಂತಿಯಲ್ಲಿ ವಿದ್ಯುತ್ ಪ್ರಸರಣ ಸ್ಥಗಿತಗೊಳಿಸಲಾಗಿತ್ತು. ಆದರೂ, ಇಂಡೆಕ್ಸ್‌ನಲ್ಲಿ ಶೇಖರಣೆಯಾಗಿದ್ದ ವಿದ್ಯುತ್ ಶಾಖಕ್ಕೆ ಯುವಕ ಪ್ರಾಣ ಕಳೆದುಕೊಂಡ’ ಎನ್ನಲಾಗಿದೆ.

ಸಂಪ್‌ನಲ್ಲಿ ಬಿದ್ದು ಇಬ್ಬರು ಮಕ್ಕಳ ಸಾವು

ಜೇವರ್ಗಿ (ಕಲಬುರಗಿ ಜಿಲ್ಲೆ): ಆಟ ಆಡುವಾಗ ಸಂಪ್‌ಗೆ ಬಿದ್ದು ಇಬ್ಬರು ಮಕ್ಕಳು ಮೃತಪಟ್ಟ ಘಟನೆ ತಾಲ್ಲೂಕಿನ ಕೋಳಕೂರದಲ್ಲಿ ಮಂಗಳವಾರ ನಡೆದಿದೆ. ಗಿರೀಶ್ ತಿಪ್ಪಣ್ಣ (3) ಹಾಗೂ ತಿಪ್ಪಣ್ಣ ಅವರ ಸಹೋದರಿಯ ಮಗಳು ಶ್ರೇಷ್ಠಾ ಮಹೇಶ್ (2) ಮೃತಪಟ್ಟವರು.

ಆಟವಾಡುತ್ತಿದ್ದ ಇಬ್ಬರೂ ಕಣ್ಮರೆ ಆಗಿದ್ದರು. ಪೋಷಕರು ಎಷ್ಟೇ ಹುಡುಕಿದರೂ ಸಿಕ್ಕಿರಲಿಲ್ಲ. ಕೊನೆಗೆ ಪೊಲೀಸರು ಬಂದು, ಮನೆಯ ಸಂಪ್ ತೆರೆದು ನೋಡಿದಾಗ ಮಕ್ಕಳು ಬಿದ್ದಿರುವುದು ಗೊತ್ತಾಗಿದೆ. ಜೇವರ್ಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಧಾರವಾಡ ಕೃಷಿ ವಿ.ವಿ ಪ್ರಥಮ ಕುಲಪತಿ ಪ್ರೊ.ಜೆ.ವಿ.ಗೌಡ ನಿಧನ

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ. ಜೆ.ವಿ.ಗೌಡ (88) ಸೋಮವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ ಸುಶೀಲಾ, ಪುತ್ರ ವಿಜಯಕುಮಾರ ಹಾಗೂ ಪುತ್ರಿ ಸಂಗೀತಾ ಇದ್ದಾರೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಜಿಗೇನಹಳ್ಳಿಯವರಾದ ಪ್ರೊ. ಜೆ.ವಿ.ಗೌಡ ಅವರು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ವೃತ್ತಿ ಆರಂಭಿಸಿದರು. ನಂತರ ಧಾರವಾಡ ಕೃಷಿ ಕಾಲೇಜಿನಲ್ಲಿ ಬೋಧಕರು, ವಿಜ್ಞಾನಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿ (1986-89) ಕಾರ್ಯನಿರ್ವಹಿಸಿದರು.

ಬೀದರ್‌ನಲ್ಲಿ ಪಶುವೈದ್ಯಕೀಯ ವಿಜ್ಞಾನ ಕಾಲೇಜು, ರಾಯಚೂರಿನಲ್ಲಿ ಕೃಷಿ ಮಹಾವಿದ್ಯಾಲಯ, ಕೃಷಿ ಎಂಜಿನಿಯರಿಂಗ್ ಕೋರ್ಸ್ ಆರಂಭಿಸಲು ಶ್ರಮಿಸಿದ್ದರು. ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಸುಧಾರಣೆಗೆ ನೇಮಕವಾಗಿದ್ದ ರಾಷ್ಟ್ರಮಟ್ಟದ 12 ಸಮಿತಿಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಕಬ್ಬು, ಭತ್ತ, ಜೋಳ, ಅಲಸಂದಿ, ಮೆಣಸಿನಕಾಯಿ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಿದ್ದರು. ಅವರ 300 ಪ್ರಬಂಧಗಳು ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ.

ಮಾರ್ಚ್ 19ರಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 1 ಗಂಟೆವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಧಾರವಾಡದ ಹೊಸ ಬಸ್ ನಿಲ್ದಾಣದ ಹಿಂಭಾಗದ ಸ್ಮಶಾನದಲ್ಲಿ ಮಧ್ಯಾಹ್ನ 2.30 ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಹೆಜ್ಜೇನು ದಾಳಿ: ಯುವಕ ಸಾವು

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಹೊಸಕಂಬಿ ಸೇತುವೆ ಬಳಿ ಸೋಮವಾರ ಸಂಜೆ ಚಿತ್ರ ಕ್ಲಿಕ್ಕಿಸಿಕೊಳ್ಳುತ್ತಿದ್ದ ಯುವಕರ ಗುಂಪಿನ ಮೇಲೆ ಹೆಜ್ಜೇನುಗಳು ದಾಳಿ ನಡೆಸಿದ ಪರಿಣಾಮ, ಗಂಭೀರವಾಗಿ ಗಾಯಗೊಂಡ ಹುಬ್ಬಳ್ಳಿಯ ದರ್ಶನ ಅಜಿತ ಕಳಸೂರು (24) ಮೃತಪಟ್ಟಿದ್ದಾರೆ.

ಗೋಕರ್ಣಕ್ಕೆ ತೆರಳುತ್ತಿದ್ದ ಯುವಕರು ಮಾರ್ಗ ಮಧ್ಯೆ ಚಿತ್ರ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: rwf.indianrailways.gov.in.

ಟೆಂಡರ್ ಪ್ರಕಟಣೆ ಸಂಖ್ಯೆ. ಆರ್‌ಡಬ್ಲ್ಯೂಎಫ್/ಎಸ್/146/2024–25/10
ದಿನಾಂಕ: 14.03.2025

ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು/ಆರ್‌ಡಬ್ಲ್ಯೂಎಫ್ ಇವರು ಕೆಳಕಂಡ ಕೆಲಸಕ್ಕೆ ಸದರಿ ಕ್ಷೇತ್ರದಲ್ಲಿ ಅನುಭವಿ/ಪ್ರತಿಷ್ಠಿತ ಗುತ್ತಿಗೆದಾರರಿಂದ ವೆಬ್‌ಸೈಟ್ http://www.ireps.gov.in ಮೂಲಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

1) **ಟೆಂಡರ್ ಸಂಖ್ಯೆ:** ಆರ್‌ಡಬ್ಲ್ಯೂಎಫ್ ಎಸ್‌ಟಿಪಿಟಿ–ಎಲ್‌ಎಂಎಸ್4000ಎಂಟಿ. 2) **ಕೊನೆಯ ದಿನಾಂಕ & ಸಮಯ:** 11.04.2025 ರಂದು 14.15 ಗಂಟೆಗೆ. 3) **ಕೆಲಸದ ವಿವರ:** ರೈಲು ಗಾಲಿ ಕಾರ್ಖಾನೆಯ ವೆಬ್‌ಸೈಟನ್ನು ಉಲ್ಲೇಖಿಸಿ 4) **ಅಂತರದ ಸ್ಲ್ಯಾಬ್:** 1000 ಕಿಮೀಗಳಿಗೂ ಮೇಲ್ಪಟ್ಟು (ಸರಾಸರಿ 2500ಕಿಮೀ ಅಂತರದವರೆಗೆ). 5) **ಪ್ರಮಾಣ** : 4000 ಎಂಟಿ (ನಾಲ್ಕು ಸಾವಿರ ಮೆಟ್ರಿಕ್ ಟನ್‌ಗಳು ಮಾತ್ರ). 6) **ಟೆಂಡರಿನ ಅಂದಾಜು ಮೌಲ್ಯ:** ರೂ.3,87,00,000/– (ರೂಪಾಯಿ ಮೂರು ಕೋಟಿ ಎಂಭತ್ತೇಳು ಲಕ್ಷ ಮಾತ್ರ). 7) **ಇಎಂಡಿ ಹಣ** : ರೂ.3,43,500/– (ಮೂರು ಲಕ್ಷ ನಲವತ್ತು ಮೂರು ಸಾವಿರ ಮತ್ತು ಐನೂರು ಮಾತ್ರ. 8) **ಗುತ್ತಿಗೆ ಅವಧಿ:** ಕನಿಷ್ಠ 12 (ಹನ್ನೆರಡು) ತಿಂಗಳು ಸ್ವೀಕೃತಿ ಪತ್ರ ನೀಡಿದ ದಿನಾಂಕದಿಂದ.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ,
‘ಶ್ಯಾಮಿಲಿ ಹಾಲ್, 2ನೇ ಮಹಡಿ, ಅಂಬಲಪಾಡಿ, ಉಡುಪಿ–576103
Tel No: 0820-2532961, Email: pfdudupi@gmail.com
ಸಂ:ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರ್ ಪ್ರಕಟಣೆ–22/2024–25 ದಿ: 15–03–2025

ಟೆಂಡರು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಗಿನ ಕಾಮಗಾರಿಗಳ ಟೆಂಡರ್ ಕರೆಯಲಾಗಿದ್ದು, **www.kppp.karnataka.gov.in** ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಕಾಮಗಾರಿಯ ಹೆಸರು: (1) Modernization And Up-gradation Of Mangalore Fishery Harbour In Dakshina Kannada District. ಟೆಂಡರಿಗಿಟ್ಟ ಮೊತ್ತ: **ರೂ. 2840.11 ಲಕ್ಷ** (2) Modernization of Malpe Fishery Harbour In Udupi District, ಟೆಂಡರಿಗಿಟ್ಟ ಮೊತ್ತ: **ರೂ. 721.84 ಲಕ್ಷ** (3) Modernization Of Gangolli Fishery Harbour in Udupi District, ಟೆಂಡರಿಗಿಟ್ಟ ಮೊತ್ತ: **ರೂ. 1661.52 ಲಕ್ಷ**

ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
ವಾಸಾಇ/ಸನಿಉ/ಕೆಎಸ್‌ಎಂಸಿಎ/541/24–25 ದಿ: 18.03.2025

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ4/ಟೆಂಡರ/2024–25/4908 ದಿನಾಂಕ: 13/03/2025

:: ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದಿ್ವಲಕೋಟೆ ಪದ್ಧತಿಯಲ್ಲಿ ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿವಿಧ ಬಡಾವಣೆ ಹಾಗೂ ಗ್ರಾಮಗಳಲ್ಲಿ ಭವನ ನಿರ್ಮಾಣ, 2 ಪ್ಯಾಕೇಜ ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 13643 (2) 13641, 2) ಲೆಕ್ಕ ಶೀರ್ಷಿಕೆ: 2024–25ನೇ ಸಾಲಿನ ಮುಖ್ಯ ಮಂತ್ರಿ ವಿಶೇಷ ಅನುದಾನ, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಇಂಡೆಂಟ್ ಸಂಖ್ಯೆ: 13643 ರೂ. **50,83,705.6,** ಇಂಡೆಂಟ್ ಸಂಖ್ಯೆ: 13641 ರೂ. **59,32,971.89**, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **15–03–2025 ರಿಂದ 28–03–2025 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ : ಇ–ಪ್ರೊಕ್ಯೂರಮೆಂಟ್ ನಿಯಮಾನುಸಾರ 7) ಇ.ಎಂ.ಡಿ. : ಇಂಡೆಂಟ್ ಸಂಖ್ಯೆ: 13643 ರೂ. 1,02,000.00, ಇಂಡೆಂಟ್ ಸಂಖ್ಯೆ: 13641 ರೂ. 1,19,000.00 8) ಟೆಂಡರ ಸಲ್ಲಿಸುವ ದಿನಾಂಕ: **15–03–2025 ರಿಂದ 28–03–2025 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **29–03–2025 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **01–04–2025 ಬೆಳಿಗ್ಗೆ 11:00 ಗಂಟೆ ನಂತರ,** 11) ಕೆಲಸ ಮುಗಿಸಲು ಕಾಲಮಿತಿ: 6 ತಿಂಗಳು ಮಳೆಗಾಲ ಸಹಿತ, 12) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 13) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1104/ಕೆ.ಎಸ್.ಎಂ.ಸಿ.&ಎ/2024–25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/5750/2024–25 ದಿನಾಂಕ: 17.03.2025 (5ನೇ ಕರೆ)	1	₹ 86,46,299/- / ₹ 1,73,000/-	25.03.2025 ರ ಸಂಜೆ 4:00 ಗಂಟೆಯವರೆಗೆ	27.03.2025 ರ ಸಂಜೆ 5:00 ಗಂಟೆಯ ನಂತರ
2		ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/5750/2024–25 ದಿನಾಂಕ: 17.03.2025 (7ನೇ ಕರೆ)	2	₹ 44,62,393/- / ₹ 89,300/-		
3		ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/5750/2024–25 ದಿನಾಂಕ: 17.03.2025 (6ನೇ ಕರೆ)	3	₹ 68,64,424/- / ₹ 1,37,300/-		
4		ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/5750/2024–25 ದಿನಾಂಕ: 17.03.2025 (6ನೇ ಕರೆ)	4	₹ 50,87,675/- / ₹ 1,01,800/-		
5		ಬೆಂಜಮಂ/ಕಾನಿಅ(ಪೂರ್ವ–1)/ಯೋ.ವಿ/5750/2024–25 ದಿನಾಂಕ: 17.03.2025 (6ನೇ ಕರೆ)	5	₹ 57,44,679/- / ₹ 1,15,000/-		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/MIA/5764/2024-25

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ-583101.
ದೂರವಾಣಿ ಸಂಖ್ಯೆ : 08392-273479 /278168
ಫ್ಯಾಕ್ಸ್ : 08392-273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆ.ಶಾ/ವಾ.ವಿ/ಡ್ರೈವರ್ಸ್/ಟೆಂಡರ್/ಪ.ಪ್ರ/CAL–2/2024–25 ದಿನಾಂಕ: 14.3.2025

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆ, ದ್ರವ ತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ಇತರೆ ವಿವಿಧ ಮಾದರಿಯ ವಾಹನಗಳಿಗೆ ಅವಶ್ಯವಿರುವ ಚಾಲಕರು, ಚಾಲಕರು ಕಮ್ ಆಪರೇಟರ್ಸ್ , ಕ್ಲೀನರ್ಸ್ ಮತ್ತು ಮೆಕ್ಯಾನಿಕ್ ಹಾಗೂ ಎಲೆಕ್ಟ್ರಿಷಿಯನ್ ಸೇವೆಯನ್ನು ಹೊರ ಗುತ್ತಿಗೆ ಮೂಲಕ ಪೂರೈಸಿಕೊಳ್ಳಲು ನಿರ್ಧರಿಸಿದ್ದು, ಪ್ರಯುಕ್ತ ಅರ್ಹ ಮಾನವ ಸಂಪನ್ಮೂಲ ಸರಬರಾಜು ಏಜೆನ್ಸಿದಾರರು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಇಂಡೆಂಟ್ ಸಂಖ್ಯೆ:DMA/2024-25/SE4029/CAL-2 ಮೂಲಕ ಭಾಗವಹಿಸಲು ವಿವರಗಳನ್ನು ವೆಬ್‌ಸೈಟ್ https://Kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ಸಲ್ಲಿಸಲು 28/03/2025 ಸಂಜೆ 05 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ.

ತಮ್ಮ ವಿಶ್ವಾಸಿ
ಆಯುಕರು
ಬಳ್ಳಾರಿ ಮಹಾನಗರ ಪಾಲಿಕೆ,ಬಳ್ಳಾರಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಹೆಬ್ಬಾಳ ವಿಭಾಗ, 2ನೇ ಮಹಡಿ, ಬಿಬಿಎಂಪಿ ಕಟ್ಟಡ,
ಜೆ.ಸಿ. ನಗರ ಮುಖ್ಯರಸ್ತೆ, ಮುನಿರೆಡ್ಡಿಪಾಳ್ಯ, ಬೆಂಗಳೂರು – 560032.

ಸಂಖ್ಯೆ: ಕಾಅ/ಹೆಚ್‌ಬಿಎಲ್/ಟೆಂಡರ್/12/2024–25 ದಿನಾಂಕ: 18–03–2025

ಅಲ್ಪಾವಧಿ ಟೆಂಡರ್ ಪ್ರಕಟಣೆ – (2ನೇ ಕರೆ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯೂ–3)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 61, ರಾಧಕೃಷ್ಣ ಟೆಂಪಲ್ ವಾರ್ಡ್‌ನ ಗೆದ್ದಲಹಳ್ಳಿಯ ಗುಂಡುತೋಪ್ಪು ಪ್ರದೇಶದಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳ ಕಾಮಗಾರಿ. (2ನೇ ಕರೆ) – (ಎಸ್.ಸಿ) – **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,00,000.00**
2	ವಾರ್ಡ್ ಸಂಖ್ಯೆ. 66, ಚಾಮುಂಡಿನಗರ ಇಲ್ಲಿನ ಕೌಸರ್ ನಗರದ 5ನೇ ಅಡ್ಡರಸ್ತೆ ಮತ್ತು ರಹಮತ್ ನಗರದ 5ನೇ ಅಡ್ಡರಸ್ತೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳ ಕಾಮಗಾರಿ. (2ನೇ ಕರೆ)–(ಪ್ರವರ್ಗ–1) – **ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,00,000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **20–03–2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **24–03–2025 ರಂದು 15.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಬ್ಬಾಳ ವಿಭಾಗ, ಜೆ.ಸಿ. ನಗರ ಮುಖ್ಯರಸ್ತೆ, ಬೆಂಗಳೂರು – 560032 ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **02–04–2025 ರಂದು 16.00 ಗಂಟೆವರೆಗೆ.** 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **03–04–2025 ರಂದು 16.30 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಹೆಬ್ಬಾಳ ವಿಭಾಗ, ಬಿಬಿಎಂಪಿ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ನೋಂದಾಯಿತ. ಕಛೇರಿ: 30/1, 1ನೇ ಮತ್ತು 2ನೇ ಮಹಡಿ, ಯುಎನ್‌ಐ ಬಿಲ್ಡಿಂಗ್, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತ ನಗರ, ಬೆಂಗಳೂರು – 560051. CIN: U37100KA2021SGC147734,
TAN:BLRB21071B PAN:AAJCB8656M, Email-Id: dgm3bswml@gmail.com

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/ಪಿಪಿಪಿ/06/2024–25 ದಿನಾಂಕ: 18–03–2025

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು ಇವರ ಪರವಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (ಉದಾ. **https://kppp.karnataka.gov.in**). ಟೆಂಡರ್‌ಗಳು ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳು ಪ್ರಮಾಣಿತ ಬಿಡ್ಡರ್‌ಗಳ ದಾಖಲೆಗಳನ್ನು ಗಮನಿಸಲು ಸೂಚಿಸಲಾಗಿದೆ. ಇತರ ವಿವರಗಳನ್ನು ಬಿಡ್ಡಿಂಗ್ ದಾಖಲೆಗಳಲ್ಲಿ ಕಾಣಬಹುದು.

ಕ್ರ. ಸಂ.	ಕಾಮಗಾರಿಯ ವಿವರ	*ಅಂದಾಜು ಪಿಪಿಪಿ ಮಾದರಿಯಲ್ಲಿ ಬಿಡ್ಡಾರರಿಗೆ ಬಂಡವಾಳ ವೆಚ್ಚ (ಲಕ್ಷಗಳಲ್ಲಿ ರೂ.) ಜಿಎಸ್‌ಟಿ ಹೊರತುಪಡಿಸಿ	ಇಎಮ್‌ಡಿ (ಮೊತ್ತ ರೂ.ಗಳಲ್ಲಿ)	ಬಿಡ್ ಡಾಕ್ಯುಮೆಂಟ್ ವೆಚ್ಚ
	ಡಿಸೈನ್ ಬಿಲ್ಡ್ ಫೈನಾನ್ಸ್ ಆಪರೇಟ್‌ನಲ್ಲಿ ರಿಯಾಯಿತಿದಾರರ ನೇಮಕಾತಿ ಮತ್ತು ಸಂಗ್ರಹಣೆಯ ಕೆಲಸಕ್ಕಾಗಿ 100% ರಿಯಾಯಿತಿ ಹೂಡಿಕೆಯೊಂದಿಗೆ ವರ್ಗಾವಣೆ (DBFOT), **ಪ್ರಾಥಮಿಕ ಸಾರಿಗೆ ಮತ್ತು ಉದ್ದೇಶಿತ ಸಂಸ್ಕರಣಾ ಘಟಕಗಳಿಗೆ ಸಿ&ಡಿ ತ್ಯಾಜ್ಯದ ದ್ವಿತೀಯ ಸಾರಿಗೆ ಕೆಳಗಿನ ಪ್ರತಿಯೊಂದು ಸಂಸ್ಕರಣಾ ಘಟಕಗಳ ಸ್ಥಾಪನೆ ಸೇರಿದಂತೆ** 15 ವರ್ಷಗಳ ರಿಯಾಯಿತಿ ಅವಧಿಗೆ ವಿವಿಧ ಪ್ಯಾಕೇಜ್‌ಗಳು, 3ನೇ ಕರೆ.			
1	ಪ್ಯಾಕೇಜ್ – 4 (750 ಟಿಪಿಡಿ ಸಂಗ್ರಹಣೆ, ಪ್ರಾಥಮಿಕ ಸಾರಿಗೆ ಮತ್ತು ಮಾಧ್ಯಮಿಕ ಸಾರಿಗೆ ಮತ್ತು ಆರ್‌ಎಫ್‌ಪಿ ನಲ್ಲಿ ಉಲ್ಲೇಖಿಸಲಾದ ಸ್ಥಳಗಳ ಪ್ರಕಾರ ಸಿ&ಡಿ ತ್ಯಾಜ್ಯದ ಸಂಸ್ಕರಣೆ) – 3ನೇ ಕರೆ.	**5325.00**	ರೂ. 1.00 ಲಕ್ಷ ಇ–ಪಾವತಿಯ ಮೂಲಕ ಕೆಳಗಿನ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಒಟಿಸಿ ಮತ್ತು ಬಾಕಿ ರೂ.25,62,500/– ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಹೊರಡಿಸಿದ ರಾಷ್ಟ್ರೀಕೃತ / ಷೆಡ್ಯೂಲ್ಡ್ ಬ್ಯಾಂಕ್	ಕೆಪಿಪಿ ಪೋರ್ಟಲ್ ಪ್ರಕಾರ

ವೇಳಾಪಟ್ಟಿ: 1. ಕೆಪಿಪಿ ಪೋರ್ಟಲ್ ಮುಖಾಂತರ ಪೂರ್ವ–ಬಿಡ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 26.03.2025 ರಂದು ಸಂಜೆ 17.30 ಗಂಟೆಯವರೆಗೆ.** 2. ಪೂರ್ವ ಬಿಡ್ ಸಭೆ: ಸಿಇ & ಸಿಜಿಎಂ (ಟೆಕ್), ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು ಕಚೇರಿಯಲ್ಲಿ **ದಿನಾಂಕ: 26.03.2025 ರಂದು ಸಂಜೆ 15.00 ಗಂಟೆಯವರೆಗೆ.** 3. ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 03.04.2025 ರಂದು ಸಂಜೆ 16.00 ಗಂಟೆಯವರೆಗೆ.** 4. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04.04.2025 ರಂದು ಸಂಜೆ 16.30 ಗಂಟೆಯವರೆಗೆ.** 5. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.

1. ಉದ್ಯೋಗಿ ಯಾವುದೇ ತಾಂತ್ರಿಕ ವೈಫಲ್ಯದಿಂದ ಉಂಟಾಗುವ ವಿಳಂಬಗಳಿಗೆ ಜವಾಬ್ದಾರರಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳ ಬಗ್ಗೆ ಟೆಂಡರ್‌ದಾರರಿಗೆ ತಿಳಿಸಲು ವ್ಯವಸ್ಥೆಯು ಪ್ರಯತ್ನಿಸಿದರೂ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗಿ ಜವಾಬ್ದಾರರಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ **hphelpdesk.blr@intarvo.com.** ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: **080–22371090 / 22373788.** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಟೆಂಡರ್‌ದಾರರು ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್‌ನೆಟ್ ಸಂಪರ್ಕ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್ ಪ್ರವೇಶಿಸಲಾಗದಿದ್ದರೆ ಉದ್ಯೋಗಿ ಜವಾಬ್ದಾರರಾಗಿರುವುದಿಲ್ಲ.
2. ಯಾವುದೇ ತಿದ್ದುಪಡಿ / ಅನುಬಂಧವನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/5774/ಎಎಎ/2024–25

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ KSHIP
(ಲೋಕೋಪಯೋಗಿ ಇಲಾಖೆ)
ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು–560 001
Tele: 22126758/59/60/61 e-mail: piukship@gmail.com

ಸಂ: **PIU:KSHIP-III/ADB/NCB** ದಿನಾಂಕ: **19-03-2025**
ಟೆಂಡರ್ ಅಧಿಸೂಚನೆ ಸಂಖ್ಯೆ: **05/2024-25, Dtd. 19.03.2025**

ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ, ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಬೆಂಗಳೂರು ಕಛೇರಿ ವತಿಯಿಂದ KSHIP-III (ADB ಸಾಲದ ಸಂಖ್ಯೆ. 3619 IND) ಅಡಿಯಲ್ಲಿ ಏಕ–ಹಂತ – ಎರಡು ಕವರ್ ವ್ಯವಸ್ಥೆಯಲ್ಲಿ ಕೆಳಗೆ ತಿಳಿಸಲಾದ ಪ್ಯಾಕೇಜ್ ಕೆಲಸಗಳಿಗೆ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಕೋಷ್ಟಕದಲ್ಲಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಲಬಹುದು.

1	ಕೆಲಸದ ಹೆಸರು	1. **ಪ್ಯಾಕೇಜ್ ಸಂಖ್ಯೆ BSI 1: ಕರ್ನಾಟಕದ ಉತ್ತರ ಮತ್ತು ಈಶಾನ್ಯ ವಲಯದ ಪಿ.ಡಬ್ಲ್ಯೂ.ಡಿ ರಸ್ತೆಗಳಲ್ಲಿ 10 ಸಂಖ್ಯೆಗಳ ಬ್ಲಾಕ್‌ಸ್ಪಾಟ್‌ಗಳಿಗಾಗಿ ರಸ್ತೆ ಸುರಕ್ಷತೆ ಸುಧಾರಣೆ ಕಾಮಗಾರಿಗಳು.** 2. **ಪ್ಯಾಕೇಜ್ ಸಂಖ್ಯೆ BSI 2: ಕರ್ನಾಟಕದ ದಕ್ಷಿಣ ಮತ್ತು ಕೇಂದ್ರ ವಲಯದ ಪಿ.ಡಬ್ಲ್ಯೂ.ಡಿ ರಸ್ತೆಗಳಲ್ಲಿ 10 ಸಂಖ್ಯೆಗಳ ಬ್ಲಾಕ್‌ಸ್ಪಾಟ್‌ಗಳಿಗಾಗಿ ರಸ್ತೆ ಸುರಕ್ಷತೆ ಸುಧಾರಣೆ ಕಾಮಗಾರಿಗಳು.** 3. **ಪ್ಯಾಕೇಜ್ ಸಂಖ್ಯೆ BSI 3: ಕರ್ನಾಟಕದ ಉತ್ತರ ಮತ್ತು ಈಶಾನ್ಯ ವಲಯದ ಪಿ.ಡಬ್ಲ್ಯೂ.ಡಿ ರಸ್ತೆಗಳಲ್ಲಿ ಹೆಚ್ಚುವರಿ 17 ಸಂಖ್ಯೆಗಳ ಬ್ಲಾಕ್‌ಸ್ಪಾಟ್‌ಗಳಿಗಾಗಿ ರಸ್ತೆ ಸುರಕ್ಷತೆ ಸುಧಾರಣೆ ಕಾಮಗಾರಿಗಳು.** 4. **ಪ್ಯಾಕೇಜ್ ಸಂಖ್ಯೆ BSI 4: ಕರ್ನಾಟಕದ ದಕ್ಷಿಣ ಮತ್ತು ಕೇಂದ್ರ ವಲಯದ ಪಿ.ಡಬ್ಲ್ಯೂ.ಡಿ ರಸ್ತೆಗಳಲ್ಲಿ ಹೆಚ್ಚುವರಿ 10 ಸಂಖ್ಯೆಗಳ ಬ್ಲಾಕ್‌ಸ್ಪಾಟ್‌ಗಳಿಗಾಗಿ ರಸ್ತೆ ಸುರಕ್ಷತೆ ಸುಧಾರಣೆ ಕಾಮಗಾರಿಗಳು.**
2	ನಿರ್ಮಾಣ ಅವಧಿ	5 ತಿಂಗಳುಗಳು
3	ಇ–ಪ್ರೋಕ್ಯೂರ್‌ಮೆಂಟ್‌ನಿಂದ ಬಿಡ್ ದಾಖಲೆಗಳನ್ನು ಡೌನ್ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ	ದಿನಾಂಕ: 20.03.2025 ಸಮಯ 15:00 ಗಂಟೆಯಿಂದ
4	ಇ–ಪ್ರೋಕ್ಯೂರ್‌ಮೆಂಟ್‌ನಿಂದ ಬಿಡ್ ದಾಖಲೆಗಳನ್ನು ಡೌನ್ಲೋಡ್ ಮಾಡಿಕೊಳ್ಳಲು ಕಡೆಯ ದಿನಾಂಕ	ದಿನಾಂಕ: 19.04.2025 ಸಮಯ 15:00 ಗಂಟೆವರೆಗೆ
5	ಪೂರ್ವ ಬಿಡ್ ಸಭೆಯ ಸಮಯ ಮತ್ತು ದಿನಾಂಕ	ದಿನಾಂಕ: 04.04.2025 ಸಮಯ 11:30 ಗಂಟೆಗಳು (ಯೋಜನಾ ನಿರ್ದೇಶಕರ ಕಛೇರಿ, ಕೆಶಿಪ್ ಬೆಂಗಳೂರು)
6	ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 19.04.2025 ಸಮಯ 16:30 ಗಂಟೆವರೆಗೆ
7	ಆನ್‌ಲೈನ್‌ನಲ್ಲಿ ಬಿಡ್‌ಗಳನ್ನು ತೆರೆಯುವ ಸಮಯ ಮತ್ತು ದಿನಾಂಕ	ದಿನಾಂಕ: 21.04.2025 ಸಮಯ 15:00 ಗಂಟೆಗೆ

ಟೆಂಡರ್ ಆಹ್ವಾನಿಸಿರುವ ಕಾಮಗಾರಿಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯಲು ಯೋಜನಾ ನಿರ್ದೇಶಕರ ಕಛೇರಿ, ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಕೆ.ಆರ್. ವೃತ್ತ, ಬೆಂಗಳೂರು ಇವರಿಂದ ಕಛೇರಿಯ ಕೆಲಸದ ದಿನಗಳಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ support@eprochelpdesk.com ರಲ್ಲಿಯೂ ಸಹಾ ಪಡೆಯಬಹುದಾಗಿದೆ. ಕೆಪಿಪಿ ಪೋರ್ಟಲ್ ಸಹಾಯವಾಣಿಯ ದೂರವಾಣಿ ಸಂಖ್ಯೆಗಳು: +91-8046010000/ +91-8068948777

ಸಹಿ/– ಯೋಜನಾ ನಿರ್ದೇಶಕರು,
ಯೋಅಘ., ಕ.ರಾ.ಹೆ.ಅ.ಯೋ.,
ಬೆಂಗಳೂರು.
DIPR/CP/5739/AKAR/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸದಾ ಉದ್ಯೋಗಶೀಲರಾಗಿ ಇರುವವರಿಗೆ ಬಡತನ ಎದುರಾಗುವುದಿಲ್ಲ.

-ಚಾಣಕ್ಯ

ಗಾಳಿಯ ಮಾಲಿನ್ಯ ತಡೆಗೆ ತುರ್ತು ಕ್ರಮ ಅಗತ್ಯ

ಸ್ವಿಟ್ಜರ್‌ಲೆಂಡ್‌ನ ‘ಐಕ್ಯುಏರ್’ ಸಂಸ್ಥೆಯು ವಿಶ್ವ ಗಾಳಿ ಗುಣಮಟ್ಟ ವರದಿಯನ್ನು ಇತ್ತೀಚೆಗೆ ಬಿಡುಗಡೆಗೊಳಿಸಿದೆ. ಭಾರತಕ್ಕೆ ಈ ವರದಿಯು ನೀಡಿರುವ ಸಂದೇಶವು ಅಹಿತಕರವೇ ಆಗಿದೆ. ಜಗತ್ತಿನಲ್ಲಿ ಅತಿ ಹೆಚ್ಚು ವಾಯುಮಾಲಿನ್ಯ ಇರುವ 20 ನಗರಗಳ ಪೈಕಿ 13 ನಗರಗಳು ಭಾರತದಲ್ಲಿವೆ ಎಂದು ವರದಿ ಹೇಳಿದೆ. ಪ್ರತಿ ಘನ ಮೀಟರ್ ವಾಯುಪ್ರದೇಶದಲ್ಲಿ 2.5 ಮೈಕ್ರೊ ಮೀಟರ್ ಅಥವಾ ಅದಕ್ಕಿಂತ ಚಿಕ್ಕ ದೂಳಿನ ಕಣಗಳ ಪ್ರಮಾಣವು ಐದು ಮೈಕ್ರೊ ಗ್ರಾಂಗಿಂತ ಕಡಿಮೆ ಇರಬೇಕು ಎಂಬ ಮಾನದಂಡವನ್ನು ವಿಶ್ವ ಆರೋಗ್ಯ ಸಂಸ್ಥೆ ನಿಗದಿ ಮಾಡಿದೆ. ಆದರೆ, ಭಾರತದ ಮೂರನೇ ಒಂದರಷ್ಟು ನಗರಗಳಲ್ಲಿ ಈ ಪ್ರಮಾಣವು ಇದರ 10 ಪಟ್ಟಿಗಿಂತಲೂ ಹೆಚ್ಚು ಇದೆ. ಭಾರತವು ಜಗತ್ತಿನಲ್ಲಿ ಐದನೇ ಅತಿ ಹೆಚ್ಚು ಮಲಿನಗೊಂಡ ದೇಶವಾಗಿದೆ. ದೆಹಲಿಯು ಸತತ ಆರನೇ ವರ್ಷವೂ ಅತಿ ಹೆಚ್ಚು ಮಾಲಿನ್ಯವಿರುವ ರಾಜಧಾನಿ ಎಂಬ ಹೆಸರು ಪಡೆದುಕೊಂಡಿದೆ. ಗಾಳಿಯ ಮಾಲಿನ್ಯವು ನಗರಕ್ಕೆ ಸೀಮಿತವಾದ ವಿಚಾರವಾಗಿ ಉಳಿದಿಲ್ಲ. ಮೇಘಾಲಯದ ಬರ್ನಿಹಾಟ್ ಪಟ್ಟಣದ ಗಾಳಿಯು ಭಾರತದಲ್ಲಿಯೇ ಅತಿ ಹೆಚ್ಚು ಮಾಲಿನ್ಯವನ್ನು ಹೊಂದಿದೆ. ಪಂಜಾಬ್‌ನ ಮುಲ್ಲಾಂಪುರ ಪಟ್ಟಣ ಕೂಡ ಹೆಚ್ಚು ಮಾಲಿನ್ಯ ಹೊಂದಿದೆ. ದೇಶದ ಒಟ್ಟಾರೆ ವಾಯುಮಾಲಿನ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡಿದೆ. ಭಾರತವು ಮೂರನೇ ಸ್ಥಾನದಿಂದ ಐದನೇ ಸ್ಥಾನಕ್ಕೆ ಏರಿದೆ. ಆದರೆ, ಇದು ಭಾರಿ ಸಮಾಧಾನಪಟ್ಟುಕೊಳ್ಳುವಂತಹ ಸುಧಾರಣೆ ಏನಲ್ಲ.

ಶುದ್ಧ ಇಂಧನದತ್ತ ವರ್ಗಾವಣೆಗೊಳ್ಳುವುದಕ್ಕೆ ಮತ್ತು ಮಾಲಿನ್ಯ ತಡೆ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಉತ್ತೇಜನ ನೀಡಬೇಕಿದೆ

ಗಾಳಿಯ ಮಾಲಿನ್ಯ ಭಾರತದಲ್ಲಿ ಜನರ ಆರೋಗ್ಯಕ್ಕೆ ಗಂಭೀರವಾದ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಜನರ ನಿರೀಕ್ಷಿತ ಜೀವಿತಾವಧಿಯಲ್ಲಿ 5.2 ವರ್ಷ ಕಡಿತವಾಗುತ್ತದೆ. 2009ರಿಂದ 2019ರ ನಡುವೆ ಪ್ರತಿವರ್ಷ 15 ಲಕ್ಷ ಜನರು ಗಾಳಿಯ ಮಾಲಿನ್ಯದಿಂದಾಗಿ ಮೃತಪಟ್ಟಿದ್ದಾರೆ ಎಂದು ಲೆಕ್ಕ ಹಾಕಲಾಗಿದೆ. ಈಗ ಈ ಸಂಖ್ಯೆ ಇನ್ನೂ ಹೆಚ್ಚಾಗಿರಬಹುದು. ಸಾವಷ್ಟೇ ಅಲ್ಲದೆ, ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳಿಗೆ ವಾಯುಮಾಲಿನ್ಯವು ಕಾರಣವಾಗುತ್ತದೆ. ಜನಸಾಂದ್ರತೆ ಹೆಚ್ಚಾಗಿರುವ ಕಾರಣ ಬೇರೆ ದೇಶಗಳಿಗಿಂತ ನಮ್ಮ ದೇಶದಲ್ಲಿ ಗಾಳಿಯ ಮಾಲಿನ್ಯವು ಹೆಚ್ಚಿನ ಸಮಸ್ಯೆ ಉಂಟು ಮಾಡುತ್ತದೆ. ಆರ್ಥಿಕವಾಗಿ ಬಹುದೊಡ್ಡ ಮೊತ್ತ ವೆಚ್ಚವಾಗಲು ಕಾರಣವಾಗುತ್ತದೆ. ಉತ್ಪಾದಕತೆಯೂ ಕುಂಠಿತವಾಗುತ್ತದೆ. ಗಾಳಿಯ ಮಾಲಿನ್ಯದ ಕುರಿತಾಗಿ ನಮಗೆ ದೊರೆತಿರುವ ಚಿತ್ರಣವು ಸಮಗ್ರವಲ್ಲ. ಮಾಲಿನ್ಯ ಸ್ಥಿತಿಯು ಇನ್ನೂ ಕೆಟ್ಟದಾಗಿ ಇರಬಹುದು. ಏಕೆಂದರೆ, ದೇಶದ ಬಹುಭಾಗವು ಗಾಳಿಯ ಗುಣಮಟ್ಟ ನಿಗಾ ವ್ಯವಸ್ಥೆಯನ್ನು ಹೊಂದಿಲ್ಲ.

ಕೈಗಾರಿಕೆಗಳು ಮತ್ತು ವಾಹನಗಳು ಉಗುಳುವ ಹೊಗೆ, ಕಟ್ಟಡ ನಿರ್ಮಾಣ ಕಾಮಗಾರಿಯಿಂದ ಉಂಟಾಗುವ ದೂಳು ಹಾಗೂ ಆಯಾ ಕಾಲಕ್ಕೆ ಕೃಷಿ ತ್ಯಾಜ್ಯಕ್ಕೆ ಹಾಕುವ ಬೆಂಕಿಯು ಗಾಳಿಯ ಮಾಲಿನ್ಯದ ಮುಖ್ಯ ಕಾರಣಗಳು. ‘ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮ’ವೊಂದು ಅಸ್ತಿತ್ವದಲ್ಲಿ ಇದೆ. ಆದರೆ, ಅನುಷ್ಠಾನ ಬಹಳ ಕಳಪೆಯಾಗಿದೆ. ದೆಹಲಿಯಂತಹ ನಗರಗಳು ಚಳಿಗಾಲದಲ್ಲಿ ಗಾಳಿಯ ಮಾಲಿನ್ಯದಿಂದ ತತ್ತರಿಸಿದಾಗ ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ಗಾಳಿಯ ಮಾಲಿನ್ಯವು ಗಂಭೀರವಾದ ಸಮಸ್ಯೆ ಎಂದೇ ಪರಿಗಣಿತವಾಗಿಲ್ಲ. ನೀತಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿ ಮಾಡಬೇಕಾದ ಕೆಲಸಗಳು ಬಹಳಷ್ಟಿವೆ. ಸರ್ಕಾರಗಳು ಮತ್ತು ವಿವಿಧ ಸಂಸ್ಥೆಗಳು ಸಾಮಾನ್ಯವಾಗಿ ಪರಸ್ಪರ ದೂಷಿಸುತ್ತಾ ಇರುತ್ತವೆ. ಗಾಳಿಯ ಮಾಲಿನ್ಯ ತಡೆಗಟ್ಟಲು ಅತ್ಯಗತ್ಯವಾದ ಕ್ರಮಗಳನ್ನೂ ಕೈಗೊಳ್ಳಲಾಗಿಲ್ಲ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಂತೂ ವ್ಯಾಪಕವಾಗಿದೆ. ಕಠಿಣವಾದ ನಿಯಂತ್ರಣ ಕ್ರಮಗಳನ್ನು ಯೋಜಿಸಿ, ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ. ಶುದ್ಧ ಇಂಧನದತ್ತ ವರ್ಗಾವಣೆಗೊಳ್ಳುವುದಕ್ಕೆ ಮತ್ತು ಮಾಲಿನ್ಯ ತಡೆ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಉತ್ತೇಜನ ನೀಡಬೇಕಿದೆ. ಒಂದು ಕಾಲದಲ್ಲಿ ಅತ್ಯಂತ ಮಲಿನ ನಗರವಾಗಿದ್ದ ಬೀಜಿಂಗ್, ಈಗ ಶುದ್ಧ ನಗರವಾಗಿ ಪರಿವರ್ತನೆಯಾಗಿದೆ. ಈ ನಗರವನ್ನು ನೋಡಿ ನಾವೂ ಪಾಠ ಕಲಿಯಬೇಕಾಗಿದೆ.

ದಿನದ ಟ್ವೀಟ್

ನಿಯಮ ಎರಡು ಕಡೆಗೂ ಅನ್ವಯಿಸಲಿ

ನಾವು ಇವುಗಳನ್ನೂ ಹೊಂದೋಣವೇ?: ಪ್ರತಿ ರಸ್ತೆಗುಂಡಿಗೂ ವಾಹನ ಮಾಲೀಕರಿಗೆ ₹1,000 ಪರಿಹಾರ; ಪೊಲೀಸರು ಲಂಚ ಕೇಳಿದಾಗ ₹10,000 ಪರಿಹಾರ; 10 ಕಿ.ಮೀ. ದೂರವನ್ನು 30 ನಿಮಿಷದಲ್ಲಿ ಕ್ರಮಿಸಲು ಸಾಧ್ಯವಾಗದಿದ್ದರೆ ₹ 5,000 ಪರಿಹಾರ.

(ಭಾರತವು ಮೋಟರ್ ವಾಹನ ನಿಯಮ ಉಲ್ಲಂಘನೆಗೆ ಮಾರ್ಚ್ 1ರಿಂದ ಕಠಿಣವಾದ ಹೊಸ ದಂಡಗಳನ್ನು ಜಾರಿಗೆ ತಂದಿರುವುದಕ್ಕೆ ಪ್ರತಿಕ್ರಿಯೆ)

ಶ್ರೀನಿಧಿ ಹಂದೆ, ವಿಶ್ಲೇಷಕ, ಲೇಖಕ

ಕಿಡಿನುಡಿ

ಔರಂಗಜೇಬ್ ಮೃತನಾದ 300 ವರ್ಷಗಳ ಬಳಿಕವೂ ನಿಮ್ಮ ಮನಸ್ಸು ಮತ್ತು ಹೃದಯಕ್ಕೆ ಆತ ತೊಂದರೆ ಕೊಡುತ್ತಾನೆ ಎಂದಾದರೆ ನೀವು ಎಚ್ಚೆತ್ತುಕೊಳ್ಳಬೇಕು. ತೀರಾ ಹಳೆಯ ವೈರತ್ವಗಳನ್ನು ಇಟ್ಟುಕೊಂಡು ಆಧುನಿಕ ಭಾರತವನ್ನು ಕಟ್ಟಲು ಸಾಧ್ಯವಿಲ್ಲ. ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ಉತ್ತಮವಾದುದನ್ನು ಪಡೆಯಲು ಅರ್ಹರು.

(ಮೊಘಲ್ ದೊರೆ ಔರಂಗಜೇಬ್ ಸಮಾಧಿ ತೆರವಿಗೆ ಸಂಬಂಧಿಸಿದಂತೆ ಮಹಾರಾಷ್ಟ್ರದ ನಾಗ್ಪುರದಲ್ಲಿ ಹಿಂಸಾಚಾರ ನಡೆದಿರುವುದಕ್ಕೆ ಪ್ರತಿಕ್ರಿಯೆ)

ಸಂಜಯ್ ಹೆಗ್ಡೆ, ವಕೀಲ

25 ವರ್ಷಗಳ ಹಿಂದೆ

ಭಾನುವಾರ, 19-3-2000

• ರಾಯಚೂರು ಬಂದ್: ಹಿಂಸಾಚಾರ ವಾಹನಗಳಿಗೆ ಜಖಂ, ಪರೀಕ್ಷೆಗೆ ಅಡ್ಡಿ

ರಾಯಚೂರು, ಮಾರ್ಚ್ 18– ಕಂಬಾಲಪಲ್ಲಿ ನರಮೇಧವನ್ನು ಪ್ರತಿಭಟಿಸಿ ಇಂದು ಇಲ್ಲಿ ನಡೆಸಲಾದ ಬಂದ್ ಕಾಲಕ್ಕೆ ಕಲ್ಲುತೂರಾಟ, 30ಕ್ಕೂ ಹೆಚ್ಚು ವಾಹನಗಳ ಜಖಂ, ಸಾರಾಯಿ ಅಂಗಡಿಗಳ ದಹನ, ಲಾಠಿಪ್ರಹಾರ ನಡೆಯಿತಲ್ಲದೆ ನಾಲ್ವರು ಪ್ರಯಾಣಿಕರು ಗಾಯಗೊಳ್ಳುವುದರ ಜತೆಗೆ ಪರೀಕ್ಷೆಗಳನ್ನು ಬರೆಯಬೇಕಿದ್ದ ವಿದ್ಯಾರ್ಥಿಗಳು ಪರದಾಡಬೇಕಾಯಿತು.

ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ ತೊಂದರೆ ಕೊಡಬಾರದು ಎಂದು ವಿವಿಧ ದಲಿತ ಸಂಘಟನೆಗಳ ಮುಖಂಡರು ಸೂಚಿಸಿದ್ದಾಗ್ಯೂ ದೊಡ್ಡ ಸಂಖ್ಯೆಯಲ್ಲಿ ಬಡಿಗೆ ಹಿಡಿದು ಓಡಾಡುತ್ತಿದ್ದ ಕಾರ್ಯಕರ್ತರು ವಿದ್ಯಾರ್ಥಿಗಳಿದ್ದ ರಿಕ್ಷಾಗಳನ್ನು ಕೂಡಾ ಬಿಡಲಿಲ್ಲ.

• ಇಂದು ಕ್ಲಿಂಟನ್ ಆಗಮನ ಸಿ.ಟಿ.ಬಿ.ಟಿಗೆ ಸಹಿ ಇಲ್ಲ

ನವದೆಹಲಿ, ಮಾರ್ಚ್ 18 (ಪಿಟಿಐ)– ಭಾರತವು ಕ್ಲಿಂಟನ್ ಭೇಟಿ ಸಂದರ್ಭದಲ್ಲಿ ಸಮಗ್ರ ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದಕ್ಕೆ (ಸಿ.ಟಿ.ಬಿ.ಟಿ) ಸಹಿ ಹಾಕುವುದಿಲ್ಲ ಎಂದು ಪ್ರಧಾನಿ ಎ.ಬಿ ವಾಜಪೇಯಿ ಅವರು ಹೇಳಿದ್ದಾರೆ.

ಸಿ.ಟಿ.ಬಿ.ಟಿಗೂ ಅಧ್ಯಕ್ಷರ ಭೇಟಿಗೂ ಸಂಬಂಧವಿಲ್ಲ ‘ಆದರೆ ಈ ವಿಚಾರ ಚರ್ಚಿಸಬಹುದು’ ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

ಕ್ಲಿಂಟನ್ ಭೇಟಿಯಿಂದ ಉಭಯ ದೇಶಗಳ ನಡುವೆ ಶೀತಲಸಮರ ಕಾಲದಿಂದ ಬೆಳೆದು ಬಂದಿರುವ ಭಿನ್ನಾಭಿಪ್ರಾಯಗಳು ನಿವಾರಣೆಗೊಂಡು ಬಾಂಧವ್ಯ ವೃದ್ಧಿಯಾಗಬಹುದು ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

50 ವರ್ಷಗಳ ಹಿಂದೆ

ಬುಧವಾರ, 19-3-1975

• ಆನೆ ಬಂತೊಂದಾನೆ

ಬೆಂಗಳೂರು, ಮಾರ್ಚ್ 18– ವಯಸ್ಸು ಇನ್ನೂ ಒಂದು ದಿನ ತುಂಬಿಲ್ಲ. ಆಗಲೇ ಅಡೆತಡೆ ಇಲ್ಲದೆ ಅರ್ಧ ಮೈಲಿ ಪ್ರಯಾಣ.

ಸೂರ್ಯೋದಯದ ಹೊತ್ತಿಗೆ ಜನಿಸಿ, ಸೂರ್ಯಾಸ್ತದ ಸಮಯದಲ್ಲಿ, ಬೆಂಗಳೂರಿಗೆ ಸುಮಾರು 12 ಮೈಲಿ ದೂರದಲ್ಲಿರುವ ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನ ಸೇರಿದ ಮರಿಯಾನೆಯ ಪ್ರಥಮ ದಿನದ ದಿನಚರಿ ಇದು.

ಹತ್ತು ದಿನಗಳ ಹಿಂದೆ (ಮಾರ್ಚ್ 8– ಶನಿವಾರ) ಅರಣ್ಯದಲ್ಲಿ ಜನನ, ತಂದೆ ಯಾರು ಗೊತ್ತಿಲ್ಲ. ಅದರ ತಾಯಿಯ ಹೆಸರು ‘ಕೋಕಿಲಾ’. ಮರಿಯಾನೆಗೆ ಇನ್ನೂ ನಾಮಕರಣ ಆಗಿಲ್ಲ. ಕಾರಣ ಈ ಹೆಸರು ಸರ್ಕಾರದಿಂದಲೇ ಬರಬೇಕು.

ಎತ್ತರ ಮೂರು ಅಡಿ, ತೂಕ ಹತ್ತು ಕೆ.ಜಿ. ತಾಯಿ ಇಡುವ ಹೆಜ್ಜೆಯ ಹಿಂದೆಯೇ ಹೆಜ್ಜೆ. ಆದರೆ ಇನ್ನೂ ಇದರ ಮೈಬಣ್ಣ ತಾಯಿಯ ಬಣ್ಣಕ್ಕೆ ತಿರುಗಿಲ್ಲ.

ಮಾತೆಯ ಮಡಿಲಲ್ಲಿ: ಬೆಳಿಗ್ಗೆ ಉದ್ಯಾನದ ಆನೆ ಮೇಲ್ವಿಚಾರಕ ನೂರ್, ಅರಣ್ಯಕ್ಕೆ ಹೋದಾಗ ಕೋಕಿಲೆಯ ಮಡಿಲಲ್ಲಿ ಮರಿಯಾನೆ ಮಲಗಿತ್ತು. ಸುದ್ದಿ ಕ್ಷಣಾರ್ಧದಲ್ಲಿ ಹರಡಿತು. ಬ್ರಾಂದಿಯಲ್ಲಿ ನೆನೆಸಿದ ಬ್ರೆಡ್ಡನ್ನು ತಿನ್ನಿಸಿ ಕೋಕಿಲಾಗೆ ಬಾಣಂತಿ ಉಪಚಾರ. ಸಂಜೆ ಮಗಳೊಂದಿಗೆ ಕೋಕಿಲಾ ಉದ್ಯಾನಕ್ಕೆ ಪ್ರಯಾಣ.

ಅಲ್ಲಿ ಉಗುರು ಬೆಚ್ಚಗಿನ ನೀರಿನಿಂದ ಇಬ್ಬರಿಗೂ ಸ್ನಾನ.

ಹೆಚ್ಚು ದಕ್ಷವಾದ ಕೃತಕ ಬುದ್ಧಿಮತ್ತೆ ಮಾದರಿಗಳನ್ನು ರೂಪಿಸಲು ಸಂಶೋಧನೆ ಬೇಕಿದೆ

ಪೊಲೀಸ್ ಜಗತ್ತಿನಲ್ಲಿ ಎ.ಐ. ಸಾಧ್ಯತೆ

ವಿಶ್ಲೇಷಣೆ

ಎಂ.ಎ. ಸಲೀಂ

ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಸಂಪನ್ಮೂಲಗಳ ಪರಿಣಾಮಕಾರಿ ಹಂಚಿಕೆ, ಕಣ್ಗಾವಲು ವ್ಯವಸ್ಥೆ, ತನಿಖೆಯಲ್ಲಿ ನಿಖರತೆಯನ್ನು ಹೆಚ್ಚಿಸುವ ಮೂಲಕ ಕಾನೂನು ಜಾರಿ ಪ್ರಕ್ರಿಯೆಯಲ್ಲಿ ಪರಿವರ್ತನೆ ತರುತ್ತಿದೆ. ತಂತ್ರಜ್ಞಾನದ ಈ ಮುನ್ನಡೆಯು ಗಣನೀಯ ಸಾಮರ್ಥ್ಯವನ್ನು ಒಳಗೊಂಡಿದೆಯಾದರೂ ಎ.ಐ. ಬಳಕೆಯು ಮಹತ್ವದ ನೈತಿಕ ಹಾಗೂ ಕಾನೂನು ಸವಾಲುಗಳನ್ನು ಹೊಂದಿದೆ. ಖಾಸಗಿತನ, ಪಾರದರ್ಶಕತೆಯ ಕೊರತೆ, ಸ್ಪಷ್ಟವಾದ ನಿಯಮಗಳ ಚೌಕಟ್ಟು, ಪಕ್ಷಪಾತಿತನದ ಕುರಿತಾದ ಸವಾಲುಗಳು ಅವು.

ತಂತ್ರಜ್ಞಾನವನ್ನು ಜವಾಬ್ದಾರಿಯುತವಾಗಿ ಹಾಗೂ ಸಮಾನ ನೆಲೆಯಲ್ಲಿ ಕೆಲಸದಲ್ಲಿ ತೊಡಗಿಸಬೇಕು ಎಂದಾದರೆ ಈ ಸವಾಲುಗಳನ್ನು ಬಹಳ ಜಾಗರೂಕವಾಗಿ ಪರಿಶೀಲಿಸಬೇಕು. ಪೊಲೀಸರು ಜಾಗತಿಕ ಮಟ್ಟದಲ್ಲಿ ಕೂಡ ಎ.ಐ. ತಂತ್ರಜ್ಞಾನವನ್ನು ಬಳಸಿಕೊಂಡು ತಮ್ಮ ಕೆಲಸಗಳನ್ನು ಉತ್ತಮಪಡಿಸಿಕೊಳ್ಳುತ್ತಿದ್ದಾರೆ. ಲಾಸ್ ಏಂಜಲೀಸ್‌ನಲ್ಲಿ ‘ಪ್ರೆಡ್‌ಪೋಲ್’ ಎನ್ನುವ ಎ.ಐ. ಉಪಕರಣ ಬಳಸಿ, ಅಪರಾಧ ಪ್ರಕರಣಗಳ ದತ್ತಾಂಶ ವಿಶ್ಲೇಷಣೆ ನಡೆಸಿ, ಅಪರಾಧ ಪ್ರಕರಣಗಳು ಹೆಚ್ಚು ನಡೆಯಬಹುದಾದ ಸ್ಥಳಗಳನ್ನು ಅಂದಾಜಿಸಲಾಗುತ್ತಿದೆ. ಮುಖವನ್ನು ಗುರುತಿಸುವ ತಂತ್ರಜ್ಞಾನವು ಚಿತ್ರಗಳನ್ನು ಪರಿಶೀಲಿಸಿ, ವ್ಯಕ್ತಿಗಳನ್ನು ಗುರುತಿಸುತ್ತದೆ. ಎ.ಐ. ಆಧಾರಿತ ಭಾಷಾ ವಿಶ್ಲೇಷಣೆಯು ಸಾಮಾಜಿಕ ಜಾಲತಾಣಗಳ ಮೇಲೆ ಕಣ್ಣಿರಿಸಿ ಸಂಭಾವ್ಯ ಬೆದರಿಕೆಗಳನ್ನು ಗುರುತಿಸುತ್ತದೆ.

ವಿಧಿವಿಜ್ಞಾನ ಪ್ರಯೋಗಾಲಯಗಳಲ್ಲಿ ಎ.ಐ. ತಂತ್ರಜ್ಞಾನವು ಬೆರಳಚ್ಚು ಮತ್ತು ಡಿಎನ್‌ಎ ವಿಶ್ಲೇಷಣೆಗೆ ವೇಗ ತಂದುಕೊಡುತ್ತದೆ, ಪರಿಶೀಲನೆಗೆ ಬೇಕಿರುವ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಅಷ್ಟೇ ಅಲ್ಲ, ಕೆಲವು ನಾಗರಿಕರು ಚೂಟಿ ಕ್ಯಾಮೆರಾಗಳನ್ನು ಬಳಸಿ ಅಸಹಜ ಚಟುವಟಿಕೆಗಳನ್ನು ಅವು ನಡೆಯುತ್ತಿರುವಾಗಲೇ ಗುರುತಿಸುತ್ತಾರೆ. ಇವುಗಳ ಪ್ರಯೋಜನಗಳು ಬಹಳಷ್ಟು. ಎ.ಐ. ತಂತ್ರಜ್ಞಾನವು ಅಗಾಧ ಪ್ರಮಾಣದ ದತ್ತಾಂಶವನ್ನು ವಿಶ್ಲೇಷಿಸುವ ಸಮಯವನ್ನು ಕಡಿಮೆ ಮಾಡುತ್ತದೆ. 100 ತಾಸುಗಳ ವಿಡಿಯೊ ಒಂದನ್ನು ನಿಮಿಷಗಳಲ್ಲಿ ಪರಿಶೀಲಿಸಬಹುದು. ಮನುಷ್ಯರು ಉಪೇಕ್ಷಿಸಬಹುದಾದ ಸೂಕ್ಷ್ಮ ವಿವರಗಳನ್ನು ಗುರುತಿಸಿ, ನಿಖರತೆಯನ್ನು ಹೆಚ್ಚಿಸುತ್ತದೆ. ಸಂಪನ್ಮೂಲಗಳ ಕೊರತೆ ಎದುರಿಸುತ್ತಿರುವ ಇಲಾಖೆಗಳಿಗೆ ಹೆಚ್ಚು ಕೆಲಸ ಮಾಡಲು ನೆರವಾಗುತ್ತದೆ. ದೂರುಗಳನ್ನು ದಾಖಲಿಸಿಕೊಳ್ಳುವ ಸಂದರ್ಭದಲ್ಲಿ ಅನ್ವಯವಾಗುವ ಕಾನೂನು ಹಾಗೂ ಸೆಕ್ಷನ್‌ಗಳನ್ನು ನಿಖರವಾಗಿ ಪರಿಶೀಲಿಸಲು ಭಾರತದ ಕೆಲವು ರಾಜ್ಯಗಳ ಪೊಲೀಸರು ಚಾಟ್‌ಜಿಪಿಟಿ ಆಧಾರಿತ ತಮ್ಮದೇ ಆದ ಎ.ಐ. ಬಾಟ್ ಒಂದನ್ನು ಅಭಿವೃದ್ಧಿಪಡಿಸಿದ್ದಾರೆ. ಎ.ಐ. ತಂತ್ರಜ್ಞಾನವನ್ನು ಬಳಸಿಕೊಳ್ಳುವ ತನಿಖಾ ಪರಿಕರಗಳನ್ನು ಅಭಿವೃದ್ಧಿಪಡಿಸಲು ಐಐಟಿಯಂತಹ ಪ್ರತಿಷ್ಠಿತ ಸಂಸ್ಥೆಗಳು ಪೊಲೀಸರ ಜೊತೆ ಕೈಜೋಡಿಸುತ್ತಿವೆ. ಅತ್ಯಾಧುನಿಕವಾದ ಎ.ಐ. ಮತ್ತು ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ನ್ಯಾಯಾಂಗದಲ್ಲಿ ಬಳಕೆ ಮಾಡಲು ಕೇಂದ್ರ ಸರ್ಕಾರವು ₹53.57 ಕೋಟಿ ಮೊತ್ತ ಮೀಸಲಾಗಿ ಇರಿಸಿದೆ. ನ್ಯಾಯಾಂಗದ ದಕ್ಷತೆ, ಪಾರದರ್ಶಕತೆಯನ್ನು ಹೆಚ್ಚಿಸುವಲ್ಲಿ ಈ ತಂತ್ರಜ್ಞಾನದ ಸಾಮರ್ಥ್ಯವನ್ನು ಸರ್ಕಾರ ಗುರುತಿಸಿದೆ ಎಂಬುದನ್ನು ಈ ಹೂಡಿಕೆಯು ಹೇಳುತ್ತಿದೆ.

ಮೆಷಿನ್ ಲರ್ನಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ಹಿಂದಿನ ಹಾಗೂ ಇಂದಿನ ದತ್ತಾಂಶಗಳನ್ನು ವಿಶ್ಲೇಷಿಸಿ ಮುಂದಿನ ಆಗುಹೋಗುಗಳನ್ನು ಅಂದಾಜಿಸುವ ಸೌಲಭ್ಯವು ಪೊಲೀಸರಿಗೆ ಸಾರ್ವಜನಿಕರ ಸುರಕ್ಷತೆ ಸುಧಾರಿಸಲು, ದಕ್ಷತೆ ಹೆಚ್ಚು ಮಾಡಿಕೊಳ್ಳಲು ನೆರವಾಗುತ್ತದೆ. ಈ ಸೌಲಭ್ಯವು ಹಿಂದೆ ನಡೆದ ಅಪರಾಧ ಕೃತ್ಯಗಳ ಮಾಹಿತಿ ಗಮನಿಸಿ, ಮುಂದೆ ಅಂಥ ಕೃತ್ಯಗಳು ನಡೆಯುವ ಸಾಧ್ಯತೆ ಎಲ್ಲಿ ಹೆಚ್ಚಿದೆ ಎಂಬುದನ್ನು ಅಂದಾಜಿಸಲು ಪೊಲೀಸರಿಗೆ ನೆರವಾಗುತ್ತದೆ. ಆಗ, ಅಗತ್ಯ ಸಂಪನ್ಮೂಲವನ್ನು ಅಲ್ಲಿಗೆ ನಿಯೋಜಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ.

ಕಣ್ಗಾವಲು ವ್ಯವಸ್ಥೆಯಲ್ಲಿ ಮೆಷಿನ್ ಲರ್ನಿಂಗ್ ತಂತ್ರಜ್ಞಾನವನ್ನು ಅಳವಡಿಸುವುದು ಮನುಷ್ಯರ ಮುಖ ಗುರುತಿಸುವಲ್ಲಿ ಪೊಲೀಸರಿಗೆ ಮಹತ್ವದ ನೆರವು ನೀಡುತ್ತದೆ, ಅಪರಾಧಿಗಳನ್ನು ಪತ್ತೆ ಮಾಡಲು ಸಹಾಯ ಮಾಡುತ್ತದೆ. ಈ ಕಣ್ಗಾವಲು ವ್ಯವಸ್ಥೆಯನ್ನು ವಿಮಾನ ನಿಲ್ದಾಣಗಳಲ್ಲಿ, ರೈಲು ನಿಲ್ದಾಣಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಬಹುದು. ಕೇಂದ್ರೀಕೃತವಾದ ಸಂಚಾರ ನಿರ್ವಹಣೆ ವ್ಯವಸ್ಥೆಗಳು ಮೆಷಿನ್ ಲರ್ನಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು, ಕ್ಯಾಮೆರಾಗಳಿಂದ ಸಿಗುವ ಮಾಹಿತಿಯನ್ನು ಗಮನಿಸಿ ಪ್ರಮುಖ ಸಿಗ್ನಲ್‌ಗಳಲ್ಲಿನ ಸಂಚಾರ ದೀಪಗಳನ್ನು ತಾವೇ ನಿರ್ವಹಿಸಬಲ್ಲವು. ಬೆಂಗಳೂರಿನಲ್ಲಿ ಇರುವ ಚೂಟಿ ಸಂಚಾರ ನಿಯಮ ನಿರ್ವಹಣಾ ವ್ಯವಸ್ಥೆಯು ವಾಹನಗಳ ನೋಂದಣಿ ಫಲಕವನ್ನು ಸ್ವಯಂಚಾಲಿತವಾಗಿ ಗುರುತಿಸುವ 250 ಕ್ಯಾಮೆರಾಗಳ, ನಿಯಮ ಉಲ್ಲಂಘನೆಯ ಸಾಕ್ಷ್ಯವನ್ನು ಸೆರೆಹಿಡಿಯುವ 80 ಕ್ಯಾಮೆರಾಗಳ ಜಾಲವನ್ನು ಹೊಂದಿದೆ. ಈ ಕ್ಯಾಮೆರಾಗಳನ್ನು ನಗರದಾದ್ಯಂತ 50 ಪ್ರಮುಖ ಸ್ಥಳಗಳಲ್ಲಿ ಅಳವಡಿಸಲಾಗಿದೆ. ಎ.ಐ. ಆಧಾರಿತ ವ್ಯವಸ್ಥೆಯು ಸಂಚಾರ ನಿಯಮ ಉಲ್ಲಂಘನೆಗಳನ್ನು ತಾನಾಗಿಯೇ ಗುರುತಿಸುತ್ತದೆ.

ಸೈಬರ್ ಅಪರಾಧಿಗಳು ಕಂಪ್ಯೂಟರ್ ವ್ಯವಸ್ಥೆಯ ಮೇಲೆ ಜಗತ್ತಿನ ಎಲ್ಲೆಡೆ ದಾಳಿ ನಡೆಸುತ್ತಿದ್ದಾರೆ. ಸೈಬರ್ ಭದ್ರತೆ ಅಂದರೆ, ದಾಖಲಾಗುವ ಪ್ರಕರಣಗಳ ತನಿಖೆ ಮಾತ್ರವೇ ಅಲ್ಲ. ಇಲ್ಲಿ ಸೈಬರ್ ಅಪರಾಧಗಳನ್ನು ತಡೆಯುವುದು ಕೂಡ ಮಹತ್ವದ್ದು. ಮೆಷಿನ್ ಲರ್ನಿಂಗ್ ಸಾಮರ್ಥ್ಯ ಬಳಸಿ ಸೈಬರ್ ದಾಳಿಗಳನ್ನು ಎದುರಿಸುವ ವ್ಯವಸ್ಥೆಗೆ ಬಲ ತುಂಬಬಹುದು. ಸಾರ್ವಜನಿಕರ ಸುರಕ್ಷತೆಯನ್ನು ಖಾತರಿಪಡಿಸುವ ಕೆಲಸವನ್ನು ಪೊಲೀಸರು ಈ ತಂತ್ರಜ್ಞಾನ ಬಳಸಿ ಇನ್ನಷ್ಟು ದಕ್ಷವಾಗಿಸಬಹುದು. ಗುಂಡಿನ ದಾಳಿ ನಡೆದಲ್ಲಿ ಗುಂಡಿನ ಸದ್ದನ್ನು ಗುರುತಿಸುವ ಸೆನ್ಸಾರ್ ಮೂಲಕ ಅದನ್ನು ಪತ್ತೆ ಮಾಡಬಹುದು, ಸೆನ್ಸಾರ್‌ಗಳಿಂದ ಸಿಗುವ ಆಡಿಯೊ ಮಾಹಿತಿ ಮೂಲಕ ಯಾವ ಸ್ಥಳದಲ್ಲಿ ಅದು ನಡೆದಿದೆ ಎಂಬುದನ್ನು ಕಂಡುಕೊಂಡು, ಸಹಾಯವಾಣಿಗೆ ಕರೆ ಬರುವ ಮುನ್ನವೇ ಪೊಲೀಸರು ಸ್ಥಳವನ್ನು ತಲುಪಬಹುದು.

ಮೆಷಿನ್ ಲರ್ನಿಂಗ್ ಆಧಾರಿತ ವ್ಯವಸ್ಥೆಯು ಅಪರಾಧ ಕೃತ್ಯಗಳ ದತ್ತಾಂಶಗಳನ್ನೆಲ್ಲ ವಿಶ್ಲೇಷಿಸಿ, ಮುಂದೆ ಎಲ್ಲಿ ಇಂತಹ ಕೃತ್ಯ ಸಂಭವಿಸಬಹುದು ಎಂಬುದನ್ನು ಊಹಿಸಬಲ್ಲದು. ಇದು ಅಪರಾಧ ಕೃತ್ಯ ತಡೆಯಲು ಪೊಲೀಸರಿಗೆ ನೆರವಾಗುತ್ತದೆ. ಎ.ಐ. ಆಧಾರಿತ ಜನಜಂಗುಳಿ ನಿಯಂತ್ರಣ ವ್ಯವಸ್ಥೆಯು ಕಾನೂನು ಜಾರಿ ಸಂಸ್ಥೆಗಳಿಗೆ ಜನರ ಭಾರಿ ಗುಂಪಿನ ಮೇಲೆ ಕಣ್ಣಿಡಲು ನೆರವಾಗುತ್ತದೆ. ಇದು ಸಾರ್ವಜನಿಕರ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿ ನೆರವಾಗುತ್ತದೆ. ಎ.ಐ. ತಂತ್ರಜ್ಞಾನವು ತನಿಖಾ ಪ್ರಕ್ರಿಯೆಯ ಮೇಲೆ ನಿಗಾ ಇರಿಸಿ, ತನಿಖೆಯಲ್ಲಿ ವಿಳಂಬ ಆದರೆ ಅದರ ಬಗ್ಗೆ ಮಾಹಿತಿ ಒದಗಿಸಬಲ್ಲದು. ಪ್ರಕರಣದ ತನಿಖಾ ಗುಣಮಟ್ಟವನ್ನು ಪರಿಶೀಲಿಸಬಲ್ಲದು. ತನಿಖಾ ಅಧಿಕಾರಿಗಳಿಗೆ ತನಿಖೆಯ ಮೇಲೆ ಹೆಚ್ಚು ಗಮನ ಹರಿಸಲು ಅದು ನೆರವಾಗುತ್ತದೆ.

ಕಾನೂನು ಜಾರಿ ವ್ಯವಸ್ಥೆಯಲ್ಲಿ ಎ.ಐ. ತಂತ್ರಜ್ಞಾನದ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಬಹು ಆಯಾಮಗಳ ಯತ್ನ ಬೇಕು. ಕಾನೂನು ಜಾರಿ ಸಂಸ್ಥೆಗಳು, ಅಕಡೆಮಿಕ್ ವಲಯದ ಸಂಸ್ಥೆಗಳು, ತಂತ್ರಜ್ಞಾನ ಕಂಪನಿಗಳ ನಡುವೆ ಸಮನ್ವಯವನ್ನು ಸಾಧಿಸಿ ಸಂಶೋಧನೆಗಳನ್ನು ಕೈಗೊಳ್ಳುವುದು ಇದರ ಒಂದು ಭಾಗ. ಹೊಸತನಕ್ಕೆ ಇಂಬು ಕೊಡಲು ಓಪನ್ ಸೋರ್ಸ್ ಉಪಕ್ರಮಗಳ ಮೊರೆ ಹೋಗಬಹುದು. ಎ.ಐ. ಪರಿಕರಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅಗತ್ಯವಿರುವ ಶಿಕ್ಷಣವನ್ನು ಹಾಗೂ ತರಬೇತಿಯನ್ನು ಕಾನೂನು ಜಾರಿ ವೃತ್ತಿಯಲ್ಲಿ ಇರುವವರಿಗೆ ಒದಗಿಸಬೇಕಿರುವುದು ಮಹತ್ವದ್ದು. ಎ.ಐ. ಸಂಬಂಧಿತ ಕೋರ್ಸ್‌ಗಳನ್ನು ತರಬೇತಿ ಕಾರ್ಯಕ್ರಮಗಳ ಭಾಗವಾಗಿಸಬೇಕು.

ಇವು ಬಹಳ ಮೂಲಭೂತವಾದ ಅಂಶಗಳು. ಇವುಗಳ ಜೊತೆಯಲ್ಲೇ, ಅಗತ್ಯಗಳಿಗೆ ಅನುಗುಣವಾಗಿ ಇನ್ನಷ್ಟು ಹೆಚ್ಚು ಒಗ್ಗಿಸಿಕೊಳ್ಳಬಹುದಾದ, ಹೆಚ್ಚು ವಿಸ್ತೃತವಾದ ಡಿಜಿಟಲ್ ಸಾಕ್ಷ್ಯಗಳನ್ನು ನಿರ್ವಹಿಸಬಲ್ಲ ಎ.ಐ. ಮಾದರಿಗಳನ್ನು ಅಭಿವೃದ್ಧಿಪಡಿಸಲು ತಾಂತ್ರಿಕ ಅಭಿವೃದ್ಧಿಯ ಅಗತ್ಯವೂ ಇದೆ. ಕಾನೂನು ಜಾರಿ ಪ್ರಕ್ರಿಯೆಯಲ್ಲಿ ನಿಖರತೆ, ನ್ಯಾಯಸಮ್ಮತ ನಡೆ ಮತ್ತು ಸಾಮಾಜಿಕ ಪರಿಣಾಮವನ್ನು ಖಾತರಿಪಡಿಸಲು ನಿರಂತರ ಮೌಲ್ಯಮಾಪನ, ನಿರಂತರ ಸುಧಾರಣೆಯ ಅಗತ್ಯ ಇದೆ. ಎ.ಐ. ವ್ಯವಸ್ಥೆಗಳನ್ನು ಕಾಲಕಾಲಕ್ಕೆ ನಿಕಷಕ್ಕೆ ಒಳಪಡಿಸುವ ಮೂಲಕ ಇದನ್ನು ಸಾಧ್ಯವಾಗಿಸಬಹುದು.

ಲೇಖಕ: ಪೊಲೀಸ್ ಮಹಾನಿರ್ದೇಶಕ ಸಿ.ಐ.ಡಿ. ಮತ್ತು ಆರ್ಥಿಕ ಅಪರಾಧಗಳು, ಬೆಂಗಳೂರು

ಚುರುಮುರಿ



ಯಾರಿಗೆ ಯಾರುಂಟು...

• ಮಣ್ಣೆ ರಾಜು

ಮನೆ ಮುಂದಿನ ಮರದ ನೆರಳಿನಲ್ಲಿ ತಿಮ್ಮಜ್ಜ ಕುಳಿತಿದ್ದರು. ಪಕ್ಕದಲ್ಲಿ ಅವರ ನಾಯಿ ಮಲಗಿತ್ತು.

‘ತಿಮ್ಮಜ್ಜ, ಚೆನ್ನಾಗಿದ್ದೀರಾ?’ ಎಂದೆ. ಎಚ್ಚರಗೊಂಡ ನಾಯಿ ‘ಗುರ್’ ಎಂದಿತು.

‘ಹೆದರಬೇಡಿ, ನನಗೆ ಏನಾದರೂ ಮಾಡಿಬಿಡ್ತೀರಿ ಅಂತ ನಾಯಿ ಹೆದರಿಸಿದೆ ಅಷ್ಟೇ’ ಅಂದ್ರು ತಿಮ್ಮಜ್ಜ.

‘ನಿಮ್ಮ ಮಕ್ಕಳು ಏನು ಮಾಡ್ತಿದ್ದಾರೆ?’

‘ಮಗ, ಸೊಸೆ ಅಮೆರಿಕಾದಲ್ಲಿ; ಮಗಳು, ಅಳಿಯ ಆಸ್ಟ್ರೇಲಿಯಾದಲ್ಲಿ ಇದ್ದಾರೆ’ ಹೆಮ್ಮೆಯಿಂದ ಹೇಳಿದರು.

‘ಹೆಂಡ್ತಿ?’

‘ಸೊಸೆಯ ಬಾಣಂತನಕ್ಕೆಂದು ಅಮೆರಿಕಾಗೆ ಹೋದವಳು ಅಲ್ಲೇ ಮಣ್ಣಾದಳು. ಇಲ್ಲಿಗೆ ಹೆಣ ತರುವ ಖರ್ಚಿಗಿಂತ ಅಲ್ಲೇ ಸಂಸ್ಕಾರ ಮಾಡುವ ಖರ್ಚು ಕಮ್ಮಿ ಅಂತ ಮಗ ಅಲ್ಲೇ ಮುಗಿಸಿದ. ಕಡೆಗಾಲದಲ್ಲಿ ಹೆಂಡ್ತಿ ಮುಖ ನೋಡಲೂ ಆಗಲಿಲ್ಲ’.

‘ನಿಮ್ಮನ್ನು ನೋಡಲು ಮಕ್ಕಳು ಆಗಾಗ ಬರ್ತಾರಾ?’

‘ಬರೋಲ್ಲ, ಆಸ್ತಿ ವಿಚಾರವಾಗಿ ಮಕ್ಕಳು ಮುನಿಸಿಕೊಂಡಿದ್ದಾರೆ’.

‘ಮಕ್ಕಳಿಗಾಗಿ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿ ಮಾಡಿ ಎಂದು ದೊಡ್ಡವರು ಹೇಳಿದ್ದಾರೆ’.

‘ಮಕ್ಕಳಿಗೆ ಎರಡನ್ನೂ ಮಾಡಿದೆ. ಕಷ್ಟಪಡಬೇಡ, ಮನೆ ಮಾರಿ ವೃದ್ಧಾಶ್ರಮ ಸೇರಿಕೊ ಅಂತ ಮಕ್ಕಳು ಹೇಳ್ತಿದ್ದಾರೆ. ಆಸೆಪಟ್ಟು, ಸರ್ವೀಸ್ ಪೂರಾ ಸಾಲದ ಕಂತು ಕಟ್ಟಿ ಉಳಿಸಿಕೊಂಡಿರುವ ಮನೆಯಲ್ಲೇ ಜೀವ ಬಿಡ್ತೀನಿ, ಮಾರೋದಿಲ್ಲ’.

‘ಪಾಪ! ನೀವು ಒಬ್ಬಂಟಿ’.

‘ಇಲ್ಲ, ನಾನು ಬೆಳೆಸಿದ ಈ ಮರದ ನೆರಳಿದೆ, ಸಾಕಿದ ಈ ನಾಯಿ ಸಹಾಯಕ್ಕಿದೆ. ಅಂಗಡಿಗೆ, ವಾಕಿಂಗ್‌ಗೆ ಹೋಗುವಾಗ ನಾಯಿ ಸಹಾಯಕ್ಕೆ ಬರುತ್ತದೆ. ಮಕ್ಕಳು ದೂರವಾದರೂ ಈ ಮರ, ನಾಯಿ ಬಿಟ್ಟುಹೋಗಲ್ಲ’.

‘ಪೋಷಕರನ್ನು ಆರೈಕೆ ಮಾಡದ ಮಕ್ಕಳಿಗೆ ಆಸ್ತಿ ಹಕ್ಕು ಇಲ್ಲವಂತೆ...’

ಬೊಚ್ಚುಬಾಯಿ ಬಿಟ್ಟು ನಕ್ಕ ತಿಮ್ಮಜ್ಜ, ತಡವರಿಸಿಕೊಂಡು ಮೇಲೆದ್ದರು. ನಾಯಿ ಊರುಗೋಲನ್ನು ಕಚ್ಚಿಕೊಂಡು ತಂದುಕೊಟ್ಟಿತು. ತಿಮ್ಮಜ್ಜ ಕೋಲೂರಿಕೊಂಡು ಮನೆ ಒಳಗೆ ಹೋದರು. ನಾಯಿ ಹಿಂಬಾಲಿಸಿತು.

ಸಂಗತ

ಬಯಕೆಗಿಂತ ಬದುಕು ದೊಡ್ಡದು

ಬದುಕಿನಲ್ಲಿ ಕನಸು ಕೈಗೂಡದಿದ್ದರೆ, ನಿರೀಕ್ಷಿತ ಯಶಸ್ಸು ದೊರೆಯದೇಹೋದರೆ ಬದುಕು ಅಂತ್ಯವಾಯಿತೆಂದು ಅರ್ಥವೇ?

• ಹರೀಶ್ ಕುಮಾರ್ ಕುಡ್ತಡ್ಕ

ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯಲ್ಲಿ ವ್ಯಕ್ತಿಯೊಬ್ಬರು ತಮ್ಮ ಇಬ್ಬರು ಪುಟ್ಟ ಮಕ್ಕಳನ್ನು ಕೊಂದು ತಾವೂ ಆತ್ಮಹತ್ಯೆಗೆ ಶರಣಾಗಿರುವುದಾಗಿ ವರದಿಯಾಗಿದೆ. ಇದಕ್ಕೆ ಕಾರಣ ತಿಳಿದರೆ ಆಶ್ಚರ್ಯವೂ ಖೇದವೂ ಏಕಕಾಲದಲ್ಲಿ ಉಂಟಾಗುತ್ತವೆ. ಒಂದನೇ ತರಗತಿಯಲ್ಲಿ ಓದುತ್ತಿದ್ದ ಹಿರಿಯ ಮಗ ಮತ್ತು ಯುಕೆಜಿಯಲ್ಲಿದ್ದ ಕಿರಿಯವನು ಕಲಿಕೆಯಲ್ಲಿ ಹಿಂದುಳಿದಿದ್ದರು ಎಂಬುದೇ ಈ ತಂದೆಯ ಆತಂಕ, ಕೊರಗಾಗಿತ್ತು. ಯಾರಾದರೂ ಇಷ್ಟು ಸಣ್ಣ ವಿಚಾರಕ್ಕೆ ಕೊಲೆ, ಆತ್ಮಹತ್ಯೆಗೆ ಮುಂದಾಗುತ್ತಾರೆಯೇ? ಹೃದಯವಿದ್ರಾವಕವಾದ ಈ ಪ್ರಕರಣ ನಡೆದ ಸಂದರ್ಭದಲ್ಲಿ ಸ್ಥಳದಲ್ಲಿ ಇಲ್ಲದಿದ್ದ ನತದೃಷ್ಟ ಗೃಹಿಣಿಯ ಪಾಡನ್ನು ಊಹಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಗಳು ಮೂಡುತ್ತವೆ.

ಇದು ಯಾರೋ ಒಬ್ಬ ಅಸ್ಥಿರ ಮನಸ್ಸಿನ ವ್ಯಕ್ತಿಯ ಕೃತ್ಯವೆಂದು ಮರೆತುಬಿಡಬಹುದು. ಆದರೆ ಒಎನ್‌ಜಿಸಿಯಂತಹ ಪ್ರತಿಷ್ಠಿತ ಕಂಪನಿಯ ಉದ್ಯೋಗಿಯಾಗಿದ್ದ ಆ ವ್ಯಕ್ತಿ ಬರೆದಿಟ್ಟಿರುವ ಮರಣಪತ್ರದ ಈ ವಾಕ್ಯವನ್ನು ಮಾತ್ರ ಸುಲಭದಲ್ಲಿ ಮರೆಯಲು ಸಾಧ್ಯವಾಗಲಾರದು. ಅದೆಂದರೆ ‘ಕಲಿಕೆಯಲ್ಲಿ ಹಿಂದುಳಿದಿರುವ ನನ್ನ ಇಬ್ಬರು ಮಕ್ಕಳು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಂದೆ ಹೆಣಗಾಡಬೇಕಾಗುತ್ತದೆ ಮತ್ತು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ’. ಈ ಮಾದರಿಯ ಮುಂದಾಲೋಚನೆ, ತರ್ಕವು ಚಿಂತನೆಗೆ ಹಚ್ಚುವಂತಿವೆ. ಜೊತೆಗೆ ಇದು ಪ್ರಸ್ತುತ ಸಮಾಜದ ಸ್ಥಿತಿಗತಿಗೆ ಹಿಡಿದ ಕನ್ನಡಿಯಂತಿದೆ. ಈ ಪ್ರಕರಣವನ್ನು ವ್ಯಕ್ತಿಯೊಬ್ಬನ ಆಧಾರರಹಿತ ಭಯಗ್ರಸ್ತ ಮನಃಸ್ಥಿತಿ, ಮುರ್ಖತನದ ನಡವಳಿಕೆ ಎಂದೆಲ್ಲ ಕಡೆಗಣಿಸುವುದು ಸುಲಭ. ಆದರೆ ಈ ಪ್ರಕರಣವು ಎಲ್ಲೋ ಆಳದಲ್ಲಿ ಸಮಕಾಲೀನ ಸಮಾಜ ಬೆನ್ನುಹತ್ತಿರುವ ಅತಿರೇಕದ ಬಯಕೆಗಳನ್ನು ಪ್ರತಿಬಿಂಬಿಸುವಂತಿದೆ ಎನ್ನಿಸುತ್ತದೆ.

ಇಂದು ಜನಸಾಮಾನ್ಯರಲ್ಲಿ ಮಿತಿಮೀರಿದ ಆಕಾಂಕ್ಷೆಗಳು ಒಂದೆಡೆ ಅನಗತ್ಯ ಒತ್ತಡ ಸೃಷ್ಟಿಸುತ್ತಿವೆ. ಇನ್ನೊಂದೆಡೆ, ತೀರಾ ಸ್ಪರ್ಧಾತ್ಮಕವಾಗಿರುವ ಶಿಕ್ಷಣ, ಉದ್ಯೋಗದ ವಾಸ್ತವ ಪರಿಸ್ಥಿತಿ ಆತಂಕ ಉಂಟು ಮಾಡುವಂತೆ ಇದೆ. ಹೀಗಾಗಿ, ಕನಸುಗಳು ಮತ್ತು ಅದಕ್ಕೆ ಹೊಂದಿಕೆಯಾಗದ ಕಟು ವಾಸ್ತವದ ಪರಿಸ್ಥಿತಿಯು ಜನಸಾಮಾನ್ಯರ ಬದುಕನ್ನು ಹೈರಾಣಾಗಿಸಿವೆ. ಮೂರ್ನಾಲ್ಕು ದಶಕಗಳ ಹಿಂದೆ ಸರಳವಾಗಿದ್ದ ಬದುಕು ಬರಬರುತ್ತಾ ಸಂಕೀರ್ಣವಾಗುತ್ತಾ ಬಂದಿರುವುದನ್ನು ಕಾಣುತ್ತಿದ್ದೇವೆ. ಹಿಂದೆ ಹೆತ್ತವರು ಅವರವರ ಅನುಕೂಲ, ಯೋಗ್ಯತೆಗೆ ಅನುಗುಣವಾಗಿ ಮಕ್ಕಳನ್ನು ಶಾಲೆಗೆ ಸೇರಿಸಿಬಿಟ್ಟರೆ ಅವರ ಜವಾಬ್ದಾರಿ ಬಹುತೇಕ ಮುಗಿದಂತೆ ಇರುತ್ತಿತ್ತು. ಇತ್ತ ವಿದ್ಯಾರ್ಥಿಗಳೂ ಅಷ್ಟೇ ನಿರಾತಂಕದಿಂದ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದರು. ಆಗ ಈಗಿನಂತೆ ಸ್ಪರ್ಧೆ, ಸಂಘರ್ಷದ ಮಾತೇ ಇರಲಿಲ್ಲ.

ವಿದ್ಯಾರ್ಥಿಗಳು ಅವರವರ ಬುದ್ಧಿವಂತಿಕೆ, ಪ್ರತಿಭೆಗೆ ಅನುಸಾರವಾಗಿ ಶಿಕ್ಷಣವನ್ನು ಮುಂದುವರಿಸುತ್ತಿದ್ದ ಕಾಲವದು. ಉತ್ತೀರ್ಣ, ಅನುತ್ತೀರ್ಣ ಆಗುವಿಕೆಗೆಲ್ಲ ಮಕ್ಕಳು ಕಂಗೆಡುತ್ತಿರಲಿಲ್ಲ, ಇದಕ್ಕೆಲ್ಲ ಹೆತ್ತವರೂ ದಿಗಿಲು ಬೀಳುತ್ತಿರಲಿಲ್ಲ. ಆ ಕಾಲದಲ್ಲಿ ಅರ್ಹತೆ, ಯೋಗ್ಯತೆಗೆ ತಕ್ಕಂತೆ ಉನ್ನತ ಶಿಕ್ಷಣ, ಉದ್ಯೋಗ ಲಭಿಸುತ್ತಿದ್ದವು. ಇಂತಹ ಸೌಲಭ್ಯಗಳಿಂದ ವಂಚಿತರಾದವರು ಯಾವುದೋ ಕೆಲಸ, ವ್ಯವಹಾರವನ್ನು ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಹಾಗೆಂದು ಇದನ್ನು ಸ್ವೀಕಾರಾರ್ಹ ಮಾದರಿಯೆಂದು ಒಪ್ಪಿಕೊಂಡುಬಿಡಲು ಸಾಧ್ಯವಿಲ್ಲ. ಕೆಳ ವರ್ಗಗಳಿಗೆ ದಕ್ಕದೇಹೋದ ಶಿಕ್ಷಣ, ಉದ್ಯೋಗ ಸಮಸ್ಯೆಯನ್ನು ಬೇರೆಯೇ ನೆಲೆಯಲ್ಲಿ ಚರ್ಚಿಸಬೇಕಾಗುತ್ತದೆ. ಇಲ್ಲಿ ವಿಷಯ ಅದಲ್ಲ. ಹಿಂದೆ ಶಿಕ್ಷಣ, ಉದ್ಯೋಗದ ಕಾರಣಕ್ಕಾಗಿ ಆತ್ಮಹತ್ಯೆಯಂತಹ ಅತಿರೇಕದ ಕೃತ್ಯಗಳಿಗೆ ಯಾರೂ ಮುಂದಾಗುತ್ತಿರಲಿಲ್ಲ ಎನ್ನುವುದು ನೆನಪಿಡಬೇಕಾದ ವಿಚಾರ.



ನಿಜ, ಈ ಕಾಲ ಹಿಂದಿನಂತೆ ಇಲ್ಲ. ಅವಿಭಕ್ತ ಕುಟುಂಬಗಳ ವಿಘಟನೆ, ಜನಸಂಖ್ಯೆಯ ಏರಿಕೆ, ಕೃಷಿ ಆಧಾರಿತ ಚಟುವಟಿಕೆಗಳ ಅವಗಣನೆ, ಉದ್ಯೋಗ ಕೊರತೆಯಂತಹವು ಸಮಾಜದಲ್ಲಿ ತೀವ್ರ ಸ್ಪರ್ಧಾತ್ಮಕ ವಾತಾವರಣ ಸೃಷ್ಟಿಸಿರುವುದನ್ನು ಒಪ್ಪಿಕೊಳ್ಳಬೇಕು. ಇದಕ್ಕೆ ಸರ್ಕಾರದ ಧೋರಣೆಗಳು ಕಾರಣವೆಂಬುದು ಸ್ಪಷ್ಟ. ಶಿಕ್ಷಣ ರಂಗದಲ್ಲಿ ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ವಿಫಲವಾಗಿರುವ ಸರ್ಕಾರ, ಉದ್ಯೋಗ ಸೃಷ್ಟಿಸುವಲ್ಲಿ ಸಹ ದಯನೀಯವಾಗಿ ಸೋತಿದೆ. ಇದು ಜನರ ಬದುಕನ್ನು ಕಂಗೆಡಿಸಿದೆ. ಇದರ ಜೊತೆಯಲ್ಲಿ ಜನರನ್ನು ಪ್ರಭಾವಿಸಿರುವಂತಹ ಭ್ರಮೆಗಳು ಪರಿಸ್ಥಿತಿಯನ್ನು ಹದಗೆಡಿಸಿವೆ. ದುರಾಸೆ, ಆಡಂಬರ, ಒಣಪ್ರತಿಷ್ಠೆಯಂತಹ ವಿಚಾರಗಳು ಜನರ ಮನಸ್ಸನ್ನು ಕೆಡಿಸಿವೆ. ಇದರಿಂದಾಗಿಯೇ ಆತ್ಮಹತ್ಯೆಯಂತಹ ಪ್ರಕರಣಗಳು ಸಂಭವಿಸುತ್ತಿರುವುದು.

ಬದಲಾದ ಕಾಲಘಟ್ಟದಲ್ಲಿ ಉತ್ತಮ ಶಿಕ್ಷಣ, ಉದ್ಯೋಗ ಎಂಬುದು ನಮ್ಮೆಲ್ಲರ ಆದ್ಯತೆ, ಕನಸು. ಇದಕ್ಕಾಗಿ ಪ್ರಯತ್ನಿಸುವುದೂ ಸರಿ. ಆದರೆ ಈ ದಿಸೆಯಲ್ಲಿ ನಿರೀಕ್ಷಿತ ಯಶಸ್ಸು ದೊರೆಯದೇಹೋದರೆ ಬದುಕು ಅಂತ್ಯವಾಯಿತೆಂದು ಅರ್ಥವೇ? ಬದುಕು ಬಹಳ ದೊಡ್ಡದು. ಈ ಬದುಕಿನಲ್ಲಿ ಅವಕಾಶಗಳು, ಪರ್ಯಾಯ ಆಯ್ಕೆಗಳು ಅಪಾರ. ನಮ್ಮಲ್ಲಿನ ಭ್ರಮೆಗಳು, ಹೋಲಿಕೆ ಮನೋಭಾವವನ್ನು ಮೊದಲು ಕಳಚಿಕೊಳ್ಳಬೇಕು. ದಿಟ್ಟತನ, ಛಲ, ನಿರಂತರ ಪ್ರಯತ್ನಗಳ ಮೂಲಕ ಮುಂದೆ ಸಾಗುವ ಗುಣ ಪ್ರತಿಯೊಬ್ಬರಲ್ಲೂ ಇರಬೇಕು. ಈ ಬದುಕಿನಲ್ಲಿ ಅಂತಿಮ ಸೋಲು ಅಥವಾ ಅಂತಿಮ ಯಶಸ್ಸು ಎನ್ನುವುದು ಇಲ್ಲವೇ ಇಲ್ಲ. ಯಾಕೆಂದರೆ, ಇಲ್ಲಿ ಯಾವುದೂ ಶಾಶ್ವತವಲ್ಲ.

ವಾಚಕರ ವಾಣಿ

ಆನ್‌ಲೈನ್ ವಂಚನೆಯ ಈ ಪರಿ...

ಮೊಬೈಲ್ ಫೋನ್ ಕರೆಯ ಮೂಲಕ ನಡೆಯುವ ಆನ್‌ಲೈನ್ ವಂಚನೆಗಳು ಇತ್ತೀಚಿನ ದಿನಗಳಲ್ಲಿ ಎಲ್ಲೆಲ್ಲೂ ಕೇಳಿಬರುತ್ತಿವೆ. ಇಂತಹ ಪ್ರಕರಣವೊಂದು ಮೊನ್ನೆ ಸ್ವಯಂ ಅನುಭವಕ್ಕೆ ಬಂದಿತು. ಮಧ್ಯಾಹ್ನ ಸುಮಾರು ಒಂದೂವರೆ ಗಂಟೆಯ ಸಮಯದಲ್ಲಿ ವ್ಯಕ್ತಿಯೊಬ್ಬರು ಕರೆ ಮಾಡಿ ಇಂಗ್ಲಿಷಿನಲ್ಲಿ ಮಾತನಾಡುತ್ತಾ ತಾವು ರಾಷ್ಟ್ರೀಕೃತ ಬ್ಯಾಂಕ್‌ವೊಂದರ ಅಧಿಕಾರಿಗಳು ಎಂದು ಹೇಳಿಕೊಂಡರು. ನನ್ನ ಹೆಸರನ್ನು ಸಹ ಸರಿಯಾಗಿ ಹೇಳುತ್ತಾ, ಇಂತಹ ಸಂಖ್ಯೆಯಿಂದ ಕೊನೆಗೊಳ್ಳುವ ಅಕೌಂಟ್ ನಂಬರಿಗೆ ಕೆವೈಸಿ ಅಪ್‌ಡೇಟ್ ಮಾಡುವ ಅಗತ್ಯ ತುರ್ತಾಗಿ ಇದೆ, ಇದು ಮಾರ್ಚ್ ತಿಂಗಳಾದ್ದರಿಂದ ವರ್ಷದ ಕೊನೆಯ ವಹಿವಾಟಿಗೆ ಇದರ ಅಗತ್ಯ ಇದೆ ಎಂದರು. ಅಲ್ಲದೆ ‘ಈಗಾಗಲೇ ಇದರ ಡೇಟ್ ಮುಗಿದು ಒಂದು ವಾರ ಆಗಿದೆ. ನೀವು ಈ ಕೂಡಲೇ ವಿಡಿಯೊ ಕೆವೈಸಿ ಸೇರಿ ಅಪ್‌ಡೇಟ್ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಅಕೌಂಟ್ ಬ್ಲಾಕ್ ಆಗುತ್ತದೆ’ ಎಂದು ಹೇಳಿದರು.

ಅನುಮಾನ ಬಂದು ಮಾರನೇ ದಿನ ಬ್ಯಾಂಕಿನಲ್ಲಿ ವಿಚಾರಿಸಿದಾಗ, ಇಂತಹ ಕರೆಗಳಿಗೆ ಸ್ಪಂದಿಸಬೇಡಿ ಎಂದು ಬ್ಯಾಂಕಿನವರು ಎಚ್ಚರಿಸಿದರು. ವಿದ್ಯಾವಂತರನ್ನು ಸಹ ದಾರಿ ತಪ್ಪಿಸುವ ಇಂತಹ ಕರೆಗಳ ಬಗ್ಗೆ ಸಾರ್ವಜನಿಕರು ಎಚ್ಚರದಿಂದ ಇರಬೇಕು.

ಆಶಾ ಅಪ್ರಮೇಯ, ದಾವಣಗೆರೆ

ಸೋಲಿಗೆ ಅಂಬೇಡ್ಕರ್ ಮಾರ್ಮಿಕ ಉತ್ತರ!

ಬಿ.ಆರ್.ಅಂಬೇಡ್ಕರ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಸೋಲಿಸಿದವರು ಯಾರು ಎಂಬ ಪ್ರಶ್ನೆ ವಿಧಾನಸಭೆಯಲ್ಲಿ ಸೋಮವಾರ ಕೋಲಾಹಲ ಎಬ್ಬಿಸಿದ್ದು, ಈ ಸಂಬಂಧದ ಆರೋಪ, ಪ್ರತ್ಯಾರೋಪ ಜೋರಾಗಿ ಕೇಳಿಬಂದಿದ್ದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 18). 1952ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋತ ನಂತರ ಅಂಬೇಡ್ಕರ್ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮುಂಬೈಯಲ್ಲಿ ಮಾಡಿದ ಭಾಷಣ ಈ ಪ್ರಶ್ನೆಗೆ ಮಾರ್ಮಿಕವಾಗಿ ಉತ್ತರ ನೀಡುತ್ತದೆ. ‘ನಾವು ಸೋತಿದ್ದೇವೆ, ಏಕೆಂದರೆ ನಾವು ಮಾರಾಟಗೊಳ್ಳಲು ಸಿದ್ಧರಿಲ್ಲ. ನಾವು ಸೋತಿದ್ದೇವೆ, ಏಕೆಂದರೆ ಪಕ್ಷದಿಂದ ಪಕ್ಷಕ್ಕೆ ಹಾರುವುದಿಲ್ಲ. ನಾವು ನಮ್ಮ ತತ್ವ ಮತ್ತು ಆದರ್ಶಕ್ಕೆ ಅಂಟಿಕೊಂಡು ಇರುವವರು. ಭವಿಷ್ಯದಲ್ಲಿಯೂ ಅಲ್ಲೇ ಉಳಿಯುವವರು. ಗೆಲ್ಲುವುದಷ್ಟೇ ನಮ್ಮ ಉದ್ದೇಶವಲ್ಲ. ಉತ್ತಮ ಮೌಲ್ಯ, ಉತ್ತಮ ಪ್ರಯತ್ನ, ಶ್ರೇಷ್ಠವಾದ ಅರಿವಿಗಾಗಿ ಹೋರಾಡೋಣ’ ಎಂದು ಹೇಳಿದ್ದರು.

ಅಂಬೇಡ್ಕರ್ ಅವರ ಪತ್ನಿ ಸವಿತಾ ಅವರು ಮರಾಠಿಯಲ್ಲಿ ಬರೆದಿರುವ ‘ಅಂಬೇಡ್ಕರಾಂಚ್ಯಾ ಸಹವಾಸತ್’ ಆತ್ಮಕಥೆಯಲ್ಲಿ ಈ ಸಂಗತಿಯನ್ನು ದಾಖಲಿಸಿದ್ದಾರೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಶಾಲೆಗಳಿಗೆ ಗ್ರೂಪ್ ‘ಡಿ’ ಸಿಬ್ಬಂದಿ ಅತ್ಯಗತ್ಯ

ರಾಜ್ಯದ ಬಹುತೇಕ ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ ‘ಡಿ’ ಹಾಗೂ ಕ್ಲರ್ಕ್ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡುವ ಮೂಲಕ ಶಿಕ್ಷಕರ ಕಾರ್ಯಭಾರವನ್ನು ತಗ್ಗಿಸಬೇಕೆಂದು ರಾಜೇಂದ್ರ ಕುಮಾರ್ ಮುದ್ನಾಳ್ ಅವರು ಹೇಳಿರುವುದು (ವಾ.ವಾ., ಮಾರ್ಚ್ 18) ಸರಿಯಾಗಿದೆ. ನಾನು ಬಹಳ ವರ್ಷಗಳಿಂದ ಕೆಲವು ಸರ್ಕಾರಿ ಪ್ರೌಢಶಾಲೆಗಳಿಗೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ, ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಪ್ರಾಮುಖ್ಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ. ಆಗ ನಾನು ಗಮನಿಸಿದಂತೆ, ಶಾಲೆಯ ಕೊಠಡಿಗಳು, ಮೆಟ್ಟಿಲುಗಳು, ವೆರಾಂಡ ಹೀಗೆ ಎಲ್ಲ ಕಡೆ ಕಸ ಮತ್ತು ದೂಳು ತುಂಬಿರುತ್ತದೆ. ಈ ಕುರಿತು ಶಿಕ್ಷಕರ ಜೊತೆ ಮಾತನಾಡಿದಾಗ, ಇದಕ್ಕೆ ಕಾರಣ ಗ್ರೂಪ್ ‘ಡಿ’ ನೌಕರರು ಇಲ್ಲದಿರುವುದೇ ಆಗಿದೆ ಎಂಬುದು ತಿಳಿದುಬರುತ್ತದೆ.

ಶಿಕ್ಷಕರು ಕ್ಲರ್ಕ್ ಕೆಲಸ ಮಾಡಬಹುದು. ಆದರೆ ಗ್ರೂಪ್ ‘ಡಿ’ ನೌಕರರ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೇ? ಶಾಲೆಗೆ ಶಿಕ್ಷಕರು ಎಷ್ಟು ಮುಖ್ಯವೋ ಸ್ವಚ್ಛತಾ ಸಿಬ್ಬಂದಿಯೂ ಅಷ್ಟೇ ಮುಖ್ಯ. ಗ್ರೂಪ್ ‘ಡಿ’ ನೌಕರ ಇಲ್ಲದೆ ಶಾಲೆಯನ್ನು ನಡೆಸಬಹುದು ಎಂದು ಸರ್ಕಾರ ಭಾವಿಸುವುದಾದರೆ, ಶಿಕ್ಷಕರು ಇಲ್ಲದೆಯೂ ಶಾಲೆಯನ್ನು ನಡೆಸಬಹುದು ಎಂದು ಭಾವಿಸುವುದಕ್ಕೆ ಅವಕಾಶವಿದೆ. ಹಾಗಾಗಿ, ಶಾಲೆಗಳಲ್ಲಿ ಈ ಹುದ್ದೆಯ ಅಗತ್ಯವನ್ನು ಮನಗಂಡು ಸರ್ಕಾರ ಈಗಲಾದರೂ ಕಿರಿಯ ಪ್ರಾಥಮಿಕ ಶಾಲೆಯಿಂದ ಪ್ರಾರಂಭಿಸಿ, ಪದವಿಪೂರ್ವ ಕಾಲೇಜಿನವರೆಗೆ ಎಲ್ಲಾ ಶಾಲೆ ಕಾಲೇಜುಗಳಿಗೆ ಗ್ರೂಪ್ ‘ಡಿ’ ಸಿಬ್ಬಂದಿಯನ್ನು ನೇಮಿಸಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಅನುಕರಣೆಪ್ರಿಯರು...

‘...ಉತ್ತರ ಭಾರತದ ಆಚರಣೆಯನ್ನು ಅನುಕರಿಸುವ ರೋಗ ಬರೀ ರೋಗವಲ್ಲ, ಅವೈಜ್ಞಾನಿಕ ಮನೋರೋಗ’ ಎಂದು ಉತ್ತರ ಭಾರತದ ‘ಗಂಗಾರತಿ’ಯಂತೆ ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ‘ಕಾವೇರಿ ಆರತಿ’ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದಕ್ಕೆ ಸುಷ್ಮಾ ಅಯ್ಯಂಗಾರ್ ಅವರು ಪ್ರತಿಕ್ರಿಯಿಸಿರುವುದು (ಕಿಡಿನುಡಿ, ಮಾರ್ಚ್ 18) ಗಂಭೀರ, ಮಾರ್ಮಿಕ ಮತ್ತು ಅಭಿನಂದನೀಯ. ಉತ್ತರ ಮತ್ತು ದಕ್ಷಿಣ ಭಾರತದವರ ಆಚರಣೆ ಹಾಗೂ ಊಟೋಪಚಾರ ಭಿನ್ನ. ಆದರೆ ಹಿಂದಿ ಚಲನಚಿತ್ರಗಳು, ಹೋಳಿ, ದೀಪಾವಳಿಯಂತಹ ಹಬ್ಬಗಳು, ದೃಶ್ಯ ಮಾಧ್ಯಮಗಳಲ್ಲಿಯ ಕಾರ್ಯಕ್ರಮಗಳು ಯಾವಾಗ ಜನಪ್ರಿಯವಾದವೋ ವಿದ್ಯಾರ್ಜನೆ, ಉದ್ಯೋಗದ ನಿಮಿತ್ತ ಉತ್ತರದಿಂದ ದಕ್ಷಿಣಕ್ಕೆ ವಲಸೆ ಯಾವಾಗ ಆರಂಭವಾಯಿತೋ ಆಗಿನಿಂದ ದಕ್ಷಿಣದವರ ಸಾಂಸ್ಕೃತಿಕ ಆಚಾರ ವಿಚಾರ, ಊಟೋಪಚಾರ, ವೇಷಭೂಷಣ, ವರಸೆ, ಭಾಷೆಯಂತಹವೆಲ್ಲಾ ಅನುಕರಣೆ ರೂಪದಲ್ಲಿ ತಮ್ಮತನವನ್ನು ಕಳೆದುಕೊಳ್ಳುತ್ತಾ ಬಂದವು. ಬೆಂಗಳೂರು ನಗರದ ಅಚ್ಚ ಕನ್ನಡದ ಪ್ರದೇಶಗಳಾದ ಬಸವನಗುಡಿ, ಜಯನಗರ, ಮಲ್ಲೇಶ್ವರಂ, ರಾಜಾಜಿನಗರ ದಂತಹ ಬಹುತೇಕ ಹೋಟೆಲು, ದರ್ಶಿನಿಗಳಲ್ಲಿ ಸಹ ಕನ್ನಡ ಮಾತನಾಡಲಾಗದ, ಕನ್ನಡವನ್ನು ಅರ್ಥಮಾಡಿ ಕೊಳ್ಳಲಾಗದ, ಕನ್ನಡ ಕಲಿಯಲು ಮನಸ್ಸು ಮಾಡದ ಹಿಂದಿ ಭಾಷಿಕ ನೌಕರರೇ ಹೆಚ್ಚಾಗಿ ಕಂಡುಬರುತ್ತಾರೆ. ಇಂತಹದಕ್ಕೆಲ್ಲಾ ಅನುಕರಣೆಪ್ರಿಯ ಬೆಂಗಳೂರಿಗರು ಈಗ ಒಗ್ಗಿಹೋಗಿದ್ದಾರೆ. ಇದಕ್ಕೆ ಪೂರಕವಾಗಿ, ಉತ್ತರ ಭಾರತದ ಸಂಸ್ಕೃತಿಯನ್ನು ದಕ್ಷಿಣಕ್ಕೂ ಹರಿಸಲು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಸ್ಪರ್ಧೆಗಿಳಿದಂತೆ ತೋರುತ್ತದೆ!

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವೃದ್ಧಜೀವಗಳಿಗೆ ಕಾನೂನಿನ ಅಭಯ

ಪ್ರಜಾವಾಣಿ ವಾರ್ತೆ

ವೃದ್ಧ ಪೋಷಕರಿಂದ ಆಸ್ತಿಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಳ್ಳುವ ಮಕ್ಕಳು, ಚಿಕಿತ್ಸೆ ನೆಪದಲ್ಲಿ ಪೋಷಕರನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸೇರಿಸಿ ಬಳಿಕ ಅವರನ್ನು ಬಿಟ್ಟುಬಿಡುವ ಪ್ರವೃತ್ತಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಮುಂದಾಗಿದೆ. ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ 2007ರ ಸೆಕ್ಷನ್ 23ರಡಿ ಮಕ್ಕಳ ಆಸ್ತಿ ಹಕ್ಕು ರದ್ದುಗೊಳಿಸಲು ಅವಕಾಶ ನೀಡುವ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅದು ತೀರ್ಮಾನಿಸಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಅವರು ರಾಜ್ಯದ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಆಸ್ಪತ್ರೆಗಳಲ್ಲಿ ನಡೆಯುತ್ತಿರುವ ಇಂತಹ ಪ್ರಕರಣಗಳನ್ನು (250) ಮಾತ್ರ ಪ್ರಸ್ತಾಪಿಸಿದ್ದಾರೆ. ಆದರೆ, ಈ ಪ್ರವೃತ್ತಿ ಸರ್ಕಾರಿ ಆಸ್ಪತ್ರೆಗಳಿಗೆ ಸೀಮಿತವಾಗಿಲ್ಲ. ಹೆತ್ತ ತಂದೆ ತಾಯಿಯರ ಆಸ್ತಿಯನ್ನು ಪಡೆದ ಬಳಿಕ ಮಕ್ಕಳು, ಅವರ ಪಾಲನೆಯನ್ನು ಮಾಡದೆ ಮನೆಯಿಂದ ಹೊರಗಟ್ಟುತ್ತಿರುವ, ಅನಾಥಾಶ್ರಮಗಳಲ್ಲಿ ಬಿಟ್ಟು ಹೋಗುತ್ತಿರುವ, ದೂರದ ಊರುಗಳಲ್ಲಿ ಬಿಟ್ಟು ಬರುವ ಪ್ರಕರಣಗಳು ಅಲ್ಲಲ್ಲಿ ವರದಿಯಾಗುತ್ತಿರುತ್ತವೆ. ಇದರ ವಿರುದ್ಧ ಕಾನೂನು ಇದ್ದರೂ, ರಾಜ್ಯದಲ್ಲಿ ಇಂತಹ ಪ್ರಕರಣಗಳು ನಡೆಯುತ್ತಲೇ ಇವೆ. ವೃದ್ಧ ಪೋಷಕರು ಕಾನೂನಿನ ಅರಿವಿನ ಕೊರತೆಯಿಂದ ಅನಾಥರಾಗಿ ತಮ್ಮ ಜೀವನದ ಕೊನೆಯ ದಿನಗಳನ್ನು ಕಳೆಯುತ್ತಿರುವ ಕರುಣಾಜನಕ ಕಥೆಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಿಗುತ್ತವೆ.

ಕಾಯ್ದೆಯ ಸೆಕ್ಷನ್ 23ರ ಅಡಿಯಲ್ಲಿ ಮಕ್ಕಳಿಗೆ ವರ್ಗಾವಣೆ ಮಾಡಿದ್ದ ಆಸ್ತಿ ಪ್ರಕ್ರಿಯೆ/ ವಿಲ್ ಅನ್ನು ಉಪವಿಭಾಗಾಧಿಕಾರಿ (ಎ.ಸಿ) ನ್ಯಾಯಾಲಯಗಳು ರದ್ದು ಮಾಡಿದರೂ ಮಕ್ಕಳಿಗೆ ಅದರ ವಿರುದ್ಧ ಡಿಸಿ ಕೋರ್ಟ್ ಸೇರಿದಂತೆ ವಿವಿಧ ನ್ಯಾಯಾಲಯದ ಮೆಟ್ಟಿಲೇರುವುದಕ್ಕೆ ಅವಕಾಶ ಇದೆ. ನ್ಯಾಯಾಲಯವು ಎ.ಸಿ ಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ನೀಡಬಹುದು ಅಥವಾ ಆದೇಶವನ್ನು ಸಮರ್ಥಿಸಿಕೊಳ್ಳಬಹುದು. ನಂತರದ ಕಾನೂನು ಪ್ರಕ್ರಿಯೆ ನಡೆಯುತ್ತಿರುತ್ತದೆ. ಆದರೆ, ಸರ್ಕಾರದ ಈ ಪ್ರಯತ್ನ ವೃದ್ಧ ಪೋಷಕರಿಗೆ ಪ್ರವಾಹದಲ್ಲಿ ಸಿಕ್ಕ ಹುಲ್ಲಿನ ಕಡ್ಡಿಯಂತಾಗಿದೆ. ಆಸ್ತಿ ಕೈತಪ್ಪುವ ಭಯದಿಂದ ತಂದೆ ತಾಯಿಯರನ್ನು ಮಕ್ಕಳು ಮನೆಯಿಂದ ಹೊರಗಡೆ ಹಾಕುವ ದುಸ್ಸಾಹಸಕ್ಕೆ ಕೈಹಾಕದಿರುವ ಸಾಧ್ಯತೆ ಇರುತ್ತದೆ. ಒಂದು ವೇಳೆ, ಜೀವನದ ಸಂಧ್ಯಾಕಾಲದಲ್ಲಿ ಮಕ್ಕಳು ನೋಡಿಕೊಳ್ಳದಿದ್ದರೂ ಆಸ್ತಿಯಿಂದ ಬರುವ ಆದಾಯದಿಂದ ಕೊನೆಯುಸಿರು ಇರುವವರೆಗೆ ವೃದ್ಧಜೀವಗಳು ಗೌರವದಿಂದ ಬದುಕುವುದಕ್ಕೆ ಅವಕಾಶ ಸಿಗುವ ಸದಾಶಯ ಸರ್ಕಾರದ ನಿರ್ಧಾರದ ಹಿಂದಿದೆ ಎಂಬುದು ಕಾನೂನು ತಜ್ಞರ ಅಭಿಪ್ರಾಯ.

ತಂದೆ-ತಾಯಂದಿರು ಮಕ್ಕಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುತ್ತಾರೆ. ಅವರನ್ನು ಸಂಧ್ಯಾಕಾಲದಲ್ಲಿ ಬಿಟ್ಟು ಹೋಗುತ್ತಿರುವ ಮಕ್ಕಳ ವರ್ತನೆ ಅಮಾನವೀಯ ಮಾತ್ರವಲ್ಲ; ಖಂಡನಾರ್ಹ. ಪೋಷಕರನ್ನು ಬಿಟ್ಟು ಹೋಗುವ ಮಕ್ಕಳ ವಿಲ್ ರದ್ದು ಮಾಡಲು ಹಾಗೂ ಇತರೆ ಕ್ರಮಗಳನ್ನು ಕೈಗೊಳ್ಳಲು ದೂರು ಸಲ್ಲಿಸುವಂತೆ ನಾವು ಸುತ್ತೋಲೆ ಹೊರಡಿಸಿದ್ದೇವೆ. ದೈವ ಸಮಾನರಾದ ತಂದೆ ತಾಯಿಯನ್ನು ಎಲ್ಲ ಕಾಲದಲ್ಲಿಯೂ ಪ್ರೀತಿಯಿಂದ ನೋಡಿಕೊಳ್ಳಬೇಕು

ಡಾ. ಶರಣ ಪ್ರಕಾಶ್ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ರಾಜ್ಯದ ಎ.ಸಿ ಕೋರ್ಟ್‌ಗಳಲ್ಲಿನ ಪ್ರಕರಣಗಳ ವಿವರ

3,010 ದಾಖಲಾದ ಒಟ್ಟು ಪ್ರಕರಣಗಳು

2,007 ವಿಲೇವಾರಿಯಾದ ಪ್ರಕರಣಗಳು

1,003 ಬಾಕಿ ಇರುವ ಪ್ರಕರಣಗಳು

137 ಪ್ರಕರಣಗಳು ಆರು ತಿಂಗಳುಗಳಿಂದಲೂ ಹೆಚ್ಚು ಸಮಯದಿಂದ ಬಾಕಿ ಇವೆ

ಬೆಳಗಾವಿ ಜಿಲ್ಲಾಸ್ಪತ್ರೆಯ ನಿರ್ಗತಿಕರ ವಾರ್ಡಿನ ಗೇಟಿನ ಮುಂದೆಯೇ ಮಗನಿಗಾಗಿ ಕಾಯುತ್ತ ನಿಂತ ಪಾರ್ವತಿ ಅವರನ್ನು ಸಂತೈಸಿದ ಸಿಬ್ಬಂದಿ ದುರ್ಗವ್ವ ಹಂಡೋರಿ ಪ್ರಜಾವಾಣಿ ಚಿತ್ರ

ಕಾಯ್ದೆ ಏನು ಹೇಳುತ್ತದೆ?

ಭಾರತದಲ್ಲಿ ಪೋಷಕರು ಮತ್ತು ಹಿರಿಯ ನಾಗರಿಕರ ಪಾಲನೆ ಪೋಷಣೆಯ ಹಕ್ಕನ್ನು ಖಾತರಿಪಡಿಸುವ ಸಲುವಾಗಿ 'ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ 2007' ಅನ್ನು ಜಾರಿಗೊಳಿಸಲಾಗಿದೆ. ಇದರ ಪ್ರಕಾರ, ತಂದೆ, ತಾಯಿ ಮತ್ತು 60 ಮತ್ತು ಅದಕ್ಕಿಂತ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರಿಕರು ಅವರ ಒಡೆತನದ ಆಸ್ತಿಯಿಂದ ಸ್ವಯಂ ಪಾಲನೆ ಪೋಷಣೆ ಮಾಡಿಕೊಳ್ಳಲು ಅಸಮರ್ಥರಾಗಿದ್ದಲ್ಲಿ, ಅವರ ಮಕ್ಕಳು/ವಾರಸುದಾರರು ಅವರ ಜೀವನ ನಿರ್ವಹಣೆಯ ಜವಾಬ್ದಾರಿ ಹೊರಬೇಕಾಗುತ್ತದೆ. ಒಂದು ವೇಳೆ ಮಕ್ಕಳು/ವಾರಸುದಾರರು ಅವರಿಗೆ ಜೀವನ ನಿರ್ವಹಣೆಗೆ ಬೇಕಾಗುವ ಸವಲತ್ತು ಒದಗಿಸಲು ನಿರಾಕರಿಸಿದಲ್ಲಿ ಕಾಯ್ದೆ ಪ್ರಕಾರ ಸಂಬಂಧಿಸಿದ ನ್ಯಾಯಮಂಡಳಿ ಖುದ್ದಾಗಿ ಇಲ್ಲವೇ ನೋಂದಾಯಿತ ಸಂಸ್ಥೆಯ ಮೂಲಕ ಅರ್ಜಿ ಸಲ್ಲಿಸಿ ಪರಿಹಾರ/ಭತ್ಯೆ ಪಡೆಯಲು ಅವಕಾಶವಿರುತ್ತದೆ.

ಸೆಕ್ಷನ್ 23 ಹೇಳುವುದೇನು?

23 (1): ಯಾವುದೇ ಹಿರಿಯ ನಾಗರಿಕ ತನ್ನ ಆಸ್ತಿಯನ್ನು ದಾನಪತ್ರದ ರೂಪದಲ್ಲಿ ಅಥವಾ ಮತ್ಯಾವುದೇ ರೂಪದಲ್ಲಿ ಉತ್ತರಾಧಿಕಾರಿಗೆ ವರ್ಗಾಯಿಸಿದ ನಂತರ, ಅದನ್ನು ಪಡೆದವರು ಅವರಿಗೆ ಮೂಲಸೌಕರ್ಯಗಳನ್ನು ಒದಗಿಸಬೇಕು ಮತ್ತು ಮೂಲಭೂತ ಅಗತ್ಯಗಳನ್ನು ಪೂರೈಸಬೇಕು. ಹೀಗೆ ಮಾಡಲು ನಿರಾಕರಿಸಿದಲ್ಲಿ ಅಥವಾ ವಿಫಲವಾದಲ್ಲಿ, ನ್ಯಾಯಮಂಡಳಿ ಆ ಆಸ್ತಿಯ ವರ್ಗಾವಣೆಯನ್ನು ಮೋಸದಿಂದ ಅಥವಾ ಒತ್ತಾಯದಿಂದ ಅಥವಾ ಅನುಚಿತ ಪ್ರಭಾವ ಬೀರುವುದರ ಮೂಲಕ ಮಾಡಲಾಗಿದೆ ಎಂದು ಭಾವಿಸುತ್ತದೆ ಮತ್ತು ವರ್ಗಾವಣೆ ಮಾಡಿದವರ ಇಚ್ಛೆಯಂತೆ ಅದನ್ನು ಅನೂರ್ಜಿತ ಎಂದು ಘೋಷಿಸಬಹುದಾಗಿದೆ

23 (2): ಯಾವುದೇ ಹಿರಿಯ ನಾಗರಿಕ ತನ್ನ ಆಸ್ತಿಯಿಂದ ಪಾಲನೆ-ಪೋಷಣೆಯ ಸೌಲಭ್ಯ ಪಡೆಯುವುದಕ್ಕೆ ಹಕ್ಕುಳ್ಳವನಾಗಿರುತ್ತಾನೆ. ಆ ಆಸ್ತಿ ಅಥವಾ ಅದರ ಭಾಗವನ್ನು ಆತ ವರ್ಗಾವಣೆ ಮಾಡಿದ್ದಲ್ಲಿ ವರ್ಗಾವಣೆ ಪಡೆದವನಿಗೆ ಆ ಹಕ್ಕಿನ ಬಗ್ಗೆ ತಿಳಿವಳಿಕೆ ಇದ್ದರೆ ಅಥವಾ ವರ್ಗಾವಣೆ ಪುಕ್ಕಟೆಯಾಗಿದ್ದರೆ ಪಾಲನೆ-ಪೋಷಣೆ ಸೌಲಭ್ಯ ಪಡೆಯುವ ಹಕ್ಕನ್ನು ವರ್ಗಾವಣೆ ಪಡೆದವನ ವಿರುದ್ಧ ಜಾರಿಗೊಳಿಸಬಹುದು. ಆದರೆ, ಯಾವುದೇ ರೀತಿಯ ಪ್ರತಿಫಲ (ಹಣ ಮತ್ತು ಇತರ ಸಂಪತ್ತು) ಪಡೆದು ವರ್ಗಾವಣೆ ಮಾಡಿದ್ದರೆ ಮತ್ತು ವರ್ಗಾವಣೆ ಪಡೆದವನಿಗೆ ಆ ಸಂದರ್ಭದಲ್ಲಿ ಹಕ್ಕಿನ ಬಗ್ಗೆ ತಿಳಿವಳಿಕೆ ಇಲ್ಲದಿದ್ದರೆ, ಆತನ ವಿರುದ್ಧ ಈ ಹಕ್ಕನ್ನು ಚಲಾಯಿಸಲಾಗುವುದಿಲ್ಲ

23 (3): ಯಾವುದೇ ಹಿರಿಯ ನಾಗರಿಕ (1)ನೇ ಮತ್ತು (2)ನೇ ಸಬ್‌ಸೆಕ್ಷನ್ ಅನುಸಾರ ತನ್ನ ಪಾಲನೆ/ಪೋಷಣೆ ಹಕ್ಕು ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸಲು ಅಸಮರ್ಥನಾಗಿದ್ದರೆ, ಸೆಕ್ಷನ್ 5 (1)ರ ಪ್ರಕಾರ, ಅವರ ಪರವಾಗಿ ಇತರೆ ವ್ಯಕ್ತಿ/ಸಂಸ್ಥೆ ನ್ಯಾಯಾಧಿಕರಣಕ್ಕೆ ಅರ್ಜಿ ಸಲ್ಲಿಸಬಹುದು.

ಕಾಯ್ದೆಯ ಸೆಕ್ಷನ್ 5ರ ಪ್ರಕಾರ, ನ್ಯಾಯಮಂಡಳಿ ಈ ಸಂಬಂಧ ಸ್ವಯಂಪ್ರೇರಿತವಾಗಿಯೂ ಪ್ರಕರಣಗಳ ವಿಚಾರಣೆ ಕೈಗೆತ್ತಿಕೊಳ್ಳಲು ಅವಕಾಶವಿದೆ.

ದಾವಣಗೆರೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿಲ್ಲ ಪ್ರಕರಣ

ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 53 ಉಪವಿಭಾಗಗಳಿವೆ. ಪ್ರತಿ ಉಪವಿಭಾಗದಲ್ಲೂ ಉಪವಿಭಾಗಾಧಿಕಾರಿ (ಎ.ಸಿ) ನ್ಯಾಯಾಲಯಗಳಿವೆ. ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಂಕಿ ಅಂಶಗಳ ಪ್ರಕಾರ ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ 2007ರ ಸೆಕ್ಷನ್ 23ರ ಅಡಿ ಈವರೆಗೆ 3,010 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 2,007 ಪ್ರಕರಣಗಳು ಇತ್ಯರ್ಥವಾಗಿವೆ. ದಾವಣಗೆರೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈವರೆಗೆ ಒಂದೂ ಪ್ರಕರಣ ದಾಖಲಾಗಿಲ್ಲ.

ಬೆಂಗಳೂರಿನಲ್ಲಿ ಹೆಚ್ಚು: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ಮತ್ತು ದಕ್ಷಿಣದಲ್ಲಿ ಉಪವಿಭಾಗಗಳಿದ್ದು, ಎರಡೂ ನ್ಯಾಯಾಲಯಗಳಲ್ಲಿ ಕ್ರಮವಾಗಿ 605 ಮತ್ತು 222 ಪ್ರಕರಣಗಳು ಸೇರಿ 827 ದೂರುಗಳು ದಾಖಲಾಗಿವೆ. ಇದು ರಾಜ್ಯದಲ್ಲೇ ಹೆಚ್ಚು.

ಕಾಯ್ದೆಯ ಸೆಕ್ಷನ್ 23ರಡಿ ಎ.ಸಿ ಕೋರ್ಟ್‌ಗಳಲ್ಲಿ ದಾಖಲಾದ ಪ್ರಕರಣಗಳ ಜಿಲ್ಲಾವಾರು ವಿವರ

ಜಿಲ್ಲೆ	ದಾಖಲಾದ ಪ್ರಕರಣ	ವಿಲೇವಾರಿ	ಬಾಕಿ ಪ್ರಕರಣ
ಕಲಬುರಗಿ	42	30	12
ಬೀದರ್	30	26	4
ಕೊಪ್ಪಳ	17	11	6
ಬಳ್ಳಾರಿ	53	45	8
ರಾಯಚೂರು	126	99	27
ಯಾದಗಿರಿ	11	8	3
ಬೆಂಗಳೂರು ನಗರ	827	274	553
ಬೆಂ. ಗ್ರಾಮಾಂತರ	12	8	4
ಚಿಕ್ಕಬಳ್ಳಾಪುರ	57	17	40
ಚಿತ್ರದುರ್ಗ	40	29	11
ದಾವಣಗೆರೆ	-	-	-
ಕೋಲಾರ	35	22	13
ಶಿವಮೊಗ್ಗ	160	137	23
ತುಮಕೂರು	242	116	126
ರಾಮನಗರ	23	15	8
ಮೈಸೂರು	114	98	16
ಚಾಮರಾಜನಗರ	29	25	4
ಹಾಸನ	588	581	7
ಮಂಡ್ಯ	97	91	6
ಚಿಕ್ಕಮಗಳೂರು	15	14	1
ದಕ್ಷಿಣ ಕನ್ನಡ	143	127	16
ಉಡುಪಿ	62	36	26
ಕೊಡಗು	7	6	1
ಬೆಳಗಾವಿ	75	43	32
ಹಾವೇರಿ	41	38	3
ಧಾರವಾಡ	31	25	6
ಉತ್ತರ ಕನ್ನಡ	-	-	-
ಗದಗ	34	-	34
ವಿಜಯಪುರ	11	10	1
ಬಾಗಲಕೋಟೆ	78	68	10
ವಿಜಯನಗರ	10	8	2

ಮಂಜಾದ ಕಣ್ಣುಗಳಲ್ಲಿ ಬತ್ತಿ ಹೋಗದ ಭರವಸೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಇಲ್ಲಿನ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವ ನಿರ್ಗತಿಕರ ವಾರ್ಡಿಗೆ ಕಾಲಿಟ್ಟರೆ ಸಾಕು; ನೂರಾರು ಜೀವಗಳ ಕಣ್ಣೀರ ಕಥೆಗಳು ಬಿಚ್ಚಿಕೊಳ್ಳುತ್ತವೆ. ಮಕ್ಕಳು, ಪಾಲಕರು, ಬಂಧುಗಳು, ಸ್ನೇಹಿತರು, ಆಸ್ತಿ ಇದ್ದೂ 'ನಿರ್ಗತಿಕ' ಎಂಬ ಹಣೆಪಟ್ಟಿ ಕಟ್ಟಿಕೊಂಡವರು ಇವರು. ವರ್ಷಗಳೇ ಉರುಳಿವೆ. ಇಂದಲ್ಲ ನಾಳೆ ನಮ್ಮವರು ಬರುತ್ತಾರೆ, ಮರಳಿ ಊರಿಗೆ ಕರೆದುಕೊಂಡು ಹೋಗುತ್ತಾರೆ ಎಂದು ಭರವಸೆಯ ಕಣ್ಣುಗಳು ಈಗಲೂ ಕಿಟಕಿಯ ಆಚೆಗೆ ನೋಡುತ್ತಲೇ ಇವೆ.

ಈ ವಾರ್ಡಿನಲ್ಲಿ ಹಣ್ಣು- ಹಣ್ಣಾದ ಹಿರಿಯರಿದ್ದಾರೆ, ಗೃಹಿಣಿಯರಿದ್ದಾರೆ, ಮತಿಭ್ರಮಣೆ ಆದವರಿದ್ದಾರೆ; ತಾನ್ಯಾರು- ಎಲ್ಲಿಯವ ಎಂಬುದರ ಅರಿವಿಲ್ಲದವರೂ ಇದ್ದಾರೆ. ಬದುಕಿನ ಕೊನೆಯ ದಿನಗಳನ್ನು ನೆಮ್ಮದಿಯಿಂದ ಕಳೆಯಬೇಕಿದ್ದ ಅಜ್ಜ- ಅಜ್ಜಿಯರಂತೂ ಮನಲ್ಲಿ ನೋವು ತುಂಬಿಕೊಂಡು ಬದುಕುತ್ತಿದ್ದಾರೆ.

'ಪ್ರಜಾವಾಣಿ' ಪ್ರತಿನಿಧಿ ವಾರ್ಡಿಗೆ ಕಾಲಿಟ್ಟ ತಕ್ಷಣ ಬಹುಪಾಲು ಜನ ಥಟ್ಟೆಂದು ಎದ್ದು ಕುಳಿತರು. ಕಣ್ಣು-ಕಣ್ಣು ಬಿಟ್ಟು ದಿಟ್ಟಿಸಿದರು. ನಮ್ಮವರೇ ಯಾರೋ ಬಂದಿದ್ದಾರೇನೋ ಎಂಬ ಆಸೆಯ ಹೊನಲು ಕಣ್ಣಾಲಿಗಳಲ್ಲಿ ಚಿಮ್ಮಿತು.

'ಇಲ್ಲಿ ಹೀಗೇ ಸರ್. ಯಾರೇ ಬಂದರೂ ನಮ್ಮವರೇ ಬಂದರು ಎಂಬ ಆಸೆಯಿಂದ ನೋಡುತ್ತಾರೆ. ನಿಮ್ಮವರಲ್ಲ ಎಂದು ಹೇಳಿದರೂ ಕೇಳುವುದಿಲ್ಲ. ಖುದ್ದಾಗಿ ನೋಡಿದ ಮೇಲೆಯೇ ನಂಬುತ್ತಾರೆ. ಕೆಲವರು ವರ್ಷ, ಮತ್ತೆ ಕೆಲವರು ಮೂರು ವರ್ಷ, ಐದು ವರ್ಷಗಳಿಂದ ಇಲ್ಲೇ ಇದ್ದಾರೆ. ಆದರೆ, ಭರವಸೆ ಕಮರಿಲ್ಲ' ಎಂದರು ಆಸ್ಪತ್ರೆಯ ಸಿಬ್ಬಂದಿ ವಿಶಾಲ್ ತಾಕಡೆ. ಒಬ್ಬೊಬ್ಬರದೂ ಒಂದೊಂದು ಮನಕಲಕುವ ಕಥೆ. ಕರುಳಬಳ್ಳಿಗಳೇ ಕನಿಷ್ಠ ಕಕ್ಕುಲಾತಿ ಇಲ್ಲದೇ ಇಲ್ಲಿ ಬಿಟ್ಟು ಹೋದ ಕಥೆಗಳನ್ನು ಹೇಳಿದರು.

'ನಾನಿಲ್ಲಿ ಇರುವುದು ನನ್ನ ಮಗನಿಗೆ ಗೊತ್ತೇ ಇಲ್ಲ. ಗೊತ್ತಿದ್ದರೆ ಓಡಿ ಬರುತ್ತಿದ್ದ. ಮಗನಿಗೆ ಸುದ್ದಿ ಮುಟ್ಟಿಸಿ' ಎಂದು ಕೈ ಮುಗಿಯುವ ಗದಗ ಜಿಲ್ಲೆಯ ಹುಲಕೋಟಿಯ ಪರಶುರಾಮ ಲಕ್ಷ್ಮಣಸಾ ಹಬೀಬ್ ಅವರನ್ನು ಅವರ ಮಗನೇ ಇಲ್ಲಿ ಬಿಟ್ಟುಹೋಗಿದ್ದಾನೆ!

152 ಜನರ ಸ್ಥಳಾಂತರ: 'ಎರಡು ವರ್ಷಗಳಲ್ಲಿ ದಾಖಲಾಗಿದ್ದ 152 ನಿರ್ಗತಿಕರಿಗೆ ಚಿಕಿತ್ಸೆ ನೀಡಿ ಗುಣಮುಖಗೊಳಿಸಿದ್ದೇವೆ. ಈ ಪೈಕಿ ಶೇ 60ರಷ್ಟು ಹಿರಿಯ ನಾಗರಿಕರೇ ಇದ್ದಾರೆ. ಸುರಕ್ಷಿತವಾಗಿ ಮನೆ ಮತ್ತು ವೃದ್ಧಾಶ್ರಮಗಳಿಗೆ ಅವರನ್ನು ತಲುಪಿಸಿದ್ದೇವೆ. ಆದರೆ, ಬಹಳಷ್ಟು ಜನರನ್ನು ಅವರ ಮಕ್ಕಳು ಕರೆದುಕೊಂಡು ಹೋಗಲು ಬಂದಿಲ್ಲ. ನಾವಾಗಿಯೇ ವಿಳಾಸ ಹುಡುಕಿ ಹೇಳಿದ್ದೇವೆ. ಮೊಬೈಲ್ ಕರೆ ಮಾಡಿ ತಿಳಿಸಿದ್ದೇವೆ. ನಮಗೆ ಏನೂ ಸಂಬಂಧ ಇಲ್ಲ ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಮೊಬೈಲ್ ಅನ್ನೇ ಸ್ವಿಚ್‌ಆಫ್ ಮಾಡಿಕೊಳ್ಳುತ್ತಾರೆ' ಎಂದು ಜಿಲ್ಲಾಸ್ಪತ್ರೆಯ ಸ್ಥಳೀಯ ವೈದ್ಯಾಧಿಕಾರಿ ಡಾ.ಸರೋಜಾ ತಿಗಡಿ ಹೇಳಿದರು.

ಬೆಳಗಾವಿ ಜಿಲ್ಲಾ ಆಸ್ಪತ್ರೆಯ ನಿರ್ಗತಿಕರ ವಾರ್ಡಿನಲ್ಲಿ ಆಶ್ರಯ ಪಡೆದ, ಗದಗ ಜಿಲ್ಲೆಯ ಹುಲಕೋಟಿಯ ಪರಶುರಾಮ ಲಕ್ಷ್ಮಣಸಾ ಹಬೀಬ್ ಪ್ರಜಾವಾಣಿ ಚಿತ್ರ

'ರೈಲು ನಿಲ್ದಾಣ, ಬಸ್ ನಿಲ್ದಾಣ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಬಿದ್ದವರನ್ನು ಪೊಲೀಸರು, ಸಾಮಾಜಿಕ ಕಾರ್ಯಕರ್ತರು ಮತ್ತು ಸಾರ್ವಜನಿಕರು ಆಸ್ಪತ್ರೆಗೆ ಕರೆತಂದು ದಾಖಲಿಸುತ್ತಾರೆ. ಕೆಲ ಕುಟುಂಬಸ್ಥರೇ ಆಸ್ಪತ್ರೆಗೆ ಬಂದು ಬಿಟ್ಟು ಹೋಗುತ್ತಾರೆ. ಅಂಥವರಿಗೆ ಚಿಕಿತ್ಸೆ ನೀಡಿದ ನಂತರ, ಕುಟುಂಬಸ್ಥರನ್ನು ಸಂಪರ್ಕಿಸಿ ಕಳುಹಿಸುತ್ತೇವೆ. ಯಾರೂ ಬಾರದಿದ್ದರೆ ವೃದ್ಧಾಶ್ರಮಕ್ಕೆ ಸೇರಿಸುತ್ತೇವೆ' ಎಂದರು.

'60ಕ್ಕೂ ಅಧಿಕ ರೋಗಿಗಳನ್ನು ಅವರ ಮಕ್ಕಳು ಮತ್ತು ಕುಟುಂಬದವರೇ ಇಲ್ಲಿಗೆ ಕರೆತಂದು ಬಿಟ್ಟುಹೋಗಿರುವುದು ಗಮನಕ್ಕೆ ಬಂದಿದೆ. ಕುಟುಂಬದವರನ್ನು ಸಂಪರ್ಕಿಸಿದರೂ ಬಾರದ್ದರಿಂದ ಬೆಳಗಾವಿ, ಬೈಲಹೊಂಗಲ ಮತ್ತು ಗದುಗಿನ ವೃದ್ಧಾಶ್ರಮಗಳಿಗೆ ಸೇರಿಸಿದ್ದೇವೆ' ಎಂದರು.

ಮತಿಭ್ರಮಣೆಯಿಂದ ಬಂದವರು, ವಯೋಸಹಜ ಮರೆವಿನಿಂದ ದಾಖಲಾದವರೂ ಇದ್ದಾರೆ. ಗುಣಮುಖರಾದ ಬಳಿಕ ಯಾರೂ ಕರೆದುಕೊಂಡು ಹೋಗಿಲ್ಲ. ಕೆಲವೊಮ್ಮೆ ವೃದ್ಧಾಶ್ರಮದವರೂ ಕರೆದೊಯ್ಯುವುದಿಲ್ಲ. ಹಲವು ರೀತಿಯ ತಕರಾರು ತೆಗೆಯುತ್ತಾರೆ. ಇಂಥ 27 ಜನ ಇನ್ನೂ ಈ ವಾರ್ಡಿನಲ್ಲಿದ್ದಾರೆ ಎನ್ನುತ್ತಾರೆ ಸಿಬ್ಬಂದಿ.

ಇಲ್ಲಿರುವ ನಿರ್ಗತಿಕ ವೃದ್ಧಜೀವಗಳಿಗೆ ವಿಶಾಲ್ ತಾಕಡೆ, ದುರ್ಗವ್ವ ಹಂಡೋರಿ ಹಾಗೂ ಸಿಬ್ಬಂದಿಯೇ ತಂದೆ-ತಾಯಿ-ಮಕ್ಕಳು ಎಲ್ಲವೂ ಆಗಿದ್ದಾರೆ.

ಪೂರಕ ಮಾಹಿತಿ: ಪ್ರಮೋದ ಕುಲಕರ್ಣಿ

ಮಗನ ನಿರೀಕ್ಷೆಯಲ್ಲಿ...

ಮಹಾರಾಷ್ಟ್ರದ ಹಲಕರ್ಣಿ ಎಂಬ ಊರಿನ ಪಾರ್ವತಿ (70 ವರ್ಷ) ಎಂಬ ಅಜ್ಜಿ ಈ ವಾರ್ಡ್‌ನಲ್ಲಿದ್ದಾರೆ. ಮಕ್ಕಳು ಅವರನ್ನು ಮನೆಯಿಂದ ಕರೆತಂದು ಬಿಟ್ಟುಹೋದವರು ಮರಳಿ ಬಂದಿಲ್ಲ. ಪೊಲೀಸರ ಪ್ರಯತ್ನದ ಬಳಿಕ ಅವರ ಮಗ ಒಮ್ಮೆ ಬಂದು ನೋಡಿಕೊಂಡು ಹೋದ. 'ಮನೆಯಲ್ಲಿ ಮದುವೆ ಕಾರ್ಯವಿದೆ. ಈಕೆಗೆ ಹುಚ್ಚು ಹಿಡಿದಿದ್ದು ಗೊತ್ತಾದರೆ ಮದುವೆ ನಿಂತು ಹೋಗುತ್ತದೆ. ಮದುವೆ ನಂತರ ಕರೆದುಕೊಂಡು ಹೋಗುತ್ತೇನೆ' ಎಂದು ಹೇಳಿ ಹೋದ.

ಮಗ ಹೋಗುವಾಗ ತಾಯಿ ದೈನೇಸಿಯಿಂದ 'ಟಾಟಾ' ಮಾಡಿದ್ದಳು. ನಂತರ ಮೊಬೈಲ್ ನಂಬರ್ ಬದಲಾಯಿಸಿಕೊಂಡ ಮಗ ಇನ್ನೂ ಬಂದೇ ಇಲ್ಲ. ಈಗಲೂ ಆ ಹಿರಿಯ ಜೀವ ಮಗ ಬಿಟ್ಟುಹೋದ ವಾರ್ಡಿನ ಬಾಗಿಲು ಬಳಿಯೇ ನಿಂತು ಕಾಯುತ್ತಿದೆ.

7 ತಿಂಗಳಿಂದ ಆಸ್ಪತ್ರೆಯಲ್ಲಿ...

ಬಿ.ರಾಮಾಂಜನೇಯಲು ಎಂಬ 72 ವರ್ಷದ ವೃದ್ಧರನ್ನು ಕೊಪ್ಪಳದ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಯೇ ಏಳು ತಿಂಗಳಿಂದ ಆರೈಕೆ ಮಾಡುತ್ತಿದ್ದಾರೆ.

ಅವರು ಕಳೆದ ವರ್ಷದ ಜುಲೈನಲ್ಲಿ ಚಿಕಿತ್ಸೆಗೆಂದು ಬಂದಿದ್ದರು. ಆಗಾಗ, ಆಸ್ಪತ್ರೆಯಿಂದ ಒಬ್ಬರೇ ಹೋಗಿ ಬಂದು, ಹೋಗಿ ಬಂದು ಮಾಡುತ್ತಿದ್ದಾರೆ. ಫೆಬ್ರುವರಿ 14ರಂದು ಮರಳಿ ಬಂದವರು ಈಗಲೂ ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಆಗಾಗ ಎದೆನೋವು ಕಾಣಿಸಿಕೊಳ್ಳುತ್ತದೆ. ವಿಪರೀತ ಮಂಡಿ ನೋವಿರುವ ಕಾರಣ ಒಬ್ಬರೇ ಓಡಾಡುವ ಸ್ಥಿತಿಯಲ್ಲಿಲ್ಲ. ಅವರೇ ಹೇಳುವ ಪ್ರಕಾರ ಪತ್ನಿ ತೀರಿಕೊಂಡಿದ್ದು, ಇಬ್ಬರು ಮಕ್ಕಳಿದ್ದಾರೆ.

'ಐವರು ಸಹೋದರರಲ್ಲಿ ಒಬ್ಬ ನನ್ನ ಎರಡು ಮನೆಗಳನ್ನು ಕಿತ್ತುಕೊಂಡಿದ್ದಾನೆ. ನನ್ನ ಕುಟುಂಬದವರಿಂದಲೇ ವಂಚನೆಯಾಗಿದೆ. ಇರುವ ಆಸ್ತಿ ಕಸಿದುಕೊಂಡಿದ್ದರಿಂದ ಅನಾಥನಂತೆ ಆಸ್ಪತ್ರೆಯಲ್ಲಿ ಬದುಕುವಂತಾಗಿದೆ. ಮಕ್ಕಳು ಕೂಡ ಹತ್ತಿರ ಬರುತ್ತಿಲ್ಲ. ಅವರಿಗೆಲ್ಲ ಶಿಕ್ಷೆ ಕೊಡಿಸಿ' ಎಂದು ರಾಮಾಂಜನೇಯಲು ಕೈ ಮುಗಿದು ಕೇಳಿಕೊಂಡರು.

ಜೀವನಾಂಶ ನೀಡಲು ಹೇಳಿದ್ದ ಹೈಕೋರ್ಟ್

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ 85 ವರ್ಷ ವಯಸ್ಸಿನ ಅಪ್ಪರಂಡ ಶಾಂತಿ ಬೋಪಣ್ಣ ಎಂಬುವವರ ಪ್ರಕರಣದಲ್ಲಿ ವೃದ್ಧ ತಾಯಿಗೆ ವಾರ್ಷಿಕ ₹7 ಲಕ್ಷ ಜೀವನಾಂಶ ನೀಡಲು ಮುಖ್ಯನ್ಯಾಯಮೂರ್ತಿ ನೇತೃತ್ವದ ಹೈಕೋರ್ಟ್‌ನ ವಿಭಾಗೀಯ ಪೀಠವು ಮಗ ಮತ್ತು ಮೊಮ್ಮಗಳಿಗೆ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಆದೇಶಿಸಿತ್ತು.

ಶಾಂತಿ ಬೋಪಣ್ಣ ಅವರು ತಮ್ಮ 22 ಎಕರೆ ಕಾಫಿ ಎಸ್ಟೇಟ್ ಅನ್ನು ಮಗ ಗಣಪತಿ ಹಾಗೂ ಮೊಮ್ಮಗಳು ಸಂಜನಾ ಅವರಿಗೆ 2016ರಲ್ಲಿ 'ದಾನಪತ್ರ'ದ ಮೂಲಕ ನೀಡಿದ್ದರು. ಈ ವೇಳೆ ಶಾಂತಿ ಬೋಪಣ್ಣ ಅವರ ಜೀವನ ನಿರ್ವಹಣೆಗೆ ವಾರ್ಷಿಕ ತಲಾ ₹7 ಲಕ್ಷ ಮೊತ್ತವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸುವುದಾಗಿ ಮಗ ಮತ್ತು ಮೊಮ್ಮಗಳು ಭರವಸೆ ನೀಡಿದ್ದರು. 2016ರಿಂದ 2019ರವರೆಗೆ ಹಣ ಪಾವತಿಸಿದ್ದರು. ನಂತರ ನೀಡಿರಲಿಲ್ಲ. ಇದರ ನಡುವೆ ಮಗ ಮತ್ತು ಮೊಮ್ಮಗಳು ಆಸ್ತಿ ಮಾರಾಟಕ್ಕೆ ಯತ್ನಿಸಿದ್ದರು. ಹೀಗಾಗಿ, 'ದಾನಪತ್ರ ರದ್ದುಪಡಿಸಬೇಕು' ಎಂದು ಕೋರಿ ಶಾಂತಿ ಅವರು ಮಡಿಕೇರಿಯ ಉಪವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಉಪವಿಭಾಗಾಧಿಕಾರಿ ಅವರು ದಾನಪತ್ರ ರದ್ದುಗೊಳಿಸಿ ಆದೇಶಿಸಿದ್ದರು. ಇದನ್ನು ಇಬ್ಬರೂ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. 2023ರ ಮಾರ್ಚ್‌ನಲ್ಲಿ ಜಿಲ್ಲಾಧಿಕಾರಿ ಅವರು ಮಗ ಹಾಗೂ ಮೊಮ್ಮಗಳ ಆಸ್ತಿ ಹಕ್ಕನ್ನು ಮರು ಸ್ಥಾಪಿಸಿದ್ದರಲ್ಲದೆ, ತಾಯಿಯ ಜೀವಿತಾವಧಿವರೆಗೆ ವಾರ್ಷಿಕ ಜೀವನಾಂಶ ಪಾವತಿಸಬೇಕು ಎಂದು ನಿರ್ದೇಶಿಸಿದ್ದರು.

ಈ ಆದೇಶವನ್ನು ಪ್ರಶ್ನಿಸಿ ಶಾಂತಿ ಬೋಪಣ್ಣ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 2023ರ ಡಿಸೆಂಬರ್ 20ರಂದು ಅಂತಿಮ ಆದೇಶ ಹೊರಡಿಸಿ 'ತಲಾ ₹7 ಲಕ್ಷ ಪಾವತಿಸಿ' ಎಂದು ಮಗ ಮತ್ತು ಮೊಮ್ಮಗಳಿಗೆ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಗ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ವಿಭಾಗೀಯ ನ್ಯಾಯಪೀಠವು ಏಕ ಸದಸ್ಯ ನ್ಯಾಯಪೀಠದ ಆದೇಶ ಎತ್ತಿ ಹಿಡಿದಿತ್ತು.

ಎಲ್ಲ ಕ್ಷೇತ್ರಗಳಲ್ಲೂ ಸುಧಾರಣೆಯಾಗಬೇಕು

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

155

ಥಾಮಸ್ ಜಫರ್‌ಸನ್ ಅಂತ ಒಬ್ಬರು ಅಮೆರಿಕದ ಅಧ್ಯಕ್ಷರಿದ್ದರು. ಅವರು ಮಾರುವೇಷದಲ್ಲಿ ತಿರುಗಾಡಿ ಜನರ ಸ್ಥಿತಿಗತಿ ತಿಳಿದುಕೊಳ್ಳುತ್ತಿದ್ದರಂತೆ. ಒಂದು ದಿನ ಸಾಮಾನ್ಯ ರೈತನಂತೆ ಪಂಚತಾರಾ ಹೋಟೆಲ್‌ಗೆ ಹೋದರಂತೆ. ಆಗ ಅವರನ್ನು ಹೊರಗೆ ಹಾಕಲಾಯಿತು. ಸ್ವಲ್ಪ ಹೊತ್ತಿನ ನಂತರ ಹೋಟೆಲ್ ಮಾಲೀಕನಿಗೆ ಬಂದವರು ಅಮೆರಿಕದ ಅಧ್ಯಕ್ಷರು ಎಂದು ಗೊತ್ತಾಗಿ ಅವರ ಕ್ಷಮೆ ಕೇಳಿದ. 'ನಿಮ್ಮ ಹೋಟೆಲ್ ನಲ್ಲಿ ನನಗೆ ಯಾಕೆ ಜಾಗ ಕೊಡಲಿಲ್ಲ' ಎಂದು ಕೇಳಿದರು ಜಫರ್‌ಸನ್. 'ಇಲ್ಲ ನಮ್ಮ ಕೆಲಸಗಾರರು ನಿಮ್ಮನ್ನು ಹಳ್ಳಿ ಮನುಷ್ಯ, ರೈತ ಎಂದು ತಿಳಿದುಕೊಂಡಿದ್ದಾರೆ' ಎಂದರಂತೆ. ಅದಕ್ಕೆ ಜಫರ್‌ಸನ್ 'ಯಾವ ದೇಶದ ಪಂಚತಾರಾ ಹೋಟೆಲ್‌ಗಳಲ್ಲಿ ಆ ದೇಶದ ರೈತ, ಅನ್ನದಾತನಿಗೆ ಪ್ರವೇಶ ಇಲ್ಲ ಎಂದರೆ ಆ ದೇಶದ ಅಧ್ಯಕ್ಷನಿಗೂ ಅದರೊಳಗೆ ಹೋಗುವ ಯೋಗ್ಯತೆ ಇಲ್ಲ' ಎಂದು ಹೇಳಿದರಂತೆ.

ನಮ್ಮ ದೇಶದ ರೈತರು ಪಂಚತಾರಾ ಹೋಟೆಲ್ ಪ್ರವೇಶ ಕೇಳಿಲ್ಲ. ಅವರು ಕೇಳಿದ್ದು ಇಷ್ಟೆ. ಬಿತ್ತಲು ಒಂದಿಷ್ಟು ಬೀಜ, ಹೊಲಕ್ಕೆ ವಿದ್ಯುತ್, ನೀರು. ನಮ್ಮ ರೈತರಿಗೆ ಜನನಾಯಕರು ಬೇಕಾಗಿಲ್ಲ. ಹೊಲಕ್ಕೆ ನೀರು ಕೊಡುವ ಜಲ ನಾಯಕರು ಬೇಕು. ನಮ್ಮ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಇಲ್ಲ. ಅವರಿಗೂ ಬೆಂಬಲ ಇಲ್ಲ. ಜನನಾಯಕ ಮುಂದಿನ ಚುನಾವಣೆ ಬಗ್ಗೆ ಯೋಚಿಸುವುದಲ್ಲ. ಮುಂದಿನ ಜನಾಂಗದ ಬಗ್ಗೆ ಯೋಚಿಸಬೇಕು. ಯಾರು ಚುನಾವಣೆ ಬಗ್ಗೆ ಯೋಚಿಸುತ್ತಾರೋ ಅವರು ಜನಪ್ರತಿನಿಧಿಯಾಗುತ್ತಾರೆ. ಮುಂದಿನ ಜನಾಂಗದ ಬಗ್ಗೆ ಯೋಚಿಸುವವರು ಜನರ ಮನದ ಪ್ರತಿನಿಧಿಯಾಗುತ್ತಾರೆ.

ಶಿಕ್ಷಣ ಕ್ಷೇತ್ರವೂ ಹಾಗೆಯೆ. ಒಂದು ಶಾಲೆ ಇತ್ತು. ಆ ಶಾಲೆಯಲ್ಲಿ ಒಬ್ಬ ಹುಡುಗನ ವಾಚು ಕಳೆದು ಹೋಯಿತು. ಅದನ್ನು ತಿಳಿದ ಶಿಕ್ಷಕರು ಎಲ್ಲ ಮಕ್ಕಳನ್ನೂ ಕರೆಸಿದರು. ಎಲ್ಲರೂ ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳಿ ಎಂದರು. ಬಟ್ಟೆ ಕಟ್ಟಿಕೊಂಡ ನಂತರ ಶಿಕ್ಷರು ತಪಾಸಣೆ ನಡೆಸಿದಾಗ ಒಬ್ಬನ ಜೇಬಿನಲ್ಲಿ ವಾಚು ಸಿಕ್ಕಿತು. ಅದನ್ನು ಕಳೆದುಕೊಂಡವನಿಗೆ ನೀಡಿದರು. ಕದ್ದ ಹುಡುಗನಿಗೆ ಭಯ. ಈಗ ಶಿಕ್ಷಕರು ತನಗೆ ಹೊಡೆಯುತ್ತಾರೆ ಎಂದು. ಆದರೆ ಶಿಕ್ಷಕರು ಏನೂ ಮಾಡಲಿಲ್ಲ. ಪ್ರಾರ್ಥನೆ ಸಂದರ್ಭದಲ್ಲಿಯೂ ಹೇಳಲಿಲ್ಲ. ಪಾಲಕರನ್ನು ಕರೆಸಿಯೂ ಹೇಳಲಿಲ್ಲ. ನಂತರ ಹುಡುಗ ದೊಡ್ಡವನಾದ ಮೇಲೆ ದೊಡ್ಡ ವ್ಯಾಪಾರಸ್ಥ ಆದ. ಒಂದಿನ ಶಿಕ್ಷಕರ ಮನೆಗೆ ಹೋಗಿ ಅವರಿಗೆ ವಂದಿಸಿ 'ನನ್ನ ಗುರುತು ಸಿಕ್ಕಿತೇನು?' ಎಂದು ಕೇಳಿದ. 'ಇಲ್ಲ' ಎಂದರು ಶಿಕ್ಷಕರು. 'ನಾನು ಸರ್ ನಿಮ್ಮ ಕ್ಲಾಸ್‌ನಲ್ಲಿ ಸಹಪಾಠಿಯೊಬ್ಬನ ವಾಚ್ ಕಳವು ಮಾಡಿದ್ದೆ. ನೀವೇ ಚೆಕ್ ಮಾಡಿ ವಾಚು ವಾಪಸು ಕೊಡಿಸಿದ್ದಿರಿ. ನಾನು ಅದೇ ಹುಡುಗ' ಎಂದ. 'ಇಲ್ಲಪ ನನಗೆ ನಿನ್ನ ಗೊತ್ತಿಲ್ಲ' ಎಂದರು ಶಿಕ್ಷಕರು. 'ನೀವೇ ಚೆಕ್ ಮಾಡಿ ಕಳ್ಳನನ್ನು ಹಿಡಿದಿದ್ದರೂ ನಿಮಗೆ ಕಳ್ಳ ಯಾರು ಅಂತ ಗೊತ್ತಾಗಲಿಲ್ಲವಾ?' ಎಂದು ಕೇಳಿದ ಹುಡುಗ. 'ಇಲ್ಲಪ, ನಿಮಗೆಲ್ಲ ಕಣ್ಣಿಗೆ ಬಟ್ಟೆ ಕಟ್ಟಿದ ಹಾಗೇ ನಾನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದೆ. ನನ್ನ ಶಿಷ್ಯರಲ್ಲಿ ಯಾರನ್ನೂ ಕಳ್ಳ, ಸುಳ್ಳ ಎಂದು ಗುರುತಿಸುವುದು ನನಗೂ ಬೇಕಿರಲಿಲ್ಲ' ಎಂದರು. ಅದು ಆಗಿನ ಕಾಲದ ಶಿಕ್ಷಕರು ಬದುಕಿದ ರೀತಿ. ಇದನ್ನು ಕಲಿಯಬೇಕು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 19, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಪಂಚಮಿ ಗಂ. 24-38 ನಕ್ಷತ್ರ: ವಿಶಾಖ ಗಂ. 20-50 ಯೋಗ: ಹರ್ಷಣ ಗಂ. 17-38 ಕರಣ: ಕೌಲವ ಗಂ. 11-25, ಮೀನ ಮಾಸದ 05 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ1.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 06-38 ಸೂರ್ಯಾಸ್ತ : 06-38

ಮುಸ್ಲಿಂ ದಿನಾಂಕ: 18 ರಂಜಾನ್

ದಿನ ವಿಶೇಷ: ರಂಗ ಪಂಚಮಿ, ಅದೃಷ್ಟ ಸಂಖ್ಯೆ : 10, 3

ಮೇಷ: ಮುಖ್ಯ ಮತ್ತು ಮಹತ್ವದ್ದೆನಿಸಿದ ಕೆಲಸಗಳ ಬಗ್ಗೆ ದೀರ್ಘ ಸಮಾಲೋಚನೆ ನಡೆಯಲಿದೆ. ಹೊಸ ಪುಸ್ತಕಗಳ ಪ್ರಕಾಶನ ಮಾಡುವವರಿಗೆ ಶುಭದಿನ. ದೇಹದಲ್ಲಿ ಉಂಟಾಗಿದ್ದಂಥ ಪಿತ್ತ, ಉಷ್ಣಪ್ರಕೋಪ ದೂರಾಗುವವು.

ವೃಷಭ: ಖಾಸಗಿ ಬದುಕಿನಲ್ಲಿ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹುರುಪು ಮೂಡಲಿದೆ. ವರ್ಗಾವಣೆಯಿಂದಾಗಿ ಸಂಸಾರದಿಂದ ದೂರ ವಾಸಿಸುವ ಸಂದರ್ಭ ಬರಲಿದೆ. ರಾಜಕೀಯರಂಗದಲ್ಲಿ ಜನಪ್ರಿಯತೆ ಸಿಗಲಿದೆ.

ಮಿಥುನ: ವಿವಾಹ ಯೋಗ್ಯ ವಯಸ್ಕರು ಕನಸಿನ ಜೀವನ ಸಂಗಾತಿಯ ಬಗ್ಗೆ ಇರುವ ನಿರೀಕ್ಷೆಗಳನ್ನು ಸ್ವಲ್ಪ ಕಡಿಮೆಗೊಳಿಸಿಕೊಳ್ಳುವುದು ಒಳ್ಳೆಯದು. ಪ್ರಯತ್ನಿಸಿದ ಕಾರ್ಯಗಳು ಸಕಾಲಿಕ ನೆರವಿನಿಂದ ಕೈಗೂಡುವುದು.

ಕರ್ಕಾಟಕ: ಸಿಹಿ-ತಿಂಡಿಗಳ ತಯಾರಕರು ಹಾಗೂ ಮಾರಾಟಗಾರರು ಲಾಭ ಎದುರು ನೋಡಬಹುದು. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸಬೇಕಾಗುವುದು. ಜನಬಲದ ಕೊರತೆಯು ಯಶಸ್ಸಿಗೆ ಅಡ್ಡಿಯನ್ನು ಉಂಟುಮಾಡಲಿದೆ.

ಸಿಂಹ: ವಾಗ್ವಾದದಲ್ಲಿ ಮೀರಿಸುವವರೇ ಇಲ್ಲ. ಹಾಗೆಯೇ ನಿಮ್ಮ ಅಭಿಪ್ರಾಯಗಳು ಬೇರೆಯವರ ಆಲೋಚನಾ ಮನಸ್ಥಿತಿಗೆ ಹೊಂದಿಕೆಯಾಗುವುದು. ಮೊದಲ ಆದ್ಯತೆ ಕೆಲಸಗಳ ಬಗೆಗೆ ಮಾತ್ರ ಇರಲಿ.

ಕನ್ಯಾ: ಕುಟುಂಬದ ಸಮಸ್ಯೆಯನ್ನು ಸಮಾಧಾನವಾಗಿ ಯೋಚಿಸಿ ತೀರ್ಮಾನಿಸುವುದರಿಂದ ಸಂಬಂಧಗಳಿಗೆ ಧಕ್ಕೆ ಉಂಟಾಗುವುದಿಲ್ಲ. ಅಗ್ನಿ ಅವಘಡ ಸಂಭವಿಸಬಹುದು ಎಚ್ಚರವಹಿಸಿ. ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಸಿ.

ತುಲಾ: ಸಾಮಾಜಿಕ ಸ್ಥಾನಮಾನ ಹೆಚ್ಚಿಸಿಕೊಳ್ಳುವ ಪ್ರಯತ್ನ ಸಾರ್ಥಕವಾಗುತ್ತದೆ. ಮಂಗಳಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತವೆ. ದುಡಿಮೆ ಸಾರ್ಥಕವಾಗುವ ಕೆಲಸವನ್ನು ಮಾಡಿ.

ವೃಶ್ಚಿಕ: ಅನವಶ್ಯಕ ವಿವಾದಗಳಿಂದ ದೂರ ಉಳಿದು ಕೆಲಸಗಳನ್ನು ತ್ವರಿತವಾಗಿ ಪೂರ್ತಿ ಮಾಡುವಿರಿ. ಕರ್ತವ್ಯ ನಿಷ್ಠೆಯಿಂದ ಉತ್ತಮ ಹೆಸರು ಸಂಪಾದನೆಯಾಗುವುದು. ಸಣ್ಣ ಗುಡಿಕೈಗಾರಿಕೆಯವರಿಗೆ ಉತ್ತಮ ವೇದಿಕೆ ದೊರೆಯುವುದು.

ಧನು: ಹೊಸದಾಗಿ ಕಾರ್ಯ ಶುರುಮಾಡುವ ಮೊದಲು ಹಿರಿಯರಿಂದ ಉತ್ತಮ ದಿನ ತಿಳಿದುಕೊಂಡು ಅವರ ಆಶೀರ್ವಾದದಿಂದ ಶುರುಮಾಡಿ. ಮುದ್ರಣ ವೃತ್ತಿಯವರಿಗೆ ಉತ್ತಮ ಬೇಡಿಕೆ ಪ್ರಾಪ್ತಿ.

ಮಕರ: ಮಧ್ಯಮವರ್ಗದ ಜನರಿಗೆ ವಿವಿಧ ಕೆಲಸಗಳಿಗೆ ಹಣ ಹೊಂದಿಸುವ ಚಿಂತೆಯಾಗಲಿದೆ. ರಾಸಾಯನಿಕ ವಸ್ತುಗಳಲ್ಲಿ ಕೆಲಸ ಮಾಡುವವರು ಜಾಗ್ರತರಾಗಿರಿ. ಮಕ್ಕಳ ವಿದ್ಯಾಭ್ಯಾಸವು ನಿರಾತಂಕವಾಗಿ ಸಾಗುವುದು.

ಕುಂಭ: ಚರ್ಮದ ಆಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ಲಾಭದ ದಿನ. ಮಕ್ಕಳ ಬಗ್ಗೆ ಅತಿಯಾಗಿ ಚಿಂತೆ ಮಾಡುವುದನ್ನು ಕಡಿಮೆ ಮಾಡಿ. ಪತ್ರಕರ್ತರಿಗೆ ರಹಸ್ಯ ವಿಷಯ ತಿಳಿಯುವುದು.

ಮೀನ: ಉತ್ಸವಾದಿ ಬೃಹತ್ ಕಾರ್ಯಕ್ರಮದ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿ ಇರುವುದು ಆಯಾಸಕ್ಕೆ ಕಾರಣವಾಗಿದೆ. ಮನೋಭಿಲಾಷೆ ಪೂರೈಸಿಕೊಳ್ಳಲು ವಾಮಮಾರ್ಗ ಸರಿಯಲ್ಲ.

ಪದಬಂಧ 5986

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪಚನಾಂಗ ಇಲ್ಲಿದೆ (3)
6.ವಿರಳವಾಗಿ ಬಂದಿರುವ ಜನ್ಮ (3)
7.ಈತ ಸೋದರಮಾವ (3)
9.ವಿಜ್ಞಾನ ದಲ್ಲಿರುವ ಅರಿವು (2)
10.ಚಿಕ್ಕದಾಗಿ ಬಂದಿರುವ ಗಣಪತಿ (3)
11.ತೂರಾಡಿದಾಗ ಸಿಡಿದ ಕೆಸರು (2)
16.ಉಲ್ಟಾ ಕಾಣುತ್ತಿರುವ ನಮ್ಮ ದೇಶ (3)
17.ಕರುಣೆಯನ್ನು ಹೀಗೆನ್ನಿ (3)
18.ಕೊನೆಗೆ ಯೋಗ ಬಂದಾಗ ಅಗಲುವಿಕೆ (3)

ಮೇಲಿಂದ ಕೆಳಕ್ಕೆ

1.ಒಂದು ದೇಶಕ್ಕೆ ಅಥವಾ ಪಂಗಡಕ್ಕೆ ಸೇರಿದ ಜನತೆ (3)
2.ಅಗಸ ಇಲ್ಲಿದ್ದಾನೆ (3)
3.ಮನವನ್ನು ಸೆಳೆದಿರುವ ಲಕ್ಷ್ಯ (3)
4.ತಪ್ಪನ್ನು ಕ್ಷಮಿಸುವುದು (4)
5.ಹೋಲಿಸುವುದನ್ನು ಹೀಗೆನ್ನಿ (3)
8.ಗಡಿಯ ಕೊನೆಗಿರುವುದು ಪದಾರ್ಥಗಳನ್ನು ಮಾರುವ ಸ್ಥಳ (3)
9.ಪಕ ಪಕನೆ ನಕ್ಕಾಗ ಬಂದಿರುವ ನೆನಪು (3)
11.ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
12.ಆತಂಕ ಹುಟ್ಟಿಸಿದ ಯಮ (3)
13.ಆಮೇಲೂ ಇಳಿಯದ ಮತ್ತು (3)
14.ಈತ ಕೆಟ್ಟ ಕವಿ (3)
15.ಪ್ರೀತಿಪಾತ್ರನಾದವನು ಇಲ್ಲಿದ್ದಾನೆ (3)



5985ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾಕ್ರಮ 3.ಹುಸಿನಗು
5.ನೆನಪು 6.ನಿಕ್ಷೇಪ
8.ಕುಶಲ 9.ಅಹಿತ
10.ರಥಿಕ 12.ವರ್ಜನ
14.ನಿಷ್ಕರುಣ 15.ದುರಾಚಾರ

ಮೇಲಿಂದ ಕೆಳಕ್ಕೆ:
1.ಪಯಸ್ವಿನಿ 2.ಮದ್ದಾನೆ
3.ಹುರುಪು 4.ಗುರುಕುಲ
7.ಪತಿತ 8.ಕುಬೇರ
9.ಅವಧಾನಿ 11.ಕಳೆವರ
12.ವರುಣ 13.ನಗದು

ಸುಡೊಕು 6371

2		6					5	
	4	7	5		6	3		2
3	8			2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6370 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಷೇರುಪೇಟೆ ವಹಿವಾಟು

1131



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,508
ಇಂದಿನ ಅಂತ್ಯ	22,834
▲	325
ದಿನದ ಗರಿಷ್ಠ	22,857

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹465
12 ಕ್ಕೆ	₹63
ಮೈಸೂರು	
100ಕ್ಕೆ	₹465

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹242-648
ದ್ವಿತಳಿ (ಬಿ.ವಿ)	₹377-890

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹26250
ಎಸಿ	₹15820
ಆರ್‌ಪಿ	₹22500
ಆರ್‌ಸಿ	₹12420

ಅದಾನಿ ವಿರುದ್ಧದ ಅರ್ಜಿ ಹಿಂದಕ್ಕೆ

ಕೊಲಂಬೊ (ಪಿಟಿಐ): ಅದಾನಿ ಗ್ರೀನ್ ಎನರ್ಜಿ ಕಂಪನಿಯ ಯೋಜನೆಗಳ ವಿರುದ್ಧ ಶ್ರೀಲಂಕಾದಲ್ಲಿ ಮೂಲಭೂತ ಹಕ್ಕುಗಳ ಉಲ್ಲಂಘನೆ ಆರೋಪದ ಅಡಿ ಸಲ್ಲಿಸಲಾಗಿದ್ದ ಐದು ಅರ್ಜಿಗಳನ್ನು ಹಿಂಪಡೆಯಲಾಗಿದೆ.

ಪವನ ವಿದ್ಯುತ್ ಯೋಜನೆಗಳನ್ನು ರದ್ದುಪಡಿಸಲು ತೀರ್ಮಾನಿಸಿದ್ದರ ಬಗ್ಗೆ ಕಂಪನಿಯು ಶ್ರೀಲಂಕಾದ ಹೂಡಿಕೆ ಮಂಡಳಿಗೆ ಮಾಹಿತಿ ನೀಡಿರುವ ಬಗ್ಗೆ ಅಟಾರ್ನಿ ಜನರಲ್ ತಿಳಿಸಿದ ನಂತರ ಅರ್ಜಿದಾರರು ಅರ್ಜಿಗಳನ್ನು ಹಿಂದಕ್ಕೆ ಪಡೆದಿದ್ದಾರೆ.

ಶ್ರೀಲಂಕಾದ ಎರಡು ಸ್ಥಳಗಳಲ್ಲಿನ ಪವನ ವಿದ್ಯುತ್ ಯೋಜನೆಗಳಿಂದ ಹಿಂದೆ ಸರಿಯುತ್ತಿರುವುದಾಗಿ ಅದಾನಿ ಸಮೂಹವು ಕಳೆದ ತಿಂಗಳು ತಿಳಿಸಿತ್ತು.

ಶ್ರೀಲಂಕಾದ ಹಿಂದಿನ ಸಂಪುಟವು ಈ ಯೋಜನೆಗಳಿಗೆ ಕಳೆದ ವರ್ಷದ ಮೇ ತಿಂಗಳಲ್ಲಿ ಅನುಮೋದನೆ ನೀಡಿತ್ತು. ಇದಾದ ನಂತರ ಈ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಯೋಜನೆಗಳಿಂದಾಗಿ ಪರಿಸರಕ್ಕೆ ಧಕ್ಕೆ ಆಗುತ್ತದೆ, ಯೋಜನೆಗಳಲ್ಲಿ ಪಾರದರ್ಶಕತೆಯ ಕೊರತೆ ಇದೆ ಎಂದು ಅರ್ಜಿದಾರರು ದೂರಿದ್ದರು.

ಎರಡು ದಿನದಲ್ಲಿ ಹೂಡಿಕೆದಾರರ ಸಂಪತ್ತು ₹8.67 ಲಕ್ಷ ಕೋಟಿ ವೃದ್ಧಿ

ಸೆನ್ಸೆಕ್ಸ್ 1,131 ಅಂಶ ಜಿಗಿತ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಮಂಗಳವಾರ ದೇಶದ ಷೇರುಪೇಟೆಯಲ್ಲಿ ಗೂಳಿಯ ಓಟದಿಂದಾಗಿ ಸೂಚ್ಯಂಕಗಳು ಜಿಗಿತ ಕಂಡಿವೆ.

ಸೋಲ್, ಟೋಕಿಯೊ, ಶಾಂಘೈ ಹಾಗೂ ಹಾಂಗ್‌ಕಾಂಗ್ ಷೇರುಪೇಟೆಯಲ್ಲಿ ನಡೆದ ಸಕಾರಾತ್ಮಕ ವಹಿವಾಟು, ದೇಶೀಯ ಷೇರುಪೇಟೆಯು ಏರಿಕೆ ದಾಖಲಿಸಲು ನೆರವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಎರಡು ದಿನಗಳಲ್ಲಿ ಹೂಡಿಕೆದಾರರ ಸಂಪತ್ತು ₹8.67 ಲಕ್ಷ ಕೋಟಿ ಹೆಚ್ಚಳವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,131 ಅಂಶ ಏರಿಕೆ ಕಂಡು, 75,301 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 325 ಅಂಶ ಹೆಚ್ಚಳಗೊಂಡು 22,834 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಜೊಮಾಟೊ ಷೇರಿನ ಮೌಲ್ಯದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ. ಐಸಿಐಸಿಐ ಬ್ಯಾಂಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಟಾಟಾ ಮೋಟರ್ಸ್, ಎಲ್ ಆ್ಯಂಡ್ ಟಿ, ಏಷ್ಯನ್ ಪೇಂಟ್ಸ್, ಟೈಟನ್, ಕೋಟಕ್ ಮಹೀಂದ್ರ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯ ಹೆಚ್ಚಳವಾಗಿದೆ.

ಬಜಾಜ್ ಫಿನ್‌ಸರ್ವ್, ಭಾರ್ತಿ ಏರ್‌ಟೆಲ್, ಟೆಕ್ ಮಹೀಂದ್ರ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಮೌಲ್ಯ ಇಳಿದಿದೆ.

'ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ. ಡಾಲರ್ ಮೌಲ್ಯ ಕೂಡ ಕುಸಿದಿದೆ. ಈ ಬೆಳವಣಿಗೆಯು ದೇಶೀಯ ಷೇರುಪೇಟೆಯ ಚೇತರಿಕೆಗೆ ನೆರವಾಗಿದೆ' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಆದರೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಹಿಂಪಡೆಯುವುದು ಮುಂದುವರಿದಿದ್ದು, ಚೀನಾದ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಅಮೆರಿಕದ ಸುಂಕ ನೀತಿಗೆ ಸಂಬಂಧಿಸಿದಂತೆ ತಲೆದೋರಿರುವ ಅನಿಶ್ಚಿತ ಸ್ಥಿತಿಯೇ ಇದಕ್ಕೆ ಕಾರಣ' ಎಂದು ಹೇಳಿದ್ದಾರೆ.

ಸೋಮವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,488 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರೆ, ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹6 ಸಾವಿರ ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರೂಪಾಯಿ ಮೌಲ್ಯ 25 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 25 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಬೆಲೆ ₹86.56 ಆಗಿದೆ.

ಕಳೆದ ಮೂರು ವಹಿವಾಟಿನ ದಿನಗಳಲ್ಲಿ ರೂಪಾಯಿ ಮೌಲ್ಯ 67 ಪೈಸೆ ಹೆಚ್ಚಳವಾಗಿದೆ.

ದೇಶೀಯ ಷೇರು ಸೂಚ್ಯಂಕಗಳ ಏರಿಕೆ ಮತ್ತು ಡಾಲರ್ ಮೌಲ್ಯ ಇಳಿಕೆಯು ರೂಪಾಯಿ ಬಲಗೊಳ್ಳಲು ನೆರವಾಗಿದೆ. ಏಷ್ಯಾದ ಕರೆನ್ಸಿಗಳ ಮೌಲ್ಯ ಏರಿಕೆಯೂ ರೂಪಾಯಿ ಸದೃಢಕ್ಕೆ ಸಹಕಾರಿಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮಣಿಪಾಲ್ ಸಿಗ್ನಾ ಕಂಪನಿಯ ಷೇರು ಖರೀದಿ?

ಎಲ್‌ಐಸಿ ಆರೋಗ್ಯ ವಿಮೆ ಸನ್ನಿಹಿತ

ಮುಂಬೈ (ಪಿಟಿಐ): 'ಆರೋಗ್ಯ ವಿಮಾ ಕ್ಷೇತ್ರ ಪ್ರವೇಶಿಸಲು ನಿರ್ಧರಿಸಿರುವ ಭಾರತೀಯ ಜೀವ ವಿಮಾ ನಿಗಮವು ಈ ತಿಂಗಳ ಅಂತ್ಯದೊಳಗೆ ಖಾಸಗಿ ಆರೋಗ್ಯ ವಿಮಾ ಕಂಪನಿಯೊಂದರ ಷೇರುಗಳನ್ನು ಖರೀದಿಸಲಿದೆ' ಎಂದು ಎಲ್‌ಐಸಿ ಸಿಇಒ ಸಿದ್ಧಾರ್ಥ ಮೊಹಂತಿ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಷೇರು ಖರೀದಿಯ ಮಾತುಕತೆಯು ಅಂತಿಮ ಹಂತದಲ್ಲಿದೆ. ಇನ್ನೆರಡು ವಾರದಲ್ಲಿ ಈ ಬಗ್ಗೆ ಅಧಿಕೃತವಾಗಿ ಪ್ರಕಟಿಸಲಾಗುವುದು' ಎಂದರು.

ಆದರೆ, ಯಾವ ಕಂಪನಿಯ ಷೇರುಗಳನ್ನು ಖರೀದಿಸಲಾಗುತ್ತಿದೆ ಎಂಬ ಬಗ್ಗೆ ಅವರು ಬಹಿರಂಗಪಡಿಸಿಲ್ಲ.

ಕೆಲವು ಮಾಧ್ಯಮಗಳ ವರದಿ ಪ್ರಕಾರ ಮಣಿಪಾಲ್ ಸಿಗ್ನಾ ಆರೋಗ್ಯ ವಿಮಾ ಕಂಪನಿಯ ಷೇರುಗಳ ಖರೀದಿಗೆ ಎಲ್‌ಐಸಿ ಮುಂದಾಗಿದೆ. ಇದಕ್ಕಾಗಿ ₹4 ಸಾವಿರ ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಹೇಳಲಾಗಿದೆ.

'ಆರೋಗ್ಯ ವಿಮಾ ಕಂಪನಿಯೊಂದರ ಶೇ 51ರಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಷೇರು ಖರೀದಿಸುವ ಮೂಲಕ ಆ ಕಂಪನಿ ಮೇಲೆ ನಿಯಂತ್ರಣ ಹೊಂದುವ ಉದ್ದೇಶವಿಲ್ಲ. ಆದರೆ, ಎಲ್‌ಐಸಿ ಆಡಳಿತ ಮಂಡಳಿಯ ನಿರ್ಧಾರ ಮತ್ತು ಮೌಲ್ಯಮಾಪನ ಅಂಶಗಳ ಆಧಾರದ ಮೇಲೆ ಎಷ್ಟು ಷೇರುಗಳನ್ನು ಖರೀದಿಸಬೇಕಿದೆ ಎಂಬುದು ಅವಲಂಬಿತವಾಗಿದೆ' ಎಂದು ಮೊಹಂತಿ ವಿವರಿಸಿದರು.

ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಐಆರ್‌ಡಿಎಐ) ನಿಯಮಾವಳಿಗಳ ಅನ್ವಯ ಜೀವ ವಿಮಾ ಕಂಪನಿಯು, ಆರೋಗ್ಯ ವಿಮಾ ಸೌಲಭ್ಯ ಕಲ್ಪಿಸಲು ಅವಕಾಶವಿಲ್ಲ. ಈ ಸೌಲಭ್ಯ ಒದಗಿಸಲು ಸಂಯೋಜಿತ ಪರವಾನಗಿ ಪಡೆಯಬೇಕಿದೆ. ಎಲ್‌ಐಸಿಗೆ ಈ ಪರವಾನಗಿ ನೀಡುವ ಬಗ್ಗೆ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿಲ್ಲ.

ಆದರೆ, ಒಂದೇ ಕಂಪನಿಗೆ ಜೀವ ವಿಮೆ ಅಥವಾ ಆರೋಗ್ಯ ವಿಮೆ ಸೌಲಭ್ಯ ನೀಡುವುದಕ್ಕೆ ಸಂಯೋಜಿತ ಪರವಾನಗಿ ನೀಡಬಹುದು ಎಂದು ಸಂಸದೀಯ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಎಚ್‌ಡಿಕೆ ಒತ್ತುವರಿ ತೆರವು ಶುರು

ಒಂದನೇ ಪುಟದಿಂದ...

ತಿಂಗಳ ಹಿಂದೆ ಸರ್ವೆ: ಒತ್ತುವರಿ ತೆರವು ನಡೆಸದ ಸರ್ಕಾರದ ವಿರುದ್ಧ ಸಮಾಜ ಪರಿವರ್ತನಾ ಸಮುದಾಯದ ಎಸ್.ಆರ್.ಹಿರೇಮಠ ಅವರು ತಿಂಗಳ ಹಿಂದೆ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕಂದಾಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿತ್ತು. ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಸೂಚನೆ ನೀಡಿತ್ತು. ಆ ಮೇರೆಗೆ ಕಂದಾಯ ಇಲಾಖೆಯು ಎಸ್‌ಐಟಿ ರಚಿಸಿತ್ತು.

ಎಸ್‌ಐಟಿ ನೇತೃತ್ವದಲ್ಲಿ ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳು, ಎಚ್‌ಡಿಕೆ ತೋಟದ ಮನೆ ಜಾಗ ಸೇರಿದಂತೆ ಅಕ್ಕಪಕ್ಕದ ಐದೂ ಸರ್ವೆ ನಂಬರ್‌ಗಳಲ್ಲಿ ಸರ್ವೆ ಮಾಡಿ ಒತ್ತುವರಿ ಜಾಗವನ್ನು ಗುರುತಿಸಿದ್ದರು. ಆ ವರದಿ ಮೇರೆಗೆ ಇಲಾಖೆಯು ಮಂಗಳವಾರ ತೆರವು ಕಾರ್ಯಾಚರಣೆ ಕೈಗೊಂಡಿತು.

ಮಾಧ್ಯಮದವರಿಗೆ ನಿರ್ಬಂಧ: ಒತ್ತುವರಿ ಕಾರ್ಯಾಚರಣೆಗಾಗಿ ಎಚ್‌ಡಿಕೆ ತೋಟದ ಮನೆ ಪ್ರವೇಶಿಸಿದ ಜಿಲ್ಲಾಧಿಕಾರಿ ಅವರೊಂದಿಗೆ, ಮಾಧ್ಯಮದವರು ತೆರಳಲು ಮುಂದಾದರು. ಆಗ ಜಿಲ್ಲಾಧಿಕಾರಿ ಮತ್ತು ಪೊಲೀಸರು ಒಳಕ್ಕೆ ಹೋಗಲು ಅನುಮತಿ ನೀಡಲಿಲ್ಲ. ಒಳಗೆ ಖಾಸಗಿ ಜಾಗವೂ ಇರುವುದರಿಂದ ಅಲ್ಲಿಗೆ ಮಾಧ್ಯಮದವರನ್ನು ಬಿಡಲು ಸಾಧ್ಯವಿಲ್ಲ ಎಂದು ಪೊಲೀಸರು ಹೇಳಿದರು. ಗುರುತಿನ ಚೀಟಿ ಧರಿಸಿದ್ದ ಅಧಿಕಾರಿಗಳ ಜತೆಗೆ ತೆರವು ಕಾರ್ಯಾಚರಣೆಗೆ ಬಂದಿದ್ದ ಕಾರ್ಮಿಕರನ್ನಷ್ಟೇ ಒಳಕ್ಕೆ ಬಿಟ್ಟರು.

ನನ್ನ ಜಮೀನು ಹುಡುಕಿಕೊಡಿ: ಎಚ್‌ಡಿಕೆ ಪತ್ರ

ಒತ್ತುವರಿ ತೆರವು ಕಾರ್ಯಾಚರಣೆಗೆ ನಾಲ್ಕು ದಿನ ಮುಂಚೆ (ಮಾರ್ಚ್ 15) ತಾಲ್ಲೂಕಿನ ಭೂ ದಾಖಲೆಗಳ ಇಲಾಖೆ ಸಹಾಯಕ ನಿರ್ದೇಶಕರಿಗೆ ಪತ್ರ ಬರೆದಿರುವ ಸಚಿವ ಎಚ್.ಡಿ.ಕುಮಾರಸ್ವಾಮಿ, ಕಾನೂನುಬಾಹಿರವಾಗಿ ಹೆಚ್ಚುವರಿ ಜಮೀನಿದ್ದರೆ ವಶಪಡಿಸಿಕೊಳ್ಳಬಹುದು. ಅಲ್ಲದೆ, ಸರ್ವೆ ನಂಬರ್ 7ರಲ್ಲಿ ತಪ್ಪಿ ಹೋಗಿರುವ ನನ್ನ ಜಮೀನು ಹುಡುಕಿ ಕೊಡಿ ಎಂದು ಕೋರಿದ್ದಾರೆ.

ಆರ್.ದೇವರಾಜ್ ಎಂಬುವರ ಮೂಲಕ ಪತ್ರ ಬರೆದಿರುವ ಎಚ್‌ಡಿಕೆ, 'ಹೈಕೋರ್ಟ್ ಸೂಚನೆಯಂತೆ ಇಲಾಖೆಯವರು ನನ್ನ ಅನುಭವದಲ್ಲಿರುವ ಸರ್ವೆ ನಂಬರ್ 7 ಮತ್ತು 8ರಲ್ಲಿ ಸರ್ವೆ ನಡೆಸಿದ್ದಾರೆ. ಈ ಪೈಕಿ 7ರಲ್ಲಿ 5 ಎಕರೆ 20 ಗುಂಟೆ ಜಮೀನನ್ನು ಕೇತಗಾನಹಳ್ಳಿ ಕೆಂಪೀರಯ್ಯ, ದೇವರಾಜು, ದೊಡ್ಡಯ್ಯ, ಸಾವಿತ್ರಮ್ಮ ಕೋಂ ಹನುಮೇಗೌಡ ಹಾಗೂ ದೇವರಾಜು ಅವರಿಂದ ಖರೀದಿಸಿದ್ದೇನೆ. ಆ ಪೈಕಿ 1 ಎಕರೆ 15 ಗುಂಟೆಯಲ್ಲಿ ಮಾತ್ರ ನಾನು ಅನುಭವದಲ್ಲಿದ್ದೇನೆ. ಉಳಿದ ಜಮೀನನ್ನು ತಾವು ಹುಡುಕಿ ಕೊಡಬೇಕು.

ಸರ್ವೆ ನಂಬರ್ 8ರಲ್ಲಿ ಐದು ಮಂದಿಯಿಂದ ಒಟ್ಟು 8 ಎಕರೆ 17 ಗುಂಟೆ ಜಮೀನು ಖರೀದಿಸಿದ್ದೇನೆ. ಪಹಣಿ ದಾಖಲೆ ಪ್ರಕಾರವೂ ಭೂಮಿ ಅಷ್ಟೇ ಇದ್ದು, ಸ್ವತಃ ಅನುಭವದಲ್ಲಿದ್ದೇನೆ. ಈ ಜಮೀನಿನ ಹಕ್ಕು ನನಗೆ ಕ್ರಯ ಮತ್ತು ದಾನದ ಮೂಲಕ ಬಂದಿದೆ. ಇಷ್ಟು ಮೀರಿ ಕಾನೂನು ಬಾಹಿರವಾಗಿ ನಾನು ಹೆಚ್ಚುವರಿ ಜಮೀನಿನಲ್ಲಿ ಅನುಭವದಲ್ಲಿದ್ದರೆ ಅದನ್ನು ನೀವು ವಶಕ್ಕೆ ಪಡೆಯಬಹುದು' ಎಂದು ಎಚ್‌ಡಿಕೆ ಪತ್ರದಲ್ಲಿ ಹೇಳಿದ್ದಾರೆ.

₹91 ಸಾವಿರ ದಾಟಿದ ಚಿನ್ನದ ದರ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆಯ ಏರಿಕೆ ಮುಂದುವರಿಯಿತು.

ದಾಸ್ತಾನುಗಾರರು ಮತ್ತು ಚಿಲ್ಲರೆ ಮಾರಾಟಗಾರರಿಂದ ಚಿನ್ನದ ಖರೀದಿಗೆ ಬೇಡಿಕೆ ಹೆಚ್ಚಳವಾಗಿದ್ದರಿಂದ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹500 ಏರಿಕೆಯಾಗಿ, ₹91,250ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ₹450 ಹೆಚ್ಚಳವಾಗಿ, ₹90,800 ಆಗಿದೆ. ಬೆಳ್ಳಿ ಧಾರಣೆಯು ಯಥಾಸ್ಥಿತಿಯಲ್ಲಿದ್ದು, ಕೆ.ಜಿ ದರ ₹1.02 ಲಕ್ಷ ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕದ ನೀತಿಯಿಂದಾಗಿ ಜಾಗತಿಕ ಮಟ್ಟದಲ್ಲಿ ಅನಿಶ್ಚಿತ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ಅಮೆರಿಕಕ್ಕೆ ಆರ್ಥಿಕ ಹಿಂಜರಿತದ ಭೀತಿ ಸೃಷ್ಟಿಯಾಗಿದೆ. ಇದರಿಂದ ಹೂಡಿಕೆದಾರರು ಹಳದಿ ಲೋಹದ ಖರೀದಿಗೆ ಮುಂದಾಗಿರುವುದರಿಂದ ದರ ಏರಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಂಇಐಎಲ್ ವಿರುದ್ಧದ ಪಿಐಎಲ್ ವಜಾ

ಬೆಂಗಳೂರು: ಮುಂಬೈ ಮೆಟ್ರೊಪಾಲಿಟನ್ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರಕ್ಕೆ (ಎಂಎಂಆರ್‌ಡಿಎ) ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಯು (ಎಂಇಐಎಲ್) ನೀಡಿದ್ದ ಬ್ಯಾಂಕ್ ಗ್ಯಾರಂಟಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಂಬೈ ಹೈಕೋರ್ಟ್ ವಜಾಗೊಳಿಸಿದೆ.

ಬೋರಿವಲಿ ಮತ್ತು ಠಾಣೆ ನಡುವಿನ ಅವಳಿ ಟ್ಯೂಬ್ ರಸ್ತೆ ಸುರಂಗ ಯೋಜನೆಯನ್ನು ಎಂಇಐಎಲ್‌ಗೆ ನೀಡುವ ಕುರಿತು ಪ್ರಾಧಿಕಾರವು ನಕಲಿ ಬ್ಯಾಂಕ್ ಗ್ಯಾರಂಟಿ ಸ್ವೀಕರಿಸಿದೆ ಎಂದು ಆರೋಪಿಸಲಾಗಿತ್ತು.

ಟೆಂಡರ್ ವೇಳೆ ಎಂಇಐಎಲ್ ಸಲ್ಲಿಸಿದ ಯೂರೊ ಎಕ್ಸಿಮ್ ಬ್ಯಾಂಕ್ ಮೂಲದ ಬ್ಯಾಂಕ್ ಗ್ಯಾರಂಟಿಗಳು ಮಾನ್ಯವಾಗಿಲ್ಲ ಎಂದು ಆರೋಪಿಸಿ, ಹೈದರಾಬಾದ್‌ನ ಪತ್ರಕರ್ತ ರವಿ ಪ್ರಕಾಶ್ ಎಂಬುವರು ಅರ್ಜಿ ಸಲ್ಲಿಸಿದ್ದರು. ಈ ಪ್ರಕರಣದ ಬಗ್ಗೆ ಸಿಬಿಐನಿಂದ ತನಿಖೆ ನಡೆಸಬೇಕು ಎಂದು ಕೋರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ ಮತ್ತು ನ್ಯಾಯಮೂರ್ತಿ ಭಾರತಿ ಡಾಂಗ್ರೆ ಅವರಿದ್ದ ವಿಭಾಗೀಯ ಪೀಠವು, ಟೆಂಡರ್ ಸಲ್ಲಿಕೆ ವೇಳೆ ಎಂಇಐಎಲ್ ಅಕ್ರಮ ಎಸಗಿಲ್ಲ ಎಂದು ಆದೇಶದಲ್ಲಿ ತಿಳಿಸಿದೆ.

ವಾಹನ ಬೆಲೆ ಹೆಚ್ಚಳಕ್ಕೆ ಟಾಟಾ, ಕಿಯಾ ನಿರ್ಧಾರ

ನವದೆಹಲಿ (ಪಿಟಿಐ): ವಿದ್ಯುತ್‌ಚಾಲಿತ ವಾಹನಗಳು ಸೇರಿ ಪ್ರಯಾಣಿಕ ವಾಹನಗಳ ಬೆಲೆ ಏರಿಕೆಗೆ ನಿರ್ಧರಿಸಲಾಗಿದೆ. ಈ ಪರಿಷ್ಕೃತ ದರವು ಏಪ್ರಿಲ್‌ನಿಂದ ಜಾರಿಗೆ ಬರಲಿದೆ ಎಂದು ಟಾಟಾ ಮೋಟರ್ಸ್ ಮಂಗಳವಾರ ತಿಳಿಸಿದೆ. ಜನವರಿಯಲ್ಲಿ ಕಂಪನಿಯು ಪ್ರಯಾಣಿಕ ವಾಹನಗಳ ಬೆಲೆಯನ್ನು ಶೇ 3ರ ವರೆಗೆ ಹೆಚ್ಚಿಸಿತ್ತು.

ತಯಾರಿಕಾ ಮತ್ತು ಕಾರ್ಯಾಚರಣೆ ವೆಚ್ಚವನ್ನು ಸರಿದೂಗಿಸಲು ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಆದರೆ, ಎಷ್ಟು ಬೆಲೆ ಏರಿಕೆ ಮಾಡಲಿದೆ ಎಂಬ ಬಗ್ಗೆ ಕಂಪನಿಯು ತಿಳಿಸಿಲ್ಲ.

ಕಿಯಾ ದರ ಹೆಚ್ಚಳ: ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಎಲ್ಲಾ ಮಾದರಿಯ ಕಾರುಗಳ ಬೆಲೆಯನ್ನು ಶೇ 3ರ ವರೆಗೆ ಹೆಚ್ಚಿಸುವುದಾಗಿ ಕಿಯಾ ಇಂಡಿಯಾ ಕಂಪನಿ ತಿಳಿಸಿದೆ.

ಸುನಿತಾ ವಿಲಿಯಮ್ಸ್‌ಗೆ ಪ್ರಧಾನಿ ಮೋದಿ ಪತ್ರ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಒಂಬತ್ತು ತಿಂಗಳ ಬಳಿಕ ಭೂಮಿಗೆ ಹಿಂದಿರುಗುತ್ತಿರುವ ನಾಸಾ ಗಗನಯಾನಿ ಸುನಿತಾ ವಿಲಿಯಮ್ಸ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಪತ್ರ ಬರೆದಿದ್ದು, ಭಾರತಕ್ಕೆ ಭೇಟಿ ನೀಡುವಂತೆ ಮನವಿ ಮಾಡಿದ್ದಾರೆ.

ಮಾರ್ಚ್ 1ರಂದು ಪತ್ರ ಬರೆದು ನಾಸಾ ಗಗನಯಾನಿ ಮೈಕ್ ಮಸ್ಸಿಮಿನೊ ಅವರ ಮೂಲಕ ಕಳುಹಿಸಿದ್ದರು. ಈ ಪತ್ರವನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

'ನೀವು ನಮ್ಮಿಂದ ಸಾವಿರಾರು ಕಿಲೋಮೀಟರ್ ದೂರ ಇದ್ದರೂ ನಮ್ಮ ಹೃದಯಕ್ಕೆ ಯಾವಾಗಲೂ ಹತ್ತಿರವಾಗಿದ್ದೀರಿ. ನಿಮ್ಮ ಆರೋಗ್ಯ ಮತ್ತು ಯಶಸ್ಸಿಗಾಗಿ ಭಾರತದ ಜನರು ಪ್ರಾರ್ಥಿಸುತ್ತಿದ್ದಾರೆ' ಎಂದು ಮೋದಿ ಪತ್ರದಲ್ಲಿ ಹೇಳಿದ್ದಾರೆ.

'ಭೂಮಿಗೆ ಮರಳಿದ ನಂತರ ಭಾರತದಲ್ಲಿ ನಿಮ್ಮನ್ನು ಕಾಣಲು ದೇಶದ ಜನರು ಉತ್ಸುಕರಾಗಿದ್ದಾರೆ' ಎಂದಿದ್ದಾರೆ.

ಎಚ್‌ಡಿಕೆಗೆ ಗಾಬರಿ ಏಕೆ: ಡಿಕೆಶಿ ಪ್ರಶ್ನೆ

ಒಂದನೇ ಪುಟದಿಂದ...

'ಅಧಿಕಾರಿಗಳು ನೋಟಿಸ್ ನೀಡದೆ ಅಳತೆ ಮಾಡಲು ಸಾಧ್ಯವೇ? ಎಷ್ಟು ಭೂಮಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂಬುದು ತಿಳಿದಿಲ್ಲ. ನಮ್ಮ ವಿರುದ್ಧ ಈ ಹಿಂದೆ ಏನು ಮಾತನಾಡಿದ್ದಾರೆ ಎಂಬುದನ್ನು ಕುಮಾರಸ್ವಾಮಿ ಒಮ್ಮೆ ನೆನಪು ಮಾಡಿಕೊಳ್ಳಲಿ' ಎಂದು ತಿರುಗೇಟು ನೀಡಿದರು.

'ನಮ್ಮದೂ ಬೇಕಾದಷ್ಟು ದಾಖಲೆ ತೆಗೆದಿಟ್ಟುಕೊಂಡಿದ್ದಾರಂತೆ. ನಾವು ಏನಾದರೂ ಒತ್ತುವರಿ ಮಾಡಿಕೊಂಡಿದ್ದರೆ ತೆಗೆದಿಡಲಿ. ನನ್ನ ವಿರುದ್ಧ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ ಎಂದು ಅವರು ಹೇಳಿದ್ದ ನೆನಪು. ಮಧ್ಯರಾತ್ರಿ ಬರೆಸಿಕೊಂಡಿದ್ದಾರೆ ಎಂದು ಆರೋಪ ಮಾಡಿದ್ದರು. ಕಾಸು ಕೊಟ್ಟು ಬರೆಸಿಕೊಂಡಿದ್ದೇವೆ. ಪುಗಸಟ್ಟೆ ಯಾರೂ ಬರೆದು ಕೊಡುವುದಿಲ್ಲ. ನಾನು ಯಾರಿಗಾದರೂ ಭಯಪಡಿಸಿದ್ದರೆ ಅವರಿಂದ ದೂರು ದಾಖಲಿಸಲಿ ಅಥವಾ ಇವರೇ ದೂರು ನೀಡಲಿ. ಇವರು ಮಾತ್ರ ಶುದ್ಧ, ನಾವು ಅಶುದ್ಧವೇ? ನಾವು ಯಾವುದೇ ದ್ವೇಷದ ರಾಜಕಾರಣಕ್ಕೆ ಹೋಗಿಲ್ಲ. ನನ್ನ ಮೇಲೂ ಬೇಕಾದಷ್ಟು ಪಿಐಎಲ್ ಹಾಕಿದ್ದಾರೆ' ಎಂದರು.

'ನನ್ನ ಮೇಲೂ ಬೇಕಾದಷ್ಟು ಆರೋಪ ಮಾಡಿದ್ದರು. ಗ್ರಾನೈಟ್ ಕದ್ದಿದ್ದೀರಿ ಎಂದು ಹೇಳಿರಲಿಲ್ಲವೇ? ನನ್ನ ಹೆಂಡತಿ, ತಂಗಿ ಹಾಗೂ ತಮ್ಮನ ಮೇಲೆ ತನಿಖೆ ನಡೆದಿರಲಿಲ್ಲವೇ? ಬಳ್ಳಾರಿಗೆ ಹೋಗಿ ಕದ್ದುಕೊಂಡು ಬಂದಿದ್ದೀರಿ ಎಂದು ಪ್ರಕರಣ ದಾಖಲಿಸಿರಲಿಲ್ಲವೇ? ಇವರ ಅಣ್ಣ ಆದಾಯ ತೆರಿಗೆ ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಬೇಕಾದಂತೆ ಅರ್ಜಿ ಬರೆದುಕೊಟ್ಟಿರಲಿಲ್ಲವೇ? ನಮಗೆಲ್ಲಾ ಇದು ತಿಳಿದಿಲ್ಲವೇ? ಸುಮ್ಮನೆ ಕಾಂಗ್ರೆಸ್, ಕಾಂಗ್ರೆಸ್ ಎನ್ನುತ್ತಾರೆ. ಯಾವ ಕಾಂಗ್ರೆಸ್ಸಿಗರು ಇವರ ವಿಚಾರಕ್ಕೆ ಹೋಗಿಲ್ಲ. ಜಮೀನು ಇವರದ್ದೇ ಆಗಿದ್ದರೆ ಉಳಿದುಕೊಳ್ಳುತ್ತದೆ. ಇಲ್ಲದಿದ್ದರೇ ಬಿಟ್ಟುಕೊಡಬೇಕಾಗುತ್ತದೆ' ಎಂದರು.

'ಇದೇ 27ರಂದು ಎಲ್ಲ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಸಭೆಯನ್ನು ದೆಹಲಿಯಲ್ಲಿ ಕರೆಯಲಾಗಿದೆ. ನಾನು ಸಹ ಸಭೆಯಲ್ಲಿ ಭಾಗವಹಿಸಲಿದ್ದೇನೆ. ಇದಕ್ಕೆ ನಾನು ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ಮಾ.28ಕ್ಕೆ ಅಹಮದಾಬಾದಿನ ಸಬರಮತಿ ಆಶ್ರಮದ ಬಳಿ ಎಐಸಿಸಿ ಸದಸ್ಯರ ಸಭೆಗೆ ಆಹ್ವಾನ ನೀಡಿದ್ದಾರೆ. ಹಿರಿಯ ನಾಯಕರು ಹಾಗೂ ಸಂಸದರು ಅಲ್ಲಿಗೆ ಹೋಗುತ್ತಾರೆ' ಎಂದರು.

ಅಡಿಕೆ ಧಾರಣೆ (₹ಗಳಲ್ಲಿ)

ಸಾಗರ	
ಬಿಳಿಗೋಟು	6300-19800
ಚಾಲಿ	31719-33510
ಕೋಕ	10019-18299
ಕೆಂಪುಗೋಟು	16899-20899
ರಾಶಿ	24509-51129
ಸಿಪ್ಪೆಗೋಟು	15691-16699
ಶಿವಮೊಗ್ಗ	
ಬೆಟ್ಟೆ	44100-57699
ಗೊರಬಲು	17500-26696
ರಾಶಿ	33009-52709
ಸರಕು	54109-89696

ಸಿದ್ದಾಪುರ	
ಬಿಳಿಗೋಟು	22499-26699
ಚಾಲಿ	33009-35759
ಕೋಕ	12699-20389
ಹೊಸಚಾಲಿ	30899-35699
ಕೆಂಪುಗೋಟು	20119-21609
ರಾಶಿ	40469-49499
ತಟ್ಟಿಬೆಟ್ಟೆ	28209-36319
ಶಿರಸಿ	
ಬೆಟ್ಟೆ	28799-41181
ಬಿಳಿಗೋಟು	14099-28618

ಚಾಲಿ	32099-37421
ಕೆಂಪುಗೋಟು	18199-23699
ರಾಶಿ	40088-46099
ಯಲ್ಲಾಪುರ	
ಅಪಿ	61619-61619
ಬಿಳಿಗೋಟು	13699-27189
ಚಾಲಿ	27599-38599
ಕೋಕ	4809-15089
ಕೆಂಪುಗೋಟು	12912-26969
ರಾಶಿ	38919-57399
ತಟ್ಟಿಬೆಟ್ಟೆ	28399-38601

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14500-15000
ದಾವಣಗೆರೆ	₹11600-11600

'ಸುಧೀಕ್ಷಾ ಕೊನಾಂಕಿ ಸತ್ತಿದ್ದಾಳೆ ಎಂದು ಘೋಷಿಸಿ'

ನ್ಯೂಯಾರ್ಕ್ (ಪಿಟಿಐ): 'ಅಮೆರಿಕದ ಪೀಟ್ಸ್‌ಬರ್ಗ್ ವಿ.ವಿ ವಿದ್ಯಾರ್ಥಿನಿ, ಭಾರತ ಮೂಲದ ಸುಧೀಕ್ಷಾ ಕೊನಾಂಕಿ (20) ಮೃತಪಟ್ಟಿದ್ದಾರೆ ಎಂದು ಘೋಷಿಸುವಂತೆ ಆಕೆಯ ಪೋಷಕರು ಡೊಮಿನಿಕ್ ಗಣರಾಜ್ಯದ ಪೊಲೀಸರಿಗೆ ಮನವಿ ಮಾಡಿದ್ದಾರೆ' ಎಂದು ಅಮೆರಿಕದ ಮಾಧ್ಯಮ ವರದಿ ಮಾಡಿದೆ.

ಸುಧೀಕ್ಷಾ, ಅಮೆರಿಕದಲ್ಲಿ ಕಾಯಂ ನಿವಾಸಿಯಾಗಿದ್ದರು. ಮಾರ್ಚ್ 6ರಂದು ಡೊಮಿನಿಕ್ ಗಣರಾಜ್ಯದ ಪುಂಟಾ ಕಾನಾ ಪಟ್ಟಣದಲ್ಲಿ ರುವ ರಿಯು ರಿಪಬ್ಲಿಕ್ ರೆಸಾರ್ಟ್‌ಗೆ ಪ್ರವಾಸಕ್ಕೆ ತೆರಳಿದ್ದ ವೇಳೆ ನಾಪತ್ತೆ ಯಾಗಿದ್ದರು. ತಕ್ಷಣವೇ ಅಮೆರಿಕ ಹಾಗೂ ಡೊಮಿನಿಕ್ ಸರ್ಕಾರದ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದರು. ಇದುವರೆಗೂ ಆಕೆ ಪತ್ತೆಯಾಗಿಲ್ಲ.

'ಸುಧೀಕ್ಷಾ ಸಾವನ್ನು ಘೋಷಿಸಬೇಕೆಂದು ಕೋರಿ ಆಕೆಯ ಕುಟುಂಬಸ್ಥರು ತನಿಖಾ ಸಂಸ್ಥೆಗೆ ಅಧಿಕೃತವಾಗಿ ಪತ್ರ ಕಳುಹಿಸಿದ್ದಾರೆ' ಎಂದು ಡೊಮಿನಿಕ್ ಗಣರಾಜ್ಯದ ಪೊಲೀಸ್ ಇಲಾಖೆಯ ವಕ್ತಾರ ಡಿಇಗೊ ಪೆಸ್ಕ್ಯುಯೆರಾ ತಿಳಿಸಿದ್ದಾರೆ. ಈ ಕುರಿತು ಸುಧೀಕ್ಷಾ ಕುಟುಂಬಸ್ಥರು ಇದುವರೆಗೂ ಅಧಿಕೃತ ಹೇಳಿಕೆ ನೀಡಿಲ್ಲ.

ವ್ಯಕ್ತಿಯ ವಶ–ವಿಚಾರಣೆ: 'ಇದೇ ವೇಳೆ ಸುಧೀಕ್ಷಾ ಜೊತೆ ಕೊನೆಯದಾಗಿ ಕಾಣಿಸಿಕೊಂಡ ಜೊಸುವಾ ಸ್ಟೀವನ್ ರಿಬೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಯಾವುದೇ ತಪ್ಪು ಮಾಡಿರುವುದು ಕಂಡುಬಂದಿಲ್ಲ' ಎಂದು ಡೊಮಿನಿಕ್ ಗಣರಾಜ್ಯದ ಅಟಾರ್ನಿ ಜನರಲ್ ಯೆನಿ ಬೆರೆನಿಯಿಸ್ ರೆನೊಸೊ ತಿಳಿಸಿದ್ದಾರೆ.

ಕದನ ವಿರಾಮ ಗೌರವಿಸಲು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಕರೆ

ಇಸ್ರೇಲ್ ಹಠಾತ್ ದಾಳಿ: 400 ಜನ ಸಾವು

ಟೆಲ್ ಅವಿವ್ (ಎಪಿ): ಗಾಜಾ ಪಟ್ಟಿಯ ಹಲವೆಡೆ ಮಂಗಳವಾರ ನಸುಕಿನಲ್ಲಿ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ. ಹಮಾಸ್ ಬಂಡುಕೋರರನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಿರುವುದಾಗಿ ಇಸ್ರೇಲ್ ಹೇಳಿದೆ. ಈ ದಾಳಿಯಲ್ಲಿ 400ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದಾರೆ, 500ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಹೇಳಿದೆ.

ಹಮಾಸ್ ಮತ್ತು ಇಸ್ರೇಲ್ ನಡುವೆ ಜನವರಿಯಲ್ಲಿ ಕದನ ವಿರಾಮ ಜಾರಿಗೆ ಬಂದ ನಂತರದಲ್ಲಿ ಇಸ್ರೇಲ್ ನಡೆಸಿದ ಭಾರಿ ಪ್ರಮಾಣದ ದಾಳಿ ಇದಾಗಿದೆ.

ಕದನ ವಿರಾಮ ವಿಸ್ತರಿಸಲು ಅಗತ್ಯವಿರುವ ಪ್ರಗತಿಯು ಮಾತುಕತೆಗಳಲ್ಲಿ ಕಂಡುಬಾರದ ಕಾರಣ, ದಾಳಿಗೆ ತಾವು ಆದೇಶ ನೀಡಿದ್ದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಕಾರ್ಯಾಚರಣೆಯು ಇನ್ನಷ್ಟು ವಿಸ್ತರಣೆ ಕಾಣುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ದಾಳಿಯ ವಿಚಾರವಾಗಿ ತನ್ನ ಜೊತೆ ಸಮಾಲೋಚನೆ ನಡೆಸಲಾಗಿದೆ ಎಂದು ಹೇಳಿರುವ ಅಮೆರಿಕ, ಇಸ್ರೇಲ್‌ನ ಕ್ರಮಕ್ಕೆ ಬೆಂಬಲ ವ್ಯಕ್ತಪಡಿಸಿದೆ.

ಇಸ್ರೇಲ್ ನಡೆಸಿರುವ ದಾಳಿಯು ಕದನ ವಿರಾಮ ಒಪ್ಪಂದದ ಉಲ್ಲಂಘನೆ ಎಂದು ಹೇಳಿರುವ ಹಮಾಸ್, ಈ ದಾಳಿಯಿಂದಾಗಿ ಒತ್ತೆಯಾಳುಗಳ ಜೀವ ಅಪಾಯಕ್ಕೆ ಸಿಲುಕಿದೆ ಎಂದು ಎಚ್ಚರಿಸಿದೆ.

ಇಸ್ರೇಲ್ ಮತ್ತು ಹಮಾಸ್ ನಡುವೆ ಕದನ ಆರಂಭವಾದಾಗ ಈ ಪ್ರದೇಶದಲ್ಲಿ ಉಂಟಾಗಿದ್ದ ಪ್ರಕ್ಷುಬ್ಧ ಸ್ಥಿತಿಯು ಮುಸ್ಲಿಮರಿಗೆ ಪವಿತ್ರವಾಗಿರುವ ರಂಜಾನ್ ತಿಂಗಳಲ್ಲಿ ಇರಲಿಲ್ಲ. ಕದನ ವಿರಾಮದ ನಂತರ ಪರಿಸ್ಥಿತಿ ತುಸು ತಿಳಿಯಾಗಿತ್ತು. ಆದರೆ ಈ ಹಠಾತ್ ದಾಳಿಯು ಪರಿಸ್ಥಿತಿಯನ್ನು ಮತ್ತೆ ಪ್ರಕ್ಷುಬ್ಧಗೊಳಿಸಿದೆ.

ಇಸ್ರೇಲ್ ದಾಳಿಯ ನಂತರ ಪ್ಯಾಲೆಸ್ಟೀನ್ ನಾಗರಿಕರು ಗಾಜಾ ಪಟ್ಟಿಯ ಪೂರ್ವ ಭಾಗದಿಂದ ವಲಸೆ ಹೊರಟರು ಎಎಫ್‌ಪಿ ಚಿತ್ರ

> ಗಾಜಾ ಮೇಲೆ ಇಸ್ರೇಲ್ ನಡೆಸಿದ ವಾಯುದಾಳಿ ಬಗ್ಗೆ ತಿಳಿದು ಆಘಾತವಾಗಿದೆ. ಗಾಜಾದಲ್ಲಿ ಕದನ ವಿರಾಮ ಒಪ್ಪಂದವನ್ನು ಗೌರವಿಸಬೇಕು
> **ಆ್ಯಂಟೊನಿಯೊ ಗುಟೆರಸ್**, ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ

> ಕದನ ವಿರಾಮವನ್ನು ಕಾಪಾಡಿಕೊಳ್ಳಬೇಕು... ಅಲ್ಲಿನ ಜನ ಈಗಾಗಲೇ ಬಹಳ ಸಂಕಷ್ಟ ಅನುಭವಿಸಿದ್ದಾರೆ
> **ಆ್ಯಂಟನಿ ಆಲ್ಬನೀಸ್**, ಆಸ್ಟ್ರೇಲಿಯಾ ಪ್ರಧಾನಿ

ಪೂರ್ವ ಭಾಗ ತೊರೆಯಲು ಆದೇಶ

ಗಾಜಾ ಪಟ್ಟಿ (ಎಪಿ): ಗಾಜಾದ ಜನ ಪೂರ್ವ ಭಾಗವನ್ನು ತೊರೆಯಬೇಕು, ಗಾಜಾ ಪಟ್ಟಿಯ ಮಧ್ಯ ಭಾಗಕ್ಕೆ ತೆರಳಬೇಕು ಎಂದು ಇಸ್ರೇಲ್ ಸೇನೆ ಆದೇಶಿಸಿದೆ.

ವೈಮಾನಿಕ ದಾಳಿಯ ನಂತರ ಈ ಆದೇಶ ನೀಡಲಾಗಿದೆ. ಇಸ್ರೇಲ್ ಸೇನೆಯು ಮತ್ತೆ ಭೂದಾಳಿ ನಡೆಸುವ ಸಾಧ್ಯತೆ ಇದೆ ಎಂಬುದನ್ನು ಈ ಆದೇಶವು ಸೂಚಿಸುತ್ತಿದೆ ಎಂದು ಹೇಳಲಾಗಿದೆ.

ಗಾಜಾದಲ್ಲಿ ಹಮಾಸ್ ಬಂಡುಕೋರರ ನಿಯಂತ್ರಣದಲ್ಲಿದ್ದ ಬಂದೀಖಾನೆಯೊಂದು ಇಸ್ರೇಲ್ ದಾಳಿಗೆ ಸಿಲುಕಿ ನೆಲಸಮಗೊಂಡಿದೆ. ಅಲ್ಲಿದ್ದ ಕೈದಿಗಳು ಹಾಗೂ ಪೊಲೀಸರ ಪೈಕಿ ಹಲವರು ಮೃತಪಟ್ಟಿದ್ದಾರೆ. ದಾಳಿಯ ನಂತರ ಗಾಜಾ ಪಟ್ಟಿಯಲ್ಲಿನ ಹಲವು ಶಾಲೆಗಳು ತರಗತಿಗಳನ್ನು ಸ್ಥಗಿತಗೊಳಿಸಿವೆ. ಶಾಲೆಗಳನ್ನು ಈಚೆಗಷ್ಟೇ ಮತ್ತೆ ತೆರೆಯಲಾಗಿತ್ತು.

ಖಂಡನೆ: ಇಸ್ರೇಲ್ ಪಡೆಗಳು ಗಾಜಾದಲ್ಲಿ ದಾಳಿ ಮುಂದುವರಿಸಿರುವುದನ್ನು ಯುರೋಪಿಯನ್ ಒಕ್ಕೂಟದ ಮುಖ್ಯಸ್ಥ ಅಂಟೊನಿಯೊ ಕೋಸ್ಟಾ ಅವರು ಖಂಡಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ನೆಲಮಂಗಲ–ಕುಣಿಗಲ್ ರಸ್ತೆ, ಸೋಲೂರು ಹತ್ತಿರ ಬಿಟ್ಟಸಂದ್ರದಲ್ಲಿರುವ ನಮ್ಮ ತೋಟದಲ್ಲಿ ಸಸ್ಯಹಾರಿ ಅಡುಗೆ ಮಾಡಲು ವೀರಶೈವ–ಲಿಂಗಾಯಿತ ಅಡುಗೆಯವರು ಬೇಕಾಗಿದ್ದಾರೆ ಒಂದು ಕುಟುಂಬ ಉಳಿದುಕೊಳ್ಳಲು ವಸತಿ ವ್ಯವಸ್ಥೆ ಮಾಡಿಕೊಡಲಾಗುತ್ತದೆ. ಸೂಕ್ತ ಸಂಬಳ ನೀಡಲಾಗುತ್ತದೆ. ಆಸಕ್ತಿಯುಳ್ಳವರು ಸಂಪರ್ಕಿಸಿ 99019 85699

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಸೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ಪ್ರವಾಸ

Travel

20.03.2025 ಕಾಶಿ ಅಯೋಧ್ಯ ಅಲಹಾಬಾದ್,ಬುದ್ಧಗಯಾ. 14.04.2025 ವೈಷ್ಣೋದೇವಿ ಕಾಶ್ಮೀರ್,ಜ್ವಾಲಾಮುಖಿ ಕುಲುಮನಾಲಿ. 28.04.2025 12.05.2025 ಚಾರ್‌ಧಾಮ್ ಸಮೇತಪ್ರವಾಸ. 26.06.2025 10.07.2025 ಅಮರನಾಥ್ ಅಮೃತ್‌ಸರ್ ಕುರುಕ್ಷೇತ್ರ ಗುಲ್ ಮಾರ್ಗ. 14.04.2025 ಸೋಮನಾಥ್,ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. ಇತ್ಯಾದಿ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4. 26574131 8431888138 8317446683 9686708171

26.03.2025/ ಏಪ್ರಿಲ್ ಮೇ ತಿಂಗಳಲ್ಲಿ 7 ದಿನಗಳ ಕಾಶಿ,ಗಯಾ,ಪ್ರಯಾಗ್‌ರಾಜ್ ಅಯೋಧ್ಯ. ಮೇ ತಿಂಗಳಿಂದ ಪ್ರತಿ 15 ದಿನಗಳಿಗೊಮ್ಮೆ 13 ದಿನಗಳ ಚಾರ್‌ಧಾಮ ಬದರಿನಾಥ್,ಕೇದಾರನಾಥ್ ಗಂಗೋತ್ರಿ ಯಮನೋತ್ರಿ ದೆಹಲಿ. ಶ್ರೀಸುಧಾ ಟ್ರಾವಲ್ಸ್ 8088826815 9019301300

21.04.2025 10ದಿನಗಳು ದೆಹಲಿ,ಅಗ್ರ,ಅಲಹಾಬಾದ್, ಕಾಶಿ,ಗಯಾ,ಅಯೋಧ್ಯಾ ಹರಿದ್ವಾರ,ಇತ್ಯಾದಿ (ಕೆಲವೇ ಸೀಟುಗಳಿವೆ). 12.05.2025 6ದಿನಗಳು ಕಾಶಿ,ಗಯಾ ಅಯೋಧ್ಯಾ ಅಲಹಾಬಾದ್.9.06.2025 ಮತ್ತು 16.09.2025 13/17ದಿನಗಳು ರೈಲು ವಿಮಾನದಲ್ಲಿ ಚಾರ್‌ಧಾಮ್ ಯಾತ್ರೆ. 12.07.2025 13/17ದಿನಗಳು ಅಮರನಾಥ್ ವೈಷ್ಣೋದೇವಿ ಕಾಶ್ಮೀರ ದೆಹಲಿ ಇತ್ಯಾದಿ. ಏಪ್ರಿಲ್/ಮೇನಲ್ಲಿ ಅಂಡಮಾನ್ ಹವಳದ್ವೀಪ. "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

2.4.2025 ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಕಾಶಿ,ಗಯಾ 22.4.2025 ಶಿರಡಿ/ ಮಹಾರಾಷ್ಟ್ರ 5ಜ್ಯೋತಿರ್ಲಿಂಗ ಪ್ರವಾಸ 1.5.2025, 15.5.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್15.5.2025 ನೇಪಾಳ, ಮುಕ್ತಿನಾಥ, ಕಾಶಿ ಕರ್ನಾಟಕ ಹೆರಿಟೇಜ್ ಟೂರ್ಸ್,(ಹನುಮಂತನಗರ) 9845035349, 9482435755

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ,ಬಾಲಿ ಪ್ರವಾಸಗಳು. 8 ದಿನಗಳ ನೇಪಾಳ (ಶ್ರೀಮುಕ್ತಿನಾಥ).9 ದಿನಗಳ ಕಾಶಿ ಅಯೋಧ್ಯೆ,ಗಯಾ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ಎಪಿಕ್, ಆಧಾರ್ ಜೋಡಣೆ ● ಚುನಾವಣಾ ಆಯೋಗ, ಯುಐಡಿಎಐ ತಜ್ಞರು ಭಾಗಿ

‘ತಾಂತ್ರಿಕ ಸಮಾಲೋಚನೆ ಶೀಘ್ರ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮತದಾರರ ಗುರುತಿನ ಚೀಟಿಯೊಂದಿಗೆ (ಎಪಿಕ್) ಆಧಾರ್ ಸಂಖ್ಯೆ ಜೋಡಿಸುವ ಕುರಿತು ಚುನಾವಣಾ ಆಯೋಗ ಮತ್ತು ಭಾರತ ವಿಶಿಷ್ಟ ಗುರುತು ಪ್ರಾಧಿಕಾರದ (ಯುಐಡಿಎಐ) ತಜ್ಞರು ಶೀಘ್ರದಲ್ಲಿಯೇ ತಾಂತ್ರಿಕ ಸಮಾಲೋಚನೆ ಆರಂಭಿಸುವರು ಎಂದು ಆಯೋಗ ಮಂಗಳವಾರ ಹೇಳಿದೆ.

ಈ ಸಂಬಂಧ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಈ ವಿಷಯ ತಿಳಿಸಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ವಿವೇಕ ಜೋಶಿ, ಗೃಹ ಸಚಿವಾಲಯ ಕಾರ್ಯದರ್ಶಿ ಗೋವಿಂದ ಮೋಹನ್, ಶಾಸಕಾಂಗ ಕಾರ್ಯದರ್ಶಿ ರಾಜೀವ್ ಮಣಿ (ಕಾನೂನು ಸಚಿವಾಲಯ), ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಕಾರ್ಯದರ್ಶಿ ಎಸ್.ಕೃಷ್ಣನ್ ಹಾಗೂ ಪ್ರಾಧಿಕಾರದ ಸಿಇಒ ಭುವನೇಶ ಕುಮಾರ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಕಲಿ ಮತದಾರರ ಹೆಸರುಗಳನ್ನು ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ, ಹಲವು ಮತದಾರರ ಗುರುತಿನ ಚೀಟಿಗಳಲ್ಲಿ ಒಂದೇ ರೀತಿ ಸಂಖ್ಯೆ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು.

ಈ ವಿಚಾರವನ್ನು ಮುಂದಿಟ್ಟುಕೊಂಡು ಸಂಸತ್‌ನ ಒಳಗೆ ಹಾಗೂ ಹೊರಗೆ ಹೋರಾಟ ಮಾಡಿದ್ದವು. ಈ ಕಾರಣಕ್ಕೆ, ಎಪಿಕ್ ಮತ್ತು ಆಧಾರ್ ಸಂಖ್ಯೆ ಜೋಡಣೆ ಪ್ರಕ್ರಿಯೆಗೆ ಆಯೋಗ ಸಜ್ಜಾಗುತ್ತಿದೆ.

ಸಂವಿಧಾನದ 326ನೇ ವಿಧಿ ಪ್ರಕಾರ, ಭಾರತದ ಪ್ರಜೆಗೆ ಮಾತ್ರ ಮತ ಚಲಾಯಿಸುವ ಹಕ್ಕು ನೀಡಲಾಗುತ್ತದೆ. ಆಧಾರ್ ಎಂಬುದು ವ್ಯಕ್ತಿಯ ಗುರುತು ಸೂಚಿಸುತ್ತದೆ. ಈ ಕಾರಣಕ್ಕೆ, ಸಂವಿಧಾನದ 326ನೇ ವಿಧಿ ಮತ್ತು ಜನ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 23(4), 23(5) ಹಾಗೂ 23(6)ರಡಿಯ ಅವಕಾಶಗಳ ಅನ್ವಯ ಎಪಿಕ್ ಮತ್ತು ಆಧಾರ್ ಜೋಡಣೆ ಮಾಡಲಾಗುತ್ತದೆ’ ಎಂದು ಆಯೋಗವು ತಿಳಿಸಿದೆ.

ಪ್ರಮುಖ ಅಂಶಗಳು

- ಮತದಾರರು ಸ್ವ ಇಚ್ಛೆಯಿಂದ ತಮ್ಮ ಆಧಾರ್ ಸಂಖ್ಯೆಯನ್ನು ಎಪಿಕ್ ಜೊತೆ ಜೋಡಣೆ ಮಾಡಲು 2024ರ ಮಾರ್ಚ್ 31ರ ವರೆಗೆ ಚುನಾವಣಾ ಆಯೋಗ ಅವಕಾಶ ನೀಡಿತ್ತು.
- ದೇಶದಲ್ಲಿ ಪ್ರಸ್ತುತ 99.22 ಕೋಟಿ ಮತದಾರರಿದ್ದಾರೆ. 66.23 ಕೋಟಿ ಮತದಾರರು ಸ್ವ ಇಚ್ಛೆಯಿಂದ ತಮ್ಮ ಆಧಾರ್ ಸಂಖ್ಯೆಯನ್ನು ಆಯೋಗಕ್ಕೆ ನೀಡಿದ್ದಾರೆ. ಒಬ್ಬ ವ್ಯಕ್ತಿ ಮತದಾರನಾಗಿ/ಮತದಾರಳಾಗಿ ನೋಂದಣಿ ಮಾಡಿಸಲು ತನ್ನ ಆಧಾರ್ ಸಂಖ್ಯೆ ನೀಡುವುದು ಕಡ್ಡಾಯವಲ್ಲ ಎಂದು ಚುನಾವಣಾ ಆಯೋಗವು 2023ರ ಸೆಪ್ಟೆಂಬರ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು
- ಮತದಾರರ ಪಟ್ಟಿಗಳಲ್ಲಿ ಹೆಸರುಗಳು ಪುನರಾವರ್ತನೆಯಾಗುವುದನ್ನು ತಪ್ಪಿಸುವುದಕ್ಕಾಗಿ ಆಧಾರ್ ಸಂಖ್ಯೆಯನ್ನು ಎಪಿಕ್‌ಗೆ ಜೋಡಿಸುವ ಉದ್ದೇಶದಿಂದ ಚುನಾವಣಾ ಆಯೋಗವು 2015ರಲ್ಲಿ ರಾಷ್ಟ್ರೀಯ ಮತದಾರರ ಪಟ್ಟಿ ಶುದ್ಧೀಕರಣ ಮತ್ತು ದೃಢೀಕರಣ ಕಾರ್ಯಕ್ರಮಕ್ಕೆ (ಎನ್‌ಇಆರ್‌ಪಿಎಪಿ) ಚಾಲನೆ ನೀಡಿತ್ತು

ನಕಲಿ ಮತದಾರರ ಪತ್ತೆಗೆ ತಂತ್ರಾಂಶ

ಕೋಲ್ಕತ್ತ (ಪಿಟಿಐ): ನಕಲಿ ಮತದಾರರನ್ನು ಪತ್ತೆ ಮಾಡಲು ತಂತ್ರಾಂಶದಲ್ಲಿ ಹೊಸ ಆಯ್ಕೆಯೊಂದನ್ನು ಅಳವಡಿಸಲಾಗುತ್ತದೆ ಎಂದು ಕೇಂದ್ರ ಚುನಾವಣಾ ಆಯೋಗ ಹೇಳಿದೆ.

ನಕಲಿ ಮತದಾರರ ಬಗ್ಗೆ ಟಿಎಂಸಿ ದನಿ ಎತ್ತಿರುವ ಸಂದರ್ಭದಲ್ಲಿ ಆಯೋಗವು ಈ ಮಾತು ಹೇಳಿದೆ.

ನಿರ್ದಿಷ್ಟ ಎಪಿಕ್ ಸಂಖ್ಯೆಗೆ ಒಂದಕ್ಕಿಂತ ಹೆಚ್ಚು ಮತದಾರರ ಹೆಸರು ಜೋಡಣೆ ಆಗಿದೆಯೇ ಎಂಬುದನ್ನು ಪತ್ತೆ ಮಾಡಲು ಹೊಸ ಆಯ್ಕೆಯು ಮತದಾರರ ನೋಂದಣಿ ಅಧಿಕಾರಿಗಳಿಗೆ ನೆರವು ನೀಡಲಿದೆ ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮತಗಟ್ಟೆವಾರು ವಿವರ: ಚರ್ಚೆಗೆ ಸಿದ್ಧ’

ಪ್ರತಿ ಮತಗಟ್ಟೆಯಲ್ಲಿ ಎಷ್ಟು ಮಂದಿ ಮತದಾರರು ಹಕ್ಕು ಚಲಾಯಿಸಿದ್ದಾರೆ ಎಂಬ ವಿವರವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು ಎನ್ನುವ ಬೇಡಿಕೆಯ ಬಗ್ಗೆ ಚರ್ಚಿಸಲು ಸಿದ್ಧ ಎಂದು ಕೇಂದ್ರ ಚುನಾವಣಾ ಆಯೋಗ ಹೇಳಿರುವುದನ್ನು ಸುಪ್ರೀಂ ಕೋರ್ಟ್ ಮಂಗಳವಾರ ದಾಖಲಿಸಿಕೊಂಡಿದೆ.

ಈ ವಿಚಾರವಾಗಿ ಆಯೋಗಕ್ಕೆ 10 ದಿನಗಳಲ್ಲಿ ಮನವಿ ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್, ಕೆ.ವಿ. ವಿಶ್ವನಾಥನ್ ಅವರು ಇರುವ ತ್ರಿಸದಸ್ಯ ಪೀಠವು, ಅರ್ಜಿದಾರರಾದ ಸಂಸದೆ ಮಹುವಾ ಮೊಯಿತ್ರಾ ಹಾಗೂ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಗೆ ಹೇಳಿದೆ.

ಜಾಮೀನು ನಿರಾಕರಣೆಗೆ ‘ಸುಪ್ರೀಂ’ ಅಸಮಾಧಾನ

ನವದೆಹಲಿ (ಪಿಟಿಐ): ‘ತೀರಾ ಗಂಭೀರವಲ್ಲದ ಪ್ರಕರಣಗಳಲ್ಲಿ’ ತನಿಖೆ ಪೂರ್ಣಗೊಂಡಿದ್ದರೂ ವಿಚಾರಣಾ ನ್ಯಾಯಾಲಯಗಳು ಜಾಮೀನು ಅರ್ಜಿಗಳನ್ನು ತಿರಸ್ಕರಿಸಿರುವುದರ ಬಗ್ಗೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ನಾಡು ಪೊಲೀಸ್ ರಾಜ್ಯದಂತೆ ವರ್ತಿಸಬಾರದು ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ. ಎರಡು ದಶಕಗಳ ಹಿಂದೆ ಸಣ್ಣ ಪ್ರಕರಣಗಳಲ್ಲಿ ಜಾಮೀನು ಅರ್ಜಿಗಳು ಹೈಕೋರ್ಟ್ ಹಂತಕ್ಕೆ ಬರುತ್ತಿದ್ದುದೂ ಅಪರೂಪವಾಗಿತ್ತು ಎಂದು ಪೀಠ ಹೇಳಿದೆ.

‘ವಿಚಾರಣಾ ಕೋರ್ಟ್ ಹಂತದಲ್ಲಿ ಇತ್ಯರ್ಥ ಆಗಬೇಕಿದ್ದ ಜಾಮೀನು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇತ್ಯರ್ಥಪಡಿಸುತ್ತಿರುವುದು ಆಘಾತಕಾರಿ. ವ್ಯವಸ್ಥೆಯ ಮೇಲೆ ಅನಗತ್ಯವಾಗಿ ಹೊರೆ ಹಾಕಲಾಗುತ್ತಿದೆ’ ಎಂದು ನ್ಯಾಯಮೂರ್ತಿ ಓಕ ಅವರು ಜಾಮೀನು ಅರ್ಜಿಯೊಂದರ ವಿಚಾರಣೆ ಸಂದರ್ಭದಲ್ಲಿ ಹೇಳಿದರು.

ಈ ವಿಚಾರವಾಗಿ ಸುಪ್ರೀಂ ಕೋರ್ಟ್ ಕಳವಳ ವ್ಯಕ್ತಪಡಿಸುತ್ತಿರುವುದು ಇದೇ ಮೊದಲಲ್ಲ. ಸಣ್ಣ ಪ್ರಮಾಣದ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದ ಜಾಮೀನು ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಹೆಚ್ಚು ಉದಾರವಾದ ನಿಲುವನ್ನು ತಾಳುವಂತೆ ವಿಚಾರಣಾ ನ್ಯಾಯಾಲಯಗಳಿಗೆ ಹಾಗೂ ಹೈಕೋರ್ಟ್‌ಗಳಿಗೆ ಅದು ಮತ್ತೆ ಮತ್ತೆ ಸೂಚಿಸಿದೆ.

ಆರೋಪಿಯನ್ನು ಬಂಧನದಲ್ಲಿ ಇರಿಸಿಕೊಳ್ಳುವ ಅಗತ್ಯ ಇಲ್ಲದಿದ್ದಾಗ ವ್ಯಕ್ತಿಯ ಸ್ವಾತಂತ್ರ್ಯವನ್ನು ರಕ್ಷಿಸುವುದರ ಮಹತ್ವದ ಬಗ್ಗೆ ಹಲವು ಬಾರಿ ನಿರ್ದೇಶನ ನೀಡಿದ್ದರೂ ಅಧೀನ ನ್ಯಾಯಾಲಯಗಳು ಜಾಮೀನು ನಿರಾಕರಿಸುವುದನ್ನು ಸುಪ್ರೀಂ ಕೋರ್ಟ್ ಈ ಹಿಂದೆ ‘ಬೌದ್ಧಿಕ ಅಪ್ರಾಮಾಣಿಕತೆ’ ಎಂದು ಹೇಳಿತ್ತು.

ವಂಚನೆ ಪ್ರಕರಣವೊಂದರಲ್ಲಿ ಎರಡು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಜೈಲಿನಲ್ಲಿ ಇದ್ದ ಆರೋಪಿಯೊಬ್ಬನಿಗೆ ಪೀಠವು ಜಾಮೀನು ನೀಡಿದೆ. ವಿಚಾರಣೆ ಪೂರ್ಣಗೊಂಡು, ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದ್ದರೂ ವಿಚಾರಣಾ ನ್ಯಾಯಾಲಯ ಹಾಗೂ ಗುಜರಾತ್ ಹೈಕೋರ್ಟ್ ಆರೋಪಿಯ ಜಾಮೀನು ಅರ್ಜಿ ತಿರಸ್ಕರಿಸಿದ್ದವು.

‘ಅಕ್ರಮವಾಗಿ ನಿರ್ಮಿಸಿದ ಮಸೀದಿ ಕೆಡವಿ’

ಮುಂಬೈ (ಪಿಟಿಐ): ‘ಕಾನೂನು ಉಲ್ಲಂಘಿಸಿದರೆ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಈ ವಿಚಾರವನ್ನು ಕಾನೂನು ಜಾರಿ ಮಾಡುವ ಸಂಸ್ಥೆಗಳ ಸಿಬ್ಬಂದಿಯ ತಲೆಯಲ್ಲಿ ತುಂಬುವುದು ಅತ್ಯಗತ್ಯ’ ಎಂದು ಬಾಂಬೆ ಹೈಕೋರ್ಟ್ ಹೇಳಿದೆ. ಅಕ್ರಮವಾಗಿ ನಿರ್ಮಿಸಿದ್ದ ಮಸೀದಿಯನ್ನು ಕೆಡವಲು ವಿಫಲವಾದ ಠಾಣೆ ಮುನಿಸಿಪಲ್ ಪಾಲಿಕೆಗೆ ಕೋರ್ಟ್ ಚಾಟಿ ಬೀಸಿತು.

‘ತನ್ನ ಜಾಗದಲ್ಲಿ ಅಕ್ರಮವಾಗಿ ಮಸೀದಿಯನ್ನು ನಿರ್ಮಿಸಲಾಗಿದೆ’ ಎಂದು ದೂರಿ ‘ನ್ಯೂ ಶ್ರೀ ಸ್ವಾಮಿ ಸಮರ್ಥ ಬೋರಿವಡೆ’ ಎಂಬ ಖಾಸಗಿ ಹೌಸಿಂಗ್ ಕಂಪನಿಯೊಂದು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಮಾ.10ರಂದು ಈ ಅರ್ಜಿಯ ವಿಚಾರಣೆಯನ್ನು ವಿಭಾಗೀಯ ಪೀಠ ನಡೆಸಿತ್ತು.

ಸ್ವಚ್ಛತೆ... ಬ್ರಿಟನ್‌ನ ಬರ್ಮಿಂಗ್‌ಹ್ಯಾಂನ ಗುರುನಾನಕ್ ನಿಷ್ಕಾಮ್ ಸೇವಕ್ ಜಾಥಾದ ಸ್ವಯಂಸೇವಕರು ತಮ್ಮ ಸೇವೆಯ ಭಾಗವಾಗಿ ಅಮೃತಸರದ ಸ್ವರ್ಣ ಮಂದಿರವನ್ನು ಮಂಗಳವಾರ ಸ್ವಚ್ಛಗೊಳಿಸಿದರು ಪಿಟಿಐ ಚಿತ್ರ

ಎಸ್.ಸಿಗೆ ಒಳ ಮೀಸಲಾತಿ: ಮಸೂದೆಗೆ ಒಪ್ಪಿಗೆ

ಹೈದರಾಬಾದ್ (ಪಿಟಿಐ): ತೆಲಂಗಾಣ ವಿಧಾನಸಭೆಯು ಪರಿಶಿಷ್ಟ ಜಾತಿ ಉಪ ವರ್ಗೀಕರಣವನ್ನು ಜಾರಿಗೆ ತರುವ ‘ತೆಲಂಗಾಣ ಪರಿಶಿಷ್ಟ ಜಾತಿಗಳ (ಮೀಸಲಾತಿ ತರ್ಕಬದ್ಧಗೊಳಿಸುವ) ಮಸೂದೆ–2025’ಯನ್ನು ಮಂಗಳವಾರ ಅಂಗೀಕರಿಸಿತು.

ಎ. ರೇವಂತ ರೆಡ್ಡಿ

ಮಸೂದೆಯನ್ನು ಮಂಡಿಸಿದ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ, ‘ಸುಪ್ರೀಂ ಕೋರ್ಟ್ ಕಳೆದ ವರ್ಷ ಎಸ್.ಸಿ ಉಪ ವರ್ಗೀಕರಣದ ಪರವಾಗಿ ತೀರ್ಪು ನೀಡಿದ ನಂತರ ನಮ್ಮ ಸರ್ಕಾರವು ಸಂಪುಟ ಉಪಸಮಿತಿಯನ್ನು ರಚಿಸಿದೆ’ ಎಂದು ಹೇಳಿದರು.

‘ಎಸ್.ಸಿ ಉಪ ವರ್ಗೀಕರಣದ ಅನುಷ್ಠಾನಕ್ಕೆ ಶಿಫಾರಸು ಮಾಡಲು ಏಕ ಸದಸ್ಯ ನ್ಯಾಯಾಂಗ ಆಯೋಗವನ್ನು ನೇಮಿಸಿದ್ದ ಸರ್ಕಾರ, ಆ ಬಳಿಕ ಅದರ ವರದಿಯನ್ನು ಅಂಗೀಕರಿಸಿದೆ. ಆಯೋಗವು ರಾಜ್ಯದ 59 ಎಸ್.ಸಿ ಉಪ ಜಾತಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಎಸ್.ಸಿಗಳಿಗೆ ಲಭ್ಯವಿರುವ ಶೇ15 ರಷ್ಟು ಮೀಸಲಾತಿಯ ಸಮಾನ ಹಂಚಿಕೆಯನ್ನು ಖಚಿತಪಡಿಸಿದೆ’ ಎಂದರು.

15 ಉಪ ಜಾತಿಗಳನ್ನು ಒಳಗೊಂಡ ಮೊದಲ ಗುಂಪಿಗೆ ಶೇ 1 ಮೀಸಲಾತಿ, 18 ಉಪ ಜಾತಿಗಳು ಇರುವ ಎರಡನೇ ಗುಂಪಿಗೆ ಶೇ 9 ಮೀಸಲಾತಿ ಹಾಗೂ 26 ಉಪ ಜಾತಿಗಳನ್ನು ಒಳಗೊಂಡ ಮೂರನೇ ಗುಂಪಿಗೆ ಶೇ 5 ಮೀಸಲಾತಿ ನಿಗದಿಪಡಿಸಲಾಗಿದೆ ಎಂದರು.

ಲೋಕಸಭೆಯಲ್ಲಿ ಪ್ರಧಾನಿ ಭಾಷಣ ● ಕುಂಭಮೇಳದ ಯಶಸ್ಸಿಗೆ ಶ್ಲಾಘನೆ

ಕಾಲ್ತುಳಿತ ಪ್ರಸ್ತಾಪಿಸದ್ದಕ್ಕೆ ಗದ್ದಲ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಮಹಾಕುಂಭವು ದೇಶದಲ್ಲಿ ಏಕತೆಯ ಮನೋಭಾವವನ್ನು ಬಲಪಡಿಸಿದೆ ಮತ್ತು ಇಷ್ಟು ದೊಡ್ಡ ಮೇಳದ ಯಶಸ್ವಿ ಆಯೋಜನೆಯು ಭಾರತದ ಸಾಮರ್ಥ್ಯಗಳ ಬಗ್ಗೆ ‘ಸಂದೇಹ ಮತ್ತು ಆತಂಕ’ ಹೊಂದಿದ್ದವರಿಗೆ ಸೂಕ್ತ ಉತ್ತರವನ್ನು ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಲೋಕಸಭೆಯಲ್ಲಿ ಮಂಗಳವಾರ ಹೇಳಿದರು.

ನರೇಂದ್ರ ಮೋದಿ

ಆದರೆ ಅವರು ಮಾತನಾಡುವಾಗ ಮಹಾಕುಂಭದಲ್ಲಿ ಸಂಭವಿಸಿದ ಕಾಲ್ತುಳಿತ ಘಟನೆ ಬಗ್ಗೆ ಯಾವುದೇ ಹೇಳಿಕೆ ನೀಡಲಿಲ್ಲ. ಇದರಿಂದ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟನೆ ನಡೆಸಿದ್ದರಿಂದ ಕಲಾಪವನ್ನು ಮುಂದೂಡಲಾಯಿತು.

‘ಸ್ವದೇಶಿ ಚಳವಳಿ, ಸ್ವಾಮಿ ವಿವೇಕಾನಂದ ಅವರ ಐತಿಹಾಸಿಕ ಷಿಕಾಗೊ ಭಾಷಣ, 1857ರ ಸ್ವಾತಂತ್ರ್ಯ ಸಂಗ್ರಾಮ, ಭಗತ್ ಸಿಂಗ್ ಅವರ ಪ್ರಾಣತ್ಯಾಗ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ‘ದಿಲ್ಲಿ ಚಲೋ’ ಕರೆ ಮತ್ತು ಮಹಾತ್ಮ ಗಾಂಧಿ ಅವರ ದಂಡಿ ಮೆರವಣಿಗೆಯಿಂದ ಸ್ಫೂರ್ತಿ ಪಡೆಯುವ ಮೂಲಕ ದೇಶವು ಸ್ವಾತಂತ್ರ್ಯ ಗಳಿಸಿತು. ಅದೇ ರೀತಿಯಲ್ಲಿ ಮಹಾಕುಂಭವು ಜಾಗೃತ ರಾಷ್ಟ್ರವೊಂದರ ಚೈತನ್ಯವನ್ನು ಪ್ರತಿಬಿಂಬಿಸುವ ಮಹತ್ವದ ಮೈಲಿಗಲ್ಲು’ ಎಂದು ಪ್ರಧಾನಿ ಬಣ್ಣಿಸಿದರು.

> **ಮಹಾ ಕುಂಭಮೇಳದಲ್ಲಿ ನಮ್ಮ ರಾಷ್ಟ್ರೀಯ ಪ್ರಜ್ಞೆ ಜಾಗೃತಗೊಂಡದ್ದನ್ನು ಕಂಡಿದ್ದೇವೆ. ಜಗತ್ತಿನ ಅತಿದೊಡ್ಡ ಮೇಳವು ಇಡೀ ದೇಶವನ್ನು ಒಗ್ಗೂಡಿಸಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಮೋದಿ ತಮ್ಮ 13 ನಿಮಿಷಗಳ ಭಾಷಣವನ್ನು ಕೊನೆಗೊಳಿಸುತ್ತಿದ್ದಂತೆಯೇ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಧ್ಯಪ್ರವೇಶಿಸಲು ಎದ್ದು ನಿಂತರು. ಆದರೆ, ಸ್ಪೀಕರ್ ಓಂ ಬಿರ್ಲಾ ಅವರು ನಿಯಮಗಳನ್ನು ಉಲ್ಲೇಖಿಸಿ, ರಾಹುಲ್‌ಗೆ ಮಾತನಾಡಲು ಅವಕಾಶ ನಿರಾಕರಿಸಿದರು. ಇದರಿಂದ ಕೆರಳಿದ ವಿರೋಧ ಪಕ್ಷಗಳ ಸದಸ್ಯರು ಸ್ಪೀಕರ್ ಪೀಠದ ಬಳಿ ಪ್ರತಿಭಟಿಸಿದರು.

ಸದನವನ್ನು ಮೊದಲು 30 ನಿಮಿಷ ಮುಂದೂಡಲಾಯಿತು. ಮಧ್ಯಾಹ್ನ 1ಕ್ಕೆ ಕಲಾಪ ಮತ್ತೆ ಆರಂಭವಾದಾಗಲೂ ವಿಪಕ್ಷ ಸದಸ್ಯರು ಪ್ರತಿಭಟನೆ ಮುಂದುವರಿಸಿದರು. ಆದರೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗದ್ದಲದ ನಡುವೆಯೇ ಚರ್ಚೆಗೆ ಉತ್ತರಿಸಿದರು. ಅವರು ಮಾತು ಕೊನೆಗೊಳಿಸುತ್ತಿದ್ದಂತೆಯೇ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

‘ಏಕ ಭಾರತ, ಶ್ರೇಷ್ಠ ಭಾರತ’: ಪ್ರಯಾಗರಾಜ್‌ನ ಸಂಗಮದ ದಡದಲ್ಲಿ ವಿವಿಧ ಭಾಷೆಗಳನ್ನಾಡುವ ಜನರು ‘ಹರ ಹರ ಗಂಗೆ’ ಎಂದು ಜಪಿಸಿದ್ದು ‘ಏಕ ಭಾರತ, ಶ್ರೇಷ್ಠ ಭಾರತ’ದ ನೋಟವನ್ನು ನಮ್ಮ ಮುಂದಿಟ್ಟಿದೆ ಎಂದು ಪ್ರಧಾನಿ ತಮ್ಮ ಭಾಷಣದಲ್ಲಿ ಹೇಳಿದರು.

‘ನವ ಭಾರತದಲ್ಲಿ ಮಾತಿಗೆ ಅವಕಾಶವಿಲ್ಲ’

ರಾಹುಲ್ ಗಾಂಧಿ

‘ಮೋದಿ ಅವರು ಹೇಳಿರುವುದನ್ನು ಬೆಂಬಲಿಸಿ ಮಾತನಾಡಲು ಬಯಸಿದ್ದೆ’ ಎಂದು ರಾಹುಲ್ ಗಾಂಧಿ ಅವರು ಸಂಸತ್ತಿನ ಹೊರಗೆ ಸುದ್ದಿಗಾರರಲ್ಲಿ ತಿಳಿಸಿದರು.

‘ಕುಂಭ ಮೇಳವು ನಮ್ಮ ಸಂಪ್ರದಾಯ, ಇತಿಹಾಸ ಮತ್ತು ಸಂಸ್ಕೃತಿ. ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡವರಿಗೆ ಅವರು ಶ್ರದ್ಧಾಂಜಲಿ ಸಲ್ಲಿಸದ್ದಕ್ಕೆ ನಮ್ಮ ಆಕ್ಷೇಪ ಇದೆ. ನಾನು ಇನ್ನೊಂದು ವಿಷಯ ಹೇಳಲು ಬಯಸಿದ್ದೆ. ಕುಂಭಕ್ಕೆ ಹೋದ ಯುವಕರಲ್ಲಿ ಎಷ್ಟೋ ಮಂದಿ ನಿರುದ್ಯೋಗಿಗಳಿದ್ದು, ಅವರಿಗೆ ಉದ್ಯೋಗ ದೊರಕಿಸಿಕೊಡಲು ಪ್ರಧಾನಿ ಕ್ರಮವಹಿಸಬೇಕು’ ಎಂದರು. ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ನೀಡಬೇಕು. ಆದರೆ ನಮಗೆ ಅನುಮತಿ ನೀಡಲಿಲ್ಲ. ಇದು ನವ ಭಾರತ’ ಎಂದು ಹೇಳಿದರು.

‘ಕೇಂದ್ರದ ಬಳಿ ಮಾಹಿತಿ ಇಲ್ಲ’

ಮಹಾಕುಂಭ ದಲ್ಲಿ ನಡೆದ ಕಾಲ್ತುಳಿತ ಘಟನೆ ಬಗ್ಗೆ ಉತ್ತರ ಪ್ರದೇಶ ಸರ್ಕಾರ ತನಿಖೆ ನಡೆಸಿದ್ದು, ಸಾವಿಗೀಡಾದವರ ಮತ್ತು ಗಾಯಗೊಂಡವರ ಬಗ್ಗೆ ಕೇಂದ್ರ ಸರ್ಕಾರದ ಬಳಿ ಯಾವುದೇ ಮಾಹಿತಿ ಇಲ್ಲ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಲೋಕಸಭೆಗೆ ತಿಳಿಸಿದರು.

ಕಾಂಗ್ರೆಸ್ ಸಂಸದ ಕೆ.ಸಿ. ವೇಣುಗೋಪಾಲ್ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಸಚಿವರು, ‘ಕಾಲ್ತುಳಿತ ಸೇರಿದಂತೆ ಯಾವುದೇ ದುರಂತ ಸಂಭವಿಸಿದರೆ ತನಿಖೆ ನಡೆಸುವ ಮತ್ತು ಮೃತರ ಕುಟುಂಬಗಳಿಗೆ ಹಾಗೂ ಗಾಯಾಳುಗಳಿಗೆ ಆರ್ಥಿಕ ನೆರವು ನೀಡುವ ಜವಾಬ್ದಾರಿ ಸಂಬಂಧಪಟ್ಟ ರಾಜ್ಯ ಸರ್ಕಾರಗಳದ್ದಾಗಿರುತ್ತದೆ. ಕೇಂದ್ರ ಸರ್ಕಾರವು ಯಾವುದೇ ಮಾಹಿತಿಯನ್ನು ಇಟ್ಟುಕೊಂಡಿರುವುದಿಲ್ಲ’ ಎಂದು ತಿಳಿಸಿದ್ದಾರೆ.

ಪ್ರಯಾಗರಾಜ್‌ನ ಮಹಾಕುಂಭ ಮೇಳದಲ್ಲಿ ಸಂಭವಿಸಿದ್ದ ಕಾಲ್ತುಳಿತದಲ್ಲಿ 30 ಮಂದಿ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

ರಾಬ್ಡಿ ದೇವಿ ವಿಚಾರಣೆಗೆ ಹಾಜರು

ಪಟ್ನಾ (ಪಿಟಿಐ): ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಹಾಗೂ ಅವರ ಮಗ ಶಾಸಕ ತೇಜ್ ಪ್ರತಾಪ್ ಅವರು ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಉದ್ಯೋಗಕ್ಕಾಗಿ ಭೂಮಿ ಹಗರಣಕ್ಕೆ ಸಂಬಂಧಿಸಿ ಮಂಗಳವಾರ ಹಾಜರಾದರು. ಬುಧವಾರ ವಿಚಾರಣೆಗೆ ಹಾಜರಾಗುವಂತೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರಿಗೆ ಇ.ಡಿ ಸೂಚಿಸಿದೆ.

ರಾಬ್ಡಿ ದೇವಿ ಅವರು ತಮ್ಮ ಮಗಳು, ಸಂಸದೆ ಮೀಸಾ ಭಾರತಿ ಅವರೊಂದಿಗೆ ವಿಚಾರಣೆಗೆ ಹಾಜರಾದರು. ಇ.ಡಿ ಕಚೇರಿಯ ಎದುರು ಆರ್‌ಜೆಡಿಯ ನೂರಾರು ಕಾರ್ಯಕರ್ತರು ಜಮಾಯಿಸಿದ್ದರು.

‘ಪ್ರಕರಣದಲ್ಲಿ ‘ಹೆಚ್ಚುವರಿ ವಿಚಾರ’ಗಳು ಮುನ್ನೆಲೆಗೆ ಬರುತ್ತಿವೆ. ಇದರಿಂದಾಗಿ ಹೊಸದಾಗಿ ಪ್ರಶ್ನೋತ್ತರ ನಡೆಸುವುದು ಅನಿವಾರ್ಯ’ ಎಂದು ಇ.ಡಿ ಹೇಳಿದೆ.

‘ನಾಮಫಲಕದಲ್ಲಿ ತಮಿಳು ಕಡ್ಡಾಯ’

ಪುದುಚೇರಿ (ಪಿಟಿಐ): ‘ಅಂಗಡಿ, ಸಂಸ್ಥೆಗಳ ನಾಮಫಲಕಗಳನ್ನು ತಮಿಳಿನಲ್ಲಿ ಹಾಕುವುದನ್ನು ಕಡ್ಡಾಯ ಗೊಳಿಸುವ ಸುತ್ತೋಲೆ ಹೊರಡಿಸಲಾಗುವುದು’ ಎಂದು ಪುದುಚೇರಿ ಮುಖ್ಯಮಂತ್ರಿ ಎನ್.ರಂಗಸ್ವಾಮಿ ತಿಳಿಸಿದ್ದಾರೆ.

ಪಕ್ಷೇತರ ಶಾಸಕ ಜಿ.ನೆಹರು ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು,‘ಅಂಗಡಿಗಳ ಮೇಲೆ ನಾಮಫಲಕಗಳನ್ನು ತಮಿಳಿನಲ್ಲಿ ಪ್ರದರ್ಶಿಸುವಂತೆ ಸೂಚನೆ ನೀಡಲಾಗಿದೆ’ ಎಂದು ತಿಳಿಸಿದರು.

‘ಅಮೆರಿಕ ಮೊದಲು: ತಪ್ಪು ಅರ್ಥ ಬೇಡ’

ನವದೆಹಲಿ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ‘ಅಮೆರಿಕ ಮೊದಲು’ ನೀತಿಯನ್ನು ‘ಅಮೆರಿಕ ಮಾತ್ರ’ ಎಂಬುದಾಗಿ ತಪ್ಪಾಗಿ ಅರ್ಥೈಸಿಕೊಳ್ಳಬಾರದು ಎಂದು ಅಮೆರಿಕದ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ನಿರ್ದೇಶಕಿ ತುಳಸಿ ಗಬಾರ್ಡ್ ಮಂಗಳವಾರ ಹೇಳಿದ್ದಾರೆ.



ತುಳಸಿ ಗಬಾರ್ಡ್

ರೈಸಿನಾ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ-ಅಮೆರಿಕ ಸಂಬಂಧವನ್ನು ಇನ್ನಷ್ಟು ಕ್ಷೇತ್ರಗಳಿಗೆ ವಿಸ್ತರಿಸಲು ‘ಬಹುದೊಡ್ಡ ಅವಕಾಶ ಇದೆ’ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ಮೋದಿ ಮತ್ತು ಟ್ರಂಪ್ ಅವರು ಕಳೆದ ತಿಂಗಳು ವಾಷಿಂಗ್ಟನ್ ಡಿಸಿಯಲ್ಲಿ ನಡೆಸಿದ ಮಾತುಕತೆ ವೇಳೆ ಉಭಯ ದೇಶಗಳ ನಡುವಣ ಒಟ್ಟಾರೆ ದ್ವಿಪಕ್ಷೀಯ ಸಂಬಂಧವನ್ನು ಹೆಚ್ಚಿಸುವ ಕುರಿತು ಚರ್ಚಿಸಿದ್ದಾರೆ ಎಂದರು.

24 ದಲಿತರ ಹತ್ಯೆ; ಮೂವರಿಗೆ ಗಲ್ಲುಶಿಕ್ಷೆ

ಲಖನೌ: 44 ವರ್ಷಗಳ ಹಿಂದೆ ಉತ್ತರಪ್ರದೇಶದ ಫಿರೋಜಾಬಾದ್ ಜಿಲ್ಲೆಯ ದಿಹುಲಿ ಗ್ರಾಮದಲ್ಲಿ ಏಳು ಮಹಿಳೆಯರು ಸೇರಿ 24 ದಲಿತರನ್ನು ಹತ್ಯೆಗೈದ ಮೂವರನ್ನು ಅಪರಾಧಿಗಳು ಎಂದು ಘೋಷಿಸಿದ ವಿಶೇಷ ನ್ಯಾಯಾಲಯವು ಮಂಗಳವಾರ ಮರಣ ದಂಡನೆ ಶಿಕ್ಷೆ ಘೋಷಿಸಿದೆ. ಅಪರಾಧಿಗಳಿಗೆ ತಲಾ ₹50 ಸಾವಿರ ದಂಡ ವಿಧಿಸಿದೆ.

‘ಪ್ರಕರಣದಲ್ಲಿ ಕಪ್ತಾನ್ ಸಿಂಗ್, ರಾಮ್‌ಸೇವಕ್, ರಾಮ್‌ಪಾಲ್‌ಗೆ ವಿಶೇಷ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದ 17 ಮಂದಿ ವಿರುದ್ಧ ಆರೋಪ ಹೊರಿಸಲಾಗಿತ್ತು, ಈ ಪೈಕಿ 13 ಮಂದಿ ವಿಚಾರಣೆ ಹಂತದಲ್ಲಿಯೇ ಮೃತಪಟ್ಟಿದ್ದು, ಮತ್ತೊಬ್ಬ ಆರೋಪಿ ನಾಪತ್ತೆಯಾಗಿದ್ದಾರೆ’ ಎಂದು ಸರ್ಕಾರಿ ವಕೀಲರು ತಿಳಿಸಿದ್ದಾರೆ.

ತೆಲಂಗಾಣ: ಬಿ.ಸಿ ಮೀಸಲು ಹೆಚ್ಚಳ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಹಿಂದುಳಿದ ವರ್ಗಗಳ (ಬಿ.ಸಿ) ಮೀಸಲಾತಿಯನ್ನು ಶೇ 42ಕ್ಕೆ ಏರಿಸುವ ಮತ್ತು ಪರಿಶಿಷ್ಟ ಜಾತಿಯ (ಎಸ್‌ಸಿ) ಉಪ ವರ್ಗೀಕರಣಕ್ಕೆ ಸಂಬಂಧಿಸಿದ ಎರಡು ಮಹತ್ವದ ಮಸೂದೆಗಳಿಗೆ ತೆಲಂಗಾಣ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿದೆ.

ಹಿಂದುಳಿದ ವರ್ಗಗಳ ಮೀಸಲಾತಿ ಹೆಚ್ಚಳದಿಂದ ಒಟ್ಟಾರೆ ಮೀಸಲಾತಿ ಪ್ರಮಾಣ ಶೇ 50 ಅನ್ನು ದಾಟಲಿದೆ. ಹೀಗಾಗಿ ಆ ಮಸೂದೆಯನ್ನು ಸಂಸತ್ತಿನ ಅಂಗೀಕಾರಕ್ಕಾಗಿ ಕಳುಹಿಸಲಾಗುತ್ತದೆ.

ಎಸ್.ಸಿ ಉಪ ವರ್ಗೀಕರಣ ಮಸೂದೆಯು ಪರಿಷತ್ತಿನಲ್ಲಿ ಅಂಗೀಕಾರ ಆಗಬೇಕಿದೆ. ಇದು ಕಾನೂನು ಆದರೆ, ಸುಪ್ರೀಂ ಕೋರ್ಟ್ ಅನುಮತಿಸಿದಂತೆ ಎಸ್.ಸಿ ಉಪ ವರ್ಗೀಕರಣವನ್ನು ಜಾರಿಗೊಳಿಸಿದ ದೇಶದ ಮೊದಲ ರಾಜ್ಯ ಎಂಬ ಹಿರಿಮೆಗೆ ತೆಲಂಗಾಣ ಪಾತ್ರವಾಗಲಿದೆ.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಶೇ42ಕ್ಕೆ ಏರಿಸಲಾಗುವುದು ಎಂದು ಚುನಾವಣೆ ವೇಳೆ ಕಾಂಗ್ರೆಸ್ ಭರವಸೆ ನೀಡಿತ್ತು.

ಕರ್ನಾಟಕ ವಿರುದ್ಧ ಗೆದ್ದ ಹರಿಯಾಣ ಎಂಟರ ಘಟ್ಟಕ್ಕೆ

ಚೆಂಡಿನಲ್ಲೂ ಮಿಂಚಿದ ಶಫಾಲಿ ಹ್ಯಾಟ್ರಿಕ್

ಗುವಾಹಟಿ (ಪಿಟಿಐ): ಹರಿಯಾಣ ತಂಡವನ್ನು ಪ್ರತಿನಿಧಿಸುತ್ತಿರುವ ಭಾರತದ ಬ್ಯಾಟರ್ ಶಫಾಲಿ ವರ್ಮಾ ಅವರು 23 ವರ್ಷದೊಳಗಿನವರ ಬಿಸಿಸಿಐ ಮಹಿಳಾ ಏಕದಿನ ಟ್ರೋಫಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ತಂಡದ ವಿರುದ್ಧ ಹ್ಯಾಟ್ರಿಕ್ ವಿಕೆಟ್‌ನೊಂದಿಗೆ ಮಿಂಚಿದರು.

ಉತ್ತರ ಗುವಾಹಟಿಯ ಎಸಿಎ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹರಿಯಣ ತಂಡವು ಆರು ವಿಕೆಟ್‌ಗಳಿಂದ ಜಯ ಸಾಧಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ಸಾಂದರ್ಭಿಕ ಆಫ್ ಸ್ಪಿನ್ ಬೌಲರ್ ಆಗಿರುವ 21 ವರ್ಷ ವಯಸ್ಸಿನ ಶಫಾಲಿ 44ನೇ ಓವರ್‌ನ ಕೊನೆಯ ಎರಡು ಎಸೆತಗಳಲ್ಲಿ ಸಲೋನಿ ಪಿ. ಮತ್ತು ಸೌಮ್ಯಾ ವರ್ಮಾ ಅವರ ವಿಕೆಟ್ ಪಡೆದರು. 46ನೇ ಓವರ್‌ನ ಮೊದಲ ಎಸೆತದಲ್ಲಿ ನಮಿತಾ ಡಿಸೋಜ ಅವರ ವಿಕೆಟ್ ಗಳಿಸಿ ಹ್ಯಾಟ್ರಿಕ್ ಪೂರೈಸಿದರು.

ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಗೆ ಹೆಸರಾಗಿರುವ ಶಫಾಲಿ ಅವರನ್ನು ಕಳೆದ ವರ್ಷ ಯುಎಇಯಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಬಳಿಕ ಭಾರತ ತಂಡದಿಂದ ಕೈಬಿಡ ಲಾಗಿತ್ತು. ಅವರು ದೇಶಿ ಕ್ರಿಕೆಟ್‌ನಲ್ಲಿ ಸ್ಥಿರ ಪ್ರದರ್ಶನ ನೀಡಿ, ರಾಷ್ಟ್ರೀಯ ತಂಡಕ್ಕೆ ಮರಳುವ ಛಲದಲ್ಲಿದ್ದಾರೆ.

ಕರ್ನಾಟಕಕ್ಕೆ ನಿರಾಸೆ: ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು ಮಿಥಿಲಾ ವಿನೋದ್ (90;87ಎ, 4x16) ಅವರ ಬ್ಯಾಟಿಂಗ್ ಬಲದಿಂದ 49.3 ಓವರ್‌ಗಳಲ್ಲಿ 217 ರನ್ ಗಳಿಸಿತು. ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಶಫಾಲಿ ಮೂರು ವಿಕೆಟ್ ಪಡೆದರೆ, ಅಮನ್‌ದೀಪ್ ಕೌರ್ ಮತ್ತು ತ್ರಿವೇಣಿ ವಶಿಷ್ಠ ತಲಾ ಎರಡು ವಿಕೆಟ್ ಪಡೆದರು.

ಗುರಿಯನ್ನು ಬೆನ್ನಟ್ಟಿದ ಹರಿಯಾಣ ತಂಡವು 42 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 219 ರನ್ ಗಳಿಸಿ ಜಯ ಸಾಧಿಸಿತು. ಬ್ಯಾಟಿಂಗ್‌ನಲ್ಲಿ ಶಫಾಲಿ (18) ನಿರಾಸೆ ಮೂಡಿಸಿದರು. ಆದರೆ, ಸೋನಿಯಾ ಮೆಂಧಿಯಾ (66;79ಎ, 4x8) ಮತ್ತು ತನಿಷಾ ಓಹ್ಲಾನ್ (ಔಟಾಗದೇ 77;77ಎ, 4x10, 6x1) ತಾಳ್ಮೆಯ ಆಟವಾಡಿ ಗೆಲುವಿನ ರೂವಾರಿಗಳಾದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 49.3 ಓವರ್‌ಗಳಲ್ಲಿ 217 (ಮಿಥಿಲಾ ವಿನೋದ್ 90, ಸಲೋನಿ 30; ಅಮನ್‌ದೀಪ್ ಕೌರ್ 32ಕ್ಕೆ 2, ತ್ರಿವೇಣಿ ವಶಿಷ್ಠ 38ಕ್ಕೆ 2, ಶಫಾಲಿ ವರ್ಮಾ 20ಕ್ಕೆ 3). ಹರಿಯಾಣ: 42 ಓವರ್‌ಗಳಲ್ಲಿ 4ಕ್ಕೆ 219 (ಸೋನಿಯಾ ಮೆಂಧಿಯಾ 66, ತನಿಷಾ ಓಹ್ಲಾನ್ ಔಟಾಗದೇ 77; ನಮಿತಾ ಡಿಸೋಜ 43ಕ್ಕೆ 2, ಸಲೋನಿ ಪಿ. 49ಕ್ಕೆ 2). ಫಲಿತಾಂಶ: ಹರಿಯಾಣಕ್ಕೆ ಆರು ವಿಕೆಟ್ ಜಯ. **ಪಂದ್ಯದ ಆಟಗಾರ್ತಿ:** ತನಿಷಾ ಓಹ್ಲಾನ್

33 ಪೊಲೀಸರು, ಐವರು ನಾಗರಿಕರಿಗೆ ಗಾಯ ● 80ಕ್ಕೂ ಹೆಚ್ಚು ಜನರು ವಶಕ್ಕೆ

ನಾಗ್ಪುರ: ಪರಿಸ್ಥಿತಿ ನಿಯಂತ್ರಣಕ್ಕೆ ಕರ್ಫ್ಯೂ ಜಾರಿ

> **ಕೋಮುಗಲಭೆ ಸೃಷ್ಟಿಸುವ ಉದ್ದೇಶದಿಂದ ನಡೆದ ಪೂರ್ವಯೋಜಿತ ದಾಳಿ ಇದಾಗಿದೆ. ಜನಸಾಮಾನ್ಯರು ಮತ್ತು ಪೊಲೀಸರ ಮೇಲೂ ದಾಳಿ ನಡೆದಿದೆ**
> **ಏಕನಾಥ ಶಿಂದೆ,** ಮಹಾರಾಷ್ಟ್ರ ಡಿಸಿಎಂ

> **ಹಿಂಸೆಗೆ ಪ್ರಚೋದನೆ ನೀಡಿದ್ದು ಸರ್ಕಾರವೇ. ದೊರೆಯೊಬ್ಬರ ಫೋಟೊ ಸುಟ್ಟು ಹಾಕಲಾ ಯಿತು. ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ**
> **ಅಸಾದುದ್ದೀನ್ ಓವೈಸಿ**
> ಎಐಎಂಐಎಂ ಮುಖ್ಯಸ್ಥ

> **ಯಾರೊಬ್ಬರ ಸಮಾಧಿ ಒಡೆಯುವುದು ಅಥವಾ ಅದಕ್ಕೆ ಹಾನಿ ಮಾಡುವುದು ತಪ್ಪು. ಇದು ಸಹೋದರತ್ವ, ಶಾಂತಿ, ಸಹಬಾಳ್ವೆಯನ್ನು ನಾಶ ಮಾಡುತ್ತದೆ**
> **ಮಾಯಾವತಿ,** ಬಿಎಸ್‌ಪಿ ಮುಖ್ಯಸ್ಥೆ

> **ಮಹಾರಾಷ್ಟ್ರ ಸಂಭಾಜಿ ಮಹಾರಾಜ ಅವರಿಗೆ ಸೇರಿದ್ದು. ಇಲ್ಲಿ ಔರಂಗಜೇಬ್ ಗುರುತು ಬೇಡ. ಕೆಲವರು ಔರಂಗಜೇಬ್‌ನ ವೈಭವೀಕರಿಸುತ್ತಿದ್ದಾರೆ. ಇದನ್ನು ನಾವು ಸಹಿಸಲ್ಲ**
> **ದೇವೇಶ್ ಮಿಶ್ರಾ,** ವಿಎಚ್‌ಪಿ ನಾಯಕ

> **ರಾಜ್ಯದ ಆರ್ಥಿಕ ಸ್ಥಿತಿಗತಿ, ಸಾಲ, ನಿರುದ್ಯೋಗದ ಕುರಿತ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಅಸ್ಥಿರತೆ ಸೃಷ್ಟಿಸಲಾಗುತ್ತಿದೆ**
> **ಪ್ರಿಯಾಂಕಾ ಚತುರ್ವೇದಿ,** ಶಿವಸೇನಾ (ಉದ್ಧವ್ ಬಣ) ಸಂಸದೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನಾಗ್ಪುರ (ಪಿಟಿಐ): ಮೊಘಲ್ ದೊರೆ ಔರಂಗಜೇಬ್ ಸಮಾಧಿ ತೆರವಿಗೆ ಆಗ್ರಹಿಸಿ ಪ್ರತಿಭಟನೆ ನಡೆದ ಬಳಿಕ ನಾಗ್ಪುರದಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ನಗರದ ಕೆಲವು ಭಾಗಗಳಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ. ಗಲಭೆಗೆ ಸಂಬಂಧಿಸಿದಂತೆ 80ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆಯಲಾಗಿದೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಐದು ಎಫ್‌ಐಆರ್ ದಾಖಲಿಸಲಾಗಿದೆ ಎಂದು ನಾಗ್ಪುರ ಪೊಲೀಸ್ ಆಯುಕ್ತ ರವೀಂದ್ರ ಕುಮಾರ್ ಸಿಂಗಾಲ್ ತಿಳಿಸಿದರು.

ಛತ್ರಪತಿ ಸಂಭಾಜಿನಗರ ಜಿಲ್ಲೆಯಲ್ಲಿರುವ ಔರಂಗಜೇಬ್ ಸಮಾಧಿಯನ್ನು ತೆರವು ಮಾಡುವಂತೆ ಆಗ್ರಹಿಸಿ ಬಲಪಂಥೀಯ ಸಂಘಟನೆಗಳು (ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳ) ಪ್ರತಿಭಟನೆ ನಡೆಸಿದ್ದವು. ಈ ಸಂದರ್ಭದಲ್ಲಿ ಸಮಾಧಿ ಪ್ರತಿಕೃತಿಗೆ ಬೆಂಕಿ ಹಚ್ಚಲಾಗಿತ್ತು. ಆದರೆ ಪ್ರತಿಭಟನೆಯಲ್ಲಿ ಸಮುದಾಯವೊಂದರ ಪವಿತ್ರ ಪುಸ್ತಕಕ್ಕೆ ಬೆಂಕಿ ಹಾಕಲಾಗಿದೆ ಎಂಬ ವದಂತಿ ಹರಡಿದ ನಂತರ ನಾಗ್ಪುರದ ಮಹಲ್ ಪ್ರದೇಶದ ಚಿಟನಿಸ್ ಪಾರ್ಕ್‌ನಲ್ಲಿ ಸೋಮವಾರ ಸಂಜೆ 7.30ರ ಸುಮಾರಿಗೆ ಹಿಂಸಾಚಾರ ಆರಂಭವಾಗಿತ್ತು. ನೂರಾರು ಜನರ ಗುಂಪು ಪೊಲೀಸರತ್ತ ಕಲ್ಲು ತೂರಾಟ ನಡೆಸಿತು, ಕೆಲವೆಡೆ ಪೆಟ್ರೋಲ್ ಬಾಂಬ್ ಎಸೆಯಿತು ಎಂದು ಅಧಿಕಾರಿಗಳು ತಿಳಿಸಿದರು.

ಗಲಭೆಕೋರರು ವಾಹನಗಳಿಗೆ ಸೋಮವಾರ ರಾತ್ರಿ ಬೆಂಕಿ ಹಚ್ಚಿದ್ದರು –ಪಿಟಿಐ ಚಿತ್ರ

ನಂತರ ಹಂಸಪುರಿ ಪ್ರದೇಶದಲ್ಲಿ ರಾತ್ರಿ ಹಿಂಸಾಚಾರ ಭುಗಿಲೆದ್ದಿತ್ತು. ಉದ್ರಿಕ್ತ ಗುಂಪು ಹಲವು ವಾಹನಗಳಿಗೆ ಬೆಂಕಿ ಇಟ್ಟಿತ್ತು. ಆ ಪ್ರದೇಶದ ಮನೆಗಳು ಮತ್ತು ಕ್ಲಿನಿಕ್‌ಗಳಿಗೆ ಬೆಂಕಿ ಇಟ್ಟು, ಧ್ವಂಸಗೊಳಿಸಿತು ಎಂದು ತಿಳಿಸಿದರು.

ಹಿಂಸಾಚಾರದಲ್ಲಿ ಮೂವರು ಉಪ ಪೊಲೀಸ್ ಆಯುಕ್ತರು ಸೇರಿ 33 ಪೊಲೀಸ್ ಸಿಬ್ಬಂದಿ ಹಾಗೂ ಐವರು ನಾಗರಿಕರು ಗಾಯಗೊಂಡಿದ್ದಾರೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ, ನಾಗ್ಪುರ ಉಸ್ತುವಾರಿ ಸಚಿವ ಚಂದ್ರಶೇಖರ್ ಬಾವಂಕುಲೆ ತಿಳಿಸಿದರು.

ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಲು ಸಾಮಾಜಿಕ ಮಾಧ್ಯಮವನ್ನು ಬಳಸಲಾಗುತ್ತಿದೆ. ಸದ್ಯ ನಗರವು ಶಾಂತಿಯುತವಾಗಿದೆ. ಸ್ಥಳದಲ್ಲಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ ಎಂದರು.

ಪೂರ್ವಯೋಜಿತ ದಾಳಿ: ಫಡಣವೀಸ್

‘ಹಿಂಸಾಚಾರವು ಪೂರ್ವಯೋಜಿತ’ ಎಂದು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಹೇಳಿದರು.

‘ಛಾವಾ’ ಸಿನಿಮಾ ಬಳಿಕ ಮೊಘಲ್ ರಾಜ ಔರಂಗಜೇಬ್ ವಿರುದ್ಧ ಜನರು ಕೆರಳಿದ್ದಾರೆ’ ಎಂದು ವಿಧಾನಸಭೆಯಲ್ಲಿ ಹೇಳಿದರು.

ನಿರ್ದಿಷ್ಟ ಮನೆಗಳು ಮತ್ತು ಕಟ್ಟಡಗಳ ಮೇಲೆ ದಾಳಿ ನಡೆದಿದೆ. ಪೊಲೀಸರು ಟೆಂಪೊ ತುಂಬ ತುಂಬಿದ್ದ ಕಲ್ಲುಗಳು ಮತ್ತು ಶಸ್ತ್ರಗಳನ್ನು ವಶಕ್ಕೆ ಪಡೆದಿದ್ದಾರೆ. ಸೋಮವಾರ ಬೆಳಿಗ್ಗೆ ಪರಿಸ್ಥಿತಿ ನಿಯಂತ್ರಣದಲ್ಲಿತ್ತು, ಸಂಜೆ ವೇಳೆಗೆ ಪರಿಸ್ಥಿತಿ ಕೈಮೀರಿತ್ತು ಎಂದು ಫಡಣವೀಸ್ ತಿಳಿಸಿದರು.

ಕಿವೀಸ್ ಬೀಸಾಟಕ್ಕೆ ಪಾಕ್ ತಬ್ಬಿಬ್ಬು

ಡುನೆಡಿನ್ (ನ್ಯೂಜಿಲೆಂಡ್), (ಎಎಫ್‌ಪಿ): ಆರಂಭ ಆಟಗಾರರು ಸಿಡಿಸಿದ ಸಿಕ್ಸರ್‌ಗಳ ಅಬ್ಬರದಿಂದ ನ್ಯೂಜಿಲೆಂಡ್ ತಂಡ ಮಂಗಳವಾರ ನಡೆದ ಎರಡನೇ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡದ ಮೇಲೆ ಆರು ವಿಕೆಟ್‌ಗಳ ಜಯ ಪಡೆಯಿತು. ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಸಾಧಿಸಿತು.

ಮಳೆಯಿಂದ ತಲಾ 15 ಓವರುಗಳಿಗೆ ಮೊಟಕುಗೊಂಡಿದ್ದ ಪಂದ್ಯದಲ್ಲಿ ಮೊದಲು ಆಡಿದ ಪಾಕಿಸ್ತಾನ 9 ವಿಕೆಟ್‌ಗೆ 135 ರನ್ ಹೊಡೆಯಿತು. ಆತಿಥೇಯರು 11 ಎಸೆತಗಳಿರುವಂತೆ 5 ವಿಕೆಟ್‌ಗೆ 137 ರನ್ ಬಾರಿಸಿದರು.ನ್ಯೂಜಿಲೆಂಡ್ ಆರಂಭಿಕರಾದ ಟಿಮ್ ಸೀಫರ್ಟ್ (45, 22ಎ, 4x3, 6x5) ಮತ್ತು ಫಿನ್ ಅಲೆನ್ (38, 16ಎ, 4x1, 6x5) ತಂಡಕ್ಕೆ ಮಿಂಚಿನ ಆರಂಭ ನೀಡಿದರು. ಮೊದಲ ಎಂಟು ಸ್ಕೋರಿಂಗ್ ಹೊಡೆತಗಳಲ್ಲಿ ಆರು ಸಿಕ್ಸರ್‌ಗಳಾಗಿದ್ದವು! 4.3 ಓವರುಗಳಲ್ಲಿ 66 ರನ್‌ಗಳು ಹರಿದುಬಂದವು! ನಾಲ್ಕು ಓವರುಗಳ ಅಂತರದಲ್ಲಿ ನ್ಯೂಜಿಲೆಂಡ್ 4 ವಿಕೆಟ್ ಕಳೆದು ಕೊಂಡರೂ ಮಿಚೆಲ್ ಹೇ ಅಜೇಯ 21 ರನ್ ಗಳಿಸಿ ತಂಡ ಗುರಿತಲುಪಲು ನೆರವಾದರು.ಮೊದಲು ಆಡಿದ ಪಾಕಿಸ್ತಾನದ ಪರ ನಾಯಕ ಸಲ್ಮಾನ್ ಆಘಾ 28 ಎಸೆತಗಳಲ್ಲಿ 46 ರನ್ ಗಳಿಸಿದ್ದರು. ಶದಾಬ್ ಖಾನ್ (26, 14ಎ) ಮತ್ತು ಶಹೀನ್ ಶಾ ಅಫ್ರಿದಿ (ಅಜೇಯ 22, 14ಎ) ಕೂಡ ತಂಡ ಗೌರವಾರ್ಹ ಮೊತ್ತ ತಲುಪಲು ನೆರವಾದರು.

ಟಿಮ್ ಸೀಫರ್ಟ್ ಎಎಫ್‌ಪಿ ಚಿತ್ರ

ಸ್ಕೋರುಗಳು: ಪಾಕಿಸ್ತಾನ: 15 ಓವರುಗಳಲ್ಲಿ 9 ವಿಕೆಟ್‌ಗೆ 135 (ಸಲ್ಮಾನ್ ಆಘಾ 28, ಶದಾಬ್ ಖಾನ್ 26, ಡಫಿ 20ಕ್ಕೆ2, ಸಿಯರ್ಸ್ 23ಕ್ಕೆ2) **ನ್ಯೂಜಿಲೆಂಡ್:** 13.1 ಓವರುಗಳಲ್ಲಿ 5 ವಿಕೆಟ್‌ಗೆ 137 (ಸೀಫರ್ಟ್ 45, ಫಿನ್ ಅಲೆನ್ 38,) **ಪಂದ್ಯದ ಆಟಗಾರ:** ಟಿಮ್ ಸೀಫರ್ಟ್.

ವಿಶ್ವಕಪ್ ಅರ್ಹತಾ ಪಂದ್ಯಕ್ಕೆ ಮೆಸ್ಸಿ ಅಲಭ್ಯ

ಮಾಂಟೆವಿಡಿಯೊ (ಎಎಫ್‌ಪಿ: : ಲಯೊನೆಲ್ ಮೆಸ್ಸಿ ಅವರು ತೊಡೆಸಂದು ನೋವಿನಿಂದಾಗಿ ಬಳಲುತ್ತಿರುವ ಕಾರಣ ಅರ್ಜೆಂಟೀನಾ ತಂಡವು, ಶುಕ್ರವಾರ ಉರುಗ್ವೆ ವಿರುದ್ಧ ನಡೆಯಲಿರುವ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯವನ್ನು ಅವರಿಲ್ಲದೇ ಆಡಬೇಕಾಗಿದೆ.ಕಳೆದ ವಾರದ ಕೊನೆಯಲ್ಲಿ ಅವರು ಇಂಟರ್ ಮಿಯಾಮಿ ಪರ, ಅಟ್ಲಾಂಟ ವಿರುದ್ಧ ಪಂದ್ಯದಲ್ಲಿ ಆಡುವಾಗ ತೊಡೆಸಂದು ನೋವಿಗೆ ಒಳಗಾಗಿದ್ದರು ಎಂದು ಅವರ ಕ್ಲಬ್ ಸೋಮವಾರ ತಿಳಿಸಿದೆ.ಎರಡು ಪಂದ್ಯಗಳಿಗೆ ಅರ್ಜೆಂಟೀನಾ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ.

ಲಯೊನೆಲ್ ಮೆಸ್ಸಿ

ಈ ಪಂದ್ಯದ ನಂತರ, ಮಾರ್ಚ್ 25ರಂದು ಬ್ರೆಜಿಲ್ ವಿರುದ್ಧದ ಪಂದ್ಯವನ್ನೂ ಅವರು ಕಳೆದುಕೊಳ್ಳಲಿದ್ದಾರೆ.

ಸಮತೋಲನ ಹೊಂದಿರುವ ತಂಡ • ಕೊಹ್ಲಿ 'ಬ್ಯಾಟಿಂಗ್ ನಾಯಕ'ನಾಗಲಿ

ಆರ್‌ಸಿಬಿಗೆ ಚೊಚ್ಚಲ ಪ್ರಶಸ್ತಿ: ಎಬಿಡಿ ವಿಶ್ವಾಸ

ನವದೆಹಲಿ (ರಾಯಿಟರ್ಸ್): ತಂಡದ ಸಂತುಲನ ಮತ್ತು ಅಗ್ರ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಅವರ ಭರವಸೆಯ ಉಪಸ್ಥಿತಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಐಪಿಎಲ್) ಈ ವರ್ಷ ಚೊಚ್ಚಲ ಪ್ರಶಸ್ತಿ ಗೆಲ್ಲಿಸಿಕೊಡಲಿದೆ ಎಂಬುದು ದಿಗ್ಗಜ ಆಟಗಾರ ಎಬಿ ಡಿ ವಿಲಿಯರ್ಸ್ ಅವರ ದೃಢವಿಶ್ವಾಸ.

ದಕ್ಷಿಣ ಆಫ್ರಿಕಾದ ಈ ಆಕ್ರಮಣಕಾರಿ ಆಟಗಾರ ಬೆಂಗಳೂರಿನ ತಂಡಕ್ಕೆ 11 ವರ್ಷ ಆಡಿದ್ದರು. ಶ್ರೇಷ್ಠ ಬ್ಯಾಟರ್‌ಗಳ ಪಡೆಯನ್ನು ಹೊಂದಿದ್ದ ಆರ್‌ಸಿಬಿ ಮೂರುಬಾರಿ ಫೈನಲ್ ತಲುಪಿತ್ತು. ಆದರೆ ಅಂತಿಮ ಹಂತದಲ್ಲಿ ನಿರಾಸೆ ಅನುಭವಿಸಿತ್ತು.

18ನೇ ಆವೃತ್ತಿಗೆ ತಂಡಕ್ಕೆ ರಜತ್ ಪಾಟಿದಾರ್ ನೂತನ ನಾಯಕರಾಗಿದ್ದಾರೆ. ಇಂಗ್ಲೆಂಡ್‌ನ ಫಿಲ್ ಸಾಲ್ಟ್ ಅವರು ಕೊಹ್ಲಿ ಅವರ ಜೊತೆ ಇನಿಂಗ್ಸ್ ಆರಂಭಿಸಲಿದ್ದಾರೆ.

'ಮೆಗಾ ಹರಾಜಿನ ವೇಳೆ ಆರ್‌ಸಿಬಿ ಒಳ್ಳೆಯ ತಂತ್ರಗಳನ್ನು ಹೆಣೆದಿದೆ ಎಂಬ ಭಾವನೆ ಮೂಡಿತು' ಎಂದು ಡಿ ವಿಲಿಯರ್ಸ್ ಮಂಗಳವಾರ ಆನ್‌ಲೈನ್ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.



ಆಪ್ತಮಿತ್ರರು.... ಎಬಿ ಡಿ ವಿಲಿಯರ್ಸ್ ಮತ್ತು ವಿರಾಟ್ ಕೊಹ್ಲಿ ಎಎಫ್‌ಪಿ ಸಂಗ್ರಹ ಚಿತ್ರ

'ಇದು ಎಲ್ಲ ರೀತಿಯಿಂದ ಸಮ ತೋಲನ ಹೊಂದಿರುವ ತಂಡ. ಬ್ಯಾ ಟಿಂಗ್ ಸರದಿಯನ್ನೇ ನೋಡಿ. ಅಲ್ಲಿ ಭರ್ಜರಿ ಹೊಡೆತಗಳ ಆಟಗಾರರಿದ್ದಾರೆ. ನಿಯಂತ್ರಿತ ಆಕ್ರಮಣದ ಆಟವಾಡುವವರೂ ಇದ್ದಾರೆ. ಈ ಪಡೆ ತಂಡವನ್ನು ಯಶಸ್ಸಿನತ್ತ ಒಯ್ಯುವ ಸಾಮರ್ಥ್ಯ ಹೊಂದಿದೆ' ಎಂದು ಅವರು ಅಭಿಪ್ರಾಯಪಟ್ಟರು.

ಇಂಡಿಯನ್ ಪ್ರೀಮಿಯರ್ ಲೀಗ್

'ಲಿಯಾಮ್ ಲಿವಿಂಗ್‌ಸ್ಟೋನ್, ಜಾಕೊಬ್ ಬೆಥೆಲ್ ಮತ್ತು ಟಿಮ್ ಡೇ ವಿಡ್ ಮಧ್ಯಮ ಕ್ರಮಾಂಕದ ಲ್ಲಿದ್ದಾರೆ. ಆಸ್ಟ್ರೇಲಿಯಾದ ಜೋಶ್ ಹ್ಯಾಜಲ್‌ವುಡ್ ಅವರು ಚತುರ ಬೌಲರ್ ಭುವನೇಶ್ವರ ಕುಮಾರ್ ಜೊತೆ ವೇಗದ ವಿಭಾಗದಲ್ಲಿದ್ದಾರೆ' ಎಂದರು.

'ಸ್ಟ್ರೈಕ್‌ರೇಟ್‌ಗೆ ಸಂಬಂಧಿಸಿ ಕೊಹ್ಲಿ ಅನಗತ್ಯ ಟೀಕೆಗಳಿಗೆ ಆಹಾರ ಆಗುತ್ತಿದ್ದಾರೆ. ಅವರಲ್ಲಿ ಇನ್ನೂ ಸಾಕಷ್ಟು ಉತ್ತಮ ಆಟ ಉಳಿದಿದೆ' ಎಂದು ಸ್ಫೋಟಕ ಹೊಡೆತಗಳ ಬ್ಯಾಟರ್ ಹೇಳಿದರು.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರು ಟಿ20ಗೆ ನಿವೃತ್ತಿ ಹೇಳಿರಬಹುದು. ಆದರೆ 36 ವರ್ಷ ವಯಸ್ಸಿನ ಆಟಗಾರ ಇನ್ನೂ ಉತ್ತಮ ಆಟ ನೀಡುವ ಸಾಮರ್ಥ್ಯ ಉಳ್ಳವರು' ಎಂದು ಹೇಳಿದರು.

ವಿರಾಟ್‌ಗೆ ಒತ್ತಡ: 'ವಿರಾಟ್ ಅವರು ಸಾಕಷ್ಟು ಒತ್ತಡ ಅನುಭವಿಸಬಹುದು. ಆದರೆ ಪರಿಸ್ಥಿತಿಗೆ ತಕ್ಕಂತೆ ಆಟವಾಡುವ ವೇಳೆ ಅವರು ಒಬ್ಬ ಶ್ರೇಷ್ಠ ಆಟಗಾರನಾಗುತ್ತಾರೆ' ಎಂದು ಡಿ ವಿಲಿಯರ್ಸ್ ವಿಶ್ಲೇಷಿಸಿದರು. ಸಾಲ್ಟ್ ಅವರ ಆಕ್ರಮಣಕಾರಿ ಆಟವು, ವಿರಾಟ್ ಮೇಲಿನ ಒತ್ತಡ ಕಡಿಮೆ ಮಾಡಿ, 'ಬ್ಯಾಟಿಂಗ್ ನಾಯಕ'ನಾಗಿ ಅವರು ಇನಿಂಗ್ಸ್ ನಿಯಂತ್ರಿಸಲು ಅವಕಾಶ ನೀಡಬಹುದು' ಎಂದೂ ಹೇಳಿದರು

'ಇಷ್ಟು ವರ್ಷಗಳ ಕಾಲ ಪಂದ್ಯದ ಗತಿ ನಿಯಂತ್ರಿಸಲು ಯಾವ ರೀತಿ ಆಡುತ್ತಿದ್ದರೊ ಅದನ್ನೇ ವಿರಾಟ್ ಮುಂದುವರಿಸಿಕೊಂಡು ಹೋದರೆ ಸಾಕು' ಎಂದರು.

ರಾಯಲ್ಸ್ ತಾಲೀಮಿಗೆ ಹಾಜರಾದ ಸಂಜು

ಜೈಪುರ (ಪಿಟಿಐ): ತೋರುಬೆರಳಿನ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಂಡಿರುವ ನಾಯಕ ಸಂಜು ಸ್ಯಾಮ್ಸನ್ ಅವರು ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಮವಾರ ಸೇರಿಕೊಂಡರು.

30 ವರ್ಷ ವಯಸ್ಸಿನ ವಿಕೆಟ್ ಕೀಪರ್–ಬ್ಯಾಟರ್ ಸಂಜು ಬೆಂಗಳೂರಿನ ಶ್ರೇಷ್ಠತಾ ಕೇಂದ್ರದಲ್ಲಿ ಪುನಶ್ಚೇತನ ಶಿಬಿರದಲ್ಲಿದ್ದರು. ಸೋಮವಾರ ರಾಯಲ್ಸ್ ಪ್ರಾಕ್ಟೀಸ್ ವೇಳೆ ಮೊದಲ ಬಾರಿ ಭಾಗಿಯಾದರು. ಈ ವಿಷಯವನ್ನು ಫ್ರಾಂಚೈಸಿಯು ಎಕ್ಸ್‌ನಲ್ಲಿ ಹಂಚಿಕೊಂಡಿದೆ. ಇಂಗ್ಲೆಂಡ್ ವಿರುದ್ಧ ಟಿ20 ಸರಣಿಯ ವೇಳೆ ಜೋಫ್ರಾ ಆರ್ಚರ್ ಎಸೆದ ಬೌನ್ಸರ್‌ನಿಂದ ಸಂಜು ಬೆರಳಿಗೆ ಗಾಯವಾಗಿತ್ತು.

ರಾಯಲ್ಸ್ ತನ್ನ ಮೊದಲ ಪಂದ್ಯವನ್ನು ಹೈದರಾಬಾದಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಇದೇ 23ರಂದು ಆಡಲಿದೆ. ಫಿಟ್ನೆಸ್ ಮರಳಿ ಪಡೆದರೂ ಅವರು ಕೀಪಿಂಗ್ ಮಾಡುವರೇ ಎಂಬುದು ಖಚಿತವಾಗಿಲ್ಲ. ಅವರು ಇದಕ್ಕೆ ಫಿಟ್ ಆಗದಿದ್ದಲ್ಲಿ ಆ ಪಾತ್ರವನ್ನು ಧ್ರುವ್ ಜುರೆಲ್ ನಿಭಾಯಿಸಬೇಕಾಗುತ್ತದೆ. ರಿಯಾನ್ ಪರಾಗ್ ಕೂಡ ಭುಜದ ನೋವಿನಿಂದ ಪೂರ್ಣವಾಗಿ ಚೇತರಿಸಿಕೊಂಡಿರುವುದು ತಂಡದ ಉತ್ಸಾಹ ಹೆಚ್ಚಿಸಿದೆ.

ಮೂರನೇ ಕ್ರಮಾಂಕಕ್ಕೆ ಅಯ್ಯರ್ ಒಲವು

ಚಂಡೀಗಢ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಗೆದ್ದ ಭಾರತ ತಂಡದಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿ ಗಮನಸೆಳೆದಿದ್ದ ಶ್ರೇಯಸ್ ಅಯ್ಯರ್, ಇದೀಗ ಐಪಿಎಲ್‌ನಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಿ ಛಾಪು ಮೂಡಿಸಲು ಬಯಸಿದ್ದಾರೆ. ಅಯ್ಯರ್ ಅವರು ಭಾರತ ಟಿ20 ತಂಡದ ಭಾಗವಾಗಿಲ್ಲ. ಆದರೆ ಪಂಜಾಬ್ ಕಿಂಗ್ಸ್ ತಂಡದಲ್ಲಿ ಅವರು ಯಶಸ್ಸು ಸಾಧಿಸಿದಲ್ಲಿ ಈ ಮಾದರಿಯಲ್ಲೂ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಅವಕಾಶದ ಬಾಗಿಲು ತೆರೆಯಬಹುದು. ಕಳೆದ ಋತುವಿನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಪ್ರಶಸ್ತಿಯತ್ತ ಮುನ್ನಡೆಸಿದ್ದ ವೇಳೆ ಶ್ರೇಯಸ್ ಐದನೇ ಕ್ರಮಾಂಕದಲ್ಲಿ ಆಡಿದ್ದರು.

'ಐಪಿಎಲ್ ಭಾರತೀಯ ಕ್ರಿಕೆಟ್‌ನ ಅವಿಭಾಜ್ಯ ಅಂಗವಾಗಿರುವುದು ಗೊತ್ತಿರುವ ಸಂಗತಿ. ಟಿ20 ಕ್ರಿಕೆಟ್‌ನಲ್ಲಿ ಯಾವುದಾದರೂ ಸ್ಥಾನದಲ್ಲಿ ನಾನು ಛಾಪು ಮೂಡಿಸಲು ಬಯಸುವುದಾದರೆ ಅದು ಮೂರನೇ ಕ್ರಮಾಂಕ. ಅದರ ಕಡೆಗಷ್ಟೇ ಲಕ್ಷ್ಯ ಹರಿಸಿದ್ದೇನೆ' ಎಂದು ಮಾಧ್ಯಮ ಸಂವಾದದಲ್ಲಿ ಪಂಜಾಬ್ ಕಿಂಗ್ಸ್ ನಾಯಕ ಅಯ್ಯರ್ ಹೇಳಿದ್ದಾರೆ.

ಮಹಿಳಾ ಏಕದಿನ ವಿಶ್ವಕಪ್: 22ರಂದು ಬಿಸಿಸಿಐ ಸಭೆ

ಆಯೋಜನಾ ಸಮಿತಿ ರಚನೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಈ ವರ್ಷದ ಕೊನೆಯಲ್ಲಿ ತನ್ನ ಆತಿಥ್ಯದಲ್ಲಿ ನಡೆ ಯಲಿರುವ ಮಹಿಳೆಯರ ಏಕದಿನ ವಿಶ್ವಕಪ್‌ಗೆ ಆಯೋಜನಾ ಸಮಿತಿ ರಚಿಸುವುದು, ಜೊತೆಗೆ ಈ ಐಸಿಸಿ ಟೂರ್ನಿಯ ಪಂದ್ಯಗಳಿಗೆ ಸ್ಥಳಗಳನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಪೆಕ್ಸ್ ಕೌನ್ಸಿಲ್ ಇದೇ 22 ರಂದು ಕೋಲ್ಕತ್ತದಲ್ಲಿ ತುರ್ತು ಸಭೆ ಸೇರಲಿದೆ.

ಈಡನ್ ಗಾರ್ಡನ್ಸ್‌ನಲ್ಲಿ ಅಂದು ಹಾಲಿ ಚಾಂಪಿಯನ್ ಕೋಲ್ಕತ್ತನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವೆ ಉದ್ಘಾಟನಾ ಪಂದ್ಯಕ್ಕೆ ಮೊದಲು ಈ ಸಭೆ ನಡೆಯಲಿದೆ.

ಈ ಹಿಂದೆ ಬಿಸಿಸಿಐ 2013ರಲ್ಲಿ ಕೊನೆಯ ಬಾರಿ ಮಹಿಳೆಯರ ಏಕದಿನ ವಿಶ್ವಕಪ್‌ನ ಆಯೋಜನೆ ಮಾಡಿತ್ತು. ಅಕ್ಟೋಬರ್‌ನಲ್ಲಿ ನಿಗದಿ ಆಗಿರುವ ಈ ಟೂರ್ನಿಯ ವೇಳಾಪಟ್ಟಿಗೆ ಅಂತಿಮ ರೂಪ ಇನ್ನಷ್ಟೇ ಸಿಗಬೇಕಾಗಿದೆ.

ಸುದ್ದಿಸಂಸ್ಥೆಗೆ ಲಭ್ಯವಾಗಿರುವ ಸಭೆಯ ಕಾರ್ಯ ಸೂಚಿಯ ಪ್ರಕಾರ, ಸಭೆಯಲ್ಲಿ 2025ರ ಮಹಿಳಾ ಏಕದಿನ ವಿಶ್ವಕಪ್‌ಗೆ ಆಯೋ ಜನಾ ಸಮಿತಿಯ ರಚನೆ, ಪಂದ್ಯ ನಡೆಯುವ ಸ್ಥಳಗಳ ಬಗ್ಗೆ ಚರ್ಚೆ ನಡೆಯಲಿದೆ.

ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಭಾರತ ತಂಡ ಎರಡು ಬಾರಿ ಫೈನಲ್ ತಲುಪಿದೆ. ಆದರೆ ಅಂತಿಮ ಹಂತದಲ್ಲಿ ಎಡವಿತ್ತು. ಹೀಗಾಗಿ ತವರಿನಲ್ಲಿ ದೀರ್ಘ ಕಾಲದಿಂದ ಎದುರಿಸುತ್ತಿರುವ ಐಸಿಸಿ ಟ್ರೋಫಿಯ ಬರ ನೀಗಿಸಲು ಹರ್ಮನ್ ಪ್ರೀತ್ ಕೌರ್ ಅವರ ತಂಡ ಪ್ರಯತ್ನ ನಡೆಸಲಿದೆ.2025–26ರ ದೇಶೀ ಕ್ರಿಕೆಟ್‌ನ ರೂಪುರೇಷೆಯನ್ನೂ ಅಪೆಕ್ಸ್ ಕೌನ್ಸಿಲ್ ಸಭೆ ಅಂತಿಮಗೊಳಿಸಲಿದೆ. ಈ ವರ್ಷ ಭಾರತವು, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಗಳಿಗೆ ಆತಿಥ್ಯ ವಹಿಸಲಿದೆ. ಹೀಗಾಗಿ ಸಮಿತಿ ಸದಸ್ಯರು ಈ ಟೆಸ್ಟ್ ಪಂದ್ಯಗಳ ಆತಿಥ್ಯ ವಹಿಸಲಿರುವ ಸ್ಥಳಗಳನ್ನೂ ನಿರ್ಧರಿಸಲಿದ್ದಾರೆ.

ತಂಬಾಕು ಪ್ರಾಯೋಜಕತ್ವಕ್ಕೆ ನಿಷೇಧ: 22ರಿಂದ ಆರಂಭವಾಗುವ ಐಪಿಎಲ್ ವೇಳೆ ತಂಬಾಕು ಮತ್ತು ಮದ್ಯ ಪಾನ ಉತ್ತೇಜಿಸುವ ಜಾಹೀರಾತು, ಪ್ರಾಯೋಜಕತ್ವ ಸೇರಿದಂತೆ ಎಲ್ಲಾ ರೀತಿಯ ಪ್ರಚಾರಗಳಿಗೆ ನಿಷೇಧ ಹೇರುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಈ ತಿಂಗಳ ಆರಂಭದಲ್ಲಿ ಕ್ರಿಕೆಟ್ ಮಂಡಳಿಗೆ ನಿರ್ದೇಶನ ನೀಡಿತ್ತು.ಈ ಬಗ್ಗೆಯೂ ಸಭೆ ಚರ್ಚಿಸಲಿದೆ.

ನಿವೃತ್ತಿ ತೊರೆದ ಬಳಿಕ ಚೆಟ್ರಿಗೆ ಮೊದಲ ಸವಾಲು ಇಂದು

ಭಾರತ–ಮಾಲ್ಡೀವ್ಸ್ ಸೌಹಾರ್ದ ಪಂದ್ಯ

ಶಿಲ್ಲಾಂಗ್ (ಪಿಟಿಐ): ಇದೇ 25ರಿಂದ ಆರಂಭವಾಗುವ ಎಎಫ್‌ಸಿ ಏಷ್ಯನ್ ಕಪ್ ಕ್ವಾಲಿಫೈಯರ್‌ನ ಮೂರನೇ ಸುತ್ತಿನ ಪಂದ್ಯಗಳ ಪೂರ್ವಸಿದ್ಧತೆಯ ಭಾಗವಾಗಿ ಭಾರತ ತಂಡವು ಬುಧವಾರ ಮಾಲ್ಡೀವ್ಸ್ ತಂಡದೊಂದಿಗೆ ಅಂತರ ರಾಷ್ಟ್ರೀಯ ಸೌಹಾರ್ದ ಪಂದ್ಯವನ್ನು ಆಡಲಿದೆ.

ಕಳೆದ ವರ್ಷ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಘೋಷಿಸಿದ್ದ ನಿವೃತ್ತಿಯನ್ನು ಕೈಬಿಟ್ಟಿರುವ ಅನುಭವಿ ಆಟಗಾರ ಸುನಿಲ್ ಚೆಟ್ರಿ ಈ ಪಂದ್ಯದಲ್ಲಿ ಭಾರತ ತಂಡಕ್ಕೆ ಮರಳುತ್ತಿದ್ದು, ಎಲ್ಲರ ಗಮನ ಸೆಳೆದಿದೆ. ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಮಾರ್ಚ್ 25ರಂದು ಕ್ವಾಲಿಫೈಯರ್ ಹಂತದ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶವನ್ನು ಇದೇ ಕ್ರೀಡಾಂಗಣದಲ್ಲಿ ಎದುರಿಸಲಿದೆ.



ಅಭ್ಯಾಸ ನಡೆಸಿದ ಸುನಿಲ್ ಚೆಟ್ರಿ –ಎಕ್ಸ್ ಚಿತ್ರ

ಮನೊಲೊ ಮಾರ್ಕ್ವೆಜ್ ಮಾರ್ಗದರ್ಶನದ ಭಾರತ ತಂಡವು ಸೌಹಾರ್ದ ಪಂದ್ಯದಲ್ಲಿ ಗೆಲುವು ಸಾಧಿಸಿ, ಕ್ವಾಲಿ ಫೈಯರ್ ಪಂದ್ಯಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವ ಗುರಿ ಹೊಂದಿದೆ. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತದ ಪರ ಅತಿ ಹೆಚ್ಚು ಗೋಲು ಗಳಿಸಿದ ದಾಖಲೆ ಹೊಂದಿರುವ 40 ವರ್ಷ ವಯಸ್ಸಿನ ಚೆಟ್ರಿ ಅವರು ವಿದಾಯವನ್ನು ಹಿಂಪಡೆದ ಬಳಿಕ ಮೊದಲ ಬಾರಿ ಕಣಕ್ಕೆ ಇಳಿಯುವರು. ಸಂದೇಶ್ ಜಿಂಗನ್ ನಾಯಕತ್ವದ ಭಾರತ ತಂಡವು ವಿಶ್ವ ರ‍್ಯಾಂಕಿಂಗ್‌ನಲ್ಲಿ 126ನೇ ಸ್ಥಾನದಲ್ಲಿದ್ದರೆ, ಮಾಲ್ಡೀವ್ಸ್ 162ನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ರಾತ್ರಿ 7, ನೇರಪ್ರಸಾರ: ಜಿಯೊ ಹಾಟ್‌ಸ್ಟಾರ್

ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಲಖನೌ ಸೂಪರ್ ಜೈಂಟ್ಸ್ ತಂಡದ ಮಾಲೀಕ ಸಂಜೀವ್ ಗೋಯಂಕಾ ಮತ್ತು ನಾಯಕ ರಿಷಭ್ ಪಂತ್ ಅವರು ಸೋಮವಾರ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಭೇಟಿ ಮಾಡಿ ತಂಡದ ಆಟಗಾರರ ಸಹಿ ಇರುವ ಬ್ಯಾಟ್ ಅನ್ನು ಸ್ಮರಣಿಕೆಯಾಗಿ ನೀಡಿದರು –ಪಿಟಿಐ ಚಿತ್ರ

ಭಾರತ ಬಾಕ್ಸಿಂಗ್ ಫೆಡರೇಷನ್: ಅಧ್ಯಕ್ಷ ಸ್ಥಾನದ ನಾಮಪತ್ರ ತಿರಸ್ಕೃತ

ಮಹಾ ಪ್ರಧಾನ ಕಾರ್ಯದರ್ಶಿ ಅಮಾನತು

ನವದೆಹಲಿ (ಪಿಟಿಐ): ಭಾರತ ಬಾಕ್ಸಿಂಗ್ ಫೆಡರೇಷನ್, ಮಂಗಳವಾರ ನಾಟಕೀಯ ಬೆಳವಣಿಗೆಗಳನ್ನು ಕಂಡಿತು. ಹಣಕಾಸಿನ ಅವ್ಯವಹಾರದಲ್ಲಿ ಅವರು ಭಾಗಿಯಾಗಿರುವುದು ತನಿಖೆಯಲ್ಲಿ ಬಹಿರಂಗವಾದ ಕಾರಣ ಫೆಡರೇಷನ್‌ನ ಮಹಾ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ಹೇಮಂತ ಕಲಿಟ ಅವರನ್ನು ಅಮಾನತು ಮಾಡಲಾಗಿದೆ.

ಮುಂಬರುವ ಫೆಡರೇಷನ್‌ನ ಚುನಾವಣೆಗೆ ಅಧ್ಯಕ್ಷ ಸ್ಥಾನಕ್ಕೆ ಅವರು ಸಲ್ಲಿಸಿದ್ದ ನಾಮಪತ್ರವನ್ನೂ ತಿರಸ್ಕರಿಸಲಾಗಿದೆ.

ಇಂಥದ್ದೇ ಆರೋಪದಲ್ಲಿ ದಿಗ್ವಿಜಯ್ ಸಿಂಗ್ ಅವರನ್ನೂ ಖಜಾಂಚಿ ಸ್ಥಾನದಿಂದ ಅಮಾನತು ಮಾಡಲಾಗಿದೆ. ಹಣಕಾಸು ಅವ್ಯವಹಾರದ ತನಿಖೆ ನಡೆಸಲು ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಧೀರ್ ಕುಮಾರ್ ಜೈನ್ ಅವರನ್ನು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ನೇಮಕ ಮಾಡಿತ್ತು. ಬ್ಯಾಂಕ್ ಖಾತೆಯಿಂದ ಎರಡು ಸಲ ಅನಧಿಕೃತವಾಗಿ ಹಣಪಡೆದಿರುವುದು, ಬಿಲ್ಲಿಂಗ್‌ನಲ್ಲಿ ವಂಚನೆ, ಅಧಿಕಾರ ದುರ್ಬಳಕೆ ದೂರುಗಳ ಕಾರಣ ತನಿಖೆ ಕೈಗೊಳ್ಳಲಾಗಿತ್ತು.

BOXING FEDERATION OF INDIA

ನ್ಯಾಯಮೂರ್ತಿ ಜೈನ್ ಅವರು ತನಿಖೆ ಮುಗಿಸಿದ್ದು, ವರದಿ ಸಲ್ಲಿಸಿದ್ದು ಅದರಲ್ಲಿ ಇಬ್ಬರೂ ಹಣಕಾಸು ಅಕ್ರಮ ಮತ್ತು ದುರುಪಯೋಗದಲ್ಲಿ ಪಾತ್ರ ವಹಿಸಿರುವುದು ದೃಢಪಟ್ಟಿದೆ ಎಂದು ಬಿಎಫ್‌ಐ ಅಧ್ಯಕ್ಷ ಅಜಯ್ ಸಿಂಗ್ ಅವರು ಈ ಇಬ್ಬರಿಗೆ ಕಳುಹಿಸಿದ ಅಧಿಕೃತ ಸಂದೇಶದಲ್ಲಿ ತಿಳಿಸಿದ್ದಾರೆ. ನ್ಯಾ.ಜೈನ್ ಸಲ್ಲಿಸಿದ ವರದಿಯ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕ್ರೀಡಾ ಸಚಿವಾಲಯಕ್ಕೆ ಸಲ್ಲಿಸಲಾಗಿದೆ ಎಂದು ಸಿಂಗ್ ತಿಳಿಸಿದ್ದಾರೆ.

ಕಲಿಟ ಅವರು ಫೆಡರೇಷನ್‌ನಲ್ಲಿ ಸತತವಾಗಿ ನಾಲ್ಕು ವರ್ಷಗಳ ಎರಡು ಅವಧಿ ಪೂರೈಸಿದ್ದಾರೆ. ಅವರು ಕಡ್ಡಾಯ ಕೂಲಿಂಗ್ ಆಫ್‌ನಲ್ಲಿರಬೇಕಾದ ಕಾರಣ ಅಧ್ಯಕ್ಷ ಸ್ಥಾನಕ್ಕೆ ಅವರ ನಾಮಪತ್ರ ತಿರಸ್ಕರಿಸಲಾಗಿದೆ.

2021–25ರ ಅವಧಿಗೆ ಮಹಾ ಕಾರ್ಯದರ್ಶಿ ಸ್ಥಾನಕ್ಕೆ ಬರುವ ಮೊದಲು ಅವರು ಫೆಡರೇಷನ್‌ನ ಖಜಾಂಚಿ ಆಗಿ ಕಾರ್ಯನಿರ್ವಹಿಸಿದ್ದರು. ನಾಮಪತ್ರಗಳ ಪರಿಶೀಲನೆಯ ನಂತರ ಚುನಾವಣಾ ಅಧಿಕಾರಿ ಆರ್. ಕೆ.ಗೌಬಾ ಅವರು ಕಲಿಟಾ ಅವರ ನಾಮಪತ್ರ ಅನರ್ಹಗೊಳಿಸಿದರು.

ಸತೀಶ್ ನಾಮಪತ್ರ ತಿರಸ್ಕೃತ: ಕರ್ನಾಟಕದ ಸತೀಶ್ ಎನ್. ಅವರು ಮಹಾ ಕಾರ್ಯದರ್ಶಿ ಸ್ಥಾನಕ್ಕೆ ಸಲ್ಲಿಸಿದ ನಾಮಪತ್ರವನ್ನೂ ತಿರಸ್ಕರಿಸಲಾಗಿದೆ. ಅವರ ನಾಮಪತ್ರಕ್ಕೆ ಸೂಚಕರಾಗಿದ್ದ ಧೀರೇಂದ್ರ ಸಿಂಗ್, ಈ ಮೊದಲು ಇದೇ ಸ್ಥಾನಕ್ಕೆ ಪ್ರಮೋದ್ ಕುಮಾರ್ ಎಂಬವರ ನಾಮಪತ್ರಕ್ಕೂ ಸೂಚಕರಾಗಿದ್ದರು. ಬಿಎಫ್‌ಐ ವಾರ್ಷಿಕ ಮಹಾಸಭೆ ಮಾರ್ಚ್ 28ರಂದು ಗುರುಗ್ರಾಮದಲ್ಲಿ ನಡೆಯಲಿದ್ದು, ಅಂದೇ ಚುನಾವಣೆಯಿದೆ.

ದೂರ ಅಂತರದ ಓಟಗಾರ್ತಿ ಅರ್ಚನಾಗೆ 4 ವರ್ಷಗಳ ನಿಷೇಧ

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಕ್ಕಿಬಿದ್ದ ದೂರ ಅಂತರದ ಓಟಗಾರ್ತಿ ಅರ್ಚನಾ ಜಾಧವ್ ಅವರ ಮೇಲೆ ವಿಶ್ವ ಅಥ್ಲೆಟಿಕ್ಸ್ ಮಂಗಳವಾರ ನಾಲ್ಕು ವರ್ಷಗಳ ನಿಷೇಧ ಹೇರಿದೆ.

ಜನವರಿಯಲ್ಲಿ ನಡೆದ ಮದ್ದು ಪರೀಕ್ಷೆ ಫಲಿತಾಂಶದ ವಿರುದ್ಧ ಅವರಿಗೆ ನೆನಪೋಲೆ ಕಳುಹಿಸಿದರೂ, ಅರ್ಚನಾ ಮೇಲ್ಮನವಿ ಸಲ್ಲಿಸದ ಕಾರಣ ವಿಶ್ವ ಅಥ್ಲೆಟಿಕ್ಸ್ ಅವರನ್ನು ದೋಷಿ ಎಂದು ಪರಿಗಣಿಸಿದೆ.

2024ರ ಡಿಸೆಂಬರ್‌ನಲ್ಲಿ ಪುಣೆಯ ಹಾಫ್ ಮ್ಯಾರಥಾನ್ ವೇಳೆ ಅವರಿಂದ ಮಾದರಿ ಸಂಗ್ರಹಿಸಲಾಗಿತ್ತು. ಪರೀಕ್ಷೆಯಲ್ಲಿ ಅವರು ನಿಷೇಧಿತ ಮದ್ದು ಆಕ್ಸಾಂಡ್ರೊಲೋನ್ ಸೇವನೆ ಮಾಡಿದ್ದು ಪತ್ತೆಯಾಗಿತ್ತು. ಈ ಸಿಂಥೆಟಿಕ್ ಅನಬಾಲಿಕ್ ಸ್ಟಿರಾಯಿಡ್ ದೇಹದಲ್ಲಿ ಪ್ರೊಟಿನ್ ಅಂಶ ಹೆಚ್ಚಿಸುತ್ತದೆ ಮತ್ತು ಸ್ನಾಯುವರ್ಧಕವಾಗಿ ಕೆಲಸ ಮಾಡುತ್ತದೆ ಎಂದು ವಿಶ್ವ ಅಥ್ಲೆಟಿಕ್ಸ್‌ನ ಅಥ್ಲೀಟ್ಸ್ ಇಂಟೆಗ್ರಿಟಿ ಯೂನಿಟ್ (ಎಐಯು) ತಿಳಿಸಿದೆ.

ಜನವರಿ 7ರಿಂದಲೇ ಈ ನಿಷೇಧ ಜಾರಿಗೆ ಬಂದಿದೆ. ಅದಕ್ಕೆ ಮೊದಲು ಅವರ ಮೇಲೆ ತಾತ್ಕಾಲಿಕ ನಿಷೇಧ ಹೇರಲಾಗಿತ್ತು. ಉಲ್ಲಂಘನೆಗೆ ಸಂಬಂಧಿಸಿ ಫೆ. 25ರಂದು ಎಐಯುಗೆ ಇ–ಮೇಲ್ ಮೂಲಕ ಪ್ರತಿಕ್ರಿಯಿಸಿರುವ ಅರ್ಚನಾ ಅವರು 'ನನ್ನನ್ನು ಕ್ಷಮಿಸಿ. ನಿಮ್ಮ ನಿರ್ಧಾರ ಸ್ವಾಗತಿಸುವೆ' ಎಂದು ಉತ್ತರಿಸಿದ್ದಾರೆ.